₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಬುಧವಾರ 14.01.2026 ಸಂಪುಟ: 68 ಸಂಚಿಕೆ: 253 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮಕರ ಸಂಕ್ರಾಂತಿಯ ಶುಭಾಶಯಗಳು

ಮಕರ ಸಂಕ್ರಾಂತಿ ಈ ಬಾರಿ ಜನವರಿ 14ರ ಮಧ್ಯಾಹ್ನ ಆರಂಭವಾಗಿ 15ರವರೆಗೂ ವಿಸ್ತರಣೆಯಾಗಿದೆ. ಸುಗ್ಗಿ ಹಬ್ಬದ ಹಿಗ್ಗು ನಿಮ್ಮೆಲ್ಲರ ಮನೆಮನಗಳಲ್ಲಿ ಬೆಳಗಲಿ. ಸಮಸ್ತ ಓದುಗರಿಗೆ, ಏಜೆಂಟರಿಗೆ, ಜಾಹೀರಾತುದಾರರಿಗೆ ಮಕರ ಸಂಕ್ರಾತಿಯ ಹಾರ್ದಿಕ ಶುಭಾಶಯಗಳು.

19ಕ್ಕೆ ಡಿಕೆಶಿ, 21ಕ್ಕೆ ಸಿದ್ದರಾಮಯ್ಯ ದೆಹಲಿಗೆ ಪಯಣ
ಸಂಪುಟ ರಚನೆ ಬಳಿಕವೇ ಬಜೆಟ್ ಮಂಡನೆಗೆ ಸಿಎಂ ಪಣ
ಮತ್ತೆ ದಿಲ್ಲಿಯತ್ತ ನೋಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಾಯಕತ್ವ ಗೊಂದಲ, ಸಚಿವ ಸಂಪುಟ ಪುನಾರಚನೆಯ ಗೊಂದಲದ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಂದಿನ ವಾರ ದೆಹಲಿಗೆ ತೆರಳುತ್ತಿರುವುದು ರಾಜಕೀಯ ವಲಯದಲ್ಲಿ ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಇಬ್ಬರೂ ಬೇರೆ ಬೇರೆ ಕೆಲಸದ ನಿಮಿತ್ತ ದೆಹಲಿಗೆ ತೆರಳುತ್ತಿದ್ದರೂ ಇಬ್ಬರೂ ಹೈಕಮಾಂಡ್ ನಾಯಕರನ್ನು ಪ್ರತ್ಯೇಕವಾಗಿ ಭೇಟಿಯಾಗಿ ಚರ್ಚಿಸುವ ಇರಾದೆಯಲ್ಲಿದ್ದಾರೆ. ಸಿದ್ದರಾಮಯ್ಯ ಅವರು ಬಜೆಟ್‌ಗೂ ಮೊದಲೇ ಸಚಿವ ಸಂಪುಟವನ್ನು ಪುನಾರಚನೆ ಮಾಡಿ ಕೊಳ್ಳುವ ಲೆಕ್ಕಾಚಾರದಲ್ಲಿದ್ದರೆ, ಡಿ.ಕೆ.ಶಿವಕುಮಾರ್ 'ಸೂತ್ರ'ವನ್ನು ಪ್ರಕಟಿಸುವಂತೆ ಹೈಕಮಾಂಡ್ ಮೇಲೆ ಒತ್ತಡ ಹೇರಲು ತಮ್ಮ ಪ್ರಯತ್ನ ಮುಂದುವರಿಸಲು ದೆಹಲಿಗೆ ತೆರಳಲಿದ್ದಾರೆ.

ಮೂಲಗಳ ಪ್ರಕಾರ, ಅಸ್ಸಾಂ ವಿಧಾನಸಭಾ ಚುನಾವಣೆ ಸಭೆಯಲ್ಲಿ ಭಾಗವಹಿಸಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಜ.19ಕ್ಕೆ ತೆರಳುತ್ತಿದ್ದಾರೆ. ಸಿದ್ದರಾಮಯ್ಯ ಅವರು 20, 21ರಂದು ನಡೆಯಲಿರುವ ನರೇಗಾ ಬಚಾವ್ ಸಭೆಯಲ್ಲಿ ಭಾಗವಹಿಸಲು ತೆರಳುತ್ತಿದ್ದಾರೆ. ಈ ಸಭೆಯಲ್ಲಿ ಡಿ.ಕೆ.ಶಿವಕುಮಾರ್ ಸಹ ಭಾಗವಹಿ ಸಲಿದ್ದಾರೆ. ಆದ್ದರಿಂದ ಜ.20, 21ರಂದು ನರೇಗಾ ಹೋರಾಟಕ್ಕೆ ಸಂಬಂಧಿಸಿದಂತೆ ಸಭೆ ಪೂರ್ಣಗೊಂಡ ಬಳಿಕ ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ರಾಜ್ಯ ನಾಯಕರೊಂದಿಗೆ ಹೈಕಮಾಂಡ್ ಚರ್ಚೆ ನಡೆಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಸಂಪುಟ ಪುನಾರಚನೆಗೆ ಬೇಡಿಕೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ದೆಹಲಿ ಪ್ರವಾಸದ ವೇಳೆ ಸಂಪುಟ ಪುನಾರಚನೆಗೆ ಸಂಬಂಧಿಸಿದಂತೆ ಚರ್ಚಿಸುವ ಸಾಧ್ಯತೆಯಿದೆ. ರಾಜ್ಯದಲ್ಲಿ ಸರಕಾರ ಅಧಿಕಾರಕ್ಕೆ ಬಂದು ಮೂರು ವರ್ಷ ಕಳೆದಿದೆ. ಸಂಪುಟ ಪುನಾರಚನೆಗೆ ಇದು ಸೂಕ್ತ ಸಮಯ. ಆದ್ದರಿಂದ ಪಕ್ಷದ ಹೈಕಮಾಂಡ್ ಈ ವಿಷಯದಲ್ಲಿ ಶೀಘ್ರ ತೀರ್ಮಾನ ಕೈಗೊಳ್ಳಬೇಕು ಎನ್ನುವ ಬೇಡಿಕೆ ಇಡುವ ಸಾಧ್ಯತೆಯಿದೆ. ಇದರೊಂದಿಗೆ ಮಾರ್ಚ್‌ನಲ್ಲಿ ಮಂಡಿಸುವ ಬಜೆಟ್‌ಗೂ ಮೊದಲೇ ಸಂಪುಟ ಪುನಾರಚನೆ ಮಾಡುವುದು ಸೂಕ್ತ ಎಂದು ಹೈಕಮಾಂಡ್‌ಗೆ ಮನವಿ ಮಾಡಲಿ ದ್ದಾರೆ ಎನ್ನಲಾಗಿದೆ. ಹೈಕಮಾಂಡ್‌ನಿಂದ ಸ್ಪಷ್ಟನೆ ಪಡೆದ ಬಳಿಕವೇ ಬಜೆಟ್ ಸಭೆಯನ್ನು ಅಧಿಕೃತ ವಾಗಿ ಆರಂಭಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ತೀರ್ಮಾನಿಸಿದ್ದಾರೆ. ಈ ಕಾರಣಕ್ಕಾಗಿ ಯೇ ಗಣರಾಜ್ಯೋತ್ಸವದ ಬಳಿಕ ಅಧಿಕೃತವಾಗಿ ಬಜೆಟ್ ಸಭೆ ನಡೆಸಲು ತೀರ್ಮಾನಿಸಿದ್ದಾರೆ ಎಂದು ಹೇಳಲಾಗುತ್ತಿದೆ.



ಮೈಸೂರಿನ ವಿಮಾನ ನಿಲ್ದಾಣಕ್ಕೆ ಬಂದಿಳಿದ ರಾಹುಲ್ ಗಾಂಧಿ ಅವರನ್ನು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸ್ವಾಗತಿಸಿದರು.

ವಿಲ್ ಕಾಲ್ ಯೂ ಸೂನ್!

ನಾಯಕತ್ವ ಗೊಂದಲಕ್ಕೆ ಸಂಬಂಧಿಸಿದಂತೆ ಚರ್ಚಿಸಲು ದೆಹಲಿಗೆ ತೆರಳಲು ಸಜ್ಜಾಗಿದ್ದ ಡಿ.ಕೆ.ಶಿವಕುಮಾರ್ ಅವರಿಗೆ ದೆಹಲಿಗೆ ಕರೆಸಿಕೊಳ್ಳುವ ಭರವಸೆಯನ್ನು ರಾಹುಲ್ ಗಾಂಧಿ ನೀಡಿದ್ದಾರೆ. ತಮಿಳುನಾಡಿನ ಕಾರ್ಯಕ್ರಮ ಮುಗಿಸಿಕೊಂಡು ಮೈಸೂರಿಗೆ ಆಗಮಿಸಿದ ರಾಹುಲ್ ಗಾಂಧಿ ಅವರನ್ನು ದೆಹಲಿಗೆ ಬೀಳ್ಕೊಡುವ ಮೊದಲು ಸಿಎಂ, ಡಿಸಿಎಂ ಪ್ರತ್ಯೇಕವಾಗಿ ಭೇಟಿಯಾಗಿ ಚರ್ಚಿಸಿದ್ದಾರೆ. ಈ ವೇಳೆ ಡಿ.ಕೆ.ಶಿವಕುಮಾರ್ ಅವರಿಗೆ ರಾಹುಲ್ ಗಾಂಧಿ ಅವರು 'ವಿಲ್ ಕಾಲ್ ಯೂ ಸೂನ್' ಎನ್ನುವ ಸಂದೇಶ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ದೆಹಲಿಯಲ್ಲಿ ಸಮಯ ನೀಡುವುದಾಗಿ ರಾಹುಲ್ ಹೇಳಿದ್ದರೂ. ಯಾವಾಗ ಎನ್ನುವ ಸ್ಪಷ್ಟನೆ ಇಲ್ಲ. ನರೇಗಾ ಸಭೆಗೆ ತೆರಳಿದಾಗಲೇ ಪ್ರತ್ಯೇಕ ಸಭೆ ನಡೆಸಬಹುದು ಅಥವಾ ಅದಾದ ಬಳಿಕ ಇಬ್ಬರನ್ನು ಕರೆಸಿಕೊಳ್ಳಬಹುದು ಎನ್ನಲಾಗಿದೆ.

- ಜ.19ಕ್ಕೆ ಅಸ್ಸಾಂ ವಿಧಾನಸಭಾ ಚುನಾವಣಾ ಸಭೆಯಲ್ಲಿ ಭಾಗವಹಿಸಲು ದೆಹಲಿಗೆ ತೆರಳಲಿರುವ ಡಿಕೆಶಿ
- ನರೇಗಾ ಹೋರಾಟಕ್ಕೆ ಸಂಬಂಧಿಸಿದಂತೆ 20, 21ರಂದು ನಡೆಯಲಿರುವ ಸಭೆಯಲ್ಲಿ ಸಿಎಂ ಭಾಗಿ
- ಈ ಎರಡು ದಿನಗಳ ಅವಧಿಯಲ್ಲಿ ಹೈಕಮಾಂಡ್ ಜತೆ ಚರ್ಚಿಸಿ ಸ್ಪಷ್ಟನೆ ಪಡೆಯುವ ಸಾಧ್ಯತೆ
- ಸಂಪುಟ ವಿಸ್ತರಣೆಯಾಗದಿದ್ದರೆ ಇನ್ನೊಂದು ವರ್ಷ ವಿಸ್ತರಣೆಯಾಗಲ್ಲ ಎನ್ನುವುದು ಸಿಎಂ ವಾದ
- ನಾಯಕತ್ವ ಬದಲಾವಣೆಯ ಗೊಂದಲಕ್ಕೆ ಸ್ಪಷ್ಟನೆ ನೀಡಿ ಎನ್ನುವುದು ಡಿಕೆಶಿ ಪ್ರತಿವಾದ

ರಾಹುಲ್ ಗಾಂಧಿಯವರು ಗೂಡ್ಲೂರಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಭಾಗವಹಿಸಲು ಹೋಗುತ್ತಿದ್ದು, ಮಾರ್ಗ ಮಧ್ಯೆ ಭೇಟಿ ಮಾಡಲಾಗಿದೆ. ಸಂಜೆ ದೆಹಲಿಗೆ ತೆರಳುವಾಗಲೂ ಬೀಳ್ಕೊಡಲಾಯಿತು. ಈ ವೇಳೆ ಯಾವುದೇ ರಾಜಕೀಯ ಚರ್ಚೆ ನಡೆದಿಲ್ಲ.

-ಸಿದ್ದರಾಮಯ್ಯ ಮುಖ್ಯಮಂತ್ರಿ

ಎರಡು ಸಾವಿರ ಜನರ ಸಾವು । ಮುಲ್ಲಾಗಳ ವಿರುದ್ಧ ಆಕ್ರೋಶ, ಮಸೀದಿಗಳಿಗೆ ಬೆಂಕಿ
ಇರಾನ ಹೈರಾಣ



ಟೆಹರಾನ್‌ನಲ್ಲಿ ನಡೆದ ಸರಕಾರದ ಪರ ರ‍್ಯಾಲಿಯ ಲ್ಲಿ ಲಕ್ಷಾಂತರ ಇರಾನಿಯನ್ನರು ಭಾಗವಹಿಸಿದ್ದರು.

ಟೆಹರಾನ್: ಇರಾನ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆ ಯಲ್ಲಿ ಈವರೆಗೆ ಸುಮಾರು 2,000 ಮಂದಿ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಅಲ್ಲದೆ ಪ್ರತಿಭಟನಾಕಾರರು ಸುಮಾರು 350ಕ್ಕೂ ಹೆಚ್ಚು ಮಸೀದಿಗಳಿಗೆ ಬೆಂಕಿ ಹಚ್ಚಿದ್ದಾರೆ. 'ಮುಲ್ಲಾಗಳೇ ದೇಶ ಖಾಲಿ ಮಾಡಿ' ಎಂದು ಬೀದಿಗಿಳಿದು ಘೋಷಣೆ ಕೂಗುತ್ತಿದ್ದಾರೆ.

ಅದಾಗ್ಯೂ, ಸರಕಾರದ ವಿರುದ್ಧ ನಡೆಯುತ್ತಿದ್ದ ಪ್ರತಿಭ ಟನೆ ತಕ್ಕ ಮಟ್ಟಿಗೆ ಹತೋಟಿಗೆ ಬಂದಿದ್ದು, ಇರಾನ್‌ನಲ್ಲಿ ಕಳೆದ ಕೆಲವು ದಿನಗಳಿಂದ ನಿರ್ಬಂಧಿಸಲಾಗಿದ್ದ ಅಂತಾ ರಾಷ್ಟ್ರೀಯ ಫೋನ್ ಕರೆಗಳು ಪುನರಾರಂಭಗೊಂಡಿವೆ. ಆದರೆ ಹೊರಹೋಗುವ ಕರೆಗಳಿಗೆ ಮಾತ್ರ ಅವಕಾಶ ನೀಡಲಾಗಿದೆ. ಈ ನಡುವೆ ಪ್ರತಿಭಟನಾಕಾರರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದಾಗಿ ಸರಕಾರ ಎಚ್ಚರಿಸಿದೆ.

'ನಾಗರಿಕರು ಮತ್ತು ಭದ್ರತಾ ಸಿಬ್ಬಂದಿಯ ಸಾವಿಗೆ ಭಯೋತ್ಪಾದಕರು ಕಾರಣ. ಇದು ಭಯೋತ್ಪಾದಕರ ವಿರುದ್ಧದ ಯುದ್ಧ' ಎಂದು ಇರಾನ್ ಅಧಿಕಾರಿಗಳು ಹೇಳಿದ್ದಾರೆ.

ಇರಾನ್ ಜತೆ ವ್ಯವಹಾರ ನಡೆಸುವ ದೇಶಗಳ ಮೇಲೆ ಶೇ.25ರಷ್ಟು ತೆರಿಗೆ: ಇರಾನ್ ಜತೆ ವ್ಯವಹಾರ ನಡೆಸುವ ದೇಶಗಳ ವಿರುದ್ಧ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ವ್ಯಾಪಕ ವ್ಯಾಪಾರ ಎಚ್ಚರಿಕೆಯನ್ನು ಘೋಷಿಸಿದ್ದು, ಅಂತಹ ರಾಷ್ಟ್ರಗಳ ಮೇಲೆ ಶೇ.25ರಷ್ಟು ದಂಡ ರೂಪದ ಹೊಸ ತೆರಿಗೆಗಳನ್ನು ವಿಧಿಸಲಾಗುವುದು ಎಂದು ಹೇಳಿದ್ದಾರೆ. ಇರಾನ್ ಇಸ್ಲಾಮಿಕ್ ಗಣರಾಜ್ಯದೊಂದಿಗೆ ವ್ಯವಹಾರ ನಡೆಸುವ ಯಾವುದೇ ದೇಶವು ತಕ್ಷಣದಿಂದ ಜಾರಿಗೆ ಬರುವಂತೆ, ಅಮೆರಿಕದ ಜತೆ ನಡೆಸುವ ಯಾವುದೇ ವ್ಯವಹಾರ ಮತ್ತು ಎಲ್ಲ ವ್ಯವಹಾರಗಳ ಮೇಲೆ ಶೇ.25ರಷ್ಟು ಸುಂಕ ಪಾವತಿಸಬೇಕು. ಈ ಆದೇಶವು ಅಂತಿಮ ಮತ್ತು ನಿರ್ಣಾಯಕವಾಗಿದೆ ಎಂದು ಟ್ರಂಪ್ ತಿಳಿಸಿದ್ದಾರೆ. ಇರಾನ್‌ನ ಪ್ರಮುಖ ವ್ಯಾಪಾರ ಪಾಲುದಾರರಲ್ಲಿ ಚೀನಾ, ಟರ್ಕಿ, ಭಾರತ, ಯುಎಇ, ಪಾಕಿಸ್ತಾನ ಮತ್ತು ಅರ್ಮೇನಿಯಾ ಸೇರಿವೆ. ಟ್ರಂಪ್ ಅವರ ಘೋಷಣೆಯು ಇತ್ತೀಚಿನ ವರ್ಷಗಳಲ್ಲಿ ಇರಾನ್‌ನ ಐದು ದೊಡ್ಡ ವ್ಯಾಪಾರ ಪಾಲುದಾರರಲ್ಲಿ ಒಂದಾಗಿರುವ ಭಾರತದ ಮೇಲೆ ಪರಿಣಾಮ ಬೀರಬಹುದು ಎನ್ನಲಾಗಿದೆ. → 4

- ಇರಾನ್‌ನ 31 ಪ್ರಾಂತ್ಯಗಳಲ್ಲಿ 600ಕ್ಕೂ ಹೆಚ್ಚು ಪ್ರತಿಭಟನೆ
- ಈವರೆಗೆ 10 ಸಾವಿರಕ್ಕೂ ಹೆಚ್ಚು ಮಂದಿ ಬಂಧನ, ಇಂಟರ್‌ನೆಟ್ ಕಡಿತ

ಸರಕಾರದ ಪರ ಬೀದಿಗಳಿದ ಜನ

ಸರಕಾರದ ವಿರುದ್ಧ ನಡೆಯುತ್ತಿದ್ದ ಪ್ರತಿಭಟನೆ ತಕ್ಕ ಮಟ್ಟಿಗೆ ಹತೋಟಿಗೆ ಬಂದ ಬೆನ್ನಲ್ಲೇ, ಟೆಹರಾನ್‌ನಲ್ಲಿ ಸರಕಾರಕ್ಕೆ ಬೆಂಬಲ ಸೂಚಿಸಿ ಸಾವಿರಾರು ಮಂದಿ ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ. ರ‍್ಯಾಲಿ ಮಾಡಿದ ಪ್ರತಿಭಟನಕಾರರು ಸರಕಾರದ ಪರ ಘೋಷಣೆಗಳನ್ನು ಕೂಗಿದ ಫಲಕಗಳನ್ನು ಪ್ರದರ್ಶಿಸಿದರು.

ಸೊಂಪಾದ ಪುಟಗಳು

ಕಟ್ರ ಈದ್ರಾ ಎನ್ನುವುದನ್ನು ಬ್ರಿಟಿಷ್ ಆಡಳಿತವೇ ಒಪ್ಪಿರಲಿಲ್ಲ!
ಜನಪಥ
ರಾಘವ ಶರ್ಮ ನಿಡ್ಲೆ 6

ಕಾಸರಗೋಡಿನ ಮಲಯಾಳೀಕರಣಕ್ಕೆ ನಾವೂ ಕಾರಣ !
ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ಜಗತ್ತು ನಿಮ್ಮನ್ನು ಹೇಗೆ ನೋಡುತ್ತದೆ ಎನ್ನುವುದಕ್ಕಿಂತ, ನೀವು ನಿಮ್ಮನ್ನು ಹೇಗೆ ನೋಡಿಕೊಳ್ಳುತ್ತೀರಿ ಎಂಬುದು ಮುಖ್ಯ. ನಿಮ್ಮ ಮೇಲಿರುವ ಆತ್ಮವಿಶ್ವಾಸವೇ ನಿಮ್ಮ ಅತಿದೊಡ್ಡ ಶಕ್ತಿ; ಆ ಶಕ್ತಿಯು ಬೆಟ್ಟದಂತಹ ಸವಾಲನ್ನೂ ಪುಡಿಪುಡಿ ಮಾಡುವ ಸಾಮರ್ಥ್ಯ ಹೊಂದಿದೆ.

ವಕ್ರತುಂಡೋಕ್ತಿ

ಟ್ರಾಫಿಕ್‌ಜಾಮ್‌ನಲ್ಲಿ ಸಿಕ್ಕಿಹಾಕಿಕೊಂಡಾಗ ಹೆಂಡತಿಗೆ ಫೋನ್ ಮಾಡಿ ಇನ್ನರ್ಧ ಗಂಟೆಯಲ್ಲಿ ಬರ್ತೀನಿ' ಎಂದು ಹೇಳುವುದಕ್ಕೆ ಜಗತ್ತಿನ ಅತಿ ದೊಡ್ಡ ಕಾಲ್ಪನಿಕ ಕಥೆ ಎನ್ನಬಹುದು.

ವೀಸಾಮುಕ್ತ ಜರ್ಮನಿ ಪ್ರವೇಶ

ದೆಹಲಿ: ಜರ್ಮನಿಯು ತನ್ನ ವಿಮಾನ ನಿಲ್ದಾಣಗಳ ಮೂಲಕ ಪ್ರಯಾಣಿಸುವ ಭಾರತೀಯ ಪಾಸ್‌ಪೋರ್ಟ್ ಹೊಂದಿರುವವರಿಗೆ ವೀಸಾ ಮುಕ್ತ ಪ್ರಯಾಣ ಸೌಲಭ್ಯ ಘೋಷಿಸಿದೆ. ಇದು ಭಾರತೀಯ ಪ್ರಜೆಗಳಿಗೆ ಅಂತಾರಾಷ್ಟ್ರೀಯ ಪ್ರಯಾಣವನ್ನು ಗಮನಾರ್ಹವಾಗಿ ಸುಗಮಗೊಳಿಸುತ್ತದೆ. ಎರಡೂ ದೇಶಗಳ ನಡುವಿನ ಜನರ ಸಂಬಂಧವನ್ನು ಬಲಪಡಿಸುತ್ತದೆ ಎಂದು ನಿರೀಕ್ಷಿಸಲಾಗಿದೆ. ಜರ್ಮನಿ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್ ಅವರ ಭಾರತ ಭೇಟಿಯ ಬೆನ್ನಲ್ಲೇ ಬಿಡುಗಡೆಯಾದ ಅಧಿಕೃತ ಹೇಳಿಕೆಯಲ್ಲಿ ಭಾರತ-ಜರ್ಮನಿ ಜಂಟಿ ಹೇಳಿಕೆಯಲ್ಲಿ ಈ ನಿರ್ಧಾರವನ್ನು ಘೋಷಿಸಿವೆ. ಈ ನಿರ್ಧಾರದ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಜರ್ಮನಿ ಚಾನ್ಸಲರ್‌ಗೆ ಧನ್ಯವಾದ ಸಲ್ಲಿಸಿದ್ದಾರೆ.

1 ಲಕ್ಷ ಅಮೆರಿಕ ವೀಸಾ ರದ್ದು

ವಾಷಿಂಗ್ಟನ್: ಅಮೆರಿಕದ ಕಾನೂನು ಉಲ್ಲಂಘಿಸಿದವರು ಹಾಗೂ ಅಪರಾಧ ದಾಖಲೆಗಳನ್ನು ಹೊಂದಿರುವ 1 ಲಕ್ಷಕ್ಕೂ ಹೆಚ್ಚು ವಿದೇಶಿಗರ ವೀಸಾಗಳನ್ನು ಅಮೆರಿಕವು ಕಳೆದ ವರ್ಷ ರದ್ದುಪಡಿಸಿದೆ ಎಂದ ವರದಿಯಾಗಿದೆ. ಈ ವೀಸಾಗಳ ಪೈಕಿ 8,000 ವಿದ್ಯಾರ್ಥಿ ವೀಸಾಗಳು ಹಾಗೂ 2,500 ವಿಶೇಷ ಉದ್ಯೋಗ ವೀಸಾಗಳು ಸೇರಿವೆ ಎಂದು ಅಮೆರಿಕ ವಿದೇಶಾಂಗ ಇಲಾಖೆ ತಿಳಿಸಿದೆ. ದೇಶದ ಭದ್ರತೆ ಬಲಪಡಿಸುವುದು ಹಾಗೂ ವಲಸೆ ನಿಯಂತ್ರಣ ಭಾಗವಾಗಿ ಈ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲಾಗಿದೆ. ವೀಸಾ ಪಡೆದು ದೇಶ ಪ್ರವೇಶಿಸಿದ ನಂತರವೂ ಅವರ ಮೇಲೆ ನಿಗಾವಹಿಸಲಾಗುತ್ತದೆ ಎಂದು ಇಲಾಖೆ ಸ್ಪಷ್ಟಪಡಿಸಿದೆ.

ಫನ್ ತರಂಗ
- ರಘುಪತಿ ಶೃಂಗೇರಿ -

10 ನಿಮಿಷಗಳ ಫುಡ್ ಡೆಲಿವರಿಗೆ ಬ್ರೇಕ್



ಲಕ್ಕುಂಡಿ ಗ್ರಾಮದಲ್ಲಿ ಮತ್ತಷ್ಟು ದ್ರವ್ಯ ಪತ್ತೆ

ಗದಗ: ಜಿಲ್ಲೆಯ ಲಕ್ಕುಂಡಿ ಗ್ರಾಮದಲ್ಲಿ ಚಿನ್ನದ ನಿಧಿ ದೊರೆತು ಎರಡ್ಮೂರು ದಿನಗಳು ಕಳೆಯುವಷ್ಟರಲ್ಲೇ ಅದೇ ಗ್ರಾಮದಲ್ಲಿ ಮತ್ತೆ ಪುರಾತನ ವಸ್ತುಗಳು ಮತ್ತು ಆಭರಣ ವಸ್ತುಗಳು ಪತ್ತೆಯಾಗಿವೆ. ಬಸಪ್ಪ ಬಡಿಗೇರ ಎಂಬುವವರಿಗೆ ಮುತ್ತು, ಹವಳ, ನೀಲಮಣಿ, ಸ್ಫಟಿಕ, ಬಿಳಿ ಹವಳ, ಕರಿಪುಕ್ಕಾ ಸೇರಿದಂತೆ ಹಲವು ವಸ್ತುಗಳುಳ್ಳ ನಿಧಿ ದೊರೆತಿದೆ. ಬಸಪ್ಪ ಬಡಿಗೇರ ಗ್ರಾಮದಲ್ಲಿ ಹಲವು ವರ್ಷಗಳಿಂದ ಶೋಧ ಕಾರ್ಯ ನಡೆಸುತ್ತಿದ್ದು, ಈ ಹಿಂದೆ ಸಾಕಷ್ಟು ಪುರಾತನ ಕಾಲದ ವಸ್ತುಗಳು ಅವರಿಗೆ ಸಿಕ್ಕಿದ್ದವು ಎನ್ನಲಾಗಿದೆ. ಅವುಗಳನ್ನೆಲ್ಲ ಅವರು ಸರಕಾರಕ್ಕೆ ಹಸ್ತಾಂತರ ಮಾಡಿದ್ದರು.

ಇಬ್ಬರು ಶಾಲಾ ಮಕ್ಕಳ ಅಪಹರಣ ಸುಖಾಂತ್ಯ

ಧಾರವಾಡ: ಇಲ್ಲಿನ ಕಮಲಾಪೂರ ಶಾಲೆಯ ಇಬ್ಬರು ಮಕ್ಕಳ ಅಪಹರಣ ಪ್ರಕರಣ ಸುಖಾಂತ್ಯಗೊಂಡಿದೆ. ಪೋಕ್ಸೋ ಪ್ರಕರಣದ ಹಿನ್ನೆಲೆಯುಳ್ಳ ಅಪಹರಣಕಾರ ಅಬ್ದುಲ್ ಕರೀಂ, ಜೋಯಿಡಾ ಬಳಿ ಬೈಕ್ ಅಪಘಾತಕ್ಕೀಡಾದಾಗ ಸಿಕ್ಕಿಬಿದ್ದಿದ್ದಾನೆ. ಮಕ್ಕಳಿಬ್ಬರೂ ಸುರಕ್ಷಿತವಾಗಿದ್ದು, ಈ ಘಟನೆಯು ಅಪಘಾತದಿಂದಾಗಿ ಬಯಲಾಗಿದೆ. 2018ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ಅಬ್ದುಲ್ ಕರೀಂ ಮೇಲೆ ಪೋಕ್ಸೋ ಕೇಸ್ ದಾಖಲಾಗಿತ್ತು. ಈತ ನಾಲ್ಕು ವರ್ಷಗಳ ಕಾಲ ಜೈಲುವಾಸ ಅನುಭವಿಸಿದ್ದ ಎಂದು ಹು-ಧಾ ಪೊಲೀಸ್ ಆಯುಕ್ತ ಎನ್.ಶಶಿಕುಮಾರ್ ತಿಳಿಸಿದ್ದಾರೆ.



ಮೆಟ್ರೋ ಕಿತ್ತಳೆ ಮಾರ್ಗಕ್ಕೆ ಸಿವಿಲ್ ಟೆಂಡರ್ ಆಹ್ವಾನ

ಬೆಂಗಳೂರು: ಬಹುನಿರೀಕ್ಷಿತ ಕಿತ್ತಳೆ ಮೆಟ್ರೋ ಮಾರ್ಗಕ್ಕಾಗಿ ನಮ್ಮ ಮೆಟ್ರೋ ಮೂರು ಪ್ಯಾಕೇಜ್‌ಗಳಲ್ಲಿ ಸಿವಿಲ್ ಟೆಂಡರ್ ಆಹ್ವಾನಿಸಿದ್ದು, ಪ್ರತ್ಯೇಕ ಬಜೆಟ್ ನೀಡಲಾಗಿದೆ. ಜೆ.ಪಿ. ನಗರದ ನಾಲ್ಕನೇ ಹಂತದಿಂದ ನಾಗರಬಾವಿವರೆಗಿನ ಕಾಮಗಾರಿಯನ್ನು ಒಳಗೊಂಡಿದ್ದು, ಫೆಬ್ರವರಿ 20ರಿಂದ 25ರೊಳಗಾಗಿ ಟೆಂಡರ್ ಸಲ್ಲಿಸಲು ಅವಕಾಶ ನೀಡಲಾಗಿದೆ. ಮೂರು ಪ್ಯಾಕೇಜ್‌ಗಳಿಗೂ ಪ್ರತ್ಯೇಕ ಬಜೆಟ್ ನೀಡಲಾಗಿದೆ. 2024ರ ಆಗಸ್ಟ್ 16ರಂದು ನಮ್ಮ ಮೆಟ್ರೋ ಕಿತ್ತಳೆ ಮಾರ್ಗದ ಯೋಜನೆಗೆ ಕೇಂದ್ರ ಸರಕಾರ ಅನುಮೋದನೆ ನೀಡಿತ್ತು.

ಬೀದಿ ನಾಯಿ ಕಚ್ಚಿದರೆ ರಾಜ್ಯಗಳಿಗೆ ಭಾರಿ ದಂಡ

ದೆಹಲಿ: ಬೀದಿ ನಾಯಿಗಳ ಕಡಿತದಿಂದ ಜನರಿಗೆ ಗಾಯ ಅಥವಾ ಸಾವು ಸಂಭವಿಸಿದರೆ ರಾಜ್ಯ ಸರಕಾರ ಭಾರಿ ಪರಿಹಾರ ನೀಡಬೇಕಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಪ್ರತಿ ನಾಯಿ ಕಡಿತದಿಂದ ಮಕ್ಕಳು, ವೃದ್ಧರಿಗೆ ಉಂಟಾಗುವ ಗಾಯ ಅಥವಾ ಸಾವು ಸಂಭವಿಸಿದರೆ, ರಾಜ್ಯವಾರು ಭಾರಿ ಪರಿಹಾರ ನಿಗದಿಪಡಿಸುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ. ನಾಯಿಗಳಿಗೆ ಆಹಾರ ನೀಡುತ್ತಿದ್ದೇವೆ ಎಂದು ಹೇಳುವವರು ಅವುಗಳನ್ನು ನಿಮ್ಮ ಮನೆಗೆ ಕರೆದೊಯ್ಯಿರಿ. ನಾಯಿಗಳು ಏಕೆ ಕಚ್ಚಬೇಕು, ಜನರನ್ನು ಏಕೆ ಹೆದರಿಸಬೇಕು ಎಂದು ಪ್ರಶ್ನಿಸಿದೆ.

ಪೋಲಿಯೊ ಮುಕ್ತ ದೇಶವಾಗಿ 15 ವರ್ಷ

ದೆಹಲಿ: ಭಾರತವು ಪೋಲಿಯೊ ಮುಕ್ತ ದೇಶವಾಗಿ ಮಂಗಳವಾರಕ್ಕೆ (ಜ.13) 15 ವರ್ಷ ಪೂರ್ಣಗೊಂಡಿದೆ. ಇದು ದೇಶದ ಆರೋಗ್ಯ ಕ್ಷೇತ್ರದಲ್ಲಿನ ಮಹತ್ವದ ಸಾಧನೆಯಾಗಿದೆ. ಕೆಲವು ದಶಕಗಳ ಹಿಂದೆ ಜಗತ್ತಿನಲ್ಲೇ ಅತಿ ಹೆಚ್ಚು ಪೋಲಿಯೊ ಪೀಡಿತರಿದ್ದ ದೇಶಗಳಲ್ಲಿ ಭಾರತವು ಕೂಡ ಒಂದಾಗಿತ್ತು. ರಾಜಕೀಯ ಇಚ್ಛಾಶಕ್ತಿ ಹಾಗೂ ಸಮುದಾಯದ ಸಹಕಾರದಿಂದ ಕಳೆದ 15 ವರ್ಷಗಳಿಂದ ದೇಶದಲ್ಲಿ ಯಾವುದೇ ಪೋಲಿಯೊ ಪ್ರಕರಣಗಳು ದಾಖಲಾಗಿಲ್ಲ. ಈಗ ಭಾರತವು ಜಗತ್ತಿನ ಇತರ ದೇಶಗಳಿಗೆ ತಂತ್ರಜ್ಞಾನ ಹಾಗೂ ಲಸಿಕೆಯನ್ನು ಸರಬರಾಜು ಮಾಡುವ ಮೂಲಕ ಜಗತ್ತನ್ನು ಪೋಲಿಯೊ ಮುಕ್ತ ಮಾಡುವಲ್ಲಿ ಸಹಕರಿಸುತ್ತಿದೆ.

ಸರಣಿ ಪ್ರತಿಭಟನೆ ಮೂಲಕ ಸರಕಾರದ ವಿರುದ್ಧ ಜನಾಂದೋಲನಕ್ಕೆ ಚಿಂತನೆ
ಬಿಜೆಪಿಯಿಂದ ಪ್ರತಿಭಟನೆ ಪರ್ವ ಆರಂಭ

ಬೆಂಗಳೂರು: ರಾಜ್ಯ ಸರಕಾರ ವೈಫಲ್ಯಗಳನ್ನು ಖಂಡಿಸಿ ರಾಜ್ಯ ಬಿಜೆಪಿಯಿಂದ ಸರಣಿ ಪ್ರತಿಭಟನೆ ನಡೆಸಲು ತೀರ್ಮಾ ನಿಸಿದ್ದು, ಮುಂದಿನ ದಿನದಲ್ಲಿ ಪ್ರತಿಭಟನಾ ಪರ್ವ ಆರಂಭವಾಗಲಿದೆ.

ಮೊದಲಿಗೆ ಬಳ್ಳಾರಿಯಲ್ಲಿ ಶಾಸಕ ಜನಾರ್ದನ ರೆಡ್ಡಿ ಮೇಲಿನ ಹಲ್ಲೆಗೆ ಪ್ರಯತ್ನಿಸಿದ ಶಾಸಕ ಭರತ್ ರೆಡ್ಡಿ ಬಂಧನಕ್ಕೆ ಆಗ್ರಹಿಸಿ ಜ.17ರಂದು ಬಳ್ಳಾರಿಯಲ್ಲಿ ರಾಜ್ಯ ಬಿಜೆಪಿ ವತಿಯಿಂದ ಬೃಹತ್ ಸಮಾವೇಶ ನಡೆಸಲು ತೀರ್ಮಾನಿಸಿರುವ ನಾಯಕರು, ಪಾದಯಾತ್ರೆ ಸಂಬಂಧ ಹೈಕಮಾಂಡ್ ಜತೆ ಚರ್ಚಿಸಿ ತೀರ್ಮಾನಿಸಲು ನಿರ್ಧರಿಸಿದ್ದಾರೆ. ಈ ಬಗ್ಗೆ ಮಾತನಾಡಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಬಿ.ಶ್ರೀರಾಮುಲು, ಜನಾರ್ದನ ರೆಡ್ಡಿ ಅವರು ಪಾದಯಾತ್ರೆಗೆ ಅಪೇಕ್ಷೆ ವ್ಯಕ್ತಪಡಿಸಿದ್ದಾರೆ. ಇದನ್ನು ಹೈಕಮಾಂಡ್ ಗಮನಕ್ಕೆ ತಂದಿದ್ದೇನೆ. ಮುಂದಿನ ದಿನಗಳಲ್ಲಿ ಪಾದಯಾತ್ರೆ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು. ಪಾದಯಾತ್ರೆ ಮಾಡಬಾರದು ಅಂತ ಏನೂ ಇಲ್ಲ. ನಮಗೂ ಪಾದಯಾತ್ರೆ ಮಾಡುವ ಅಪೇಕ್ಷೆ ಇದೆ ಎಂದರು.

ಇನ್ನು ಗೃಹಲಕ್ಷ್ಮಿ ಬಾಕಿ ಪಾವತಿಗೆ ಆಗ್ರಹಿಸಿ ಹುಬ್ಬಳ್ಳಿಯಲ್ಲಿ ಹೋರಾಟ ಮಾಡಲಾಗುವುದು. ನಂತರ ಬಾಗಲಕೋಟೆಯಲ್ಲೂ ರೈತರ ವಿಚಾರವಾಗಿ ಹೋರಾಟ ಮಾಡಲಾಗುವುದು. ಸರಕಾರ ರಾಜ್ಯವನ್ನು ಕುಡುಕರ ರಾಜ್ಯ ಮಾಡಿದೆ. ಬಡವರ ಮನೆಗಳನ್ನು ಹಾಳು ಮಾಡುತ್ತಿದೆ. ಡ್ರಗ್ಸ್ ಹಾವಳಿ ರಾಜ್ಯದಲ್ಲಿ ಹೆಚ್ಚಾಗಿದ್ದು ಬೊಕ್ಕಸಕ್ಕೆ ಹಣ ಸಂಗ್ರಹ ಮಾಡಲಾಗದೇ ಜನರಿಗೆ ಹೆಂಡ ಕುಡಿಸಿ ಅಬಕಾರಿ ಆದಾಯ ಹೆಚ್ಚಳ ಮಾಡಿಕೊಳ್ಳಲು ಮುಂದಾಗಿದೆ. ತೆರಿಗೆ ಸಂಗ್ರಹಕ್ಕೆ ಟಾರ್ಗೆಟ್ ಕೊಡಲಾಗಿದೆ ಎಂದು ಆರೋಪಿಸಿದರು.

ಮಾದಕವಸ್ತು ಜಾಲದ ಕುರಿತು ಗಮನ ಸೆಳೆಯಲು ಹೋರಾಟ ರೂಪಿಸಲಿದ್ದೇವೆ. ಮೈಸೂರು ಮುಖ್ಯಮಂತ್ರಿ ಅವರ ತವರು ಜಿಲ್ಲೆ. ಅಲ್ಲಿದ್ದ ಮಾದಕವಸ್ತು ಕಾರ್ಖಾನೆಯನ್ನು ಮಹಾರಾಷ್ಟ್ರದ ಪೊಲೀಸರು ಬಂದು ಮುಚ್ಚಿಸಬೇಕಾಯಿತು. ಮೈಸೂರು ಒಳಗೊಂಡಂತೆ ರಾಜ್ಯಾದ್ಯಂತ ಡ್ರಗ್ಸ್ ಮಾಫಿಯಾ ಹರಡಿದೆ. ಇವನ್ನು ಪರಿಗಣಿಸಿ ಮೈಸೂರಿನಲ್ಲಿ ಹೋರಾಟ ಮಾಡಲಾಗುವುದು.

-ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

ಕ್ವಿಕ್ ಕಾಮರ್ಸ್ ಕಂಪನಿಗಳಿಗೆ ಮನ್ಸುಖ್ ಮಾಂಡವಿಯಾ ಸೂಚನೆ
10 ನಿಮಿಷಗಳ ಡೆಲಿವರಿ ರದ್ದು

ದೆಹಲಿ: ಗಿಗ್ ಕಾರ್ಮಿಕರ ಸುರಕ್ಷತೆಯ ದೃಷ್ಟಿ ಯಿಂದ 10 ನಿಮಿಷಗಳ ವಿತರಣೆ ಸೇವೆಯನ್ನು ರದ್ದುಗೊಳಿಸಬೇಕು ಎಂದು ಕ್ವಿಕ್ ಕಾಮರ್ಸ್ ಕಂಪನಿಗಳಿಗೆ ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವಿಯಾ ಸೂಚಿಸಿದ್ದಾರೆ.

10 ನಿಮಿಷಗಳಲ್ಲಿ ವಿತರಣೆ ಮಾಡಬೇಕು ಎಂಬ ಒತ್ತಡದಲ್ಲಿ ಗಿಗ್ ಕಾರ್ಮಿಕರು ತಮ್ಮ ಪ್ರಾಣವನ್ನೇ ಪಣಕ್ಕಿಡುತ್ತಿದ್ದಾರೆ ಎಂದು ಎಎಪಿ ಸಂಸದ ರಾಘವ ಛಡ್ಡಾ ಸೇರಿ ಅನೇಕರು ಕೇಂದ್ರ ಸರಕಾರದ ಗಮನಕ್ಕೆ ತಂದಿದ್ದರು. ಮಂಗಳವಾರ ಬ್ಲಿಂಕ್ ಇಟ್, ಜೆಪ್ಟೊ, ಸ್ವಿಗ್ಗಿ ಮತ್ತು ಜೊಮಾಟೊ ಜತೆ ಸಭೆ ನಡೆಸಿರುವ ಸಚಿವರು, ಇಷ್ಟೇ ನಿಮಿಷದಲ್ಲಿ ಡೆಲಿವರಿ ಮಾಡ ಬೇಕೆಂಬ ಗಡುವು ನೀಡುವುದನ್ನು ನಿಲ್ಲಿಸಿ ಎಂದು ಸೂಚಿಸಿದ್ದಾರೆ. ಬ್ಲಿಂಕ್ ಇಟ್ ಈಗಾಗಲೇ 10 ನಿಮಿಷಗಳ ವಿತರಣೆ ಸೇವೆ ರದ್ದುಗೊಳಿಸಿದೆ.

ಸಕಾಲಿಕ ಕ್ರಮಕ್ಕೆ ಛಡ್ಡಾ ಧನ್ಯವಾದ

ಕೇಂದ್ರ ಸರಕಾರದ ನಿರ್ಧಾರವನ್ನು ಸ್ವಾಗತಿಸಿರುವ ರಾಘವ್ ಛಡ್ಡಾ, ಗಿಗ್ ಕಾರ್ಮಿಕರ ವಿಷಯದಲ್ಲಿ ಸಕಾಲಿಕ ಕ್ರಮ ತೆಗೆದುಕೊಂಡಿರುವುದಕ್ಕಾಗಿ ಧನ್ಯವಾದ ತಿಳಿಸಿದ್ದಾರೆ. ಇದು ತುಂಬಾ ಅಗತ್ಯವಿರುವ ಹೆಜ್ಜೆಯಾಗಿದೆ. ಒಂದು ಕಡೆ ಗಿಗ್ ಕಾರ್ಮಿಕರ ಟಿ-ಶರ್ಟ್, ಜಾಕೆಟ್, ಬ್ಯಾಗ್ ಮೇಲೆ 10 ನಿಮಿಷಗಳಲ್ಲಿ ವಿತರಣೆ ಎಂದು ಮುದ್ರಿಸಿರುವುದು, ಮತ್ತೊಂದೆಡೆ ಗ್ರಾಹಕರ ಫೋನ್ ಸ್ಕ್ರೀನ್ ಮೇಲೆ ಸಮಯ ಓಡುತ್ತಿರುವುದು, ಇದು ನಿಜಕ್ಕೂ ಕಾರ್ಮಿಕರ ಮೇಲೆ ಒತ್ತಡವನ್ನು ಹೇರುತ್ತಿತ್ತು ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಘೋಷಣೆ
ಹೋರಾಟದಲ್ಲಿ ಭಾಗವಹಿಸದಿದ್ದರೆ ಕಠಿಣ ಕ್ರಮದ ಎಚ್ಚರಿಕೆ ನೀಡಿದ ಡಿಕೆ
ನರೇಗಾ ವಾಪಸಾಗೋ ತನಕ ಹೋರಾಟ

ಬೆಂಗಳೂರು: ಕೇಂದ್ರ ಸರಕಾರ ಜಾರಿಗೊಳಿಸಿರುವ ವಿಬಿ ಜಿ ರಾಮ್ ಜಿ ಯೋಜನೆ ರದ್ದುಪಡಿಸಿ, ಮನರೇಗಾ ಪುನರ್ ಸ್ಥಾಪಿಸುವ ತನಕ ನಮ್ಮ ಹೋರಾಟ ಮುಂದುವರಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ಕೆಪಿಸಿಸಿ ವತಿಯಿಂದ ಆಯೋಜಿಸಿದ್ದ ಮನರೇಗಾ ಬಚಾವ್ ಸಂಗ್ರಾಮ ಪೂರ್ವಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ಯುಪಿಎ ಸರಕಾರದ ಅವಧಿಯಲ್ಲಿ ಗ್ರಾಮೀಣ ಪ್ರದೇಶದ ಬಡವರಿಗೆ ಕೆಲಸದ ಹಕ್ಕು ನೀಡಲು ನರೇಗಾ ಜಾರಿಗೊಳಿಸಲಾಯಿತು. 20 ವರ್ಷಗಳಿಂದ ಜಾರಿಯಲ್ಲಿದ್ದ ಕಾಯ್ದೆಯಡಿ 12.16 ಕೋಟಿ ಕಾರ್ಮಿಕರು ದೇಶದಲ್ಲಿ ಕೆಲಸ ಮಾಡುತ್ತಿದ್ದು, 6.21ಕೋಟಿ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಆದರೆ ಇದನ್ನು ರದ್ದುಪಡಿಸುವ ಮೂಲಕ ಗ್ರಾಮೀಣ ಭಾಗದವರ ಉದ್ಯೋಗವನ್ನು ಕೇಂದ್ರ ಸರಕಾರ ಕಸಿದುಕೊಂಡಿದೆ ಎಂದು ಟೀಕಿಸಿದರು. → 4

ಕೆಪಿಸಿಸಿ ವತಿಯಿಂದ ಆಯೋಜಿಸಿದ್ದ ಮನರೇಗಾ ಬಚಾವ್ ಸಂಗ್ರಾಮ ಪೂರ್ವಸಿದ್ಧತಾ ಸಭೆಯಲ್ಲಿ ಸಿಎಂ, ಡಿಸಿಎಂ ಸೇರಿದಂತೆ ಎಲ್ಲ ಕಾಂಗ್ರೆಸ್ ನಾಯಕರು ಕೈ ಕೈ ಹಿಡಿದು ಮೇಲಕ್ಕೆತ್ತುವ ಮೂಲಕ ಶಕ್ತಿ ಪ್ರದರ್ಶನ ಮಾಡಿದರು.

ಜ.26ರಿಂದ ಫೆ.7ರವರೆಗೆ ಎಲ್ಲ ವಿಧಾನಸಭೆ ಕ್ಷೇತ್ರ ಮಟ್ಟದಲ್ಲಿ 5-10 ಕಿ.ಮೀ ಪಾದಯಾತ್ರೆ ಮಾಡಬೇಕು. ಇದರಲ್ಲಿ ಎಲ್ಲ ಗ್ರಾಮ ಪಂಚಾಯಿತಿ ಸದಸ್ಯರು, ನಮ್ಮ ನಾಯಕರು, ಶಾಸಕರು ಹಾಗೂ ಸಚಿವರ ನೇತೃತ್ವದಲ್ಲಿ ಪಾದಯಾತ್ರೆ ಮಾಡಬೇಕು. ಶಿಕಾರಿಪುರ ಸೇರಿದಂತೆ ಐದಾರು ಕಡೆ ಪಾದಯಾತ್ರೆ ಮಾಡಲು ನಾನೇ ಖುದ್ದಾಗಿ ಬರುತ್ತೇನೆ. ಎಲ್ಲಿ ಶಾಸಕರಿಲ್ಲವೋ ಆ ಕ್ಷೇತ್ರಗಳಲ್ಲಿ ನಾನು ಪಾದಯಾತ್ರೆ ಮಾಡುತ್ತೇನೆ. ಪಕ್ಷ ಸಂಘಟನೆ ಮಾಡುವ ನಿಟ್ಟಿನಲ್ಲಿ ಇದು ಬಹಳ ಪ್ರಮುಖ ವಿಚಾರ.

-ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ವಿಶೇಷ ಅಧಿವೇಶನಕ್ಕೂ ಮುನ್ನ ಗವರ್ನರ್ ಭಾಷಣಕ್ಕೆ ಸರಕಾರದ ಸರಕು ಸಿದ್ಧ
ರಾಜ್ಯಪಾಲರ ಬಾಯಲ್ಲಿ ನರೇಗಾ ಜಪ?

ಬೆಂಗಳೂರು: ವಿಬಿ ರಾಮ್ ಜಿ ವಿರುದ್ಧ ಸಮರ ಸಾರಿರುವ ಕಾಂಗ್ರೆಸ್, ಇದೀಗ ಕೇಂದ್ರದ ಈ ತೀರ್ಮಾನವನ್ನು ರಾಜ್ಯಪಾಲರ ಬಾಯಲ್ಲಿಯೇ ಟೀಕಿಸುವ ಲೆಕ್ಕಾಚಾರದಲ್ಲಿದೆ.

ನರೇಗಾ ಬದಲು ಕೇಂದ್ರ ಸರಕಾರ ಜಾರಿಗೊಳಿಸಿರುವ ವಿಬಿ ರಾಮ್ ಜಿ ಯೋಜನೆ ಯನ್ನು ರಾಜ್ಯಪಾಲರ ಭಾಷಣದಲ್ಲಿ ಟೀಕಿಸುವ ಜತೆಗೆ, ನರೇಗಾ ಯೋಜನೆಯಿಂದಾಗಿರುವ ಲಾಭಗಳ ಬಗ್ಗೆಯೂ ಪ್ರಸ್ತಾಪಿಸುವಂತೆ ನೋಡಿಕೊಳ್ಳಲು ಸರಕಾರ ಚಿಂತನೆ ನಡೆಸಿದೆ. ಜಂಟಿ ಅಧಿವೇಶನದ ಭಾಷಣವನ್ನು ಸರಕಾರ ಸಿದ್ಧಪಡಿಸಿಕೊಡುವುದರಿಂದ, ಕೇಂದ್ರದ ನಡೆಯ ವಿರುದ್ಧ ಕೆಲ ಅಂಶಗಳನ್ನು ಸೇರಿಸಲು ತೀರ್ಮಾನಿಸಲಾಗಿದೆ.

ಈ ಬಗ್ಗೆ ಬುಧವಾರ ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಯಾವ ರೀತಿಯಲ್ಲಿ ಮುಂದುವರಿಯಬೇಕು ಎನ್ನುವ ಅಂತಿಮ ತೀರ್ಮಾನ ಕೈಗೊಳ್ಳುವ ಸಾಧ್ಯತೆಯಿದೆ. ಪ್ರಮುಖವಾಗಿ, ನರೇಗಾ ಸಂಬಂಧ ಚರ್ಚಿಸಲು ಎರಡು ದಿನ ವಿಶೇಷ ಅಧಿವೇಶನ ಕರೆಯುವುದಾಗಿ ಸರಕಾರ ಹೇಳಿತ್ತು. ಆದರೆ ವಿಶೇಷ ಅಧಿವೇಶನ ಕರೆಯಲು ಇರುವ ತಾಂತ್ರಿಕ ಸಮಸ್ಯೆ, ಜಂಟಿ ಸದನವನ್ನು ಉದ್ದೇಶಿಸಿ ರಾಜ್ಯಪಾಲರು ಮಾಡುವ ಭಾಷಣದಲ್ಲಿ ಯಾವೆಲ್ಲ ಅಂಶಗಳನ್ನು ಸೇರಿಸಬೇಕು ಎನ್ನುವ ಬಗ್ಗೆ ಚರ್ಚಿಸುವ ಸಾಧ್ಯತೆಯಿದೆ. ಬಳಿಕ ಜಂಟಿ ಅಧಿವೇಶನದ ದಿನಾಂಕ ನಿರ್ಧಾರವಾಗಲಿದೆ ಎನ್ನಲಾಗಿದೆ.

ಇದರೊಂದಿಗೆ ಬುಧವಾರ ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ, ರಾಮ್ ಜಿ ಕಾಯಿದೆಯ ವಿರುದ್ಧ ಯಾವ ರೀತಿಯಲ್ಲಿ ಕಾನೂನು ಹೋರಾಟ ಕೈಗೊಳ್ಳಬೇಕು ಎನ್ನುವ ಬಗ್ಗೆ ಚರ್ಚಿಸುವ ಸಾಧ್ಯತೆಯಿದೆ. ಜ.20, 21ರಂದು ದೆಹಲಿಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಎರಡನೇ ಸುತ್ತಿನ ಸಭೆ ಕರೆದಿರುವುದರಿಂದ ಅಲ್ಲಿಗೆ ತೆರಳುವ ಮೊದಲು ಕರ್ನಾಟಕ ಸರಕಾರ ವಿಬಿ ರಾಮ್ ಜಿ ಕಾಯಿದೆ ವಿರುದ್ಧ ಕೈಗೊಳ್ಳಲಿರುವ ಕ್ರಮಗಳ ಬಗ್ಗೆ ಸ್ಪಷ್ಟನೆ ಪಡೆಯಲು ಸಿದ್ದರಾಮಯ್ಯ ತೀರ್ಮಾನಿಸಿದ್ದಾರೆ. ಆದ್ದರಿಂದ ಬುಧವಾರದ ಸಂಪುಟ ಸಭೆ ಮಹತ್ವ ಪಡೆದಿದೆ.

ತಾಂತ್ರಿಕ ಸಮಸ್ಯೆ

ಈ ಹಿಂದೆ 2 ದಿನಗಳ ವಿಶೇಷ ಅಧಿವೇಶನ ಕರೆಯುವುದಾಗಿ ಸಿಎಂ, ಡಿಸಿಎಂ ಹೇಳಿದ್ದರು. ಆದರೆ ವರ್ಷದ ಮೊದಲ ಅಧಿವೇಶನ ರಾಜ್ಯಪಾಲರ ಜಂಟಿ ಅಧಿವೇಶನದ ಮೂಲಕವೇ ಆರಂಭವಾಗಬೇಕು ಎನ್ನುವ ನಿಯಮವಿರುವುದರಿಂದ, ರಾಜ್ಯಪಾಲರ ಭಾಷಣ ಮಾಡದೇ ವಿಶೇಷ ಅಧಿವೇಶನ ಕರೆಯಲು ಸಾಧ್ಯವಿರಲಿಲ್ಲ. ಆದ್ದರಿಂದ 2 ದಿನದ ಅಧಿವೇಶನವನ್ನು ವಿಶೇಷ ಅಧಿವೇಶನ ವೆಂದು ಕರೆಯುವ ಬದಲು, ಮೊದಲಿಗೆ ರಾಜ್ಯಪಾಲರ ಭಾಷಣ ಮಾಡಿಸಿ, ಬಳಿಕ ಒಂದೂವರೆ ದಿನ ವಿಶೇಷ ಅಧಿವೇಶನ ನಡೆಸಿ, ಬಳಿಕ ಬಜೆಟ್ ಅಧಿವೇಶನಕ್ಕೂ ಒಂದು ವಾರ ಮೊದಲು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗೆ ಅವಕಾಶ ನೀಡಿ ಬಳಿಕ ಬಜೆಟ್ ಅಧಿವೇಶನ ನಡೆಸುವುದು ಸರಕಾರದ ಲೆಕ್ಕಾಚಾರವಾಗಿದೆ.

ಸಮಾಚಾರ ಸಣ್ಣದಲ್ಲ

ಕ್ರೀಡಾ ಪಟುಗಳ ಆಯ್ಕೆ ಪ್ರಕ್ರಿಯೆ

ಕಾರವಾರ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕಾರವಾರ (ಉ.ಕ) ಅಧೀನದಲ್ಲಿ ಬರುವ ಕಾರವಾರ ಮತ್ತು ಹಳಿಯಾಳ ಕ್ರೀಡಾ ವಸತಿ ನಿಲಯಗಳಿಗೆ ಉತ್ತರ ಕನ್ನಡ ಜಿಲ್ಲೆಯ ಪ್ರತಿಭಾವಂತ ಕ್ರೀಡಾಪಟುಗಳ ಆಯ್ಕೆ ಪ್ರಕ್ರಿಯೆಯನ್ನು , ಜಿಲ್ಲೆಯ ಎಲ್ಲಾ ತಾಲೂಕಿನ ಕೇಂದ್ರದ ಕ್ರೀಡಾಂಗಣಗಳಲ್ಲಿ ನಡೆಸಲಾಗುತ್ತಿದೆ. ಕ್ರೀಡಾ ವಸತಿ ನಿಲಯ ಆಯ್ಕೆ :8ನೇ ತರಗತಿ ಮತ್ತು ಪ್ರಥಮ ಪಿಯುಸಿ ಸೇರ ಬಯಸುವ ವಿದ್ಯಾರ್ಥಿಗಳಿಗೆ : 8 ನೇ ತರಗತಿಗೆ ಸೇರುವಂತಹವರು ಹಾಗೂ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರಬೇಕು. ಜೂನ್ 1– 2026 ಕ್ಕೆ 14ವರ್ಷ ಮೀರಿರಬಾರದು. ತಾಲೂಕು, ಜಿಲ್ಲಾ, ರಾಜ್ಯ ಮಟ್ಟದಲ್ಲಿ ಯಾವುದೇ ಕ್ರೀಡೆಯಲ್ಲಿ ಭಾಗವಹಿಸಿದ ದಾಖಲೆ ಇರಬೇಕು. ಅಥ್ಲೆಟಿಕ್ಸ್, ಕುಸ್ತಿ ವಾಲಿಬಾಲ್, ಜುಡೊ, ಬಾಸ್ಕೆಟ್ ಬಾಲ್, ಪುಟ್ಬಾಲ್ (ಬಾಸ್ಕೆಟ್ ಬಾಲ್, ವಾಲಿಬಾಲ್ ಬಾಲಕರ ದೇಹದ ಎತ್ತರ 172 ಸೆಂ.ಮೀ ಮತ್ತು ಬಾಲಕಿಯರ ಎತ್ತರ 163 ಸೆಂ.ಮೀ ಇರಬೇಕು) ಕ್ರೀಡೆಗೆ ಪ್ರತಿಭಾವಂತ ಕ್ರೀಡಾಪಟುಗಳ ಆಯ್ಕೆಯ ಪ್ರಕ್ರಿಯೆಯನ್ನು ನಡೆಸಲಾಗುವುದು.

ಅಥ್ಲೆಟಿಕ್ಸ್, ಕುಸ್ತಿ ವಾಲಿಬಾಲ್, ಜುಡೊ, ಬಾಸ್ಕೆಟ್ ಬಾಲ್, ಪುಟ್ಬಾಲ್ (ಕಿರಿಯರ ವಿಭಾಗ– 8ನೇ ತರಗತಿಯವರಿಗೆ ಬಾಸ್ಕೆಟ್ ಬಾಲ್, ವಾಲಿಬಾಲ್ಗೆ ಬಾಲಕರ ಎತ್ತರ 170 ಸೆಂ.ಮೀ ಮತ್ತು ಬಾಲಕೀಯರ ಎತ್ತರ 163 ಸೆಂ.ಮೀ.) ಮತ್ತು (ಹಿರಿಯರ ವಿಭಾಗ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಬಾಸ್ಕೆಟ್ ಬಾಲ್, ವಾಲಿಬಾಲ್ಗೆ ಆಯ್ಕೆಯಾಗಿದ್ದಾರೆ.

ರಕ್ಷಣಾ ಆಯೋಗದ ಸದಸ್ಯರ ಪ್ರವಾಸ

ಕಾರವಾರ: ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ತಿಪ್ಪೇಸ್ವಾಮಿ ಕೆ.ಟಿ ಜ.22 ಮತ್ತು 23ರಂದು ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದು ಅಂದು ಬೆಳಗ್ಗೆ 10.30 ಗಂಟೆಗೆ ಆಯೋಗದ ವತಿಯಿಂದ ಉತ್ತರ ಕನ್ನಡ ಜಿಲ್ಲೆಯ ಗ್ರಾಮೀಣ ಪುರ್ವಸತಿ ಕರ್ಯಕರ್ತರಿಗೆ ಮಕ್ಕಳ ಹಕ್ಕುಗಳು ಹಾಗೂ ಕಾನೂನುಗಳ ಕುರಿತು ಏರ್ಪಡಿಸಿ ರುವ ತರಬೇತಿಯಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಕಾರಾಗೃಹ, ಐಟಿಐ, ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಮಕ್ಕಳ ರಕ್ಷಣಾ ನೀತಿ–2016 ರ ಅನುಷ್ಠಾನದ ಪರಿಶೀಲನಾ ಭೇಟಿ ಕೈಗೊಳ್ಳಲಿದ್ದಾರೆ. ಜ.23 ರಂದು ಆಯೋಗದ ವತಿಯಿಂದ ಉತ್ತರ ಕನ್ನಡ ಜಿಲ್ಲೆಯ ಮಕ್ಕಳ ಪಾಲನಾ ಕೇಂದ್ರದ ಸಿಬ್ಬಂದಿಗಳಿಗೆ ಏರ್ಪಡಿಸಿರುವ ತರಬೇತಿಯಲ್ಲಿ ಭಾಗವಹಿಸಲಿದ್ದಾರೆ ಎಂದು ರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸವದತ್ತಿ ಸ್ಮಾರಕ ದತ್ತಿ ಉಪನ್ಯಾಸ ಇಂದು

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ, ಹಳೆಯ ವಿದ್ಯಾರ್ಥಿಗಳ ಸಂಘದ ಸಹಯೋಗದೊಂದಿಗೆ ಪ್ರೊ. ಎಂ.ಐ. ಸವದತ್ತಿ ಸ್ಮಾರಕ ದತ್ತಿ ಉಪನ್ಯಾಸ ಕಾರ್ಯಕ್ರಮ ಜ. 14ರಂದು ಕವಿವಿ ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ಮಧ್ಯಾಹ್ನ 3ಕ್ಕೆ ಆಯೋಜಿಸಲಾಗಿದೆ. ಮುಂಬಯಿನ ರಾಜೀವ ಗಾಂಧಿ ಸಾಯನ್ಸ್ ಆಂಡ್ ಟೆಕ್ನಾಲಜಿ ಕಮೀಶನ್ ಅಧ್ಯಕ್ಷ ಡಾ. ಅನಿಲ ಕಾಕೋಡಕರ್ 'ಉನ್ನತ ಶಿಕ್ಷಣದಲ್ಲಿನ ಮೌಲ್ಯಗಳು ಮತ್ತು ಶ್ರೇಷ್ಠತೆ' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಕೆ. ಸಿದ್ದಪ್ಪ, ಗುಲಬರ್ಗಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಬಿ.ಜಿ ಮೂಲಿಮನಿ, ಕಲಬುರಗಿ ಕೇಂದ್ರೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ. ಮಲ್ಲಿಕಾರ್ಜುನ ಅಳಗವಾಡಿ, ಕರ್ನಾಟಕ ವಿಶ್ವವಿದ್ಯಾಲ ಯ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಜಯಶ್ರೀ ಟೋಣಣ್ಣವರ ಭಾಗವಹಿಸಲಿದ್ದಾರೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಪನಹಳ್ಳಿ

ಕ್ರಿಮಿನಲ್ ಮಿಸ್ಲೇನಿಯಸ್ ನಂ., 492/2025

1.ಶ್ರೀಯುತ ಮಠದ ಪತ್ರೆಯ್ಯ ತಂದೆ:–ಲೇಟ್ ಮಠದ ವೀರಯ್ಯ ವಯಸ್ಸು:–62 ವರ್ಷ, ವೃತ್ತಿ:–ವ್ಯವಸಾಯ ವಾಸ:–ಹಗರಿಗುಡಿಹಳ್ಳಿ ಗ್ರಾಮ, ಹರಪನಹಳ್ಳಿ ತಾಲ್ಲೂಕು, ವಿಜಯನಗರ

2. ಶ್ರೀಯುತ ಮಠದ ಕೊಟ್ರಯ್ಯ ತಂದೆ:–ಲೇಟ್ ಮಠದ ವೀರಯ್ಯ ವಯಸ್ಸು:–58 ವರ್ಷ, ವೃತ್ತಿ:–ವ್ಯವಸಾಯ ವಾಸು–ಹಗರಿಗುಡಿಹಳ್ಳಿ ಗ್ರಾಮ, ಹರಪನಹಳ್ಳಿ ತಾಲ್ಲೂಕು, ವಿಜಯನಗರ

3. ಶ್ರೀಮತಿ ನಿರ್ಮಲ ಗಂಡ:–ಲೇಟ್ ಬಸವರಾಜಯ್ಯ ಮತ್ತು ತಂದೆ ಲೇಟ್ ಮಠದ ವೀರಯ್ಯ,ವಯಸ್ಸು:–48 ವರ್ಷ, ವೃತ್ತಿ:–ಮನೆಕೆಲಸ ವಾಸ: ತಲುವಾಗಲು ಗ್ರಾಮ, ಹರಪನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ.

.....ಅರ್ಜಿದಾರರು

–ವಿರುದ್ಧ–

ತಹಶೀಲ್ದಾರರು, ತಾಲ್ಲೂಕು ಕಛೇರಿ, ಹರಪನಹಳ್ಳಿ, ವಿಜಯನಗರ ಜಿಲ್ಲೆ.

...ಎದುರುದಾರರು.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಮೇಲ್ಕಾಂಡ 1 ರಿಂದ 3ನೇ ಅರ್ಜಿದಾರರ ಅಜ್ಜಿ ಅಂದರೆ ಮಠದ ಹಾಲಮ್ಮ ತಂದೆ ಮಠದ ಅಜ್ಜಯ್ಯ ಈಕೆಯು ದಿನಾಂಕ:–01–03–1990 ರಂದು ಹಗರಿಗುಡಿಹಳ್ಳಿ ಗ್ರಾಮದಲ್ಲಿ ಮರಣ ಹೊಂದಿರುವುದನ್ನು ಸಂಬಂಧಿಸಿದ ಜನನ ಮತ್ತು ಮರಣ ಪ್ರಮಾಣ ಪುಸ್ತಕದಲ್ಲಿ ನೊಂದಾಯಿಸದೆ ಇದ್ದುದ್ದರಿಂದ ಅರ್ಜಿದಾರರು ಮಠದ ಹಾಲಮ್ಮ ತಂದೆ:–ಮಠದ ಅಜ್ಜಯ್ಯ ಇವರ ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ಹರಪನಹಳ್ಳಿ ಹಿರಿಯ ಶ್ರೇಣಿ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಿಸ್ ಲೇನಿಯಸ್ ನಂಬರ್.492/2025ನ್ನು ಸಲ್ಲಿಸಿದ್ದು, ಸದರಿ ಪ್ರಕರಣದ ಮುದ್ದತ್ ದಿನಾಂಕ:–03–02–2026 ರಂದು ಇರುತ್ತದೆ.ಅರ್ಜಿದಾರರು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಯಾರಾದರೂ ನ್ಯಾಯಾಲಯಕ್ಕೆ ಹಾಜರಾಗುವುದಿದ್ದರೆ ಅಥವಾ ತಕರಾರು ಸಲ್ಲಿಸುವುದು ಇದ್ದರೆ ದಿನಾಂಕ: 03/02/2026 ರಂದು ಹರಪನಹಳ್ಳಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು, ಯಾರು ಹಾಜರಾಗದೇ ಇದ್ದಲ್ಲಿ ಅರ್ಜಿದಾರರ ಅರ್ಜಿಗೆ ಯಾವುದೇ ತಕರಾರು ಇಲ್ಲವೆಂದು ನ್ಯಾಯಾಲಯವು ಪರಿಗಣಿಸಿ ಅರ್ಜಿಯನ್ನು ಅಂಗೀಕರಿಸುತ್ತದೆ.

2026ನೇ ಜನವರಿ ತಿಂಗಳ 13ನೇ ತಾರೀಖಿನಂದು ನ್ಯಾಯಾಲಯದ ಮೊಹರಿನೊಂದಿಗೆ ಈ ಪ್ರಕಟಣೆ ಹೊರಡಿಸಲಾಗಿದೆ.

ಸ್ಥಳ: ಹರಪನಹಳ್ಳಿ
ದಿನಾಂಕ.13.01.2026

ಅರ್ಜಿದಾರರ ಪರ ವಕೀಲರು
ಬಿ.ಹಾಲೇಶಿ
ನ್ಯಾಯಾಲಯದ ಆದೇಶದ ಮೇರೆಗೆ
ಹಿರಿಯ ಶಿರಸ್ತೇದಾರರು
ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯ, ಹರಪನಹಳ್ಳಿ.

ಅಂತಾರಾಷ್ಟ್ರೀಯ ಸಿರಿಧಾನ್ಯ ಮೇಳ, ವಾಕ್‌ಥಾನ್‌ಗೆ ಶಾಸಕ ಭೀಮಣ್ಣ ನಾಯ್ಕ ಚಾಲನೆ

ಆರೋಗ್ಯಕ್ಕಾಗಿ ಸಿರಿಧಾನ್ಯ ಬಳಸಿ

ಶಿರಸಿ: ಸಾವಯವ ಆಹಾರಗಳಿಂದ ಮಾತ್ರ ಸುಸ್ಥಿರ ಆರೋಗ್ಯ ಹೊಂದಲು ಸಾಧ್ಯ ಎಂದು ಶಿರಸಿ – ಸಿದ್ದಾಪುರ ವಿಧಾನಸಭಾ ಕ್ಷೇತ್ರದ ಶಾಸಕ ಭೀಮಣ್ಣ ನಾಯ್ಕ ಹೇಳಿದರು.

ಇಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಉತ್ತರ ಕನ್ನಡ, ಕೃಷಿ ಇಲಾಖೆ ಹಾಗೂ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ವಾಣಿಜ್ಯ ಮೇಳ ಊ 2026ರ ಅಂಗವಾಗಿ ನಡೆದ ಸಾವಯವ ಮತ್ತು ಸಿರಿಧಾನ್ಯ ವಾಕಥಾನ್ಗೆ ಚಾಲನೆ ನೀಡಿದರು. ಸಾವಯವ ಸಿರಿಧಾನ್ಯ ವಾಕಥಾನ್ ಜಾಥಾದಲ್ಲಿ ಜಂಟಿ ಕೃಷಿ ನಿರ್ದೇಶಕ ಶಿವಪ್ರಸಾದ ಗಾಂವಕರ್ ಮಾತನಾಡಿ, ಸಾವಯವ ಹಾಗೂ ಸಿರಿಧಾನ್ಯಗಳ ಕುರಿತಾದ ಮಹತ್ವವನ್ನು ವಿವರಿಸಿದರು.

ವಾಕಥಾನ್ ಜಾಥಾದಲ್ಲಿ ತೋಟಗಾರಿಕಾ ಇಲಾಖೆ ಜಂಟಿ ನಿರ್ದೇಶಕರಾದ ಬಿ.ಪಿ. ಸತೀಶ್, ಉತ್ತರ ಕನ್ನಡ ಜಿಲ್ಲಾ ಸಾವಯವ ಕೃಷಿ ಒಕ್ಕೂಟದ ಅಧ್ಯಕ್ಷ ವಿಶ್ವೇಶ್ವರ ಭಟ್, ಸ್ಕೊಡ್ವೆಸ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ. ವೆಂಕಟೇಶ ನಾಯ್ಕ, ಅರಣ್ಯ ಮಹಾವಿದ್ಯಾಲಯದ ಡೀನ್ ಡಾ.ಆರ್.ವಾಸುದೇವ, ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥೆ ರೂಪಾ ಪಾಟೀಲ್, ತೋಟಗಾರಿಕಾ ಮಹಾವಿದ್ಯಾಲಯದ ಎಮ್.ಎಚ್.ತಟಗಾರ, ಶಿರಸಿ ತಾ.ಪಂ ಇಒ ಚನ್ನಬಸಪ್ಪ ಹಾವಣಗಿ ಸೇರಿದಂತೆ ಕೃಷಿ ಹಾಗೂ ತೋಟಗಾರಿಕಾ ಇಲಾಖೆಯ ಎಲ್ಲಾ ಅಧಿಕಾರಿಗಳು, ಸಿಬ್ಬಂದಿಗಳು ಭಾಗವಹಿಸಿದ್ದರು.

ರೊ.ದಿನೇಶ ಹೆಗಡೆ ಪೂರ್ವ ಸಿದ್ಧತೆಯ ತರಬೇತಿಯೊಂದಿಗೆ ಆರಂಭವಾದ ಜಾಥಾ, ಅರಣ್ಯ ಮಹಾವಿದ್ಯಾಲಯದಿಂದ ಮುಂಜಾನೆ 07:00 ಗಂಟೆಗೆ ಆರಂಭವಾದ ಜಾಥಾ ಮಾರಿಕಾಂಬಾ ದೇವಸ್ಥಾನ, ಶಿವಾಜಿ ವೃತ್ತ, ಪೋಸ್ಟ್ ಆಫೀಸ್ ಸರ್ಕಲ್, ಸಿ.ಪಿ.ಬಝಾರ್,ಝೂ ಸರ್ಕಲ್ ಮೂಲಕ ರಾಘವೇಂದ್ರ ಮಠದಲ್ಲಿ ಕೊನೆಗೊಂಡಿತು. ವಾಕ್ಥಾನ್ ಉದ್ದಕ್ಕೂ ಸಾವಯವ, ಸಿರಿಧಾನ್ಯಗಳ ಬಗ್ಗೆ ಘೋಷಣೆಗಳನ್ನು ಕೂಗುತ್ತಾ, ಕರಪತ್ರಗಳನ್ನು ಹಂಚುತ್ತಾ ಅರಿವು ಮೂಡಿಸಲಾಯಿತು.

ಅಂತಾರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ವಾಣಿಜ್ಯ ಮೇಳ 2026ರ ಅಂಗವಾಗಿ ನಡೆದ ಸಾವಯವ ಮತ್ತು ಸಿರಿಧಾನ್ಯ ವಾಕಥಾನ್‌ಗೆ ಶಾಸಕ ಭೀಮಣ್ಣ ನಾಯ್ಕ ಚಾಲನೆ ನೀಡಿದರು.

> **ಬದಲಾಗುತ್ತಿರುವ ಆಧುನಿಕ ಜೀವನ ಶೈಲಿಯಲ್ಲಿ ರೆಡಿಮೇಡ್ ಹಾಗೂ ಜಂಕ್ ಫುಡ್ಗಳ ಬಳಕೆ ಹೆಚ್ಚಾಗುತ್ತಿರುವು ದರಿಂದ ಸಹಜವಾಗಿಯೇ ರೋಗ ನಿರೋಧಕ ಶಕ್ತಿ ಕ್ಷೀಣಿಸುತ್ತಿದೆ. ಇದರಿಂದ ಮಾನವನ ಸಾಮರ್ಥ್ಯ ಕುಸಿಯುವುದ ರಿಂದ ದೇಶದ ಅಭಿವೃದ್ಧಿಯಲ್ಲಿ ಸಮರ್ಪಕ ಮಾನವ ಸಂಪನ್ಮೂಲದ ಬಳಕೆಗೆ ತಡೆ ಉಂಟಾಗುವುದರಿಂದ ಪ್ರತಿಯೊಬ್ಬರು ದಿನನಿತ್ಯ ಸಾವಯವ ಸಿರಿ ಧಾನ್ಯ ಆಹಾರ ಬಳಸುವಂತೆ ಬಳಸಬೇಕು.**
> –ಭೀಮಣ್ಣ ನಾಯ್ಕ, ಶಾಸಕ

ವಾಕಥಾನ್ದಲ್ಲಿ ಕೃಷಿ ಇಲಾಖೆ, ತೋಟಗಾರಿಕಾ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು, ಅರಣ್ಯ ಮಹಾವಿದ್ಯಾಲಯದ ಅಧಿಕಾರಿಗಳು ಹಾಗೂ ವಿದ್ಯಾರ್ಥಿಗಳು, ತೋಟಗಾರಿಕಾ ಮಹಾವಿದ್ಯಾಲಯದ ಅಧಿಕಾರಿಗಳು ಹಾಗೂ ವಿದ್ಯಾರ್ಥಿಗಳು, ಸ್ಕೊಡ್ವೆಸ್ ಸಂಸ್ಥೆಯ ಸಿಬ್ಬಂದಿಗಳು, ರೋಟರಿ ಸಂಸ್ಥೆಯ ಪದಾಧಿಕಾರಿಗಳು ಸದಸ್ಯರು, ಲಯನ್ಸ್ ಸಂಸ್ಥೆಯ ಅಧ್ಯಕ್ಷರು ಹಾಗೂ ಸದಸ್ಯರು, ಇನ್ನರ್ ವ್ಹೀಲ್ ಸಂಸ್ಥೆಯ ಪದಾಧಿಕಾರಿಗಳು ಸೇರಿದಂತೆ 500 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.

ವಾಕಥಾನ್ನ ಆರಂಭದಲ್ಲಿ ಕೃಷಿ ನಿರ್ದೇಶಕ ಪಾಂಡು ಕೆ.ಎಚ್. ಮಾತನಾಡಿದರು. ಸಹಾಯಕ ಕೃಷಿ ನಿರ್ದೇಶಕ ಮಧುಕರ ನಾಯ್ಕ ಕಾರ್ಯಕ್ರಮವನ್ನು ನಿರ್ವಹಿಸಿ ಕೊನೆಯಲ್ಲಿ ವಂದಿಸಿದರು.

ಕ್ಷೇತ್ರಗಳಿಂದ ಜನರಿಗೆ ಒಳಿತು

ಭಟ್ಕಳ: ಕ್ಷೇತ್ರಗಳು ಬೆಳೆದರೆ, ಪ್ರಸಿದ್ಧಿಯಾದರೆ ಸುತ್ತಲಿನ ಜನರಿಗೆ ಒಳಿತಾಗುತ್ತದೆ. ಕ್ಷೇತ್ರಕ್ಕೆ ಬಂದು ಪ್ರಾರ್ಥಿಸಿದವರಿಗೆ ಪ್ರಯೋಜನವಾಗುತ್ತದೆ. ಅಂತಹ ಒಳಿತಾದವರಿಂದಲೇ ಈ ಕ್ಷೇತ್ರ ಬೆಳೆಯುತ್ತದೆ. ಕ್ಷೇತ್ರಕ್ಕೆ ಸಹಾಯವೂ ಆಗಲಿದೆ ಎಂದು ಶಿರಳಗಿಯ ಚೈತನ್ಯ ರಾಜಾರಾಮ ಕ್ಷೇತ್ರದ ಶ್ರೀ ಬ್ರಹ್ಮಾನಂದ ಭಾರತಿ ಸ್ವಾಮೀಜಿ ಹೇಳಿದರು.

ಅವರು ಮಾರುಕೇರಿಯ ಹೂತ್ಕಳದ ಶ್ರೀ ಧನ್ವಂತರಿ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ನಡೆಯುತ್ತಿರುವ ಕೃತಕೋಟಿ ಶ್ರೀ ಧನ್ವಂತರಿ ಜಪ ಸಾಂಗತಾ ಹೋಮದ ಪೂರ್ಣಾಹುತಿಯ ನಂತರ ಏರ್ಪಡಿಸಲಾಗಿದ್ದ ಧರ್ಮ ಸಭೆಯಲ್ಲಿ ಆಶೀರ್ವಚನ ನೀಡಿದರು.

ಒಂದು ಕಾಲದಲ್ಲಿ ಊರಿನ ಭಕ್ತರೇ ಬಾರದಿದ್ದ ದೇವಸ್ಥಾನ ಬಹುವಾಗಿ ಪ್ರಸಿದ್ಧಿಯಾಗಿದೆ.

ಮುಂದೊಂದು ದಿನ ಇದು ರಾಷ್ಟ್ರವ್ಯಾಪಿ ತನ್ನ ಪ್ರಸಿದ್ಧಿಯನ್ನು ಪಸರಿಲಿದೆ ಎಂದ ಅವರು, ಕ್ಷೇತ್ರದಲ್ಲಿ ನೆಲೆಸಿರುವ ಆದಿ ಧನ್ವಂತರಿ ದೇವರು ಸರ್ವರೋಗ ನಿವಾರಕನಾಗಿದ್ದು, ಕ್ಷೇತ್ರವನ್ನು ಹುಡುಕಿಕೊಂಡು ಬರುತ್ತಿದ್ದಾರೆ. ಈ ಕ್ಷೇತ್ರದ ಅರ್ಚಕರು ಅತ್ಯಂತ ಸಾತ್ವಿಕರು ಹಾಗೂ ಶ್ರೀ ದೇವರ ಅರ್ಚನೆಯನ್ನು ಮಾಡುವ ರೀತಿ, ಶ್ರದ್ಧೆಯು ಕ್ಷೇತ್ರವನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ಯಲಿದೆ ಎಂದು ಹೇಳಿದರು.

ಆಯುರ್ವೇದ ವೈದ್ಯ ಮಕ್ಕಿ ದೇವಸ್ಥಾನದ ಡಾ.ಬಾಲಚಂದ್ರ ಭಟ್ಟ ಅವರನ್ನು ಶ್ರೀಗಳು ಸನ್ಮಾನಿಸಿದರು. ನಂತರ ಮಾತನಾಡಿದ ಅವರು, ಆರೋಗ್ಯ ಕಾಪಾಡಿಕೊಳ್ಳುವುದು ಹೇಗೆ, ಆಯುರ್ವೇದದಲ್ಲಿ ಆರೋಗ್ಯದ ಕುರಿತು ಏನು ಹೇಳುತ್ತದೆ ಎನ್ನುವುದನ್ನು ಅತ್ಯಂತ ಸರಳವಾದ ರೀತಿಯಲ್ಲಿ ವಿವರಿಸಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕ ಹಾಗೂ ದೇವಿಮನೆ ಮೊಕ್ತೇಸರ ಉಮೇಶ ಹೆಗಡೆ ಸ್ವಾಗತಿಸಿದರು. ಗಣೇಶ ಹೆಬ್ಬಾರ್ ಮಾತನಾಡಿದರು.

ವಿನಾಯಕ ಭಟ್ಟ ತೆಕ್ಕಿನಗದ್ದೆ ಹಾಗೂ ಅನಂತ ಹೆಬ್ಬಾರ್ಕೋಣಾರ ನಿರೂಪಿಸಿದರು. ಶ್ರೀ ಧನ್ವಂತರಿ ಕ್ಷೇತ್ರದ ಅರ್ಚಕ ಶಂಕರ ಭಟ್ಟ ವಂದಿಸಿದರು.

ಧರ್ಮ ಸಭೆಯಲ್ಲಿ ಶಿರಳಗಿಯ ಚೈತನ್ಯ ರಾಜಾರಾಮ ಕ್ಷೇತ್ರದ ಬ್ರಹ್ಮಾನಂದ ಭಾರತಿ ಶ್ರೀ ಆಶೀರ್ವಚನ ನೀಡಿದರು.

ಸಂತರ ಧ್ವನಿ ಬಳಗದ ಕ್ಯಾಲೆಂಡರ್ ಬಿಡುಗಡೆ

ಶಿರಸಿ: ಇಲ್ಲಿಯ ಮರಾಠಿಕೊಪ್ಪದ ಶ್ರೀ ಸದ್ಗುರು ನಿತ್ಯಾನಂದ ಮಂದಿರದಲ್ಲಿ ಸೋಮವಾರ 'ಸಂತರಧ್ವನಿ' ಬಳಗದ 2026ನೇ ಸಾಲಿನ ದಿನದರ್ಶಿಕೆಗಳನ್ನು ಮಂದಿರದ ಮುಖ್ಯ ಅರ್ಚಕರಾದ ರವಿ ಭಟ್ಟ ಅವರು ವಿಶೇಷ ಪೂಜೆ ಸಲ್ಲಿಸುವ ಮೂಲಕ ಬಿಡುಗಡೆಗೊಳಿಸಲಾಯಿತು.

ಈ ಕ್ಯಾಲೆಂಡರ್‌ಗಳನ್ನು ಜಾಹೀರಾತುದಾರರ ಹಾಗೂ ದಾನಿಗಳ ಸಹಾಯದಿಂದ ಪ್ರಕಟಿಸಿ ಉಚಿತವಾಗಿ ವಿತರಿಸುತ್ತಿದ್ದು, ಈ ಮಹಾನ್ ಮುದ್ರಣ ಕಾರ್ಯಕ್ಕೆ ಸಹಾಯ ಮಾಡಿದ ಎಲ್ಲರಿಗೂ ಶ್ರೀ ಸದ್ಗುರು ನಿತ್ಯಾನಂದರು, ಶ್ರೀ ಸದ್ಗುರು ಮಹಾಬಲಾನಂದರು ಹಾಗೂ ಶಿರಸಿಯ ಶ್ರೀಮಾರಿಕಾಂಬಾ ದೇವಿಯು 2026 ವರ್ಷದಲ್ಲಿ ಶುಭವನ್ನುಂಟು ಮಾಡಲಿ ಎಂದರು.

ಈ ಸಂದರ್ಭದಲ್ಲಿ ಸಹಾಯಕ ಅರ್ಚಕರಾದ ನಾಗರಾಜ ಶಾಸ್ತ್ರಿ, ಪಾಂಡುರಂಗ ಪಾಟೀಲ, ಗಂಗಾ ಕೃಷ್ಣ ಭಂಡಾರಿ, ಪ್ರಭಾವತಿ ಪೈ, ಲಿಂಗಪ್ಪ ಕೊಂಡ್ಲಿ, ಗೀತಾ ರಾಯ್ಕರ್, ಡಿ. ಲಕ್ಷ್ಮೀ ಸೇರಿದಂತೆ ಹಲವಾರು ಮಠದ ಭಕ್ತರು ಹಾಗೂ ಅರ್ಚಕರು ಉಪಸ್ಥಿತರಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ ಯಶಸ್ವಿ

ಹೊನ್ನಾವರ: ಆದರ್ಶ ಆಸ್ಪತ್ರೆ ಉಡುಪಿ ಮತ್ತು ತಾಲೂಕಾ ಒಕ್ಕಲಿಗರ ಸಂಘದ ಸಹಯೋಗದಲ್ಲಿ ಸಮಾಜಮುಖಿ ಕಾರ್ಯ ಹೊನ್ನಾವರ ಆದರ್ಶ ಆಸ್ಪತ್ರೆ ಉಡುಪಿ ಹಾಗೂ ತಾಲೂಕಾ ಒಕ್ಕಲಿಗರ ಸಂಘ ಹೊನ್ನಾವರ ಇವರ ಸಹಯೋಗದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ತಾಲೂಕಿನ ಕೆಳಗಿನೂರಿನಲ್ಲಿರುವ ಒಕ್ಕಲಿಗರ ಸಮುದಾಯ ಭವನದಲ್ಲಿ ಯಶಸ್ವಿಯಾಗಿ ನಡೆಯಿತು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠವನ್ನು ವಿಶ್ವಮಾನ್ಯ ಮಠವನ್ನಾಗಿ ರೂಪಿಸಿ ಸಮಾಜಮುಖಿ ಚಿಂತನೆಗಳೊಂದಿಗೆ ನೂರಾರು ಶಿಕ್ಷಣ ಹಾಗೂ ಆರೋಗ್ಯ ಸಂಸ್ಥೆಗಳನ್ನು ಸಮಾಜಕ್ಕೆ ಕೊಡುಗೆಯಾಗಿಕೊಟ್ಟ ಬಾಲಗಂಗಾಧರನಾಥ ಸ್ವಾಮೀಜಿ ಅವರ ಜಯಂತ್ಯುತ್ಸವದ ಅಂಗವಾಗಿ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಏಳು ನೂರಕ್ಕೂ ಅಧಿಕ ಮಂದಿ ಶಿಬಿರದ ಪ್ರಯೋಜನ ಪಡೆದುಕೊಂಡರು.

ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಆದರ್ಶ ಆಸ್ಪತ್ರೆಯ ಎಂ.ಡಿ. ಡಾ.ಜಿ.ಸಿ.ಚಂದ್ರಶೇಖರ ಅವರು, ಜಿಲ್ಲೆಯ ಕರಾವಳಿ ತಾಲೂಕುಗಳಾದ ಹೊನ್ನಾವರ, ಭಟ್ಕಳ, ಕುಮಟಾ ತಾಲೂಕಿನಿಂದ ಆರೋಗ್ಯ ಸೇವೆಯನ್ನು ಬಯಸಿ ನಮ್ಮ ಆದರ್ಶ ಆಸ್ಪತ್ರೆಗೆ ಬರುವವರ ಸಂಖ್ಯೆ ಬಹಳ ದೊಡ್ಡದಿದೆ. ಈ ಯುಗದಲ್ಲಿ ಒಂದು ಹೆಲ್ತ್ ಕ್ಯಾಂಪ್ ಮಾಡಬೇಕು ಎನ್ನುವ ಯೋಚನೆ ಬಹಳ ವರ್ಷಗಳಿಂದ ಇತ್ತು ಅದು ಇಂದು ಈಡೇರಿದೆ ಎಂದರು.

ಗುಣಮಟ್ಟದ ಆರೋಗ್ಯ ಸೇವೆಯನ್ನು ನೀಡಬೇಕು ಅಂದಾಗ ಕಡಿಮೆ ಬೆಲೆಯಲ್ಲಿ ಕೊಡುವುದು ಕಷ್ಟವಾದರೂ ಬೆಂಗಳೂರಿನಂತ ನಗರಗಳಿಗೆ ಹೋಲಿಸಿದರೆ ನಮ್ಮ ಆಸ್ಪತ್ರೆಯಲ್ಲಿ ಅನ್ನ ಬೆಲೆಯಲ್ಲಿ ಅತ್ಯುತ್ತಮ ಚಿಕಿತ್ಸೆ ನೀಡುತ್ತಾ ಬಂದಿದ್ದೇವೆ. ಕ್ಯಾನ್ಸರ್‌ಹಾಗೂ ಹೃದ್ರೋಗಕ್ಕೆ ಸಂಬಂಧಿಸಿದ ವಿಭಾಗವನ್ನು ಪ್ರಾರಂಭಿಸುತ್ತಿದ್ದು ಆಸ್ಪತ್ರೆಗೆ ಬಂದ ಯಾವುದೇ ರೋಗಿಗೆ ಅತ್ಯುತ್ತಮ ಗುಣಮಟ್ಟದ ಆರೋಗ್ಯ ಸೇವೆಯನ್ನು ನೀಡಲು ಮೊದಲ ಆದ್ಯತೆ ನೀಡುತ್ತೇವೆ ಎಂದರು.

ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ತಾಲೂಕಿನ ಕೆಳಗಿನೂರಿನಲ್ಲಿರುವ ಒಕ್ಕಲಿಗರ ಸಮುದಾಯ ಭವನದಲ್ಲಿ ಯಶಸ್ವಿಯಾಗಿ ನಡೆಯಿತು.

> **ಹೃದಯ ಸಂಬಂಧಿ ಖಾಯಿಲೆಯ ಲಕ್ಷಣಗಳು, ಹಾರ್ಟ್ ಅಟ್ಯಾಕ್ ಯಾಕೆ ಆಗುತ್ತದೆ. ಹಾರ್ಟ್ ಅಟ್ಯಾಕ್ ಆದ ತಕ್ಷಣ ಏನು ಮಾಡಬೇಕು ಎಂದು ಸವಿಸ್ತಾರವಾಗಿ ವಿವರಿಸಿ ಹಾರ್ಟ್ ಅಟ್ಯಾಕ್ ಆಗದಂತೆ ಹೃದಯವನ್ನು ಆರೋಗ್ಯವಾಗಿಟ್ಟುಕೊಳ್ಳಲು ಅನುಸರಿಸಬೇಕಾದ ಆಹಾರ ಪದ್ಧತಿಯ ಬಗ್ಗೆ ಮತ್ತು ಲೈಫ್ ಸ್ಟೈಲ್ ಬಗ್ಗೆ ಅಮೂಲ್ಯ ಮಾಹಿತಿ ನೀಡಿದರು.**
> –ಡಾ.ಸುಹಾಸ್ ಜಿ.ಸಿ, ಹೃದ್ರೋಗ ತಜ್ಞ

ಶಿಬಿರದಲ್ಲಿ ಪಾಲ್ಗೊಂಡ ಎಲ್ಲರಿಗೂ ಉಪಾಹಾರ ವ್ಯವಸ್ಥೆ ಮಾಡಲಾಯಿತು. ಶಿಬಿರಾರ್ಥಿಗಳನ್ನು ಪರೀಕ್ಷಿಸಿದ ವೈದ್ಯರು 10 ದಿನಗಳ ಔಷಧಿಗಳನ್ನು ಉಚಿತವಾಗಿ ನೀಡಲಾಯಿತು.

ತಾಲೂಕಾ ಒಕ್ಕಲಿಗರ ಸಂಘದ ಅಧ್ಯಕ್ಷ ತಿಮ್ಮಪ್ಪ ಗೌಡ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಭೈರವಿ ಮಹಿಳಾ ಸಹಕಾರಿ ಸಂಘದ ಅಧ್ಯಕ್ಷ ಶಾಂತಿ ಮಾದೇವ ಗೌಡ, ಕೆಳಗಿನೂರು ವಿ.ಎಸ್.ಎಸ್ ಅಧ್ಯಕ್ಷ ಗಣಪಯ್ಯ ಗೌಡ ಮುಗಳಿ, ಜಿಲ್ಲಾ ಪಂಚಾಯತ ಮಾಜಿ ಸದಸ್ಯ ಕೃಷ್ಣ ಗೌಡ, ತಾಲೂಕಾಸ್ಪತ್ರೆ ವೈದ್ಯಾಧಿಕಾರಿ ಡಾ.ರಮೇಶ ಗೌಡ ಹಾಗೂ ಆದರ್ಶ ಆಸ್ಪತ್ರೆಯ ವೈದ್ಯರು ಉಪಸ್ಥಿತರಿದ್ದರು.

'ಡಾ.ರಾಮಕೃಷ್ಣ ಬದುಕಿನ ಪಯಣ' ಕೃತಿ ಬಿಡುಗಡೆ

ಅಂಕೋಲಾ: ಡಾ.ರಾಮಕೃಷ್ಣ ಗುಂದಿ ಒಂದು ಆಲದ ಮರದಂತೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ತಮ್ಮ ಛಾಪನ್ನು ಮೂಡಿಸಿದವರು. ಇಂತಹ ವ್ಯಕ್ತಿತ್ವದ ಉಪನ್ಯಾಸಕರು ನನಗೆ ಪಾಠ ಕಲಿಸಿದವರು ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ.

ಅದೇ ಅವರದೇ ಸಮುದಾಯದಿಂದ ಬಂದ ನಾನು ಇವರಂತೆಯೇ ಕಲಿಯಬೇಕೆಂದು ಛಲತೊಟ್ಟು ಓದಿ ಈಗ ಒಂದು ಸ್ಥಾನದಲ್ಲಿದ್ದೇನೆ ಎಂದು ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ರಾಮು ಅರ್ಗೇಕರ ಹೇಳಿದರು.

ಪಟ್ಟಣದ ಪಿ.ಎಂ.ರೈತ ಭವನದಲ್ಲಿ ಕಡಲು ಪ್ರಕಾಶನ ಮಂಜಗುಣಿ ಅವರು ಹಮ್ಮಿಕೊಂಡ ಲೇಖಕಿ ದೀಪಾ ನಾಯ್ಕ ಅವರ ಡಾ.ರಾಮಕೃಷ್ಣ ಗುಂದಿ ಬದುಕಿನ ಪಯಣ'' ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು. ದಲಿತ ಸಮುದಾಯದಲ್ಲಿ ಜನಿಸಿದ ಡಾ.ರಾಮಕೃಷ್ಣ ಗುಂದಿಯವರು ಇಂದಿಗೆ ಉನ್ನತ ಸ್ಥಾನದಲ್ಲಿರುವುದು ನಮಗೆಲ್ಲ ಹೆಮ್ಮೆಯ ಸಂಗತಿ ಎಂದರು.

ಜಿ.ಸಿ ಕಾಲೇಜಿನ ಪ್ರಾಚಾರ್ಯ ಡಾ.ಎಸ್ .ವಿ.ವಸ್ತ್ರದ, ಜಿಲ್ಲಾ ಧಾರ್ಮಿಕ ದತ್ತಿ ಪರಿಷತ್ ಜಿಲ್ಲಾ ಸದಸ್ಯ ದಾಮೋದರ ಜಿ. ನಾಯ್ಕ, ಕಸಾಪ ಅಧ್ಯಕ್ಷ ಗೋಪಾಲಕೃಷ್ಣ ಜಿ. ನಾಯಕ ಮಾತನಾಡಿದರು. ಲೇಖಕಿ ದೀಪಾ ಜಟ್ಟಿ ನಾಯ್ಕ ಬಳಲೆ ಮಾತನಾಡಿ, ನನಗೆ ಬರವಣಿಗೆಗೆ ಆಸಕ್ತಿ ಮೂಡಿಸಿದವರು ನನ್ನ ಸಹೋದರ ಮಾವ ಆನಂದ ನಾಯ್ಕ. ನಂತರ ನಾನು ಕೂಡ ಶಾಲಾ ಕಾಲೇಜುಗಳಲ್ಲಿ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನವನ್ನು ಪಡೆದುಕೊಂಡಿದ್ದೆ. ನಾನು ಡಾ.ರಾಮಕೃಷ್ಣ ಗುಂದಿ ಅವರ ಕುರಿತಾಗಿ ಈ ಕೃತಿ ಬರೆಯಲು ನನಗೆ ಸಹಕಾರಿಯಾಯಿತು ಎಂದರು.

ಶೀತಲ ಆಗೇರ ಭಾವಗೀತೆ ಪ್ರಸ್ತುತಪಡಿಸಿದರು. ಕಸಾಪ ಗೌರವ ಕಾರ್ಯದರ್ಶಿ ಜಗದೀಶ ಜಿ.ನಾಯಕ ಸ್ವಾಗತಿಸಿದರು. ಎನ್.ಸಿ.ಸಿ ಕಮಾಂಡರ್‌ಜಿ.ಆರ್. ತಾಂಡೇಲ ನಿರೂಪಿಸಿದರು. ಲೇಖಕ ಮಹಾಂತೇಶ ರೇವಡಿ ವಂದಿಸಿದರು. ಪ್ರಕಾಶಕ ನಾಗರಾಜ ಮಂಜಗುಣಿ, ಪ್ರಮುಖರಾದ ಶ್ರೀಪಾದ ನಾಯ್ಕ ಉಪಸ್ಥಿತರಿದ್ದರು.

ಪಿ.ಎಂ.ರೈತ ಭವನದಲ್ಲಿ ಕಡಲು ಪ್ರಕಾಶನ ಮಂಜಗುಣಿ ಅವರು ಹಮ್ಮಿಕೊಂಡ ಲೇಖಕಿ ದೀಪಾ ನಾಯ್ಕ ಅವರ್‌ಡಾ.ರಾಮಕೃಷ್ಣ ಗುಂದಿ ಬದುಕಿನ ಪಯಣ'' ಕೃತಿ ಬಿಡುಗಡೆಗೊಳಿಸಿದರು.

> **ಡಾ. ರಾಮಕೃಷ್ಣ ಗುಂದಿ ಅವರು ಕೇವಲ ಉನ್ಯಾಸಕರಾಗಿರದೇ ಖ್ಯಾತ ಯಕ್ಷಗಾನ ಕಲಾವಿದರಾಗಿ ಚಿಟ್ಟಾಣಿ ಜತೆಗೂ ಆಪ್ತಸಂಬಂಧ ಹೊಂದಿದವರು. ಅವರ ವಿದ್ಯಾರ್ಥಿಯಾಗಿರುವ ನಾನು ಕೂಡ ಯಕ್ಷಗಾನದಲ್ಲಿ ಅಭಿನಯಿಸಿದ್ದೆ. ಕತೆಗಾರರಾಗಿ, ವರದಿಗಾರರಾಗಿಯೂ ಕಾರ್ಯನಿರ್ವಹಿಸಿದ ಗುಂದಿ ಸರ್‌ಅವರು ರಾಜ್ಯಮಟ್ಟದಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ.**
> – ಡಾ.ಶಿವಾನಂದ ನಾಯಕ, ನಿವೃತ್ತ ಪ್ರಾಚಾರ್ಯ

ಕಲಾ ಪರಂಪರೆಯಲ್ಲಿ ಭರತನಾಟ್ಯಕ್ಕೆ ಆದ್ಯತೆ

ಹೊನ್ನಾವರ: ನೃತ್ಯವು ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಸಹಕಾರಿಯಾಗುವ ಜತೆಗೆ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಭಾರತೀಯ ಕಲಾ ಪರಂಪರೆಯಲ್ಲಿ ಭರತನಾಟ್ಯವು ಮಹತ್ವವಾದ ಸ್ಥಾನವನ್ನು ಪಡೆದಿದೆ ಎಂದು ಪತ್ರಕರ್ತ ಎಚ್.ಎಂ.ಮಾರುತಿ ಹೇಳಿದರು.

ಪಟ್ಟಣದ ನ್ಯೂ ಇಂಗ್ಲಿಷ್ ಸ್ಕೂಲ್ ಸಭಾಭವನದಲ್ಲಿ ಪುಷ್ಪಾಂಜಲಿ ನಾಟ್ಯ ಕೇಂದ್ರ ಆಯೋಜಿಸಿದ 'ನೃತ್ಯೋತ್ಸವ' ಕಾರ್ಯಕ್ರಮದಲ್ಲಿ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು. ನೃತ್ಯಗುರು ವಿದುಷಿ ಪ್ರಮಿಳಾ ಮತ್ತು ಎಲ್.ಜಿ.ಭಟ್ಟ ದಂಪತಿ ಪುಷ್ಪಾಂಜಲಿ ನಾಟ್ಯ ಕೇಂದ್ರದ ಮೂಲಕ ಮಕ್ಕಳಲ್ಲಿ ಭರತನಾಟ್ಯದ ಕುರಿತು ಆಸಕ್ತಿ ಮೂಡಿಸಿ ತರಬೇತಿ ನೀಡುತ್ತಿದ್ದಾರೆ. ವಿದ್ಯಾರ್ಥಿಗಳು ಶಾಲೆಯ ಪಠ್ಯದ ಜತೆಗೆ ಒಂದು ಕಲಾಪ್ರಕಾರವನ್ನು ಆಯ್ದುಕೊಂಡು ಸಾಧನೆ ಮಾಡಿದರೆ ಪರಿಪೂರ್ಣ ವ್ಯಕ್ತಿತ್ವ ಹೊಂದಲು ಸಾಧ್ಯವಾಗುವುದು ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಡಾ. ಮಂಜುಳಾ ಯುವರಾಜ ಮಾತನಾಡಿ, ಯುವಜನರು ಜಂಕ್ ಫುಡ್‌ನಿಂದ ದೂರ ಉಳಿದು ಆರೋಗ್ಯಕ್ಕೆ ಪೂರಕವಾದ ಆಹಾರವನ್ನು ಸೇವಿಸಬೇಕು. ಮಕ್ಕಳು ಮೊಬೈಲ್ ಫೋನ್ ಬಳಸುವುದನ್ನು ಕಡಿಮೆ ಮಾಡಿ ಭರತನಾಟ್ಯದಂತಹ ಕಲಾ ಪ್ರಕಾರವನ್ನು ಆಯ್ದುಕೊಳ್ಳಬೇಕು. ಭರತನಾಟ್ಯವು ಹೆಮ್ಮೆಯ ಪರಂಪರೆ. ಈ ಕಲೆಯನ್ನು ಉಳಿಸಿ ಮುಂದಿನ ತಲೆಮಾರಿಗೆ ಕೊಡುವ ಕೆಲಸ ನಡೆಯುತ್ತಿದೆ ಎಂದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಜಿ.ನಾಯ್ಕ ಮಾತನಾಡಿ ಭರತನಾಟ್ಯವು ರಾಗ, ತಾಳ, ಲಯ, ಭಕ್ತಿ, ಏಕಾಗ್ರತೆಯನ್ನು ಹೊಂದಿರುವ ಕಲೆಯಾಗಿದೆ. ಶಿಕ್ಷಕಿಯಾಗಿ, ಸಿಆರ್‌ಪಿಯಾಗಿ ಕಾರ್ಯನಿರ್ವಹಿಸುತ್ತಿರುವ ಪ್ರಮಿಳಾ ಅವರು ತಾಲೂಕಿನ ಮಕ್ಕಳು ಭರತನಾಟ್ಯವನ್ನು ಕಲಿಯಬೇಕು ಎಂಬ ತುಡಿತದೊಂದಿಗೆ ಮಕ್ಕಳಿಗೆ ವಿದ್ಯೆಯನ್ನು ಧಾರೆ ಎರೆಯುತ್ತಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನ್ಯೂ ಎಜ್ಯುಕೇಷನ್ ಸೊಸೈಟಿ ಅಧ್ಯಕ್ಷ ರಘುನಾಥ ಪೈ ಮಾತನಾಡಿ, ಇತ್ತೀಚೆಗೆ ಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ಭರತನಾಟ್ಯ ಕಲೆಯನ್ನು ಆಯ್ದುಕೊಂಡು ಸಾಧನೆ ಮಾಡುತ್ತಿದ್ದಾರೆ. ಇದು ಉತ್ತಮ ಬೆಳವಣಿಗೆ ಎಂದರು. ಪುಷ್ಪಾಂಜಲಿ ನಾಟ್ಯ ಕೇಂದ್ರದ ಸಂಚಾಲಕ ಎಲ್.ಜಿ.ಭಟ್ಟ ಸ್ವಾಗತಿಸಿದರು. ಸುನೀಲ ಶೇಟ್ ವಂದಿಸಿದರು. ಭಾರತಿ ನಾಯ್ಕ, ಅನಿತಾ ನಾಯ್ಕ ಕಾರ್ಯಕ್ರಮ ನಿರ್ವಹಿಸಿದರು. ವಿದುಷಿ ಪ್ರಮಿಳಾ ಕೆ.ಎಸ್. ಅವರ ನೃತ್ಯ ಸಂಯೋಜನೆ ಮತ್ತು ನಿರ್ದೇಶನದಲ್ಲಿ ಭರತನಾಟ್ಯ ಪ್ರದರ್ಶನ ಜನಮನ ಸೆಳೆಯಿತು.

ಕೊಳೆ, ಚುಕ್ಕೆಯಿಂದ ಅಡಕೆ ಇಳುವರಿ ಭಾರೀ ಕುಸಿತ ಸಾಲ ಮರುಪಾವತಿಯಲ್ಲಿ ಕಂತು ಸೌಲಭ್ಯಕ್ಕೆ ಆಗ್ರಹ

ಶಿರಸಿ: ಕಳೆದ ಮಳೆಗಾಲದಲ್ಲಿ ಕೊಳೆ ರೋಗ ಹಾಗೂ ತೀವ್ರಗತಿಯಲ್ಲಿ ವ್ಯಾಪಿಸಿಕೊಂಡಿರುವ ಎಲೆ ಚುಕ್ಕೆ ರೋಗದಿಂದ ಶೇ. 70 ರಷ್ಟು ಬೆಳೆನಷ್ಟವಾಗಿದೆಯಲ್ಲದೆ ಹೆಚ್ಚಿನ ಪ್ರದೇಶದಲ್ಲಿ ಸಂಪೂರ್ಣ ಅಡಕೆ ತೋಟವೇ ನಾಶವಾದ ಸ್ಥಿತಿಯಲ್ಲಿ ಇಳುವರಿ ಏಕಾಏಕಿ ಕುಸಿತದಿಂದ ರೈತರು ಕಂಗಾಲಾಗಿದ್ದು ಇವರು ಪಡೆದಿರುವ ಬೆಳೆಸಾಲ ಪಾವತಿಗೆ ಶೂನ್ಯ ಬಡ್ಡಿ ಸೌಲಭ್ಯದಲ್ಲಿಯೇ ಐದು ಕಂತಿನ ಸೌಲಭ್ಯ ಒದಗಿಸಿಕೊಡಬೇಕು ಮತ್ತು ಮಾಧ್ಯಮಿಕ ಸಾಲದ ಕಂತನ್ನು ಮುಂದಿನ ವರ್ಷಕ್ಕೆ ಭರಣ ಮಾಡುವ ಅವಕಾಶ ಒದಗಿಸಿಕೊಟ್ಟು ಬಡ್ಡಿಯನ್ನು ಸರ್ಕಾರವೇ ಭರಿಸಿಕೊಡಬೇಕೆಂದು ರೈತರು, ಸಹಕಾರಿ ಸಂಘಗಳ ಆಡಳಿತ ಮಂಡಳಿಗಳು ಮನವಿ ಮಾಡಿವೆ.

ತಮ್ಮ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟು ಈ ದಿಸೆಯಲ್ಲಿ ಕಾರ್ಯನಿರ್ವಹಿಸಕೊಡಬೇಕೆಂದು ಶಾಸಕ ಭೀಮಣ್ಣ ನಾಯ್ಕ ಹಾಗೂ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿಯವರಿಗೆ ಮಂಗಳವಾರ ಶಿರಸಿ, ಸಿದ್ದಾಪುರ ಹಾಗೂ ಯಲ್ಲಾಪುರ ತಾಲೂಕಿನ ಸಹಕಾರಿ ಸಂಘಗಳ ಅಧ್ಯಕ್ಷರು, ಕಾರ್ಯದರ್ಶಿಗಳ ನಿಯೋಗ ಪತ್ರ ಸಲ್ಲಿಸಿದೆ.

ಇಲ್ಲಿಯವರೆಗೂ ರೈತರು ತಾವು ಪಡೆದ ಕೆ.ಸಿ.ಸಿ ಸಾಲವನ್ನು ಪ್ರಾಮಾಣಿಕವಾಗಿ ಕಾಲಕಾಲಕ್ಕೆ ಮರುಪಾವತಿ ಮಾಡುತ್ತ ಬಂದಿದ್ದಾರೆ. ಆದರೆ ಈ ವರ್ಷ, ವಿಶೇಷವಾಗಿ ಸಾಂಪ್ರದಾಯಿಕ ಅಡಿಕೆ ತೋಟಗಳ ರೈತರು ತಾವು ಪಡೆದ ಕೆ.ಸಿ.ಸಿ ಸಾಲ ಹಾಗೂ ಕೃಷಿ ಮಾಧ್ಯಮಿಕ ಸಾಲ ಹಾಗೂ ಬಡ್ಡಿಯನ್ನು ತುಂಬಲು ಸಾಧ್ಯವಾಗದೇ ಅಸಹಾಯಕ ಪರಿಸ್ಥಿತಿಯಲ್ಲಿದ್ದಾರೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ರೈತರ ಹಿತ ಕಾಯುವುದು ಅಗತ್ಯವಾಗಿದ್ದು ಇನ್ನೇನು ಸಾಲ ಮರುಪಾವತಿ ಸಮಯ ಹತ್ತಿರವಾಗುತ್ತಿರುವ ಈ ಸಂದರ್ಭದಲ್ಲಿ ಸರ್ಕಾರ ನೆರವಿಗೆ ಮುಂದಾಗಬೇಕು.

ಆ ದಿಸೆಯಲ್ಲಿ, 2025–26 ನೇ ಸಾಲಿನಲ್ಲಿ ಪಡೆದ ಕೆ.ಸಿ.ಸಿ. ಸಾಲವನ್ನು ಬಡ್ಡಿ ರಹಿತವಾಗಿ 5 ಕಂತುಗಳನ್ನಾಗಿ ಪರಿವರ್ತಿಸಿ ಹಾಗೂ ಕೃಷಿ ಮಾಧ್ಯಮಿಕ ಸಾಲದ ಬಡ್ಡಿಯನ್ನು ಮನ್ನಾ ಮಾಡಿಕೊಡಬೇಕು; ವಾಡಿಕೆಯಂತೆ ಹೊಸ ಕೆ.ಸಿ.ಸಿ ಸಾಲವನ್ನು ಮಂಜೂರು ಮಾಡಬೇಕು. ಈ ಕುರಿತು ಸರಕಾರದ ಗಮನಕ್ಕೆ ತಂದು ರೈತರಿಗೆ ಸೂಕ್ತ ಪರಿಹಾರ ಒದಗಿಸಿಕೊಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಬೆಳೆ ವಿಮೆ ಕೊಡಿಸಿ: ಪ್ರಸ್ತುತ ಅವಧಿಯಲ್ಲಿ ಅಡಕೆ, ಕಾಳುಮೆಣಸು ಬೆಳೆಗಳಿಗೆ ಸಂಬಂಧಿಸಿ ಹವಾಮಾನ ಆಧರಿತ ಬೆಳೆವಿಮೆ ಇಂದಿಗೂ ರೈತರ ಖಾತೆಗೆ ಜಮಾ ಆಗದೆ ಮತ್ತಷ್ಟು ನಿರಾಶೆ ಆವರಿಸಿದೆ. ವಿಮಾ ಪರಿಹಾರವನ್ನು ಅತೀ ಶೀಘ್ರದಲ್ಲಿ ದೊರಕಿಸಿಕೊಡಬೇಕು ಎಂದೂ ಸಂಸದ ಹಾಗೂ ಶಾಸಕರಲ್ಲಿ, ಯಡಳ್ಳಿ ಸೊಸೈಟಿ ಅಧ್ಯಕ್ಷ ಜಿ.ಆರ್. ಹೆಗಡೆ ಮತ್ತು ಸಹಕಾರಿ ಯೂನಿಯನ್ ನಿರ್ದೇಶಕ ಮಹೇಂದ್ರ ಭಟ್ ನೇತೃತ್ವದಲ್ಲಿ ವಿವಿಧ ಪ್ರಮುಖರು ಮನವಿ ಮಾಡಿದ್ದಾರೆ.

ಶಿರಸಿ, ಸಿದ್ದಾಪುರ ಹಾಗೂ ಯಲ್ಲಾಪುರ ತಾಲೂಕಿನ ಸಹಕಾರಿ ಸಂಘಗಳ ಅಧ್ಯಕ್ಷರು, ಕಾರ್ಯದರ್ಶಿಗಳ ನಿಯೋಗವು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿಯವರಿಗೆ ಮನವಿ ಸಲ್ಲಿಸಿತು.

ಧಾರ್ಮಿಕ ಸೇವಾ ಪ್ರಮುಖ ಕೇಶವ ಗಣಪತಿ ಶೇಟ್ ಇನ್ನಿಲ್ಲ

ಶಿರಸಿ: ಧಾರ್ಮಿಕ ಸೇವೆ ಅತ್ಯಂತ ನಿಷ್ಠೆ ಮತ್ತು ಪ್ರಾಮಾಣಿಕ ವಾಗಿ ಮಾಡುತ್ತಿದ್ದ ಮೂಲತಹ ಹಳದಿಪುರದವರಾಗಿದ್ದ ಹೊನ್ನಾವರ ಕೆಎಚ್‌ಬಿ ಕಾಲೋನಿಯ ಕೇಶವ ಗಣಪತಿ ಶೇಟ್ (88) ಅವರು ಜನವರಿ 12, ಸೋಮವಾರದಂದು ರಾತ್ರಿ ದೈವಾಧೀನರಾದರು.

ಶ್ರೀ ಕ್ಷೇತ್ರ ಕರ್ಕಿ ದೈವಜ್ಞ ಮಠದ ಪರಮ ಭಕ್ತರಾಗಿದ್ದ ಅವರು ಗುರುಗಳ ಜೊತೆಗೆ ಉತ್ತಮ ಬಾಂಧವ್ಯ ಹೊಂದಿದ್ದರು. ಹೊನ್ನಾವರ ದಂಡಿನ ದುರ್ಗಾ ದೇವಿ ದೇವಸ್ಥಾನ, ಹಳದಿಪುರದ ಕೇಶವ ದೇವಸ್ಥಾನದ ಅಧ್ಯಕ್ಷರೂ ಆಗಿ ಕಾರ್ಯ ನಿರ್ವಹಿಸಿದ್ದರು. ಹೊನ್ನಾವರ ಸುವರ್ಣಕಾರರ ಸೊಸೈಟಿ ಉಪಾಧ್ಯಕ್ಷರು, ಇನ್ನು ಅನೇಕ ಸಂಘ ಸಂಸ್ಥೆಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ್ದರು. ಹಾಗೆಯೇ ಕೊಡುಗೈ ದಾನಿಗಳು ಕೂಡ ಆಗಿದ್ದರು.

ಅತ್ಯಂತ ಶಿಸ್ತಿನ ವ್ಯಕ್ತಿ ಆಗಿದ್ದ ಅವರು ಹಳದಿಪುರ ಬುದ್ಧಿವಂತ ಕುಟುಂಬದ ಅತ್ಯಂತ ಹಿರಿಯ ವ್ಯಕ್ತಿ ಆಗಿದ್ದರು. ಶ್ರೀ ಮಠದ ದೈವಜ್ಞ ವಾಹಿನಿಯ ಗೌರವ ಅಧ್ಯಕ್ಷರಾಗಿಯೂ ಕೂಡ ಆಗಿ ಕಾರ್ಯ ನಿರ್ವಹಿಸಿದ್ದರು. ಶ್ರೀಯುತರು, ಮಹಿಳಾ ಮಂಡಲದ ಮಾಜಿ ಕಾರ್ಯದರ್ಶಿ ಆಗಿ ಸೇವೆ ಸಲ್ಲಿಸಿದ ಪತ್ನಿ ಸುನಂದಾ, ಕಂಪನಿಯೊಂದರ ಹಿರಿಯ ಸ್ಥಾನ ನಿರ್ವಹಿಸುತ್ತಿರುವ ಮಂಜುನಾಥ್, ಮೂವರು ಹೆಣ್ಣು ಮಕ್ಕಳಾದ ಸುವರ್ಣ, ಸಂಧ್ಯಾ, ಸುಜಾತಾ ಇವರನ್ನು ಒಳಗೊಂಡು ಅಪಾರ ಬಂಧು ಬಳಗ, ದೊಡ್ಡ ಅಭಿಮಾನಿ ಬಳಗ ಅಗಲಿದ್ದಾರೆ. ಅವರು ವರದಿಗಾರ ಉದಯಕುಮಾರ್ ಕಾನಳ್ಳಿಯವರ ಮಾವನವರಾಗಿದ್ದಾರೆ.

ಅಂತ್ಯಕ್ರಿಯೆ: ಮೃತರ ಅಂತ್ಯಕ್ರಿಯೆ ಜನವರಿ 13ಮಂಗಳವಾರ ಹೊನ್ನಾವರ ಬಂದರು ಸಮೀಪದ ಸ್ಮಶಾನದಲ್ಲಿ ನೆರವೇರಿತು. ಅಪಾರ ಸಂಖ್ಯೆಯಲ್ಲಿ ಸಮಾಜದ ಬಾಂಧವರು, ಹಿತೈಷಿಗಳು ಪಾಲ್ಗೊಂಡಿದ್ದರು.

ಸಮಾಚಾರ ಸಣ್ಣದಲ್ಲ

ಸವದತ್ತಿ ಸ್ಮಾರಕ ದತ್ತಿ ಉಪನ್ಯಾಸ ಇಂದು

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ, ಹಳೆಯ ವಿದ್ಯಾರ್ಥಿಗಳ ಸಂಘದ ಸಹಯೋಗದೊಂದಿಗೆ ಪ್ರೊ. ಎಂ.ಐ. ಸವದತ್ತಿ ಸ್ಮಾರಕ ದತ್ತಿ ಉಪನ್ಯಾಸ ಕಾರ್ಯ ಕ್ರಮ ಜ.14ರಂದು ಕವಿವಿ ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ಮಧ್ಯಾಹ್ನ 3ಕ್ಕೆ ಆಯೋಜಿಸಲಾಗಿದೆ. ಮುಂಬಯಿನ ರಾಜೀವ ಗಾಂಧಿ ಸಾಯನ್ಸ್ ಆಂಡ್ ಟೆಕ್ನಾಲಜಿ ಕಮೀಶನ್ ಅಧ್ಯಕ್ಷ ಡಾ. ಅನಿಲ ಕಾಕೋಡಕರ್''ಉನ್ನತ ಶಿಕ್ಷಣದಲ್ಲಿನ ಮೌಲ್ಯಗಳು ಮತ್ತು ಶ್ರೇಷ್ಠತೆ'' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಕೆ. ಸಿದ್ದಪ್ಪ, ಗುಲಬರ್ಗಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಬಿ.ಜಿ.ಮೂಲಿಮನಿ, ಕಲಬುರಗಿ ಕೇಂದ್ರೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ. ಮಲ್ಲಿಕಾರ್ಜುನ ಅಳಗವಾಡಿ, ಕರ್ನಾಟಕ ವಿಶ್ವವಿದ್ಯಾಲಯ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಜಯಶ್ರೀ ಟೋಣಣ್ಣವರ ಭಾಗವಹಿಸಲಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯ ಕುಲಸಚಿವ ಡಾ.ಶಂಕರ ವಣಿಕ್ಯಾಳ, ಪ್ರಸಾರಾಂಗ ವಿಶ್ವವಿದ್ಯಾಲಯದ ನಿರ್ದೇಶಕ ಪ್ರೊ.ಎ.ಎಂ.ಕಡಕೋಳ, ಹಳೆಯ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಡಾ.ಬಿ.ಎಚ್. ನಾಗೂರ ಸಮಾರಂಭದಲ್ಲಿ ಉಪಸ್ಥಿತರಿಲಿದ್ದಾರೆ. ಅಧ್ಯಕ್ಷತೆಯನ್ನು ಕವಿವಿ ಕುಲಪತಿ ಪ್ರೊ.ಎ.ಎಂ.ಖಾನ್ ವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸ್ವ ಸಹಾಯ ಗುಂಪುಗಳಿಂದ ಅರ್ಜಿ

ಹುಬ್ಬಳ್ಳಿ: ಕೇಂದ್ರ ಪುರಸ್ಕೃತ್ ಅಮೃತ್-2.0 ಅಭಿಯಾನದ ''ಅಮೃತ್ ಮಿತ್ರ'' ಕಾರ್ಯಕ್ರಮದ ತಾಂತ್ರಿಕೇತರ ಚಟುವಟಿಕೆಯ ಕಾರ್ಯಕ್ರಮದಡಿ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಸಾರ್ವಜನಿಕ ಉದ್ಯಾನವನ ಹಾಗೂ ಆಟದ ಮೈದಾನ ನಿರ್ವಹಣೆ ಮಾಡಲು ಡೇ-ಎನ್ ಯುಎಲ್ಎಂ ಅಭಿಯಾನದಡಿ ಅರ್ಹ ಮಹಿಳಾ ಸ್ವ-ಸಹಾಯ ಗುಂಪುಗಳಿಂದ ಅರ್ಜಿ ಆಹ್ವಾನಿಸ ಲಾಗಿದೆ. ಕೇಂದ್ರ ಸರಕಾರವು ಅಮೃತ್ ಯೋಜನೆ ಯಡಿ ''ಅಮೃತ್ ಮಿತ್ರ'' ಹಂತ-2 ಕಾರ್ಯಕ್ರ ಮವನ್ನು ಅನುಷ್ಠಾನ ಗೊಳಿಸುತ್ತಿದ್ದು, ಕಾರ್ಯಕ್ರಮದ ಮುಖ್ಯ ಉದ್ದೇಶ ಅಮೃತ್-2.0 ಅಭಿಯಾನದಡಿಯ ವಿವಿಧ ತಾಂತ್ರಿಕ ಮತ್ತು ತಾಂತ್ರಿಕೇತರ ಚಟುವಟಿ ಕೆಗಳನ್ನು ಕೇಂದ್ರ ಪುರಸ್ಕೃತ ಯೋಜನೆಯಾದ ಡೇ-ನಲ್ಮ್ ಅಭಿಯಾನದಡಿ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ರಚಿಸಲಾ ಗಿರುವ ಮಹಿಳಾ ಸ್ವ-ಸಹಾಯ ಗುಂಪುಗಳ ಮೂಲಕ ಈ ಚಟುವಟಿಕೆಗಳನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲು ಆಸಕ್ತಿ ಇರುವ ಮಹಿಳಾ ಸ್ವ-ಸಹಾಯ ಗುಂಪುಗಳು ಭಾಗವಹಿಸಬಹುದಾ ಗಿರುತ್ತದೆ.

ಆಯೋಗದ ಸದಸ್ಯರ ಪ್ರವಾಸ ನಾಳೆಯಿಂದ

ಹಾವೇರಿ: ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ಜ.15 ರಿಂದ 17ರವರೆಗೆ ಮೂರು ದಿನಗಳವರೆಗೆ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಜ.15ರಂದು ಸಂಜೆ 5 ಗಂಟೆಗೆ ಹಾವೇರಿಗೆ ಆಗಮಿಸಿ ವಾಸ್ತವ್ಯ ಮಾಡಲಿದ್ದಾರೆ. ಜ.16ರಂದು ಬೆಳಗ್ಗೆ 10 ಗಂಟೆಗೆ ವಿ.ಆರ್ಡಬ್ಲ್ಯೂ, ಎಂ.ಆರ್.ಡಬ್ಲ್ಯೂ ಹಾಗೂ ಯುಆರ್ಡಬ್ಲ್ಯೂ ಆರ್.ಟಿ.ಇ., ಪೋಕ್ಸೋ ಮತ್ತು ಮಕ್ಕಳ ಹಕ್ಕುಗಳ ರಕ್ಷಣಾ ಕುರಿತು ಆಯೋಜಿಸಿರುವ ತರಬೇತಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು. ಮಧ್ಯಾಹ್ನ 2 ಗಂಟೆಗೆ ಮಕ್ಕಳೊಂ ದಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಸಂಜೆ 5 ಗಂಟೆಗೆ ವಸತಿ ನಿಲಯ, ಶಾಲೆ, ಕೋಚಿಂಗ್ ಸೆಂಟರ್, ಪೊಲೀಸ್ ಠಾಣೆ, ಜಿಲ್ಲಾ ಆಸ್ಪತ್ರೆ ಮತ್ತು ಮಕ್ಕಳ ಪಾಲನಾ ಸಂಸ್ಥೆಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಲಿದ್ದಾರೆ. ಜ.17ರಂದು ಬೆಳಗ್ಗೆ 8 ಗಂಟೆಗೆ ವಸತಿ ನಿಲಯ, ಕೋಚಿಂಗ್ ಸೆಂಟರ್,ಕಾರಾಗೃಹ, ಜಿಲ್ಲಾ ಆಸ್ಪತ್ರೆ ಹಾಗೂ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ. ಬೆಳಗ್ಗೆ 10 ಗಂಟೆಗೆ ಮಕ್ಕಳ ಪಾಲನಾ ಸಂಸ್ಥೆಗಳ ಸಿಬ್ಬಂದಿಗಳಿಗೆ ಆಯೋಜಿಸಿರುವ ಆರ್.ಟಿ.ಇ. ಪೋಕ್ಸೋ, ಬಾಲ್ಯವಿವಾಹ ನಿಷೇಧ ಕಾಯಿದೆ, ಬಾಲ ನ್ಯಾಯ ಕಾಯಿದೆಗಳ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವರು.

17ಕ್ಕೆ ತ್ರೈ ಮಾಸಿಕ ಪ್ರಗತಿ ಪರಿಶೀಲನಾ ಸಭೆ

ಹುಬ್ಬಳ್ಳಿ: ಶಾಸಕ ಎನ್.ಎಚ್.ಕೋನರಡ್ಡಿ ಹಾಗೂ ಎಂ.ಆರ್.ಪಾಟೀಲ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ಜ.17ರಂದು ಬೆಳಗ್ಗೆ 11 ಗಂಟೆಗೆ ತಾಲೂಕು ಆಡಳಿತ ಸೌಧದ ತಾಲೂಕು ಪಂಚಾಯತಿ ಸಭಾಭವನದಲ್ಲಿ ಆಯೋಜಿಸಲಾಗಿದೆ. ಎಲ್ಲ ತಾಲೂಕಾ ಮಟ್ಟದ ಅಧಿಕಾರಿಗಳು ಸಂಪೂರ್ಣ ಮಾಹಿತಿಯೊಂದಿಗೆ ಹಾಜರಾಗಬೇಕೆಂದು ತಾಲೂಕ ಪಂಚಾಯತಿ ಇಒ ಡಾ.ರಾಮಚಂದ್ರ ಹೊಸಮನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ಬಿ.ವೈ.ವಿಜಯೇಂದ್ರ } ಬಿಜೆಪಿ ರಾಜ್ಯಾಧ್ಯಕ್ಷ

ಬಳ್ಳಾರಿಯಲ್ಲಿ ಕಾಂಗ್ರೆಸ್ ಶಾಸಕ ಗೂಂಡಾವರ್ತನೆ ತೋರಿದ್ದಾರೆ. ಭೀತಿಯ ವಾತಾವರಣವನ್ನು ಬಳ್ಳಾರಿಯಲ್ಲಿ ಸೃಷ್ಟಿಸಲಾಗಿದೆ. ಅವರ ಅಂಗರಕ್ಷಕರೇ ಅವರ ಕಾರ್ಯಕರ್ತನನ್ನು ಕೊಂದಿದ್ದಾರೆ. ಸುಳಿವು ಬಿಟ್ಟುಕೊಡದಿರಲು ರಾಜಶೇಖರ್‌ಶವ ಸುಡಲಾಗಿದೆ. ಜ.17ರಂದು ಬಳ್ಳಾರಿಯಲ್ಲಿ ಬೃಹತ್ ಹೋರಾಟ ಮಾಡ್ತೇವೆ.

ಜೆಎಸ್‌ಎಸ್‌ನಲ್ಲಿ ಗಮನ ಸೆಳೆದ ಸಂಕ್ರಾಂತಿ ಸಂತೆ ಸಂಭ್ರಮ। ಜನಪದ ಸೊಗಡನ್ನು ಪ್ರತಿಬಿಂಬಿಸುವ ಬಜ್ಜೆ ವಿಶೇಷ

ಗ್ರಾಮೀಣ ಸಂಸ್ಕೃತಿಯ ವೈಭವ ಪ್ರದರ್ಶನ

ಧಾರವಾಡ: ಸಂಕ್ರಾಂತಿಯ ಸಾಂಪ್ರದಾಯಿಕತೆ, ಗ್ರಾಮೀಣ ಬದುಕಿನ ನೈಜ ಚಿತ್ರಣ ಹಾಗೂ ಜನಪದ ಸೊಗಡನ್ನು ಪ್ರತಿಬಿಂಬಿಸುವ ಬಜ್ಜೆ ಎಲ್ಲರ ಗಮನ ಸೆಳೆದಿದ್ದು ವಿಶೇಷ.

ನಗರದ ಜೆಎಸ್ಎಸ್ ಸಂಸ್ಥೆಯ ಆವರಣದ ಮಂಜುನಾಥೇಶ್ವರ ಸಿ.ಬಿ.ಎಸ್.ಇ ಶಾಲೆ ಮುಂಭಾಗದಲ್ಲಿ ಮಂಗಳವಾರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಆಯೋಜಿಸಲಾದ ಸಂಕ್ರಾಂತಿ ಸಂತೆಯಲ್ಲಿ ವಿಶೇಷವಾಗಿ ರೂಪುಗೊಂಡ ಕಾರ್ಯಕ್ರಮ ಜನಮನ ಸೆಳೆಯಿತು.

ಸಂತೆಯಲ್ಲಿ ಬೆಳೆಗಳು, ಕೃಷಿ ಉಪಕರಣಗಳು, ಜಾನುವಾರುಗಳ ಅಲಂಕಾರ, ಸಂಕ್ರಾಂತಿ ಹಬ್ಬದ ತಿನಿಸುಗಳು ಹಾಗೂ ಗ್ರಾಮೀಣ ಜೀವನಶೈಲಿಯ ಅಂಶಗಳನ್ನು ಸೊಗಸಾಗಿ ಪ್ರದರ್ಶಿಸಲಾಯಿತು. ಹಬ್ಬದ ಸಂಭ್ರಮದೊಂದಿಗೆ ಸಂಸ್ಕೃತಿಯ ಮಹತ್ವವನ್ನು ಪರಿಚಯಿಸುವ ಉದ್ದೇಶದಿಂದ ಬಜ್ಜೆಯನ್ನು ರೂಪಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮಕ್ಕಳು, ಯುವಕರು ಹಾಗೂ ಹಿರಿಯರು ಉತ್ಸಾಹದಿಂದ ಭಾಗವಹಿಸಿ ಸಂಕ್ರಾಂತಿ ಹಬ್ಬದ ಅರ್ಥ ಹಾಗೂ ಅದರ ಸಾಂಸ್ಕೃತಿಕ ಮೌಲ್ಯಗಳನ್ನು ಅನುಭವಿಸಿದರು. ಸಾಂಪ್ರದಾಯಿಕ ವೇಷಭೂಷಣ ಹಾಗೂ ಜನಪದ ಕಲೆಯ ಛಾಯೆಗಳು ಕಾರ್ಯಕ್ರಮಕ್ಕೆ ಇನ್ನಷ್ಟು ಮೆರುಗು ನೀಡಿದ್ದು ಗಮನ ಸೆಳೆದವು.

ಈ ಸಂದರ್ಭದಲ್ಲಿ ವಿವಿಧ ರಾಜ್ಯದಲ್ಲಿ ಹೇಗೆ ಸಂಕ್ರಾಂತಿ ಆಚರಿಸುತ್ತಾರೆ ಎಂದು ಉಡುಗೆ ತೊಡುಗೆಗಳನ್ನು ತೊಟ್ಟು ಮಕ್ಕಳು ಆಚರಣೆಗಳನ್ನು ಪ್ರದರ್ಶಿಸಿದರು. ಮಕ್ಕಳು ಹಬ್ಬಕ್ಕೆ ತಯಾರಿಸುವ ವಿವಿಧ ಭಕ್ಷ್ಯ-ಭೋಜನಗಳನ್ನು ತಯಾರಿಸಿ ತಂದಿದ್ದು, ಜೆ.ಎಸ್. ಎಸ್ ಕಾರ್ಯದರ್ಶಿ ಡಾ.ಅಜಿತ ಪ್ರಸಾದರವರು ಊಟವನ್ನು ಸವಿಯುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಜೆಎಸ್‌ಎಸ್ ಸಂಸ್ಥೆಯ ಆವರಣದ ಮಂಜುನಾಥೇಶ್ವರ ಸಿ.ಬಿ.ಎಸ್.ಇ ಶಾಲೆ ಮುಂಭಾಗದಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ಆಯೋಜಿಸಲಾದ ಸಂಕ್ರಾಂತಿ ಸಂತೆಯಲ್ಲಿ ವಿಶೇಷವಾಗಿ ರೂಪುಗೊಂಡ ಕಾರ್ಯಕ್ರಮ ಜನಮನ ಸೆಳೆಯಿತು.

> **ಜೆಎಸ್‌ಎಸ್ ಸಂಸ್ಥೆಯ ಈ ಪ್ರಯತ್ನವು ಗ್ರಾಮೀಣ ಸಂಸ್ಕೃತಿಯ ಸಂರಕ್ಷಣೆ, ಪರಂಪರೆಯ ಪರಿಚಯ ಮತ್ತು ಸಾಮಾಜಿಕ ಏಕತೆಗೆ ಬಲ ನೀಡಿದೆ ಎಂದು ಭಾಗವಹಿಸಿದವರು ಅಭಿಪ್ರಾಯಪಟ್ಟರು. ಸಂಕ್ರಾಂತಿ ಸಂತೆ ಕಾರ್ಯಕ್ರಮವು ಸಂಭ್ರಮ ಹಾಗೂ ಸಂಸ್ಕೃತಿಯ ಪ್ರತೀಕವಾಗಿ ಯಶಸ್ವಿಯಾಗಿ ನಡೆಯಿತು. ಹಳ್ಳಿಗಳಲ್ಲಿ ಮಾಡುವಂತಹ ಹಬ್ಬದಕ್ಕಿಂದ ಚೆನ್ನಾಗಿ ನಮ್ಮ ಶಾಲೆಯಲ್ಲಿ ಸಂಕ್ರಾಂತಿ ಹಬ್ಬ ಮಾಡಿದ್ದು ತುಂಬಾ ಖುಷಿ ತಂದಿದೆ.**
> **-ಸುಧನ್ವ ಮಾರ್ತಾಂಡಪ್ಪ ಕತ್ತಿ, ವಿದ್ಯಾರ್ಥಿ**

ಹಬ್ಬ-ಹರಿದಿನಗಳ ಆಚರಣೆಯಿಂದ ಮಕ್ಕಳಿಗೆ ನಮ್ಮ ದೇಶದ ಸಂಸ್ಕೃತಿ ಪರಿಚಯವಾಗುತ್ತದೆ ಹಾಗೂ ದೇಶದ ವಿವಿಧ ಭಾಗಗಳಲ್ಲಿ ಹಬ್ಬಗಳನ್ನು ಯಾವ ರೀತಿ ಆಯೋಜಿಸಲಾಗುತ್ತದೆ ಮತ್ತು ಅದರ ಮಹತ್ವ ಅವರಿಗೆ ತಿಳಿಯುತ್ತದೆ. ಅಷ್ಟೆ ಅಲ್ಲದೇ ಮಕ್ಕಳಲ್ಲಿ ಇದು ಸೌಹಾರ್ದಯುತ ಭಾವನೆ ಬೆಳೆಯಲು ಸಹಕಾರಿಯಾಗುತ್ತದೆ ಡಾ. ಅಜಿತ ಪ್ರಸಾದ ಈ ವೇಳೆ ವ್ಯಕ್ತಪಡಿಸಿದರು.

ಸಂಕ್ರಾಂತಿ ಉತ್ತರಾಯಣದ ಪ್ರಾರಂಭ ಕಾಲವಾಗಿದ್ದು, ಸುಗ್ಗಿಯ ಹಬ್ಬವಾಗಿದೆ. ಈ ಹಬ್ಬದಲ್ಲಿ ಪುಣ್ಯಸ್ನಾನ, ಎಳ್ಳು-ಬೆಲ್ಲವನ್ನು ಹಂಚುವ ಮೂಲಕ ದ್ವೇಷ ಮರೆತು ಎಲ್ಲರು ಒಂದಾಗಿ ಆಚರಿಸುವ ಹಬ್ಬ ಇದಾಗಿದೆ. ಗಾಳಿಪಟ ಹಾರಿಸುವುದು, ವಿವಿಧ ತರಹದ ಸಿಹಿ ತಿನಿಸುಗಳನ್ನು ಕಟ್ಟಿಕೊಂಡು ಒಟ್ಟಾಗಿ ಊಟ ಮಾಡುವುದು ಮನೆಯಲ್ಲಿ ಖುಷಿಯ ವಾತಾವರಣ ನಿರ್ಮಾಣ ಮಾಡುತ್ತದೆ. ಈ ಸಂಕ್ರಾಂತಿ ಹಬ್ಬ ಮಕ್ಕಳಿಗೆ ಆಯರಾರೋಗ್ಯ ಮತ್ತು ಯಶಸ್ಸನ್ನು ದಯಪಾಲಿಸಲಿ ಎಂದು ಶುಭ ಹಾರೈಸಿದರು.

ಇದೇ ಸಂದರ್ಭದಲ್ಲಿ ಮಕ್ಕಳಿಂದ ಸಂಕ್ರಾಂತಿ ನೃತ್ಯ, ಯಾರ್ಪಿಡ್ ಎನ್.ಜಿ.ಒ - ವೇದಾ ಎನ್.ಜಿ.ಓ ಸಿಬ್ಬಂದಿಗಳಿಂದ ಶಾಲಾ ಮಕ್ಕಳು ಮತ್ತು ಸಿಬ್ಬಂದಿಗಳಿಂದ ಕುಸರೆಳ್ಳು, ಕಡಲೇಕಾಯಿ, ಜೋಳದ ರೊಟ್ಟಿ, ಸಜ್ಜಿರೊಟ್ಟಿ, ಕಬ್ಬು, ಚಟ್ನಿಪುಡಿ, ತರಕಾರಿ, ಚಿಗಳಿ, ಉಪ್ಪಿಕಾಯಿ, ಹೊಸ ಬಟ್ಟೆಗಳನ್ನು ಒಳಗೊಂಡಂತೆ 60 ಮಾರಾಟ ಮಳಿಗೆಗಳನ್ನು ತೆರೆಯಲಾಗಿತ್ತು. ಈ ಸಂತೆ ನೋಡಲು ಕಣ್ಣಿಗೆ ಸಂಕ್ರಾಂತಿ ಸಂಭ್ರಮ ನೀಡಿತು. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಂಡರು. ಯಾವ ರಾಜ್ಯದಲ್ಲಿ ಯಾವ ರೀತಿ ಸಂಕ್ರಾಂತಿ ಸಂಭ್ರಮವನ್ನು ನಾವು ಇಲ್ಲೇ ನೋಡಿದೇವು. ಸಂಕ್ರಾಂತಿಯಿಂದ ಸಂಭ್ರಮ ಇಮ್ಮಡಿಯಾಯಿತು.

ಆಡಳಿತಾಧಿಕಾರಿ ಅರಿಹಂತ ಪ್ರಸಾದ, ಪ್ರಾಚಾರ್ಯೆರಾದ ಸಾಧನಾ ಎಸ್., ಮಹಾವೀರ ಉಪಾದ್ಯೆ, ಮಾಲವಿಕಾ ಕಡಕೋಳ ಉಪಸ್ಥಿತರಿದ್ದರು.

ಕೇಂದ್ರ ಸರಕಾರದಿಂದ ನೈಸರ್ಗಿಕ ಕೃಷಿಗೆ ಪ್ರೋತ್ಸಾಹ

ಹಾವೇರಿ: ಪ್ರಧಾನಿ ಮೋದಿಯವರು ನೈಸರ್ಗಿಕ ಕೃಷಿಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದು, ರೈತರು ಮತ್ತೆ ನಮ್ಮ ಪೂರ್ವಜರ ನೈಸರ್ಗಿಕ ಕೃಷಿ ಪದ್ಧತಿ ಅಳವಡಿಸಿಕೊಂಡು ಹೆಚ್ಚಿನ ಉತ್ಪಾದನೆ ಮಾಡಬೇಕು. ಅಗ್ರೋ ಕಂಪನಿ ರೈತರನ್ನು ಗಮನದಲ್ಲಿ ಇಟ್ಟುಕೊಂಡು ನೈಸರ್ಗಿಕ ಕೃಷಿಯಿಂದ ರೈತರಿಗೆ ಲಾಭವಾಗುವಂತೆ ನೋಡಿಕೊಳ್ಳಬೇಕು ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಹಾವೇರಿಯಲ್ಲಿ ಇಂದು ವೆಂಕಟೇಶ್ವರ ಕೋ ಆಪರೇಟಿವ್ ಪವರ್ ಆಂಡ್ ಅಗ್ರೊ ಪ್ರೊಸೆಸ್ಸಿಂಗ್ ಸಂಸ್ಥೆ ಏರ್ಪಡಿಸಿದ್ದ ಕೃಷಿ ಸೇವಾ ಕೇಂದ್ರವನ್ನು ಉದ್ಘಾಟಿಸಿದರು.

ಕೃಷಿಯಲ್ಲಿ ಬಹಳಷ್ಟು ಪ್ರಯೋಗಗಳು ನಡೆಯುತ್ತಿವೆ. ಅತ್ಯಂತ ಹೆಚ್ಚು ಪ್ರಯೋಗಕ್ಕೆ ಒಳಗಾಗಿರುವುದು ಭೂಮಿ ಮತ್ತು ರೈತ. ಒಂದು ಕಡೆ ಭೂಮಿಯ ಶಕ್ತಿಯನ್ನು ಸಾರವನ್ನು ಉಳಿಸುವಂತ ಪ್ರಯೋಗ ನಡೆಯುತ್ತಿದೆ. ಇನ್ನೊಂದು ಕಡೆ ಆ ಭೂಮಿಯ ಶಕ್ತಿಯ ಸಾರವನ್ನು ನಶಿಸುವಂತ ಕೆಲಸಗಳು ಆಗುತ್ತಿವೆ. ರೈತ ಹೀಗಾಗಿ ಬಹಳಷ್ಟು ಗೊಂದಲಕ್ಕೆ ಬಿದ್ದಿದ್ದಾನೆ. ಯಾವುದನ್ನು ಮಾಡಿದರೆ ದೀರ್ಘ ಕಾಲದ ಲಾಭ ಇದೆ ಅಂತ ಚಿಂತನೆಯಲ್ಲಿದ್ದಾನೆ. ಇಂತಹ ಸಂದರ್ಭದಲ್ಲಿ ಶ್ರೀ ವೆಂಕಟೇಶ್ವರ ಮತ್ತು ಬಾಲಾಜಿ ಸಂಸ್ಥೆಯ ಶಿವರಾಜ್ ಡೋಲೆ ಒಂದು ಸಾಹಸ ಮಾಡಿದ್ದಾರೆ ಎಂದು ಹೇಳಿದರು.

> **ಕೃಷಿ ಕ್ಷೇತ್ರಕ್ಕೆ ಮೋದಿ ಒತ**
> **ಹೊಸ ಔಷಧಿಗಳನ್ನು ಹೊಡೆಯುವ ಮೂಲಕ ಔಷಧ ಮಣ್ಣಿನ ಮೇಲೆ ದುಷ್ಟ ಪರಿಣಾಮ ಉಂಟು ಮಾಡುತ್ತಿದೆ. ಸುಭಾಷ್ ಪಾಳೆಕರ ಅವರು ಬಂದು ಹೇಳಿದ್ದಾರೆ. ಅವರು ಬಹಳ ದೊಡ್ಡ ಬದಲಾವಣೆ ಮಾಡಿದ್ದಾರೆ. ಅದೇ ರೀತಿ ಬಾಲಾಜಿ ಅಗ್ರೋ ಸಂಸ್ಥೆ ಮಾಡುತ್ತಿದೆ. ಇವರು ಸೈನಿಕರು ಆಗಿರುವುದರಿಂದ ಜೈ ಜವಾನ್ ಜೈ ಕಿಸಾನ್ ಜತೆಗೆ ಜೈ ವಿಜ್ಞಾನ ಆಗಿದೆ. ಈಗ ನಮ್ಮ ಪ್ರಧಾನಿ ಮೋದಿಯವರು ನೈಸರ್ಗಿಕ ಕೃಷಿಗೆ ಒತ್ತು ಕೊಟ್ಟಿದ್ದಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.**

ಸ್ವಾತಂತ್ರ್ಯ ಬಂದಾಗ ನಮ್ಮ ದೇಶದಲ್ಲಿ 33 ಕೋಟಿ ಜನಸಂಖ್ಯೆ ಇತ್ತು. ನಾವು ಆಹಾರವನ್ನು ವಿದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದೇವು. ಈಗ 130 ಕೋಟಿ ಜನರಿಗೆ ನಾವೇ ಆಹಾರ ಬೆಳೆಯುತ್ತೇವೆ. ಹಸಿರು ಕ್ರಾಂತಿಯಾಗಿದೆ ಅದನ್ನು ರೈತರು ಮಾಡಿದ್ದಾರೆ. ಭೂಮಿಗೆ ಬಂದ ಗಂಗಾ ಮಾತೆಯ ಜೊತೆಗೆ ರೈತನ ಶ್ರಮದ ಬೆವರು ಸೇರಿದರೆ ಭೂಮಿ ತಾಯಿ ಬಂಗಾರದ ಬೆಳೆ ನೀಡುತ್ತಾಳೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ, ಮಾಜಿ ಶಾಸಕ ಶಿವರಾಜ ಸಜ್ಜನರ, ಸಂಸ್ಥೆ ಮುಖ್ಯಸ್ಥ ಶಿವಾಜಿ ರಾಮರಾವ್ ಡೋಲೆ ಹಾಜರಿದ್ದರು.

ಗಣರಾಜ್ಯೋತ್ಸವ ಆಚರಣೆಗೆ ಸಿದ್ಧತೆಗೆ ಸೂಚನೆ

ಹಾವೇರಿ: ಜಿಲ್ಲಾಡಳಿತದಿಂದ ಜ.26 ರಂದು ಗಣರಾಜ್ಯೋತ್ಸವ ಕಾರ್ಯಕ್ರಮ ವನ್ನು ಅತ್ಯಂತ ಸಂಭ್ರಮದಿಂದ, ಅರ್ಥಪೂರ್ಣವಾಗಿ ಹಾಗೂ ಶಿಸ್ತುಬದ್ಧ ವಾಗಿ ಆಚರಣೆ ಮಾಡುವ ನಿಟ್ಟಿನಲ್ಲಿ ಅಗತ್ಯ ಸಿದ್ಧತೆಗಳನ್ನು ಅಚ್ಚುಕಟ್ಟಾಗಿ ಮಾಡಬೇಕು ಎಂದು ವಿವಿಧ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಅವರು ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣ ದಲ್ಲಿ ಮಂಗಳವಾರ ಗಣರಾಜ್ಯೋತ್ಸವ ಆಚರಣೆ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗಣರಾಜ್ಯೋತ್ಸವ ಕಾರ್ಯಕ್ರಮ ಆಯೋಜನೆಯ ನಗರದ ಹೊಸಮನಿ ಸಿದ್ದಪ್ಪ ಜಿಲ್ಲಾ ಕ್ರೀಡಾಂಗಣದ ಸ್ವಚ್ಛತೆ, ವೇದಿಕೆ ಅಲಂಕಾರ, ಕುಡಿಯುವ ನೀರು ಸೇರಿದಂತೆ ಅಗತ್ಯ ಸಿದ್ಧತೆಗಳನ್ನು ತೋಟಗಾರಿಕೆ ಇಲಾಖೆ, ನಗರಸಭೆ ಹಾಗೂ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಸೇರಿದಂತೆ ಸಂಬಂದಪಟ್ಟ ಇಲಾಖೆ ಅಧಿಕಾರಿಗಳು ಜವಾಬ್ದಾರಿಯಿಂದ ಹಾಗೂ ಸಮನ್ವಯದಿಂದ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಪಥ ಸಂಚಲನ, ಸಾಂಸ್ಕೃತಿಕ ಕಾರ್ಯಕ್ರಮ, ಸಾಧಕರಿಗೆ ಸನ್ಮಾನ, ವೇದಿಕೆ ಸಿದ್ಧತೆ ಒಳಗೊಂಡಂತೆ ಗಣರಾಜ್ಯೋತ್ಸವದ ವಿವಿಧ ಸಿದ್ಧತೆಗಳ ಕುರಿತು ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಅವರು, ಯಾವುದೇ ಲೋಪವಾಗದಂತೆ ಅಚ್ಚುಕಟ್ಟಾಗಿ ಕಾರ್ಯಕ್ರಮ ಸಿದ್ಧತೆ ಕೈಗೊಳ್ಳುವಂತೆ ಸಲಹೆ ನೀಡಿದರು.

ಗಣರಾಜ್ಯೋತ್ಸವ ಆಚರಣೆ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಮಾತನಾಡಿದರು.

> **ಸರಕಾರಿ ಕಚೇರಿಗಳು, ನಗರದ ವೃತ್ತಗಳಿಗೆ ದೀಪಾಲಂಕಾರ, ಸನ್ಮಾನಿತರಿಗೆ, ಮಾಧ್ಯಮದವರಿಗೆ, ಅಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಪ್ರತ್ಯೇಕ ಆಸನದ ವ್ಯವಸ್ಥೆ, ಶಿಷ್ಟಾಚಾರ ಅನುಸಾರ ಆಮಂತ್ರಣ ಪತ್ರಿಕೆ, ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ, ನಾಗರಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಅಗತ್ಯ ಸಿದ್ಧತೆಗಳನ್ನು ವ್ಯವಸ್ಥಿತವಾಗಿ ವಿವಿಧ ಇಲಾಖೆ ಅಧಿಕಾರಿಗಳು ಸಮನ್ವಯದಿಂದ ಮಾಡಬೇಕು.**
> **-ಡಾ.ವಿಜಯಮಹಾಂತೇಶ ದಾನಮ್ಮನವರ, ಜಿಲ್ಲಾಧಿಕಾರಿ**

ಕ್ರೀಡೆ ಹಾಗೂ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಭೆಯಲ್ಲಿ ಜಿಪಂ ಸಿಇಒ ರುಚಿ ಬಿಂದಲ್, ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ, ಸವಣೂರು ಉಪ ವಿಭಾಗಾಧಿಕಾರಿ ಶುಭಂ ಸುಕ್ಲಾ, ಹಾವೇರಿ ಉಪ ವಿಭಾಗಾಧಿಕಾರಿ ಕಲ್ಯಾಣಿ ಕಾಂಬ್ಳೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಅಶೋಕ ಶಾಸ್ತ್ರೀ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಮೋಹನ ದಂಡಿನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಲತಾ, ನಗರಸಭೆ ಆಯುಕ್ತ ಕಾಂತರಾಜು, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಚ್.ಪಾಟೀಲ ಉಪಸ್ಥಿತರಿದ್ದರು.

ಅಪಪ್ರಚಾರ ವಿರುದ್ಧ ಕ್ರಮಕ್ಕೆ ಆಗ್ರಹ

ನವಲಗುಂದ: ಸ್ಥಳೀಯ ಪಂಚಗ್ರಹ ಹಿರೇಮಠ ಹಾಗೂ ಪೀಠಾಧಿಪತಿಗಳ ವಿರುದ್ಧ ಅಪಪ್ರಚಾರ ನಡೆಸುತ್ತಿರುವ ಸಮಾಜಘಾತಕ ಶಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಪಂಚಗ್ರಹ ಹಿರೇಮಠದ ಸಾವಿರಾರು ಭಕ್ತರು ಮಠದಿಂದ ಪ್ರತಿಭಟನಾ ಮೆರವಣಿಗೆ ನಡೆಸಿ ತಹಸೀಲ್ದಾರ ಕಚೇರಿಗೆ ಆಗಮಿಸಿ, ತಹಸೀಲ್ದಾರರ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಪಂಚಗ್ರಹ ಹಿರೇಮಠದ ಪೀಠಾಧಿಪತಿ ಶ್ರೀ ಷ.ಬ್ರ.ಸಿದ್ದೇಶ್ವರ ಶಿವಾಚಾರ್ಯ ಮಹಾಸ್ವಾಮಿ ಗಳು ಅನಾರೋಗ್ಯದಿಂದ ಬಳಲುತ್ತಿರುವ ಹಿನ್ನೆಲೆಯಲ್ಲಿ, ಮಠದ ಪರಂಪರೆ ಹಾಗೂ ಜಗದ್ಗುರು ಪಂಚಾಚಾರ್ಯರ ಆದೇಶದಂತೆ ನೂತನ ಉತ್ತರಾಧಿಕಾರಿ ನೇಮಕ ಪ್ರಕ್ರಿಯೆ ಕೈಗೊಳ್ಳಲಾಗಿದೆ. ಇದನ್ನು ಸಹಿಸದ ಕೆಲ ಸ್ವಾರ್ಥಪರ ವ್ಯಕ್ತಿಗಳು ಸುಳ್ಳು ಆರೋಪಗಳನ್ನು ಮಾಡುವ ಮೂಲಕ ಮಠದ ಆಡಳಿತ ಹಾಗೂ ಆಸ್ತಿಗಳ ಮೇಲೆ ಕಣ್ಣಿಟ್ಟಿದ್ದಾರೆ ಎಂದು ಭಕ್ತರು ಆರೋಪಿಸಿದರು. ಮಠವು ಕಳೆದ ಹಲವು ವರ್ಷಗಳಿಂದ ಅಕ್ಷರದಾಸೋಹ, ಅನ್ನದಾಸೋಹ ನಡೆಸುವುದರೊಂದಿಗೆ ಶೈಕ್ಷಣಿಕ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿದೆ. ನವಲಗುಂದದಲ್ಲಿ ಶ್ರೀ ಶಂಕರ ಮಹಾವಿದ್ಯಾಲಯ ಸ್ಥಾಪನೆಗೆ 40 ಎಕರೆ ಭೂಮಿಯನ್ನು ದಾನವಾಗಿ ನೀಡಿರುವುದೂ ಮಠದ ಸೇವೆಯ ಭಾಗವಾಗಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಇಂತಹ ದುಷ್ಟ ಹಿತಾಸಕ್ತಿಗಳನ್ನು ಗುರುತಿಸಿ ಕಾನೂನು ಕ್ರಮ ಕೈಗೊಳ್ಳಬೇಕು. ಸಮಾಜದಲ್ಲಿ ಶಾಂತಿ ಕದಡುವವರನ್ನು ಗಡಿಪಾರು ಮಾಡಿ ಸೌಹಾರ್ದಯುತ ವಾತಾವರಣ ನಿರ್ಮಿಸಬೇಕೆಂದು ಭಕ್ತರು ಆಗ್ರಹಿಸಿದರು. ಕ್ರಮ ಕೈಗೊಳ್ಳದಿದ್ದಲ್ಲಿ ಧರ್ಮದ ರಕ್ಷಣೆಗೆ ಉಗ್ರ ಹೋರಾಟ ಅನಿವಾರ್ಯವಾಗಲಿದೆ ಎಂದು ಎಚ್ಚರಿಸಿದರು.

ಶ್ರೀಶೈಲ ಮುಲಿಮನಿ, ಸಿದ್ದಲಿಂಗಯ್ಯ ಹಿರೇಮಠ, ಪಾಂಡಪ್ಪ ಕೋನರಡ್ಡಿ, ಅಣ್ಣಪ್ಪ ಬಾಗಿ, ಯಲ್ಲಪ್ಪ ಬೋವಿ, ಮೈಲಾರಪ್ಪ ವೈದ್ಯ, ಸಿದ್ದಪ್ಪ ಹೂಗಾರ, ಎಂ.ಡಿ. ಕುಲಕರ್ಣಿ,ವಿ.ಟಿ.ಕರಿ ಸರ್ಕಾರ್. ಎ.ಬಿ.ಹಿರೇಮಠ ಶಿವಾನಂದ ಚಲವಾದಿ, ಪ್ರವೀಣ ಮುಗಣ್ಣವರ, ಕೊಟ್ರೇಶ ಹಿರೇಮಠ, ಬಾಬಾಜಾನ ಮುಲ್ಲಾ, ವೀರೇಶ ಜಾವೂರಮಠ, ನೀಲಪ್ಪ ಮೆಣಸಿನಕಾಯಿ, ಎಂ.ಬಿ. ತೋಟಿ, ಅಪ್ಪಣ್ಣ ಹಿರಿಗಣ್ಣವರ, ಶಂಕ್ರಯ್ಯ ಗೌರಿಮಠ, ಮೌಲಾಸಾಬ ವೈದ್ಯ ಸೇರಿದಂತೆ ಸಾವಿರಾರು ಭಕ್ತರು ಭಾಗವಹಿಸಿದ್ದರು.

'ಆಲ್-ನ್ಯೂ ಕಿಯಾ ಸೆಲ್ಟೋಸ್' ಮಾರುಕಟ್ಟೆಗೆ

ಹುಬ್ಬಳ್ಳಿ: ಉತ್ತರ ಕರ್ನಾಟಕದ ಅತ್ಯಂತ ಹಳೆಯ ಮತ್ತು ವಿಶ್ವಾಸಾರ್ಹ ಕಿಯಾ ಡೀಲರ್ ಶಿಪ್ ಆದ ''ನಾಗಶಾಂತಿ ಕಿಯಾ, ನಗರದ ಅಮರಗೋಳದಲ್ಲಿರುವ ತನ್ನ ಪ್ರಮುಖ ಶೋರೂಮ್‌ನಲ್ಲಿ ಅತ್ಯಾಧುನಿಕ 'ಆಲ್-ನ್ಯೂ ಕಿಯಾ ಸೆಲ್ಟೋಸ್' ಅನ್ನು ಅಧಿಕೃತವಾಗಿ ಮಾರುಕಟ್ಟೆಗೆ ಪರಿಚಯಿಸಿದೆ. ಈ ನೂತನ ಮಾದರಿಯು ಈ ಭಾಗದ ಎಸ್ ಯುವಿ ಮಾರುಕಟ್ಟೆಯಲ್ಲಿ ಹೊಸ ಸಂಚಲನ ಮೂಡಿಸುವ ನಿರೀಕ್ಷೆಯಿದೆ ಎಂದು ಮಹಾಂತೇಶ ಮಟ್ಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಆಕರ್ಷಕ ಬೆಲೆ ಮತ್ತು ವಿನ್ಯಾಸ 10.99 ಲಕ್ಷದಿಂದ ಆರಂಭವಾಗುವ ಆಕರ್ಷಕ ಬೆಲೆಯನ್ನು ಹೊಂದಿರುವ ಈ ವಾಹನವು ಕಿಯಾದ ಅತ್ಯಾಧುನಿಕ ಐ3 ಪ್ಲಾಟ್ ಫಾರ್ಮ್ ಮೇಲೆ ನಿರ್ಮಿತವಾಗಿದೆ. ಹಳೆಯ ಮಾದರಿಗಿಂತ ಹೆಚ್ಚು ಹೆಚ್ಚು ಉದ್ದ ಮತ್ತು ಅಗಲದ ವಿನ್ಯಾಸವನ್ನು ಹೊಂದಿದ್ದು, ವಿಸ್ತಾರವಾದ ವೀಲ್ಬೇಸ್ ಹೊಂದಿದೆ. ಇದರಿಂದಾಗಿ ಪ್ರಯಾಣಿಕರಿಗೆ ಹೆಚ್ಚಿನ ಕ್ಯಾಬಿನ್ ಸ್ಥಳಾವಕಾಶ ಹಾಗೂ ಆರಾಮದಾಯಕ ಪ್ರಯಾಣದ ಅನುಭವ ದೊರೆಯಲಿದೆ ಎಂದು ತಿಳಿಸಿದರು. ಹೊಸ ಸೆಲ್ಟೋಸ್ ತನ್ನ ವಿಭಾಗದಲ್ಲಿಯೇ ಮೊದಲ ಬಾರಿಗೆ ಹಲವು ಅತ್ಯಾಧುನಿಕ ತಂತ್ರಜ್ಞಾನಗಳನ್ನು ಒಳಗೊಂಡಿದೆ. 30-ಇಂಚಿನ ಟ್ರಿನಿಟಿ ಪ್ಯಾನೊರಾಮಿಕ್ ಡಿಸ್ ಪ್ಲೇ ಪ್ರೀಮಿಯಂ ಲುಕ್ ನೀಡುವ ವಿಶಾಲವಾದ ಪರದೆ, ಮೆಮೊರಿ ಸೀಟ್ ಮತ್ತು ಆಟೋ ರಿವರ್ಸ್ ಔಖಗಿಒ: ಚಾಲಕನ ಅನುಕೂಲಕ್ಕೆ ತಕ್ಕಂತೆ ಸೀಟುಗಳನ್ನು ಹೊಂದಿಸುವ ವ್ಯವಸ್ಥೆ ಹೊಂದಿದೆ. ವೇಗಕ್ಕೆ ತಕ್ಕಂತೆ ಶಬ್ದದ ಹೊಂದಾಣಿಕೆ ಸಂಪೂರ್ಣ ಮನಃಶಾಂತಿಗಾಗಿ 24 ಸ್ಟ್ಯಾಂಡರ್ಡ್ ಬಲಿಷ್ಠ ಸುರಕ್ಷತಾ ವೈಶಿಷ್ಟ್ಯಗಳನ್ನು ಅಳವಡಿಸಲಾಗಿದೆ ಎಂದು ತಿಳಿಸಿದರು. ಹುಬ್ಬಳ್ಳಿ ಮಾತ್ರವಲ್ಲದೆ, ಶಿರಸಿ ಮತ್ತು ಹಾವೇರಿಯಲ್ಲಿರುವ ನಾಗಶಾಂತಿ ಕಿಯಾ ಶೋರೂಮ್‌ಗಳಲ್ಲೂ ಪ್ರದರ್ಶನಕ್ಕೆ ಲಭ್ಯವಿದೆ. ಭವಿಷ್ಯದ ತಂತ್ರಜ್ಞಾನದ ಈ ವಾಹನವನ್ನು ಹತ್ತಿರದಿಂದ ನೋಡಲು ಮತ್ತು ಅನುಭವಿಸಲು ಗ್ರಾಹಕರಿಗೆ ಆಹ್ವಾನ ನೀಡಲಾಗಿದೆ ಎಂದರು.

ಹೆಡ್ ಸೇಲ್ಸ್ ಸುಹಾನ ಗೌಡರ, ಧಾರವಾಡ ಜಿಲ್ಲಾ ಪತ್ರಕರ್ತ ಸಂಘದ ಅಧ್ಯಕ್ಷ ಬಂಡು ಕುಲಕರ್ಣಿ,ಮಾರ್ಕ್ ಫರ್ನಾಂಡೀಸ್ ಗೋಷ್ಠಿಯಲ್ಲಿದ್ದರು.

ಹಲ್ಲೆ: ಆರೋಪಿಗೆ ಜೈಲು ಶಿಕ್ಷೆ ದಂಡ

ಹಾವೇರಿ: ಹೆಂಡತಿ ಮನೆಗೆ ತೆರಳಿ ಸಂಬಂಧಿಕರ ಮೇಲೆ ಹಲ್ಲೆಮಾಡಿ ಅವಾಚ್ಯ ಶಬ್ದಗಳಿಂದ ಬೈದಾಡಿದ ಬ್ಯಾಡಗಿ ತಾಲೂಕ ಹಿರೇಅಣಜಿ ಗ್ರಾಮದ ಈರಪ್ಪ ನಾಗಪ್ಪ ಬೆಲವಂತಕೊಪ್ಪ ಎಂಬ ಆರೋಪಿಗೆ ಐದು ವರ್ಷಗಳ ಜೈಲು ಶಿಕ್ಷೆ ಹಾಗೂ ರೂ.30 ಸಾವಿರ ದಂಡ ವಿಧಿಸಿ ಒಂದನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಎನ್.ಎಂ.ರಮೇಶ ಅವರು ಸೋಮವಾರ ತೀರ್ಪು ನೀಡಿದ್ದಾರೆ. ಆರೋಪಿ ಈರಪ್ಪ ನಾಗಪ್ಪ ಬೆಲವಂತಕೊಪ್ಪ ಈತನು ತನ್ನ ಹೆಂಡತಿಯೊಂದಿಗೆ ಪದೇ ಪದೇ ಜಗಳ ಮಾಡಿ ಹೊಡಿಬಡಿ ಮಾಡುತ್ತಿದ್ದ ಹಿನ್ನಲೆಯಲ್ಲಿ ಪತ್ನಿ ತವರು ಮನೆಗೆ ತೆರಳಿದ್ದ ಸಮಯದಲ್ಲಿ ಸ.19-2024 ರಂದು ಕೈಯಲ್ಲಿ ಚೂಪಾದ ಕಲ್ಲು ಹಿಡಿದುಕೊಂಡು ಬಂದು ಅಜ್ಜ ವೀರಪ್ಪ ಅಡವೇರ, ಶಿವಪ್ಪ ಅಡವೇರ ಹಾಗೂ ಅವರ ಪತ್ನಿ ಮೇಲೆ ಹಲ್ಲೆನಡೆಸಿ ಅವಾಚ್ಯ ಶಬ್ದಗಳಿಂದ ಬೈದಾಡಿ, ನಿಮ್ಮ ಜೀವ ತೆಗೆಯುತ್ತೇನೆ ಎಂದು ಜೀವ ಬೆದರಿಕೆ ಹಾಕಿದ ಹಿನ್ನಲೆಯಲ್ಲಿ ದೂರು ದಾಖಲಿಸಲಾಗಿತ್ತು. ಈ ಪ್ರಕರಣದ ಕುರಿತು ಕಾಗಿನೆಲೆ ಪೊಲೀಸ್ ಠಾಣೆ ಆಗಿನ ಪಿಎಸ್ಐ ಶಿವಪ್ಪ ದುರ್ಗಪ್ಪ ಸಾಗರ ಅವರು ತನಿಖೆಕೈಗೊಂಡು, ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ನ್ಯಾಯಾಲಯದ ಸರಕಾರಿ ಅಭಿಯೋಜಕ ಸರೋಜಾ ಕೂಡಲಗಿಮಠ ಮಂಡಿಸಿದ್ದಾಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜ.21ಕ್ಕೆ ಹುಬ್ಬಳ್ಳಿ ಅಹಿಂದ ಸಮಾವೇಶ

ಹಾವೇರಿ: ಅಹಿಂದ ನಾಯಕ ಸಿಎಂ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಬಾರದು ಎಂದು ಆಗ್ರಹಿಸಿ ಜ.21ರಂದು ಹುಬ್ಬಳ್ಳಿಯ ಇಂದಿರಾ ಗಾಜಿನ ಮನೆಯಲ್ಲಿ ಬೃಹತ್ ಮಟ್ಟದ ಅಹಿಂದ ಸಮಾವೇಶ ಏರ್ಪಡಿಸಲಾಗಿದೆ ಎಂದು ರಾಜ್ಯ ಅಹಿಂದ ಒಕ್ಕೂಟದ ಗೌರವಾಧ್ಯಕ್ಷ ಸಿದ್ದಣ್ಣ ತೇಜಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಅಹಿಂದ ವರ್ಗಗಳ ಮತಗಳನ್ನು ಪಡೆದು ಅಕಾರಕ್ಕೆ ಬಂದ ಕಾಂಗ್ರೆಸ್ ಅಹಿಂದ ನಾಯಕನನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗೆ ಇಳಿಸಬಾರದು ಎಂದರು. ಇನ್ನೂ ದಾವಣಗೆರೆ, ಮೈಸೂರು, ಕೋಲಾರ, ಬೆಂಗಳೂರು ಹಾಗೂ ಹಾಸನನಲ್ಲಿ ಸಮಾವೇಶ ನಡೆಸಿ ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟ ಸಂದೇಶ ರವಾನಿ ಸಲಾಗುವುದು. ಸಚಿವರಾದ ಸತೀಶ್ ಜಾರಕಿಹೊಳಿ, ಜಿ.ಪರ ಮೇಶ್ವರ, ಭೈರತಿ ಸುರೇಶ, ಎಚ್.ಸಿ ಮಹದೇವಪ್ಪ, ಕೆ.ಜೆ ಜಾರ್ಜ್, ಎಂಎಲ್ಸಿ ಯತೀಂದ್ರ ಸಿದ್ದರಾ ಮಯ್ಯ ಸೇರಿದಂತೆ 10ಕ್ಕೂ ಅಕ ಸಚಿವರಿಗೆ ಸಮಾವೇಶಕ್ಕೆ ಬರು ವಂತೆ ಪತ್ರ ಬರೆಯಲಾಗಿದೆ. ಸುದ್ದಿಗೋಷ್ಠಿಯಲ್ಲಿ ಕರಿಯಪ್ಪ ಕರಿಗಾರ, ನಾಗರಾಜ ಮಡಿವಾಳರ, ಆನಂದ ಬೆಂಡಿಗೇರಿ, ದಾದಾಪೀರ ಎರೇಶಿಮಿ, ದಿಳ್ಳೆಪ್ಪ ಕಟ್ಟಿಗಿ, ಅಣ್ಣಪ್ಪ ಕನ್ನಮ್ಮನವರ, ಶೇಖಪ್ಪ ಮಾದರ, ನೀಲಪ್ಪ ಮರೆಮ್ಮನವರ ಇದ್ದರು.

ಧಾರವಾಡದಲ್ಲಿ ಸಂಸದರ ಕ್ರೀಡಾ ಮಹೋತ್ಸವ ಜ.16ರಿಂದ

ಧಾರವಾಡ: ಇಲ್ಲಿನ ಸಂಸದರ ಕ್ರೀಡಾ ಮಹೋತ್ಸವ ಜ.16, 17ರಂದು ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಮಂಡಲ ಅಧ್ಯಕ್ಷ ಶಂಕರ ಕೊಮಾರ ದೇಸಾಯಿ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಾದ್ಯಂತ ಪ್ರತಿಭಾನ್ವಿತ ಯುವ ಕ್ರೀಡಾಪಟುಗಳನ್ನು ಗುರುತಿಸಿ, ಪ್ರತಿಭೆಗೆ ಪುರಸ್ಕಾರ ನೀಡಿ, ಕ್ರೀಡಾ ಮನೋಭಾವ ಪ್ರೋತ್ಸಾಹಿಸಲು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಪ್ರಸ್ತುತ ಪಡಿಸುವ ''ಸಂಸದ ಕ್ರೀಡಾ ಮಹೋತ್ಸವ'' ಎಂದರು.

ದೇಸಿ ಆಟಗಳ ವಿಭಾಗದಲ್ಲಿ ನೋಂದಾಯಿಸಿಕೊಂಡವರಿಗೆ ನೇರ ಜಿಲ್ಲಾ (ಲೋಕಸಭಾ ಕ್ಷೇತ್ರ) ಮಟ್ಟದಲ್ಲಿ ಆಡಿಸಲಾಗುವುದು.

ಆಟಗಳನ್ನು ಮಹಿಳೆ ಮತ್ತು ಪುರುಷ ಪ್ರತ್ಯೇಕ ವಿಭಾಗಗಳಲ್ಲಿ ಆಡಿಸಲಾಗುತ್ತದೆ. ಕಬಡ್ಡಿ ಮತ್ತು ವಾಲಿಬಾಲ್ ಆಟಗಳಿಗೆ 16 ವರ್ಷಕ್ಕಿಂತ ಮೀರಿದವರಿರಬೇಕು ಎಂದರು.

ಬಿಜೆಪಿ ಮಂಡಲ ಅಧ್ಯಕ್ಷ ಶಂಕರ ಕೊಮಾರ ದೇಸಾಯಿ ಅವರು ಸಂಸದ ಕ್ರೀಡಾ ಮಹೋತ್ಸವ ಟಿ ಶರ್ಟ್ ಬಿಡುಗಡೆ ಮಾಡಿದರು.

> **ಕ್ರೀಡಾ ಮಹೋತ್ಸವ ಯುವ ಜನರಿಗೆ, ಕ್ರೀಡಾ ಪಟುಗಳಿಗೆ ತಮ್ಮ ಸಾಮರ್ಥ್ಯ ಪ್ರದರ್ಶಿಸಲು, ವಿಶೇಷವಾಗಿ ಕ್ರೀಡಾ ಪಟುಗಳಿಗೆ ಒಂದು ವೇದಿಕೆಯಾಗಿದೆ. ಗುಂಪು ಆಟಗಳಲ್ಲಿ ವಾಲಿಬಾಲ್, ಕಬಡ್ಡಿ ಮತ್ತು ಖೋ ಖೋ ಆಟಗಳು, ಅಥ್ಲೆಟಿಕ್ಸ್ ವಿಭಾಗದಲ್ಲಿ 100 ಮೀ., 800 ಮೀ., ಎತ್ತರ ಜಿಗಿತ, ಉದ್ದ ಜಿಗಿತ ಮತ್ತು ಗುಂಡು ಎಸೆತ ಆಟಗಳಿವೆ.**
> **-ಶಂಕರ ಕೊಮಾರ ದೇಸಾಯಿ, ಬಿಜೆಪಿ ಮಂಡಲ ಅಧ್ಯಕ್ಷ**

ಖೋಖೋ ಆಟಕ್ಕೆ 25 ವರ್ಷ ಮೀರಿರಬಾರದು. ವೈಯಕ್ತಿಕ ಅಥ್ಲೆಟಿಕ್ಸ ಆಟಗಳನ್ನು 17 ವರ್ಷಕ್ಕಿಂತ ಕಡಿಮೆ ಜ್ಯೂನಿಯರ್‌ಮತ್ತು 17 ವರ್ಷಕ್ಕಿಂತ ಹಿರಿಯ ಸಿನಿಯರ್‌ವಿಭಾಗಗಳ ಅಡಿಯಲ್ಲಿ ಆಡಿಸಲಾಗುವುದು. ಎಲ್ಲ ಗುಂಪು ಮತ್ತು ವೈಯಕ್ತಿಕ ಪಂದ್ಯಗಳಿಗೂ ನಗದು ಬಹುಮಾನ ಮತ್ತು ಆಕರ್ಷಕ ಟ್ರೋಫಿ ನೀಡಲಾಗುವುದು ಎಂದರು.

ಈಗಾಗಲೇ ಸಾಕಷ್ಟು ತಂಡಗಳು ನೋಂದಣಿ ಮಾಡಿಕೊಂಡಿದ್ದು. ಇನ್ನೂ ಹೆಚ್ಚಾಗಲಿದೆ. ಗ್ರಾಮೀಣ ಭಾಗದ ಯುವಕ ಯುವತಿಯರು ಹೆಸರು ಹೆಚ್ಚಿನ ಸಂಖ್ಯೆಯಲ್ಲಿ ನೋಂದಾಯಿಸಬೇಕು ಎಂದು ದೇಸಾಯಿ ಮನವಿ ಮಾಡಿದರು.

ಕ್ರೀಡಾ ಮಹೋತ್ಸವಕ್ಕೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಚಾಲನೆ ನೀಡಲಿದ್ದು, ಸಭಾಪತಿ ಬಸವರಾಜ ಹೊರಟ್ಟಿ, ಮಾಜಿ ಶಾಸಕರಾದ ಅಮೃತ ದೇಸಾಯಿ, ಸೀಮಾ ಮಸೂತಿ, ಬಿಜೆಪಿ ಜಿಲ್ಲಾಧ್ಯಕ್ಷ ನಿಂಗಪ್ಪ ಸುತಗಟ್ಟಿ ಉಪಸ್ಥಿತರಿರುವರು ಎಂದರು.

ಮಾಜಿ ಶಾಸಕ ಅಮೃತ ದೇಸಾಯಿ ಮಾತನಾಡಿ, ಗ್ರಾಮೀಣ ಭಾಗದ ಕ್ರೀಡಾಪಟುಗಳು ರಾಷ್ಟ್ರದ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಬೇಕು ಎಂಬ ಆಶಯವಿದೆ ಎಂದರು. ಮಾಜಿ ಶಾಸಕಿ ಸೀಮಾ ಮಸೂತಿ ಮಾತನಾಡಿ, ಕ್ರೀಡಾಕೂಟದ ಸದುಪಯೋಗ ಮಾಡಿಕೊಳ್ಳಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ಶಂಕರ ಮುಗದ, ನಾಗಪ್ಪ ಗಾಣಗೇರ, ಶಶಿಮೌಳಿ ಕುಲಕರ್ಣಿ,ನಿಜನಗೌಡ ಪಾಟೀಲ, ವೀರಯ್ಯ ಚಿಕ್ಕಮಠ, ಗುರುನಾಥಗೌಡ ಗೌಡರ, ಮಹೇಶ ಯಲಿಗಾರ, ಸಂತೋಷಗೌಡ ಪಾಟೀಲ, ಅಡಿವೆಪ್ಪ ಹೊನ್ನಪ್ಪನವರ, ಯಲ್ಲಪ್ಪ ಜಾನಕೂನವರ, ಮಂಜುನಾಥ ಹಿರೇಮಠ ಇದ್ದರು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಸೋಮವಾರಪೇಟೆ ಉಪ ವಿಭಾಗ, ಸೋಮವಾರಪೇಟೆ

OFFICE OF THE ASSISTANT CONSERVATOR OF FORESTS, SOMWARPET SUB DIVISION, SOMWARPET

ದೂರವಾಣಿ ಸಂಖ್ಯೆ : 08276–284352 Email: acfsomwarpet11@gmail.com

ಸಂಖ್ಯೆ: ಎ2/ಬಿಜಿಟಿ/ವಿವ–48/2025–26. ದಿನಾಂಕ:12.01.2026

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

2025–26ನೇ ಸಾಲಿನಿಂದ 2028–29ನೇ ಸಾಲಿನವರೆಗೆ (ಮೂರು ವರ್ಷ ಅವಧಿಗೆ) ಮಡಿಕೇರಿ ಪ್ರಾದೇಶಿಕ ವಿಭಾಗ ವ್ಯಾಪ್ತಿಯ ಕುಶಾಲನಗರ ವಲಯದ ಕಾವೇರಿ ನಿಸರ್ಗಧಾಮದ ಪಾರ್ಕಿಂಗ್ ಜಾಗದಲ್ಲಿ ಅಂಗಡಿ (Shop) ನಡೆಸುವ ಕಾರ್ಯಕ್ಕೆ ಪ್ರತೀ ಅಂಗಡಿಗೆ ಮಾಸಿಕವಾಗಿ 30,000.00 (LS) ಮೊಬಲಗನ್ನು ಪ್ರತಿ ತಿಂಗಳು ಇಲಾಖೆಗೆ ಪಾವತಿಸುವ ಷರತ್ತಿನ ಮೇರೆಗೆ ಕರ್ನಾಟಕ ಸಾರ್ವಜನಿಕ ಪೋರ್ಟಲ್ 2.0 Version (https://kppp.karnataka.gov.in) ಮೂಲಕ ಮೊದಲನೇ ಟೆಂಡರನ್ನು ದಿನಾಂಕ: 27–01–2026 ಅಹ್ವಾನಿಸಲಾಗಿದೆ. ಒಂದು ವೇಳೆ ಸದರಿ ದಿನಾಂಕದಂದು ಯಾವುದೇ ಟೆಂಡರ್ ಬಾರದಿದ್ದಲ್ಲಿ ಇದೇ ಕಾಮಗಾರಿಗೆ ಮತ್ತು ಟೆಂಡರ್ ಅಧಿಸೂಚನೆಯಲ್ಲಿರುವ ಎಲ್ಲಾ ಷರತ್ತುಗಳನ್ನು ಒಳಗೊಂಡಂತೆ ಎರಡನೆ ಟೆಂಡರನ್ನು (ಮರು ಟೆಂಡರ್) ದಿನಾಂಕ 06–02–2026 ರಂದು ನಡೆಸಲಾಗುವುದು.

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಚೇರಿ : 08276–284352
ದಿನಾಂಕ: 12–01–2026
ಸ್ಥಳ: ಸೋಮವಾರಪೇಟೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಸೋಮವಾರಪೇಟೆ ಉಪವಿಭಾಗ
ಸೋಮವಾರಪೇಟೆ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಮೈಸೂರು ವಿಭಾಗ, ಮೈಸೂರು.
www:eepwdmys21@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

ಈ ಕಛೇರಿ ಐಟಂವಾರು ಟೆಂಡರ್ ಪ್ರಕಟಣೆ ಸಂ:22/2025–26/2ನೇ ಕರೆ ದಿ:09.01.2026

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗದಡಿಯಲ್ಲಿನ ನಂ.1 ಉಪವಿಭಾಗ, ಮೈಸೂರು ವ್ಯಾಪ್ತಿಯಲ್ಲಿನ ಲೆಕ್ಕಶೀರ್ಷಿಕೆ:5054–04–337–0–01–154 ಜಿಲ್ಲಾ ರಸ್ತೆಗಳು ಸುಧಾರಣೆ ಅಡಿಯಲ್ಲಿ ಅನುಮೋದನೆಯಾದ ಕಾಮಗಾರಿಗೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–4ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟ್‌ಲ್‌ನಲ್ಲಿ ನೊಂದಾಯಿಸಿರುವ ಅರ್ಹ ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟ್‌ಲ್‌ನಲ್ಲಿ (viz https://kppp.karnataka.gov.in/) ಭಾಗವಹಿಸಬಹುದಾಗಿರುತ್ತದೆ. ದಿ:09.01.2026 ರಿಂದ ದಿ:09.02.2026 ರ ಸಂಜೆ 17:00ರ ವರೆಗೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಿಟ್ಟ ಮೊತ್ತ ರೂ.762.29 ಲಕ್ಷಗಳು ಹಾಗೂ ಇ.ಎಂ.ಡಿ ರೂ.11.43 ಲಕ್ಷಗಳಾಗಿರುತ್ತದೆ. ಪೂರ್ವಭಾವಿ ಸಭೆಯನ್ನು ದಿನಾಂಕ 23.01.2026 ರಂದು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಪೂರ್ವಾಹ್ನ 11.00ಕ್ಕೆ ನಿಗಧಿಪಡಿಸಿದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಯಾವುದೇ ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್

DIPR/DDMYS/1500/KSMCA/850/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಬೆಳಗಾವಿ

ನಂ.ಕಾ.ನಿ.ಅ/ಗ್ರಾ.ಕು.ನೀ&ನೈ/ಬೆಳಗಾವಿ/ಪಿಬಿ–1,2,3,4/ಕು.ನೀ.ಸ. ಯೋ/ಕೆಡಬ್ಲ್ಯು–1,2&3/ಟೆಂಡರ್–18/2025–26/1951 ದಿ:12/01/2026

ಇ–ಪ್ರೊಕ್ಯೂರಮೆಂಟ್ ರೀತ್ಯಾ ದ್ವಿ–ಲಕೋಟೆ ಮಾದರಿಯ ಹೊಸ ಟೆಂಡರ್ ಪ್ರಕಟಣೆ ಸಂಖ್ಯೆ :18/2025–26

ಈ ಕೆಳಕಂಡ ಹೊಸ ಕಾಮಗಾರಿಗಳು Standard Tender Document KW-1,2&3 ರ ನಿಬಂಧನೆಗೊಳಪಟ್ಟಂತೆ ಏಕ–ಲಕೋಟೆ&ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರಿನಲ್ಲಿ ಇ–ಪ್ರೊಕ್ಯೂರಮೆಂಟ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಟೆಂಡರ ತೆರೆಯುವ ದಿನಾಂಕಗಳು ಈ ಕೆಳಗಿನಂತಿದೆ

ಅನುಸೂಚಿತ ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:9676/CALL-2, ಅನುಸೂಚಿತ ಪರಿಶಿಷ್ಟ ಜಾತಿಗೆ ಮೀಸಲಿಟ್ಟ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:9814, ಸಾಮಾನ್ಯ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು: 9674/CALL-2 , 9686/CALL-2 9301/CALL-6, 9326/CALL-5,CAT-I ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು:9233/Call-2

1)ಇ–ಪೊಕ್ಯೂರಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ:22–01–2026 ಸಾಯಂಕಾಲ 17:00 ಘಂಟೆವರೆಗೆ 2)ಇ–ಪೊಕ್ಯೂರಮೆಂಟ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ:23–01–2026 ಬೆಳಿಗ್ಗೆ 11:00 ಘಂಟೆ ನಂತರ 3)ಭರ್ತಿ ಮಾಡಿದ ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ:ತಾಂತ್ರಿಕ ಬಿಡ್ ಅನುಮೋದಿಸಿದ ನಂತರ, ಕಾಮಗಾರಿ ಮುಕ್ತಾಯಗೊಳಿಸಬೇಕಾದ ಅವಧಿಯು ಮಳೆಗಾಲವನ್ನು ಒಳಗೊಂಡಿರುತ್ತದೆ.

ಸೂಚನೆ:–ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ https://kppp.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು. ನೀ. & ನೈ. ವಿಭಾಗ, ಬೆಳಗಾವಿ.

DIPR/BGM/RO-NO-1629/KSMCA/2025-26

ಸಿಡಿಮದ್ದು ಸ್ಫೋಟ: ರೈತ ಗಂಭೀರ

ಮಧುಗಿರಿ: ಕಾಡು ಹಂದಿ ಬೇಟೆಗೆ ಅಕ್ರಮವಾಗಿ ಇಟ್ಟಿದ್ದ ಸಿಡಿಮದ್ದು ಸ್ಫೋಟಗೊಂಡು ರೈತರೊಬ್ಬರು ಗಂಭೀರವಾಗಿ ಗಾಯಗೊಂಡಿರುವುದು ತುಮಕೂರು ಜಿಲ್ಲೆ ಮಧುಗಿರಿ ತಾಲೂಕಿನ ವೀರನಾಗೇನಹಳ್ಳಿಯಲ್ಲಿ ಮಂಗಳವಾರ ಬೆಳಗ್ಗೆ ನಡೆದಿದೆ. ರೈತ ಗೋಪಾಲಪ್ಪ (66) ಗಾಯಾಳು. ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಅವಘಡ ನಡೆದಿದೆ. ಸಿಡಿಮದ್ದು ಸ್ಫೋಟದಿಂದ ಗಂಭೀರ ಗಾಯಗಳಾಗಿವೆ. ಗಾಯಗೊಂಡ ರೈತನ ಕುಟುಂಬಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ಸರ್ಕಾರ ಆಯುಷ್ ಇಲಾಖೆ
ಜಿಲ್ಲಾ ಪಂಚಾಯತ್, ಹಾಸನ
ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಆಯುಷ್ ಇಲಾಖೆ, ಹೊಸಲೈನ್ ರಸ್ತೆ, ಹಾಸನ–573201
E-mail: dao.hassan09@gmail.com ದೂರವಾಣಿ ಸಂ:08172–272272

ಸಂ: ಜಿಆಕಹಾ/23/ಔ.ಖ/2025–26 ದಿನಾಂಕ: 09.01.2026

ಇ–ಟೆಂಡರ್ ಪ್ರಕಟಣೆ

ಹಾಸನ ಜಿಲ್ಲಾ ಆಯುಷ್ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಆಯುಷ್ ಆಸ್ಪತ್ರೆ/ಚಿಕಿತ್ಸಾಲಯಗಳಿಗೆ 2025–26ನೇ ಸಾಲಿಗೆ ಆಯುರ್ವೇದ ಔಷಧಿಗಳನ್ನು ಇ–ಟೆಂಡರ್ ಮುಖಾಂತರ ಖರೀದಿಸಲು ಅರ್ಹ ತಯಾರಕರು/ವಿತರಕರು/ಏಜೆನ್ಸಿ ಅಥವಾ ಖಾಸಗಿಯವರಿಂದ ಅಧಿಸೂಚನೆ ಸಂಖ್ಯೆ: AYD/2025-26/IND0151ರಲ್ಲಿ ದಿನಾಂಕ:09-01-2026 ರಿಂದ ದಿ: 23–01–2026ರವರೆಗೆ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಟೆಂಡ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.kppp.karnataka.gov.inನಲ್ಲಿ ಅಥವಾ ಜಿಲ್ಲಾ ಆಯುಷ್ ಕಛೇರಿ, ಹಾಸನ ಇಲ್ಲಿ ಸಂಪರ್ಕಿಸಬಹುದು.

ಸಹಿ/– ಜಿಲ್ಲಾ ಆಯುಷ್ ಅಧಿಕಾರಿಗಳು, ಜಿಲ್ಲಾ ಆಯುಷ್ ಕಛೇರಿ, ಹಾಸನ ಜಿಲ್ಲೆ.

ವಾಸಾಸಂಇ/ಹಿಸನಿ/ಹಾಸನ/921/ಕೆಎಸ್‌ಎಂಸಿಎ/2025–26

ಉಪನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸಮಗ್ರ ಶಿಕ್ಷಣ ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ, ಚಿಕ್ಕಮಗಳೂರು.

ಸಂಖ್ಯೆ:ಸಶಿಕ.ಸಿ2.ಹೊಗು.ಸೇ/07/2024–25. ದಿನಾಂಕ: 07/01/2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

2025–26ನೇ ಸಾಲಿಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆಯ ಜಿಲ್ಲಾ ಎಸ್.ಎಸ್.ಕೆ ಕಛೇರಿ ಮತ್ತು ಬ್ಲಾಕ್ ಬಿ.ಆರ್.ಸಿ ಕಛೇರಿಗಳಿಗೆ 9 ಕಂಪ್ಯೂಟರ್ ಪ್ರೋಗ್ರಾಮರ್, 8 ಲೆಕ್ಕ ಸಹಾಯಕರು, 10 ಡೇಟಾ ಎಂಟ್ರಿ ಆಪರೇಟರ್ ಮತ್ತು 8 ಗ್ರೂಪ್ 'ಡಿ' ಹುದ್ದೆಗಳಿಗೆ ಸೇವೆಯನ್ನು ಹೊರ ಸಂಪನ್ಮೂಲದ ಏಜೆನ್ಸಿಯ ಮುಖಾಂತರ ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಇ–ಟೆಂಡರ್ ಅಹ್ವಾನಿಸಲಾಗಿದೆ. ಇಚ್ಛೆಯುಳ್ಳ ಸಂಸ್ಥೆಯವರು ಟೆಂಡರ್ ದಾಖಲೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ದಿನಾಂಕ:23/01/2026ರ ಸಂಜೆ: 5.00 ಗಂಟೆವರೆಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ https://kppp. karnataka.gov.in/#/portal/portal-home ಅವಕಾಶ ಕಲ್ಪಿಸಲಾಗಿರುತ್ತದೆ. ಹಾಗೂ ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ (ದೂರವಾಣಿ ಸಂಖ್ಯೆ:08262–295959).

ಸಹಿ/– ಉಪನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸ.ಶಿ.ಕ ಶಾ.ಶಿ.ಇ. ಚಿಕ್ಕಮಗಳೂರು.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/25–26/139/1618

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಉಗ್ರಾಣ ಮತ್ತು ಖರೀದಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು - 560 027.

ಸಂಖ್ಯೆ: ಬೆಂಮಸಾಸಂಸ್ಥೆ/ಕೇಕ/ಉ&ಖನಿ/13/2025–26 ದಿನಾಂಕ: 13.01.2026

ಟೆಂಡರ್ ಆಹ್ವಾನ ಪ್ರಕಟಣೆ

ಬೆಂ.ಮ.ಸಾ.ಸಂಸ್ಥೆಗೆ ಈ ಕೆಳಗೆ ನಮೂದಿಸಿರುವ ಬಿಡಿಭಾಗಗಳನ್ನು/ಸೇವೆಗಳನ್ನು ಪಡೆಯಲು **KPP Portal** ನ ಮೂಲಕ ಟೆಂಡರನ್ನು ಆಹ್ವಾನಿಸಿದ್ದು, ಆಸಕ್ತರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ವಿವರ	ಕೆಪಿಪಿ ಮೂಲಕ ಬಿಡ್‌ನ್ನು ಸಲ್ಲಿಸಲು ಕೊನೆ ದಿನಾಂಕ
		ಅಲ್ಪಾವಧಿ ಟೆಂಡರ್	
1	BMTC/2025-26/ IND0249	ಲಘು ವಾಹನ ಚಾಲನಾ ಸಿಮ್ಯುಲೇಟರ್‌ನ ಸರಬರಾಜು, ಅಳವಡಿಕೆ, ಕಾರ್ಯಾರಂಭ ಮತ್ತು ನಿರ್ವಹಣೆ ಬಗ್ಗೆ.	24-01-2026 at 12:30 Hrs.
2	BMTC/2025-26/ IND0250	ಟೈರ್‌ಗಳು, ಟ್ಯೂಬ್‌ಗಳು, ಫ್ಲಾಪ್ ಸೆಟ್ ಟ್ಯೂಬ್‌ಲೆಸ್ ರೇಡಿಯಲ್ ಟೈರ್‌ಗಳು, ಹೆಚ್ಚುವರಿ ಟ್ಯೂಬ್‌ಗಳ ಫ್ಲಾಪ್‌ಗಳ ಖರೀದಿ ಬಗ್ಗೆ	24-01-2026 at 12:30 Hrs.
		ನಿಯಮಿತ ಟೆಂಡರ್	
3	BMTC/2025-26/ IND0251	ಕಾರ್ ವಾಶಿಂಗ್ ಹೋಸ್ ಪೈಪ್,ಅಲ್ಯೂಮಿನಿಯಂ ಡೋರ್ ಹ್ಯಾಂಡಲ್, ಡೋರ್ ಲಾಕ್ LH & RH ಇತ್ಯಾದಿ ಸಾಮಾನ್ಯ ವಸ್ತುಗಳ ಖರೀದಿ ಬಗ್ಗೆ.	02-02-2026 at 17:00 Hrs.
4	BMTC/2025-26/ IND0252	ಅಲ್ಯೂಮಿನಿಯಂ ಪಾಪ್ ರಿವೆಟ್ಸ್‌ಗಳ ಖರೀದಿ ಬಗ್ಗೆ.	02-02-2026 at 17:00 Hrs.
5	BMTC/2025-26/ IND0253	ಇಂಡಸ್ಟ್ರಿಯಲ್ ಗ್ಯಾಸ್ ಖರೀದಿಯ ಬಗ್ಗೆ.	02-02-2026 at 17:00 Hrs.
6	BMTC/2025-26/ IND0254	ಫ್ಯಾನ್ ಬೆಲ್ಟ್‌ಗಳ ಖರೀದಿ ಬಗ್ಗೆ.	02-02-2026 at 17:00 Hrs.
7	BMTC/2025-26/ IND0255	FIP ಬಿಡಿಭಾಗಗಳ ಖರೀದಿ ಬಗ್ಗೆ.	20-02-2026 at 17:00 Hrs.
8	BMTC/2025-26/ IND0256	ಕ್ಯೂರಿಂಗ್ ಎನ್ವಲಪ್ಸ್‌ಗಳ ಖರೀದಿ ಬಗ್ಗೆ.	03-02-2026 at 17:00 Hrs.
9	BMTC/2025-26/ IND0257	80 GSM A4 ಗಾತ್ರದ ಫೋಟೋಕಾಪಿಯರ್ ಪೇಪರ್ ಖರೀದಿ ಬಗ್ಗೆ.	03-02-2026 at 17:00 Hrs.
10	BMTC/2025-26/ IND0258	ಎಲ್ಇಡಿ ರೂಫ್ ಲ್ಯಾಂಪ್ ಅಸೆಂಬ್ಲಿಯ ಖರೀದಿ ಬಗ್ಗೆ.	03-02-2026 at 17:00 Hrs.
11	BMTC/2025-26/ IND0259	ಆಟೋ ಎಲೆಕ್ಟ್ರಿಕಲ್ ಐಟಮ್ಸ್‌ಗಳ ಖರೀದಿ ಬಗ್ಗೆ	20-02-2026 at 17:00 Hrs.

ಈ ಮೇಲಿನ ಟೆಂಡರ್‌ಗಳಿಗೆ ಸಂಬಂಧಿಸಿದ ವಿವರಗಳನ್ನು https://kppp.karnataka.gov.in ನಿಂದ ಪಡೆಯಬಹುದು.
ಮುಂದುವರೆದು, ಸಾಮಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕದಲ್ಲಿ ಯಾವುದೇ ಸೇರ್ಪಡೆ / ತಿದ್ದುಪಡಿ ಇದ್ದಲ್ಲಿ KPP–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಗೊಳಿಸಲಾಗುವುದು.
ಸೂಚನೆ: ಆಸಕ್ತಿಯುಳ್ಳ ಬಿಡ್‌ದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಕೆಪಿಪಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಿಂದ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು (ಟೆಂಡರ್ ಕರೆಯುವ ಪ್ರಾಧಿಕಾರಿ)

ರನ್ ವೇ ರಾಜಕೀಯ ಪ್ರಮುಖವೇ? ಸಿಎಂ, ಡಿಸಿಎಂ ನಡೆಗೆ ಬಿಜೆಪಿ ಟೀಕೆ
ಜರ್ಮನಿ ಚಾನ್ಸಲರ್ ಸ್ವಾಗತಕ್ಕೆ ತೆರಳದ ಸಿಎಂ, ಡಿಸಿಎಂ

ಬೆಂಗಳೂರು: ಜರ್ಮನ್ ಚಾನ್ಸೆಲರ್ ಸ್ವಾಗತದ

ವಿಚಾರವೀಗ ರಾಜಕೀಯ ಚರ್ಚಾಸ್ಪದವಾಗಿದ್ದು, ರಾಜ್ಯ ಸರಕಾರದ ನಡೆಗೆ ಬಿಜೆಪಿ ಟೀಕೆ ವ್ಯಕ್ತಪಡಿಸಿದೆ.

ಜರ್ಮನ್ ಚಾನ್ಸೆಲರ್ ಅವರನ್ನು ರಾಜ್ಯಕ್ಕೆ ಸ್ವಾಗತಿಸಿದ್ದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್. ಈ ವೇಳೆ ಸಿಎಂ ಹಾಗೂ ಡಿಸಿಎಂ ರಾಹುಲ್ ಗಾಂಧಿ ಭೇಟಿಗಾಗಿ ಮೈಸೂರಿಗೆ ತೆರಳಿದ್ದರು. ಈ ನಡೆಗೆ ಪ್ರತಿಪಕ್ಷ ನಾಯಕ ಆರ್.ಅಶೋಕ ಹಾಗೂ ಶಾಸಕ ಸುರೇಶ್ ಕುಮಾರ್ ಸೇರಿದಂತೆ ಬಿಜೆಪಿ ನಾಯಕರು ಟೀಕಿಸಿದ್ದಾರೆ. ಜರ್ಮನ್ ಚಾನ್ಸೆಲರ್ ಸ್ವಾಗತಕ್ಕಿಂತ ರನ್ ವೇ ರಾಜಕೀಯವೇ ಮುಖ್ಯವಾಯ್ತಾ ಎಂದು ಪ್ರಶ್ನಿಸಿದ್ದಾರೆ.

ಸಿಎಂ, ಡಿಸಿಎಂ ವಿರುದ್ಧ ಅಶೋಕ ಟೀಕೆ: ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅಶೋಕ, ತಪ್ಪಿದ ಆದ್ಯತೆಗಳು, ತಪ್ಪಿದ ಅವಕಾಶಗಳು! ಇಂದು, ಜರ್ಮನ್ ಫೆಡರಲ್ ಚಾನ್ಸೆಲರ್ ಕರ್ನಾಟಕಕ್ಕೆ ಭೇಟಿ ನೀಡಿದರು – ನಮ್ಮ ರಾಜ್ಯಕ್ಕೆ ಅಪಾರ ರಾಜತಾಂತ್ರಿಕ, ಆರ್ಥಿಕ ಮತ್ತು ಕಾರ್ಯತಂತ್ರದ ಮಹತ್ವದ ಕ್ಷಣ. ಬೇರೆ ಯಾವುದೇ ಜವಾಬ್ದಾರಿಯುತ ಮುಖ್ಯಮಂತ್ರಿಗಳು ಅಂತಹ ಭೇಟಿಗೆ ಅರ್ಹವಾದ ಗಂಭೀರತೆ ನೀಡಲಾಗಿದೆ ಎಂದು ವೈಯಕ್ತಿಕವಾಗಿ ಖಚಿತಪಡಿಸಿಕೊಳ್ಳುತ್ತಿದ್ದರು. ಯಾಕೆಂದರೆ, ಇದು ಕರ್ನಾಟಕಕ್ಕೆ ಹೂಡಿಕೆ, ಕೈಗಾರಿಕೆ, ಉದ್ಯೋಗ ಮತ್ತು ದೀರ್ಘಕಾಲೀನ ಬೆಳವಣಿಗೆಗೆ ಒಂದು ಅವಕಾಶವಾಗಿದೆ. ಆದರೆ ಇಂದಿನ ಪರಿಸ್ಥಿತಿಯನ್ನು ನೋಡಿ ಅಂತ ಟೀಕಿಸಿದ್ದಾರೆ.

ರಾಹುಲ್ ಗಾಂಧಿ ಸ್ವಾಗತಿಸಲು ಹೋದರು: ಜರ್ಮನ್ ಚಾನ್ಸೆಲರ್ ಬೆಂಗಳೂರಿಗೆ ಬಂದಿಳಿದಾಗ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಊಟಿಗೆ ಪ್ರಯಾಣಿಸುತ್ತಿದ್ದ ರಾಹುಲ್ ಗಾಂಧಿ ಅವರನ್ನು ಸ್ವಾಗತಿಸಲು ಮೈಸೂರಿನಲ್ಲಿ ಇರಲು ಆಯ್ಕೆ ಮಾಡಿಕೊಂಡರು ಅಂತ ಟೀಕಿಸಿದ್ದಾರೆ. ಅಲ್ಲದೆ, ಅದು ಅರ್ಥವಾಗಲಿ. ವಿಶ್ವದ ಬಲಿಷ್ಠ ಆರ್ಥಿಕತೆಗಳಲ್ಲಿ ಒಂದಾದ ರಾಷ್ಟ್ರದ ಮುಖ್ಯಸ್ಥರನ್ನು ಸ್ವಾಗತಿಸು ವುದನ್ನು ಹಿಂದಿನ ಸ್ಥಾನಕ್ಕೆ ಇಳಿಸಲಾಯಿತು. ಕರ್ನಾಟಕದ ಜಾಗತಿಕ ಸ್ಥಾನಮಾನಕ್ಕಿಂತ ರಾಜಕೀಯ ನಿಷ್ಠೆ ಮತ್ತು ಹೈಕಮಾಂಡ್ ಮೆಚ್ಚಿಸುವಿಕೆ ಆದ್ಯತೆ ಪಡೆದು ಕೊಂಡಿದೆ. ಇದು ಕೇವಲ ಕೆಟ್ಟ ದೃಷ್ಟಿಕೋನವಲ್ಲ, ಇದು ರಾಜ್ಯದ ಹಿತಾಸಕ್ತಿಗಳ ಬಗ್ಗೆ ನಿರ್ಲಕ್ಷ್ಯ ಪ್ರತಿ ಬಿಂಬಿಸುತ್ತದೆ. ಪಕ್ಷಕ್ಕಿಂತ ಮೊದಲು ರಾಜ್ಯವನ್ನು, ಅಧಿಕಾರ ರಾಜಕೀಯಕ್ಕಿಂತ ಮೊದಲು ರಾಜ್ಯದ ಪ್ರಗತಿಯನ್ನು ಮತ್ತು ರಾಜಕೀಯ ಸಮಾಧಾನಕ್ಕಿಂತ ಮೊದಲು ಜಾಗತಿಕ ಅವಕಾಶಗಳನ್ನು ಇಡುವ ನಾಯಕತ್ವವನ್ನು ಕರ್ನಾಟಕಕ್ಕೆ ಅರ್ಹವಾಗಿದೆ. ಕರ್ನಾಟಕವು ಇದಕ್ಕಿಂತ ಉತ್ತಮವಾದದ್ದನ್ನು ಬಯಸುತ್ತದೆ ಎಂದು ವಿಪಕ್ಷ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

ಎಸ್‌ಎಂಕೆ ನೆನೆದ ಸುರೇಶ್ ಕುಮಾರ್

ಇನ್ನು ಮಾಜಿ ಸಚಿವ, ಹಾಲಿ ಶಾಸಕ ಸುರೇಶ್ ಕುಮಾರ್ ಕೂಡ ಈ ಬಗ್ಗೆ ಪೋಸ್ಟ್ ಮಾಡಿ ಅಸಮಾಧಾನ ಹೊರಹಾಕಿದ್ದಾರೆ. ರಾಜ್ಯ ಶಿಷ್ಟಾಚಾರದಲ್ಲಿ ಎಂತಹ ನಿರ್ಗಮನ! ಜರ್ಮನ್ ಚಾನ್ಸೆಲರ್ ರಾಜ್ಯಕ್ಕೆ ಭೇಟಿ ನೀಡಿದ್ದಾರೆ. ಎಂ.ಬಿ. ಪಾಟೀಲ್ ಅವರನ್ನು ಬರಮಾಡಿಕೊಳ್ಳಲು ವಿಮಾನ ನಿಲ್ದಾಣಕ್ಕೆ ಭೇಟಿ ನೀಡಿದ್ದಾರೆ. ಇದು 20 ವರ್ಷಗಳ ಹಿಂದೆ ಸಂಭವಿಸಿದ್ದರೆ, ಮುಖ್ಯಮಂತ್ರಿ ಕೃಷ್ಣ ಬಹುಶಃ ಮೈಸೂರಿಗೆ ಎಲ್‌ಒಪಿ ರಾಹುಲ್ ಗಾಂಧಿಯವರನ್ನು ಅಲ್ಲ, ಜರ್ಮನ್ ಚಾನ್ಸೆಲರ್ ಅವರನ್ನು ಸ್ವಾಗತಿಸಲು ಆಯ್ಕೆ ಮಾಡಿಕೊಳ್ಳುತ್ತಿದ್ದರು ಎಂದು ಟೀಕಿಸಿದ್ದಾರೆ.

ಜೈಲಿನೊಳಗೆ ತಂಬಾಕು ಎಸೆತಕ್ಕೆ ಯತ್ನ: ಮೂವರ ಸೆರೆ

ಕಲಬುರಗಿ: ನಗರದ ಹೊರವಲಯದಲ್ಲಿರುವ ಕೇಂದ್ರ ಕಾರಾಗೃಹದೊಳಗೆ ಅಕ್ರಮವಾಗಿ ನಿಷೇಧಿತ ವಸ್ತುಗಳನ್ನು ಎಸೆಯಲು ಯತ್ನಿಸಿದ ಮೂವರು ಆರೋಪಿಗಳನ್ನು ಕಾರಾಗೃಹದ ಭದ್ರತಾ ಪಡೆ ಬಂಧಿಸಿದೆ. ಸೋಮವಾರ ಮಧ್ಯಾಹ್ನ ಕಾರಾಗೃಹದ ಕಾಂಪೌಂಡ್ ಗೋಡೆಯ ಮೇಲಿಂದ ಬಿಡಿಸಿಗರೇಟ್ ಪ್ಯಾಕ್‌ಗಳನ್ನು ಎಸೆಯುತ್ತಿದ್ದ ವೇಳೆ ಭದ್ರತಾ ಸಿಬ್ಬಂದಿ ತಕ್ಷಣ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಹಿಡಿದಿದ್ದಾರೆ. ಬಂಧಿತರಿಂದ ನಿಷೇಧಿತ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಂಧಿತರನ್ನು ಪಿಂಟು ಅನಿಲ್ ಜಾಧವ್ ಹಾಗೂ ವಿಜಯ್ ಹವಳಪ್ಪ ಎಂದು ಗುರುತಿಸಲಾಗಿದ್ದು, ಮೂವರು ಕಲಬುರಗಿ ನಗರದ ಬಸವನಗರ ನಿವಾಸಿಗಳಾಗಿದ್ದಾರೆ.

ಕರ್ನಾಟಕ ಸರ್ಕಾರ
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

1. KMCRI/SUP(5)/Anatomy/Tender-01/434/2025-26 Dated 09.01.2026
2. KMCRI/SUP(5)/Anatomy/Tender-01/435/2025-26 Dated 09.01.2026
3. KMCRI/SUP(5)/Anatomy/Tender-01/436/2025-26 Dated 12.01.2026
4. KMCRI/SUP(5)/Neurosurgery/Tender-01/439/2025-26 Dated 12.01.2026

ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ನಿರ್ದೇಶಕರು, ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಹುಬ್ಬಳ್ಳಿ ಇವರು **ಅರ್ಹ ಟೆಂಡರದಾರರು, ಉತ್ಪಾದಕರು, ಅಧಿಕೃತ ಏಜೆಂಟ್ಸ್ ಮತ್ತು ಅಧಿಕೃತ ವಿತರಕರಿಂದ** ಕೆ.ಎಂ.ಸಿ.&ಆರ್.ಐ. ಆಸ್ಪತ್ರೆಗೆ ಅವಶ್ಯವಿರುವ **Neurosurgery** ವಿಭಾಗಕ್ಕೆ **1) Neuro Navigation,** ಮತ್ತು **Anatomy** ವಿಭಾಗದ **1) 3-D Virtual Anatomy Dissection Table, 2) Automatic Tissue Processor, 3) Semi Automatic Microtome** ಒಟ್ಟು **04** ವೈದ್ಯಕೀಯ ಉಪಕರಣಗಳನ್ನು ಪೂರೈಸುವುದಕ್ಕಾಗಿ ಕರ್ನಾಟಕ ಪಾರದರ್ಶಕ ಸಾರ್ವಜನಿಕ ಪೂರೈಕೆ ಕಾಯ್ದೆ 1999 ಶಾಸನ 2000 ಅನ್ವಯ ಇ–ಟೆಂಡರ್ ಮೂಲಕ ಟೆಂಡರ್ ಪ್ರಕಟಣೆ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು, ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **htpps://ww.kppp.karnataka.gov.in** ನಲ್ಲಿ ಪಡೆಯಬಹುದು. ಟೆಂಡರ್‌ನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– (ನಿರ್ದೇಶಕರು)
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

ಜಿಲ್ಲಾ ಪಂಚಾಯತ್ ಬೆಂಗಳೂರು ಗ್ರಾಮಾಂತರ ಜಿಲ್ಲೆ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳ ಕಛೇರಿ
ಕೊಠಡಿ ಸಂ.14, ಜಿಲ್ಲಾಡಳಿತ ಭವನ, ಬೀರಸಂದ್ರ, ದೇವನಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಸಂಖ್ಯೆ: NTEP/DTC/BR/LAB/02/2025-26 ದಿನಾಂಕ: 12.01.2026

ಇ–ಟೆಂಡರ್ ಪ್ರಕಟಣೆ Call-2 (ದ್ವಿ ಲಕೋಟೆ ಪದ್ಧತಿ)

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾ ವ್ಯಾಪ್ತಿಯಡಿ ಕಾರ್ಯನಿರ್ವಹಿಸುತ್ತಿರುವ ಸೂಕ್ಷ್ಮದರ್ಶಕ ಕೇಂದ್ರಗಳಿಗೆ ಅವಶ್ಯಕವಿರುವ ಪ್ರಯೋಗಶಾಲಾ ಸಾಮಾಗ್ರಿ/ ರಾಸಾಯನಿಕಗಳನ್ನು ಸರಬರಾಜು ಮಾಡುವ ಕುರಿತಂತೆ **ರೂ 16.00 ಲಕ್ಷಗಳು** ಅನುಮೋದನೆಯಾಗಿದ್ದು, ಸದರಿ ಉಪಕರಣಗಳನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್ಮೆಂಟ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತರು ವೆಬ್‌ಸೈಟ್ **www.kppp.karnataka.gov.in** ರ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮೂಲಕ ಸಲ್ಲಿಸಬಹುದು.

ಟೆಂಡರ್ ವೇಳಾಪಟ್ಟಿ: (1) ಇ–ಪ್ರೊಕ್ಯೂರ್ಮೆಂಟ ಮೂಲಕ ಖಾಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮೂಲಕ ಪಡೆಯುವ ದಿನಾಂಕ: **14.01.2026** ರಿಂದ **(2)** ಇ–ಪ್ರೊಕ್ಯೂರ್ಮೆಂಟ ಮೂಲಕ ಖಾಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: **28.01.2026 ಸಂಜೆ 5.30 ವರೆಗೆ. (3)** ಟೆಂಡರ್‌ನ ಅಂದಾಜು ಮೊತ್ತ **ರೂ. 16 ಲಕ್ಷಗಳು. (4)** ಇ.ಎಂ.ಡಿ ಮೊತ್ತ ಟೆಂಡರ್ ಮೊತ್ತಕ್ಕೆ ಶೇ.2.5% ರಷ್ಟು **(ರೂ 40,000/–) (5)** ಟೆಂಡರ್‌ಅನ್ನು ತೆರೆಯುವ ದಿನಾಂಕ **(ಅ)** ತಾಂತ್ರಿಕ ಬಿಡ್: **30.01.2026 ಬೆಳಗ್ಗೆ 11.30 ಗಂಟೆಗೆ (ಆ)** ವಾಣಿಜ್ಯ ಬಿಡ್: ತಿಳಿಸಲಾಗುವುದು **(6)** ಟೆಂಡರ್ ತೆರೆಯುವ ಸ್ಥಳ **(Online bid Opening):** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಕೊಠಡಿ ಸಂಖ್ಯೆ. 207, ಜಿಲ್ಲಾಡಳಿತ ಭವನ, ಬೀರಸಂದ್ರ ದೇವನಹಳ್ಳಿ ತಾಲ್ಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆ. ಹೆಚ್ಚಿನ ಮಾಹಿತಿಗಾಗಿ: **www.kppp.karnataka.gov.in** ಮೂಲಕ ಮಾಹಿತಿಯನ್ನು ಪಡೆಯಬಹುದು. ಕಛೇರಿ ಫೋನ್ ನಂ: 080–29787461, 9663409534 ಇ–ಮೇಲ್: **dtokablr@rntcp.org.**

ಸಹಿ/– ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳು,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ
ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಾಸಾಸಂಇ/ವಾ.ಪ್ರ/ಎಎಎ/5014/2025–26

ಇರಾನ ಹೈರಾಣ

← ಮೊದಲ ಪುಟದಿಂದ

ಅಮೆರಿಕ ಯುದ್ಧೋನ್ಮಾದ: ಆಡಳಿತ ವಿರೋಧಿ ಪ್ರತಿಭಟನೆಯನ್ನು ಹತ್ತಿಕ್ಕಿ, ಪ್ರತಿಭಟನಾಕಾರರ ಸಾವಿಗೆ ಕಾರಣವಾಗುತ್ತಿರುವ ಇರಾನ್ ವಿರುದ್ಧ ದಾಳಿ ಮಾಡುವ ಬೆದರಿಕೆ ಹಾಕಿರುವ ಅಮೆರಿಕ, ತಮ್ಮ ದೇಶದ ನಾಗರಿಕರಿಗೆ ಇರಾನ್ ತೊರೆಯುವಂತೆ ಸೂಚನೆ ನೀಡಿದೆ. ಇರಾನ್‌ನಾದ್ಯಂತ ಪ್ರತಿಭಟನೆಗಳು ಹೆಚ್ಚುತ್ತಿದ್ದು, ಹಿಂಸಾತ್ಮಕವಾಗಿ ಬದಲಾಗಬಹುದು. ಇದರ ಪರಿಣಾಮವಾಗಿ ಬಂಧನ ಮತ್ತು ಜೀವಹಾನಿ ಸಂಭವಿಸಬಹುದು. ಹೆಚ್ಚಿದ ಭದ್ರತಾ ಕ್ರಮಗಳು, ರಸ್ತೆ ಮುಚ್ಚುವಿಕೆ, ಸಾರ್ವಜನಿಕ ಸಾರಿಗೆ ಅಡಚಣೆಗಳು ಮತ್ತು ಇಂಟರ್‌ನೆಟ್ ನಿರ್ಬಂಧಗಳು ಮುಂದುವರಿದಿವೆ ಎಂದು ಎಚ್ಚರಿಕೆ ನೀಡಿದೆ.

ಶ್ರೇಷ್ಠ ಇರಾನ್ ರಾಷ್ಟ್ರವು ಶತ್ರುಗಳ ಮುಂದೆ ತನ್ನ ದೃಢನಿಶ್ಚಯ ಮತ್ತು ಗುರುತನ್ನು ಪ್ರತಿಪಾದಿಸಿದೆ. ಇದು ಅಮೆರಿಕದ ರಾಜಕಾರಣಿಗಳಿಗೆ ಒಂದು ಎಚ್ಚರಿಕೆಯಾಗಿದೆ. ಅವರು ತಮ್ಮ ಮೋಸದ ಕೃತ್ಯಗಳನ್ನು ನಿಲ್ಲಿಸಬೇಕು ಮತ್ತು ದೇಶದ್ರೋಹಿ ಪ್ರತಿಭಟನಾಕಾರರನ್ನು ಬೆಂಬಲಿಸುವುದನ್ನು ನಿಲ್ಲಿಸಬೇಕು. ಇರಾನ್ ರಾಷ್ಟ್ರವು ಬಲಿಷ್ಠವಾಗಿದ್ದು, ಶಕ್ತಿಶಾಲಿಯಾಗಿದೆ ಮತ್ತು ಜಾಗೃತವಾಗಿದೆ. ಶತ್ರುವಿನ ಬಗ್ಗೆ ಅದಕ್ಕೆ ತಿಳಿದಿದೆ. ಯಾವಾಗಲೂ ವಾಸ್ತವವನ್ನು ಆಧರಿಸಿ ಕಾರ್ಯಾಚರಿಸುತ್ತದೆ.

–ಅಯತೊಲ್ಲ ಖಮೇನಿ ಇರಾನ್‌ನ ಸರ್ವೋಚ್ಚ ನಾಯಕ

ನರೇಗಾ ವಾಪಸಾಗೋ ತನಕ ಹೋರಾಟ

← ಮೊದಲ ಪುಟದಿಂದ

ಈ ವಿಷಯವನ್ನು ಮುಂದಿಟ್ಟುಕೊಂಡು ಗ್ರಾಮ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಬೃಹತ್ ಆಂದೋಲನವಾಗಬೇಕು. ಉತ್ತರ ಭಾರತದಲ್ಲಿ ಕಾಯಿದೆಗಳ ಬದಲಾವಣೆಗೆ ರೈತರು ಹೋರಾಡಿದಂತೆ ಹೋರಾಟ ಮಾಡಬೇಕು. ನರೇಗಾ ರದ್ದುಪಡಿಸಿರುವುದನ್ನು ಪಕ್ಷ ಗಂಭೀರವಾಗಿ ಪರಿಗಣಿಸಿದೆ. ಆದ್ದರಿಂದ ನರೇಗಾ ವಾಪಸಾಗುವ ತನಕ ಹೋರಾಟ ನಡೆಸಿ ಎಂದು ಹೇಳಿದರು. ನಿರ್ಲಕ್ಷಿಸಿದರೆ ಕಠಿಣ ಕ್ರಮ: ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಎಐಸಿಸಿಯವರು ಕಾರ್ಯಕಾರಿ ಸಮಿತಿ ಸಭೆ ಮಾಡಿ, ಈ ವಿಚಾರವಾಗಿ ಪಕ್ಷದ ವತಿಯಿಂದ ಯಾವ ರೀತಿ ಹೋರಾಟ ಮಾಡಬೇಕು ಎಂದು ನಿರ್ದೇಶನ ನೀಡಿದ್ದಾರೆ. ಮೊದಲ ಹಂತದಲ್ಲಿ ಎಲ್ಲ ಜಿಲ್ಲೆಗಳಲ್ಲಿ ಉಸ್ತುವಾರಿ ಸಚಿವರುಗಳು ಬಂದು ಸುದ್ದಿಗೋಷ್ಠಿ ನಡೆಸಿ ಮಾತನಾಡಲಿದ್ದಾರೆ. ತಾಲೂಕು ಮಟ್ಟಗಳಲ್ಲಿ ಸ್ಥಳೀಯ ನಾಯಕರು ಸುದ್ದಿಗೋಷ್ಠಿ ನಡೆಸಬೇಕು. ಪರಿಷತ್ ಸದಸ್ಯರು, ಸಂಸದರು, ಶಾಸಕರಿಲ್ಲದ ಕ್ಷೇತ್ರಗಳಿಗೆ ವೀಕ್ಷಕರಾಗಿ ನೇಮಕ ಮಾಡಿದ್ದು, ಎಲ್ಲರೂ ಮಾಧ್ಯಮಗೋಷ್ಠಿ ಮಾಡಬೇಕು. ಎಐಸಿಸಿ ನಿರ್ದೇಶನ ನೀಡಿರುವ ಎಲ್ಲ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಮಾಡಲೇಬೇಕು. ಇದನ್ನು ಪಾಲಿಸದ ವೀಕ್ಷಕರು, ಪದಾಧಿಕಾರಿಗಳ ಬಗ್ಗೆ ವರದಿ ನೀಡಿ ಎಂದು ಎಐಸಿಸಿ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಲಾಗಿದ್ದು, ಇದರಲ್ಲಿ ಆಸಕ್ತಿ ತೋರದವರನ್ನು ಕಿತ್ತು ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು.

ಬ್ಯಾನರ್ ಹಾಕಿದ್ದಕ್ಕೆ ಎಫ್‌ಐಆರ್

ಬೆಂಗಳೂರು: ನಟ ಯಶ್ ಜನ್ಮದಿನದ ಹಿನ್ನಲೆಯಲ್ಲಿ ರಸ್ತೆಯಲ್ಲಿ ಬ್ಯಾನರ್ ಹಾಕಿದ್ದಕ್ಕೆ ವೇಣು ಕ್ರಿಯೇಶನ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಜ.8ರಂದು ನಟ ಯಶ್ ಹುಟ್ಟುಹಬ್ಬದ ಹಿನ್ನೆಲೆ ಗಾಲ್ಫ್ ಕ್ಲಬ್ ಮುಂದೆ ಅವರ ಮನೆಯ ಎದುರು ಬ್ಯಾನರ್ ಹಾಕಲಾಗಿತ್ತು. ಹುಟ್ಟುಹಬ್ಬ ಶುಭಕೋರಿ ಹಾಕಲಾಗಿದ್ದ ಸಾಕಷ್ಟು ಫ್ಲೆಕ್ಸ್‌ಗಳನ್ನು ಹಾಕಿಸಲಾಗಿತ್ತು. ಈ ಹಿನ್ನೆಲೆ ಜಿಬಿಎ ಅಧಿಕಾರಿಗಳು ದೂರು ದಾಖಲಿಸಿದ್ದಾರೆ. ದೂರಿನಲ್ಲಿ ವೇಣು ಕ್ರಿಯೇಶನ್ ಅವರನ್ನು ಆರೋಪಿತರನ್ನಾಗಿ ಉಲ್ಲೇಖಿಸಿದ್ದು, ದೂರಿನನ್ವಯ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

(ಕೃಷಿ ಇಲಾಖೆ)
ಸಹಾಯಕ ಕೃಷಿ ನಿರ್ದೇಶಕರ ಕಾರ್ಯಾಲಯ, ತಾಲ್ಲೂಕು ಪಂಚಾಯ್ತಿ ಕಛೇರಿ ಆವರಣ, ಗೌರಿಬಿದನೂರು–561208
ದೂರವಾಣಿ ಸಂಖ್ಯೆ: 08155–284863, Email Id:adagbnr2@gmail.com

ಸಂ:ಸಕೃನಿ/ಗೌರಿ/ಪಿ.ಎಂ.ಕೆ.ಎಸ್.ವೈ–2.0/ಕಾಮಗಾರಿ/2025–26 ದಿನಾಂಕ: 05.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

2025–26 ನೇ ಸಾಲಿನಲ್ಲಿ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ– ಜಲಾನಯನ ಅಭಿವೃದ್ಧಿ ಘಟಕ–2.0 ಮಣ್ಣು ಮತ್ತು ನೀರು ಸಂರಕ್ಷಣಾ ಘಟಕದಡಿ ಹುದುಗೂರು ಉಪ ಜಲಾನಯನ ವ್ಯಾಪ್ತಿಗೆ ಒಳಪಡುವ ವಿವಿಧ ಗ್ರಾಮಗಳಲ್ಲಿ ಮಣ್ಣು ಮತ್ತು ನೀರು ಸಂರಕ್ಷಣಾ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ದರಪಟ್ಟಿಗಳನ್ನು ಇ–ಟೆಂಡರ್‌ನ್ನು **https://eproc.karnataka.gov.in** ನಲ್ಲಿ ಕರೆಯಲಾಗಿದೆ.

ಮಣ್ಣು ಮತ್ತು ನೀರು ಸಂರಕ್ಷಣಾ ಕಾಮಗಾರಿಗಳ ಇ–ಟೆಂಡರ್ ವಿವರ (e-Tender Notification)

Sl No	Work details	Tender amount (Rs Lakhs)	Last Date and time for receipt of tenders	Date and time for opening of financial bid	Reservation
1	AD/2025-26/OW/WORK_INDENT154(Construction of Check Dam-01 at Yaranahenahalli Village, DpalyaHobli)	RS. 5.41204/-	17.01.2026 05:30 PM	19.01.2026 11:00 AM	Cat-II(A)
2	AD/2025-26/OW/WORK_INDENT171(Construction of Check Dam-02 at Yaranahenahalli Village, DpalyaHobli)	Rs. 5.81984/-	17.01.2026 05:30 PM	19.01.2026 11:00 AM	SC
3	AD/2025-26/OW/WORK_INDENT172(Construction of Check Dam-01 at HuduguruVillage, DpalyaHobli)	Rs. 5.74757/-	17.01.2026 05:30 PM	19.01.2026 11:00 AM	SC
4	AD/2025-26/OW/WORK_INDENT173(Construction of Check Dam-02 at Huduguru Village, DpalyaHobli)	Rs. 6.15257/-	17.01.2026 05:30 PM	19.01.2026 11:00 AM	Others
5	AD/2025-26/OW/WORK_INDENT174(Construction of Check Dam-03 at Huduguru Village, DpalyaHobli)	Rs. 6.14935/-	17.01.2026 05:30 PM	19.01.2026 11:00 AM	Others
6	AD/2025-26/OW/WORK_INDENT175(Construction of Check Dam-01at GulaginjanahalliVillage, DpalyaHobli)	Rs. 6.94416/-	17.01.2026 05:30 PM	19.01.2026 11:00 AM	Cat-II(A)
7	AD/2025-26/OW/WORK_INDENT176(Construction of Check Dam-01 at D.PalyaVillage, DpalyaHobli)	Rs. 5.70264/-	17.01.2026 05:30 PM	19.01.2026 11:00 AM	Others
8	AD/2025-26/OW/WORK_INDENT177(Construction of Check Dam-02 at D.Palya Village, DpalyaHobli)	Rs. 5.71266/-	17.01.2026 05:30 PM	19.01.2026 11:00 AM	Others
9	AD/2025-26/OW/WORK_INDENT178(Construction of Check Dam-03 at D.Palya Village, DpalyaHobli)	Rs. 5.74717/-	17.01.2026 05:30 PM	19.01.2026 11:00 AM	Others

ಸಹಿ/–ಸಹಾಯಕ ಕೃಷಿ ನಿರ್ದೇಶಕರು, ಗೌರಿಬಿದನೂರು ತಾಲ್ಲೂಕು

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:365/ಕೆಎಸ್‌ಎಂಸಿಎ/2025–26

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪರು–3 ರವರ ಕಛೇರಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು–560052.

ಸಂಖ್ಯೆ: ಡಿಜಿಎಂ–3/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/20/2025–26 ದಿನಾಂಕ: 13.01.2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐರಿಫ್‌ಟಿ)
(ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ ವೆಬ್‌ಸೈಟ್ **(https://kppp.karnataka.gov.in)** ನಿಂದ ಪ್ರತಿ ಕಾರ್ಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಶುಲ್ಕವನ್ನು ಪಾವತಿಸಿದ ನಂತರ ಡೌನ್‌ಲೋಡ್ ಮಾಡಬಹುದು (ಮರುಪಾವತಿಸಲಾಗುವುದಿಲ್ಲ) ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ ಮೂಲಕ ಇ–ಪಾವತಿ ರೂಪದಲ್ಲಿ ಪಾವತಿಸಬಹುದು. ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಬೇಕು.

ಕ್ರ. ಸಂ	ಕಾಮಗಾರಿಯ ಹೆಸರು	ಕಾಮಗಾರಿಗಳ ಅಂದಾಜು ಮೊತ್ತ (ಲಕ್ಷಗಳಲ್ಲಿ)	ಮೊತ್ತ (ರೂ. ಗಳಲ್ಲಿ)	ಸೇವಾ ಒಪ್ಪಂದದ ನಿಗದಿತ ಅವಧಿ
1	ಸೀಗೆಹಳ್ಳಿ ಎಂಎಸ್‌ಡಬ್ಲ್ಯೂ ಸಂಸ್ಕರಣಾ ಘಟಕಗಳಲ್ಲಿನ ಸಿವಿಲ್ ರಚನೆಗಳ ದುರಸ್ತಿ ಮತ್ತು ರಿಪೇರಿ ಕಾಮಗರಿ	127.24	ರೂ. 1.00 ಲಕ್ಷವನ್ನು ಇ–ಪೇಮೆಂಟ್ ಮೂಲಕ ಕೆಳಗಿನ ಮಾರ್ಗಗಳಲ್ಲಿ, ಅಂದರೆ ಆನ್‌ಲೈನ್/ RTGS/ NEFT / OTC ಮೂಲಕ ಮತ್ತು ಉಳಿದ ರೂ. 1,00,000/– ಅನ್ನು ರಾಷ್ಟ್ರೀಯೀಕೃತ/ ಷೆಡ್ಯೂಲ್ ಬ್ಯಾಂಕ್ ನೀಡಿದ ಬ್ಯಾಂಕ್ ಗ್ಯಾರಂಟಿ/ FDR ಮೂಲಕ.	05 ತಿಂಗಳು
2	ಚಿಕ್ಕನಗಮಂಗಲ ಎಂಎಸ್‌ಡಬ್ಲ್ಯೂ ಸಂಸ್ಕರಣಾ ಘಟಕಗಳಲ್ಲಿನ ಸಿವಿಲ್ ರಚನೆಗಳ ದುರಸ್ತಿ ಮತ್ತು ರಿಪೇರಿ ಕಾಮಗರಿ	151.43	ರೂ. 1.00 ಲಕ್ಷವನ್ನು ಇ–ಪೇಮೆಂಟ್ ಮೂಲಕ ಕೆಳಗಿನ ಮಾರ್ಗಗಳಲ್ಲಿ, ಅಂದರೆ ಆನ್‌ಲೈನ್/ RTGS/ NEFT / OTC ಮೂಲಕ ಮತ್ತು ಉಳಿದ ರೂ. 1,27,145/– ಅನ್ನು ರಾಷ್ಟ್ರೀಯೀಕೃತ/ ಷೆಡ್ಯೂಲ್ ಬ್ಯಾಂಕ್ ನೀಡಿದ ಬ್ಯಾಂಕ್ ಗ್ಯಾರಂಟಿ/ FDR ಮೂಲಕ.	05 ತಿಂಗಳು

ಕಾರ್ಯಕ್ರಮಗಳ ವೇಳಾಪಟ್ಟಿ: 1. ಬಿಡ್ ಪೂರ್ವ ಸಭೆಯು **ದಿನಾಂಕ: 17.01.2026 ರ ಮಧ್ಯಾಹ್ನ 3.00 ಗಂಟೆಗೆ** ಮುಖ್ಯ ಎಂಜಿನಿಯರ್ ಮತ್ತು ಮುಖ್ಯ ಜನರಲ್ ಮ್ಯಾನೇಜರ್ (ಟೆಕ್), ಬಿಎಸ್‌ಡಬ್ಲ್ಯೂಎಂಎಲ್, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು–560052 ಅವರ ಕಛೇರಿಯಲ್ಲಿ ನಡೆಯಲಿದೆ. **2.** ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 22.01.2026 ರ ಸಂಜೆ 4.00 ಗಂಟೆಗೆ** ಮುಂಚಿತವಾಗಿ. **3.** ಕೆಪಿಪಿ ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 23.01.2026 ರಂದು ಸಂಜೆ 4.30** ರ ನಂತರ.

ಸೂಚನೆ: 1. ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್‌ನಲ್ಲಿ ನೋಂದಾಯಿತವಾಗದ ಬಿಡ್ಡರ್‌ಗಳು/ಕಾಂಟ್ರಾಕ್ಟರ್‌ಗಳು ವೆಬ್‌ಸೈಟ್ **(https://kppp.karnataka.gov.in)** ಮೂಲಕ ಭಾಗವಹಿಸಲು ನೋಂದಾಯಿಸಬೇಕು **(https://kppp.karnataka.gov.in). 2.** ಬಿಡ್‌ದಾರರು ಬಿಡ್ ದಾಖಲೆಯಲ್ಲಿನ ಟೆಂಡರ್ ಷರತ್ತುಗಳಂತೆ ಅರ್ಹತಾ ಮಾನದಂಡ ಪೂರೈಸಬೇಕಾಗುತ್ತದೆ. **3.** ಆನ್‌ಲೈನ್ ಬಿಡ್‌ಗಳನ್ನು ಸಲ್ಲಿಸುವ ಮೊದಲು, ಬಿಡ್‌ದಾರರು ಎಲ್ಲಾ ಅಗತ್ಯ ದಾಖಲೆಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಬಿಡ್‌ಗೆ ಸೇರಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಬೇಕು. **4.** ಬಿಡ್‌ಗಳಿಗೆ ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ತುಂಬಬೇಕು ಮತ್ತು ಆನ್‌ಲೈನ್‌ನಲ್ಲಿ ಸಲ್ಲಿಸಬೇಕು. **5.** ವಿವರಗಳಿಗೆ, ನೋಂದಣಿ ಮತ್ತು ಇ–ಪೇಮೆಂಟ್‌ಗಾಗಿ GOK ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ಗೆ ಭೇಟಿ ನೀಡಿ ಅಥವಾ ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ ಸಹಾಯ ಕೇಂದ್ರವನ್ನು ಸಂಪರ್ಕಿಸಿ. ಯಾವುದೇ ತಿದ್ದುಪಡಿ/ ಅನುಬಂಧವನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3
ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾ.ಪ್ರ/ಎಎಎ/4973/2025–26

ಶಿವಮೊಗ್ಗ ಡಿಸಿ ಹೆಸರಲ್ಲಿ ನಕಲಿ ವಾಟ್ಸಾಪ್

ಶಿವಮೊಗ್ಗ: ನೂತನ ಜಿಲ್ಲಾಧಿಕಾರಿ

ಯಾಗಿ ಅಧಿಕಾರ ವಹಿಸಿಕೊಂಡಿರುವ ಪ್ರಭುಲಿಂಗ ಕವಳಿಕಟ್ಟಿ ಹೆಸರಿನಲ್ಲಿ ಸೈಬರ್ ವಂಚಕರು ವಿದೇಶಿ ನಂಬರ್ ಬಳಸಿ ವಾಟ್ಸಾಪ್ ಸಂದೇಶ ಕಳುಹಿಸಿದ್ದು, ಜನರು ಜಾಗರೂಕರಾಗಿರುವಂತೆ ಜಿಲ್ಲಾಧಿಕಾರಿಗಳೇ ಮನವಿ ಮಾಡಿದ್ದಾರೆ.

ಜಿಲ್ಲಾಧಿಕಾರಿಗಳ ಹೆಸರು ಮತ್ತು ಅವರ ಅಧಿಕೃತ ಭಾವಚಿತ್ರವನ್ನು ದುರ್ಬಳಕೆ ಮಾಡಿಕೊಂಡಿರುವ ಸೈಬರ್ ವಂಚಕರು, +84 56 455 2858 ಎಂಬ ವಿದೇಶಿ ವಾಟ್ಸಾಪ್ ಸಂಖ್ಯೆಯ ಮೂಲಕ ಸಾರ್ವಜನಿಕರಿಗೆ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳಿಗೆ ನಕಲಿ ಸಂದೇಶಗಳನ್ನು ರವಾನಿಸುತ್ತಿದ್ದಾರೆ. ಈ ಕುರಿತು ಮಾಹಿತಿ ಹಂಚಿಕೊಂಡಿರುವ ಜಿಲ್ಲಾಧಿಕಾರಿಗಳು, ಆ ನಕಲಿ ಸಂದೇಶದ ಸ್ಕ್ರೀನ್‌ಶಾಟ್ ಅನ್ನು ಹಂಚಿಕೊಳ್ಳುವ ಮೂಲಕ ಅದರ ಸತ್ಯಾಸತ್ಯತೆಯನ್ನು ಸ್ಪಷ್ಟಪಡಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಹಾಸನ: ಕಾಡಾನೆ ದಾಳಿಗೆ ಮಹಿಳೆ ಬಲಿ

ಹಾಸನ: ತಾಲೂಕಿನ ಮೂಗಲಿ ಗ್ರಾಮದಲ್ಲಿ ಕಾಡಾನೆ ದಾಳಿಗೆ ಮಹಿಳೆಯೊಬ್ಬರು ಮೃತಪಟ್ಟ ದಾರುಣ ಘಟನೆ ನಡೆದಿದೆ. ಮೂಗಲಿ ಗ್ರಾಮದ ಶೋಭಾ (40) ಮೃತ ಮಹಿಳೆ. ಬೆಳಗ್ಗೆ ತೋಟಕ್ಕೆ ತೆರಳುತ್ತಿದ್ದ ವೇಳೆ ಮಹಿಳೆಯ ಮೇಲೆ ದಾಳಿ ಮಾಡಿದ್ದು, ಆನೆ ತುಳಿತಕ್ಕೆ ಶೋಭಾ ಸ್ಥಳದಲ್ಲೇ ಮೃತಪಟ್ಟಿರುವ ಮಾಹಿತಿ ಲಭ್ಯವಾಗಿದೆ. ಆನೆಯು ಇತ್ತೀಚೆಗೆ ಕೊಡಗಿನಿಂದ ಹಾಸನದತ್ತ ಬಂದಿತ್ತು ಎನ್ನಲಾಗುತ್ತಿದೆ.

ತಾಯಿ ರಾಜಮ್ಮ ಜತೆ ಶೋಭಾ ಕಾಫಿ ತೋಟಕ್ಕೆ ಹೊರಟ್ಟಿದ್ದರು. ಈ ವೇಳೆ ಆನೆ ಏಕಾಏಕಿ ದಾಳಿ ಮಾಡಿದೆ. ರಾಜಮ್ಮ ಓಡಿ ಹೋಗಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆದರೆ, ಆನೆಯು ಶೋಭಾ ಅವರನ್ನು ಕಾಲು ಕೆಳಗೆ ಹಾಕಿ ತುಳಿದಿದ್ದರಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ರಾಜಮ್ಮ ಅವರು ಬೆಳಗೋಡು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾಗಿದ್ದು, ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಜಿಲ್ಲೆಯಲ್ಲಿ ಕಾಡಾನೆ ಹಾಗೂ ಮಾನವನ ನಡುವಿನ ಸಂಘರ್ಷ ಮುಂದುವರೆದಿದ್ದು, ಕಳೆದ ವರ್ಷದ ಫೆಬ್ರವರಿ–ಮಾರ್ಚ್ ತಿಂಗಳಿನಲ್ಲೇ ಕಾಡಾನೆ ದಾಳಿಗೆ ನಾಲ್ವರು ಮೃತಪಟ್ಟ ವರದಿಯಾಗಿತ್ತು. ಸ್ಥಳಕ್ಕೆ ಅರಣ್ಯಾಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಾದಿಗ ಬಲವರ್ಧನೆಗೆ ಸಂಘಟನೆ ಅನಿವಾರ್ಯ

ಕಲಬುರಗಿ: ಮಾದಿಗ ಸಮುದಾಯವನ್ನು ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಸಬಲಗೊಳಿಸಲು 'ಮಾದರ ಮಹಾಸಭಾ' ಮೂಲಕ ಸಂಘಟಿತರಾಗುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು. ಜೇವರ್ಗಿ ಪಟ್ಟಣದ ಎಪಿಎಂಸಿ ಆವರಣದಲ್ಲಿ ಆಯೋಜಿಸಲಾಗಿದ್ದ ಶಿವಶರಣ ಮಾದಾರ ಚನ್ನಯ್ಯನವರ 975ನೇ ಜಯಂತಿ, ಬೃಹತ್ ಜನಜಾಗೃತಿ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು. ಮಾದಿಗ ಸಮಾಜವು ಸುದೀರ್ಘ ಕಾಲದಿಂದ ಶೋಷಣೆಗೆ ಒಳಗಾಗಿದೆ. ಒಳಮೀಸಲಾತಿ ಅನುಷ್ಠಾನದ ಫಲವಾಗಿ ನಮ್ಮ ವಿದ್ಯಾರ್ಥಿಗಳಿಗೆ ವೈದ್ಯಕೀಯ ಸೇರಿದಂತೆ ಉನ್ನತ ಶಿಕ್ಷಣದಲ್ಲಿ ಅವಕಾಶಗಳು ದೊರೆಯುತ್ತಿವೆ. ಸಮುದಾಯದ ಅಭಿವೃದ್ಧಿಗಾಗಿ ಎಲ್ಲಾ ರಾಜಕೀಯ ಪಕ್ಷಗಳ ಭೇದ ಮರೆತು ಒಂದು ವೇದಿಕೆಯಡಿ ಬರಬೇಕು. ಶಿಕ್ಷಣವೊಂದೇ ಸಮಾಜದ ಉದ್ಧಾರಕ್ಕೆ ಇರುವ ಏಕೈಕ ದಾರಿ ಎಂದು ಪ್ರತಿಪಾದಿಸಿದರು.

ಭೀಮಣ್ಣ ಖಂಡ್ರೆ ಆರೋಗ್ಯದಲ್ಲಿ ಚೇತರಿಕೆ

ಬೀದರ್: ಲಿಂಗೈಕ್ಯ ಚನ್ನಬಸವಪಟ್ಟದ್ದೇವರಿಂದಲೇ ಲೋಕನಾಯಕ ಎಂಬ ಬಿರುದು ಪಡೆದಿದ್ದ ಶತಾಯುಷಿ ಭೀಮಣ್ಣ ಖಂಡ್ರೆ ಅವರ ಆರೋಗ್ಯ ಸ್ಥಿರವಾಗಿದ್ದು, ಯಾವುದೇ ವದಂತಿಗಳಿಗೆ ಕಿವಿಗೊಡದಂತೆ ಸಚಿವ ಈಶ್ವರ್ ಬಿ ಖಂಡ್ರೆ ಮನವಿ ಮಾಡಿದ್ದಾರೆ. ಕಳೆದ ಒಂದು ವಾರದಿಂದ ವಯೋಸಹಜ ಕಾಯಿಲೆ ಮತ್ತು ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದ ಅವರನ್ನು ಬೀದರ್‌ನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಈಗ ಮನೆಯಲ್ಲಿಯೇ ಅವರಿಗೆ ವೈದ್ಯರು ಚಿಕಿತ್ಸೆ ಮುಂದುವರಿಸಿದ್ದು, ಆರೋಗ್ಯ ಸ್ಥಿರವಾಗಿದೆ ಎಂದು ತಿಳಿಸಿದ್ದಾರೆ. ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಪೂಜ್ಯ ತಂದೆಯವರ ಕುರಿತಂತೆ ಸುಳ್ಳು ಸುದ್ದಿಗಳನ್ನು ಹಬ್ಬಿಸುತ್ತಿದ್ದು, ಯಾರೂ ವದಂತಿಗಳಿಗೆ ಕಿವಿಗೊಡಬಾರದು. ತಮ್ಮ ತಂದೆಯವರ ಆರೋಗ್ಯ ಸುಧಾರಣೆಗಾಗಿ ಪ್ರಾರ್ಥಿಸಬೇಕು ಎಂದು ಕೇಳಿಕೊಂಡಿದ್ದಾರೆ.

ಮೈಸೂರಿನಲ್ಲಿ ಸಿಎಂ, ಡಿಸಿಎಂ ಭೇಟಿಯಾದ ರಾಗಾ | ಸಂಪುಟ ಪುನಾರಚನೆ ಬಗ್ಗೆ ಯಾವುದೇ ಚರ್ಚೆಯಾಗಿಲ್ಲ: ಸಿಎಂ

ಶೀಘ್ರವೇ ಸಭೆ ಆಯೋಜಿಸುವ ಭರವಸೆ ನೀಡಿದ ರಾಹುಲ್ ಗಾಂಧಿ | ದೆಹಲಿಯಲ್ಲಿ ಚರ್ಚೆಗೆ ನಾಯಕರು ತೀರ್ಮಾನ

ಮೈಸೂರಿನಲ್ಲಿ ಚರ್ಚೆ ಇಲ್ಲ: ದಿಲ್ಲಿಗೆ ಕರೆಯುವ ಭರವಸೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ಉದ್ಭವಿಸಿರುವ ಗೊಂದಲಗಳ ನಡುವೆಯೇ ತಮಿಳುನಾಡಿನ ಕಾರ್ಯಕ್ರಮದಲ್ಲಿ ಭಾಗವಹಿಸಲು ಮೈಸೂರಿಗೆ ಆಗಮಿಸಿದ್ದ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರೊಂದಿಗೆ ದೆಹಲಿ ಯಲ್ಲಿಯೇ ಗೊಂದಲಗಳ ಕುರಿತಾಗಿ ಚರ್ಚಿಸುವ ಹಾಗೂ ಇಬ್ಬರನ್ನು ದೆಹಲಿಗೆ ಕರೆಸಿಕೊಳ್ಳುವ ಭರವಸೆ ನೀಡಿದ್ದಾರೆ ಎನ್ನಲಾಗಿದೆ.

ಮೈಸೂರಿನ ವಿಮಾನ ನಿಲ್ದಾಣಕ್ಕೆ ಆಗಮಿಸಿದ ರಾಹುಲ್ ಗಾಂಧಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ವಾಗತಿಸಲು ತೆರಳಿದ್ದರು. ಸ್ವಾಗತಿಸುವ ವೇಳೆ ಯಾವುದೇ ಚರ್ಚೆ ನಡೆಯದಿದ್ದರೂ, ಗಡ್ಲೂರಿನಿಂದ ಮೈಸೂರಿಗೆ ವಾಪಸಾಗಿ, ದೆಹಲಿಗೆ ತೆರಳುವ ಸಮಯದಲ್ಲಿ ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಇಬ್ಬರೂ ಪ್ರತ್ಯೇಕ ಸಭೆ ನಡೆಸಿದ್ದಾರೆ. ಈ ವೇಳೆ ಡಿಕೆಶಿಗೆ 'ಶೀಘ್ರದಲ್ಲಿಯೇ ದೆಹಲಿಗೆ ಕರೆಸಿ ಕೊಳ್ಳುವ ಭರವಸೆಯನ್ನು ರಾಹುಲ್ ಗಾಂಧಿ ನೀಡಿ ದ್ದಾರೆ ಎಂದು ಮೂಲಗಳು ತಿಳಿಸಿವೆ.

ಮೈಸೂರಿಗೆ ಆಗಮಿಸಿದ ವೇಳೆಯೇ ಸಂಪುಟ ಪುನಾರಚನೆ ಅಥವಾ ನಾಯಕತ್ವ ಗೊಂದಲಕ್ಕೆ ಸಂಬಂಧಿಸಿದಂತೆ ತೆರೆ ಬೀಳಲಿದೆ ಎನ್ನುವ ಮಾತುಗಳು ಕೇಳಿಬಂದಿತ್ತು.

ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರನ್ನು ಡಿಸಿಎಂ ಡಿ.ಕೆ. ಶಿವಕುಮಾರ್ ಮೈಸೂರಿನಲ್ಲಿ ಭೇಟಿ ಮಾಡಿದರು.

ಆದರೆ ಭೇಟಿಯ ವೇಳೆ ಯಾವುದೇ ಮಹತ್ವದ ತೀರ್ಮಾನ ಕೈಗೊಳ್ಳದಿದ್ದರೂ, ದೆಹಲಿಗೆ ಕರೆಸಿಕೊಳ್ಳುವ ಭರವಸೆ ನೀಡಿರುವುದು ಡಿ.ಕೆ.ಶಿವಕುಮಾರ್ ಪಾಳಯದಲ್ಲಿ ಹೊಸ ಉತ್ಸಾಹ ತುಂಬಿದೆ ಎನ್ನುವುದು ಸ್ಪಷ್ಟ.

ವಿಮಾನ ನಿಲ್ದಾಣದಲ್ಲಿಯೇ ಪ್ರತ್ಯೇಕ ಚರ್ಚೆ: ರಾಹುಲ್ ಗಾಂಧಿ ಅವರನ್ನು ಸ್ವಾಗತಿಸಲು ಸಿಎಂ, ಡಿಸಿಎಂ ಇಬ್ಬರೂ ಮೈಸೂರಿಗೆ ತೆರಳಿದ್ದರು. ಬಳಿಕ ತಮಿಳುನಾಡಿನ ಕಾರ್ಯಕ್ರಮ ಮುಗಿಸಿಕೊಂಡು ದೆಹಲಿಗೆ ತೆರಳುವ ಮೊದಲು ರಾಹುಲ್ ಗಾಂಧಿ ಅವರೊಂದಿಗೆ ಡಿ.ಕೆ. ಶಿವಕುಮಾರ್ ಪ್ರತ್ಯೇಕ ಸಭೆ ನಡೆಸಿದ್ದಾರೆ. ದೆಹಲಿಯಿಂದ ಆಗಮಿಸಿದ ವೇಳೆ ಯಾವುದೇ ಚರ್ಚೆ ನಡೆಯದಿದ್ದರೂ, ವಾಪಸು ಹೋಗುವಾಗ ರಾಹುಲ್ ಗಾಂಧಿ ಅವರೊಂದಿಗೆ ರನ್‌ವೇ ಬಳಿಯೇ ಪಕ್ಕಕ್ಕೆ ಕರೆದುಕೊಂಡು ಹೋಗಿ ಚರ್ಚಿಸಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಮೈಸೂರಿನಲ್ಲಿ ಸಿಎಂ ಹೇಳಿದ್ದೇನು?

- ಅಧಿಕಾರ ಹಂಚಿಕೆ ವಿಚಾರದಲ್ಲಿ ವರಿಷ್ಠರ ತೀರ್ಮಾನವೇ ಅಂತಿಮ
- ಅಧಿಕಾರ ಹಂಚಿಕೆ ಬಗ್ಗೆ ನಾನು ಅಥವಾ ಶಿವಕುಮಾರ್ ಮಾತಾಡಬೇಕು
- ಮಾರ್ಚ್ ಮೊದಲ ವಾರದಲ್ಲಿ ಬಜೆಟ್ ಮಂಡಿಸುವ ಸಾಧ್ಯತೆ
- ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಸರಕಾರ ಸಿದ್ಧ

ಫೆ.13ರಂದು ಹಾವೇರಿಯಲ್ಲಿ ಸಾಧನಾ ಸಮಾವೇಶ?

ಇನ್ನು ಎರಡನೇ ಅವಧಿಯಲ್ಲಿ ಮುಖ್ಯಮಂತ್ರಿಯಾಗಿ ಸಾವಿರ ದಿನಗಳನ್ನು ಪೂರೈಸಿರುವ ಹಿನ್ನಲೆಯಲ್ಲಿ ಫೆಬ್ರವರಿ 13ರಂದು ಹಾವೇರಿಯಲ್ಲಿ ಸಾಧನಾ ಸಮಾವೇಶವನ್ನು ಆಯೋಜಿಸುವ ಬಗ್ಗೆ ಚಿಂತನೆ ನಡೆಸಲಾಗಿದೆ. ಬಹುತೇಕ ಮಾರ್ಚ್ ಮೊದಲ ವಾರದಲ್ಲಿ ಬಜೆಟ್ ಮಂಡಿಸಲಾಗುವುದು. ಇನ್ನು ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಸರಕಾರ ಸಿದ್ಧವಿದೆ. ಬಿಜೆಪಿ – ಜೆಡಿಎಸ್‌ನಿಂದ ಪಾಲಿಕೆ ಚುನಾವಣೆಗಳಲ್ಲಿ ಯಾವುದೇ ಪರಿಣಾಮ ಉಂಟಾಗುವುದಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಧಿಕಾರ ಹಂಚಿಕೆಯ ಗೊಂದಲವಿಲ್ಲ: ಸಿದ್ದರಾಮಯ್ಯ

ರಾಹುಲ್ ಗಾಂಧಿ ಭೇಟಿಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ ಸಿದ್ದರಾಮಯ್ಯ ಅವರು, ರಾಜ್ಯ ಕಾಂಗ್ರೆಸ್‌ನಲ್ಲಿ ಯಾವುದೇ ಗೊಂದಲವಿಲ್ಲ. ಇದೆಲ್ಲ ಮಾಧ್ಯಮಗಳ ಸೃಷ್ಟಿ. ನಮ್ಮ ಪಕ್ಷದ ಶಾಸಕರು ಮಾತನಾಡುತ್ತಿರುವ ಬಗ್ಗೆ ಗೊತ್ತಿಲ್ಲ. ನಾನು ಅಥವಾ ಉಪಮುಖ್ಯಮಂತ್ರಿ ಡಿ.ಕೆಶಿವಕುಮಾರ್ ಈ ಬಗ್ಗೆ ಮಾತನಾಡಬೇಕು. ಈಗಾಗಲೇ ಅಧಿಕಾರ ಹಂಚಿಕೆ ವಿಚಾರದಲ್ಲಿ ಅಂತಿಮವಾಗಿ ಪಕ್ಷದ ವರಿಷ್ಠರ ತೀರ್ಮಾನದಂತೆ ನಡೆದುಕೊಳ್ಳಲಾಗುವುದು ಎಂದು ಹೇಳಿದ್ದೇವೆ. ಅದಕ್ಕೆ ಬದ್ಧ. ಅಧಿಕಾರ ಹಂಚಿಕೆ ಬಗ್ಗೆ ಶಾಸಕರಿಗಿಂತ ಹೆಚ್ಚಾಗಿ ಮಾಧ್ಯಮಗಳೇ ಹೆಚ್ಚು ಮಾತನಾಡುತ್ತಿವೆ ಎಂದರು.

ಆಲ್–ಇನ್–ಒನ್ ಸೂಪರ್ ಆ್ಯಪ್ ರೈಲ್‌ಒನ್ ಮೂಲಕ ಟಿಕೆಟ್ ಖರೀದಿಗೆ ಸಲಹೆ

ರೈಲ್‌ಒನ್ ಟಿಕೆಟ್ ಬುಕ್ಕಿಂಗ್‌ಗೆ ಶೇ. 3 ರಿಯಾಯಿತಿ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಡಿಜಿಟಲ್ ಪಾವತಿಯನ್ನು ಉತ್ತೇಜಿಸಲು ಮತ್ತು ಪ್ರಯಾಣಿಕರ ಸೌಕರ್ಯ ಹೆಚ್ಚಿಸಲು ಭಾರತೀಯ ರೈಲ್ವೆಯು ಮಹತ್ವದ ನಿರ್ಧಾರ ಕೈಗೊಂಡಿದೆ. ಇನ್ಮುಂದೆ ರೈಲ್ವೆಯ ಆಲ್-ಇನ್-ಒನ್ ಸೂಪರ್ ಆ್ಯಪ್ ಆಗಿರುವ ರೈಲ್‌ಒನ್ ಮೂಲಕ ಕಾಯ್ದಿರಿಸದ ಟಿಕೆಟ್ ಬುಕ್ ಮಾಡುವ ಪ್ರಯಾಣಿಕರಿಗೆ ಶೇ. 3 ರಷ್ಟು ರಿಯಾಯಿತಿ ಸಿಗಲಿದೆ.

ನಗದು ರಹಿತ ವ್ಯವಹಾರಕ್ಕೆ ಉತ್ತೇಜನ: ಪ್ರಸ್ತುತ ರೈಲ್‌ಒನ್ ಆ್ಯಪ್‌ನಲ್ಲಿರುವ 'ಆರ್-ವ್ಯಾಲೆಟ್' ಬಳಸುವವರಿಗೆ ಮಾತ್ರ ಶೇ. 3 ರಷ್ಟು ಕ್ಯಾಶ್‌ಬ್ಯಾಕ್ ನೀಡ ಲಾಗುತ್ತಿತ್ತು. ಆದರೆ ಈಗ ಯೋಜನೆ ಯನ್ನು ವಿಸ್ತರಿಸಲಾಗಿದ್ದು, ಆರ್ - ವ್ಯಾಲೆಟ್ ಹೊರತುಪಡಿಸಿ ಯುಪಿಐ, ಡೆಬಿಟ್/ಕ್ರೆಡಿಟ್ ಕಾರ್ಡ್ ಸೇರಿದಂತೆ ಲಭ್ಯವಿರುವ ಯಾವುದೇ ಡಿಜಿಟಲ್ ಪಾವತಿ ವಿಧಾನಗಳನ್ನು ಬಳಸಿದರೂ ಟಿಕೆಟ್ ದರದಲ್ಲಿ ಶೇ. 3 ರಷ್ಟು ನೇರ ರಿಯಾಯಿತಿ ದೊರೆಯಲಿದೆ.

ಯೋಜನೆಯ ಅವಧಿ: ಈ ವಿಶೇಷ ರಿಯಾಯಿತಿ ಸೌಲಭ್ಯವು 2026ರ ಜನವರಿ 14 ರಿಂದ ಜುಲೈ 14 ರವರೆಗೆ (ಆರು ತಿಂಗಳು) ಲಭ್ಯವಿರಲಿದೆ. ಪ್ರಯಾಣಿಕರು ಸರತಿ ಸಾಲಿನಲ್ಲಿ ನಿಲ್ಲುವ ತೊಂದರೆಯಿಲ್ಲದೆ, ಪಾರದರ್ಶಕವಾಗಿ ಮತ್ತು ವೇಗವಾಗಿ ಟಿಕೆಟ್ ಪಡೆಯಲು ಈ ಆ್ಯಪ್ ಸಹಕಾರಿಯಾಗಲಿದೆ.

ಮುಖ್ಯಾಂಶಗಳು

- ಕಾಯ್ದಿರಿಸದ ಟಿಕೆಟ್ ಬುಕಿಂಗ್ ಮೇಲೆ ಶೇ.3 ರಿಯಾಯಿತಿ
- ಆರ್-ವ್ಯಾಲೆಟ್ ಬಳಸುವವರಿಗೆ ಶೇ. 3 ಬೋನಸ್
- ರಿಯಾಯಿತಿ ಬುಕ್ಕಿಂಗ್ ಯೋಜನೆ ಜ.14 ರಿಂದ ಜಾರಿ
- ನಗದು ರಹಿತ ವ್ಯವಹಾರಕ್ಕೆ ರೈಲ್ವೆ ಇಲಾಖೆ ವಿಶೇಷ ಆದ್ಯತೆ

ಪ್ರಯಾಣಿಕರು ಡಿಜಿಟಲ್ ಇಂಡಿಯಾ ಅಭಿಯಾನದ ಭಾಗವಾಗಿ ರೈಲ್‌ಒನ್ ಆ್ಯಪ್ ಬಳಸುವ ಮೂಲಕ ಈ ರಿಯಾಯಿತಿಯ ಲಾಭ ಪಡೆಯಬೇಕು. ಆಂಡ್ರಾಯ್ ಮತ್ತು ಐಫೋನ್ ಬಳಕೆದಾರರು ಪ್ಲೇ ಸ್ಟೋರ್ ಅಥವಾ ಆ್ಯಪ್ ಸ್ಟೋರ್ ಮೂಲಕ ಈ ಆ್ಯಪ್ ಅನ್ನು ಸುಲಭವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

-ಯೋಗೇಶ್ ಪಾಟೀಲ್, ರೈಲ್ವೆ ಇಲಾಖೆ ವಾಣಿಜ್ಯ ವ್ಯವಸ್ಥಾಪಕ

ಸರಕಾರದ ಖಜಾನೆ ಖಾಲಿ, ಡಮ್ಮಿ ಸಿಎಂ: ಕೇಂದ್ರ ಸಚಿವ ಸೋಮಣ್ಣ

ಚಾಮರಾಜನಗರ: ಸರಕಾರದ ಖಜಾನೆ ಖಾಲಿ ಯಾಗಿದೆ, ಸ್ಥಿರತೆ ಹೋಗಿದೆ. ಸಿದ್ದರಾಮಯ್ಯ ಡಮ್ಮಿ ಸಿಎಂ ಆಗಿದ್ದಾರೆಂದು ಕೇಂದ್ರ ಸಚಿವ ವಿ. ಸೋಮಣ್ಣ ಲೇವಡಿ ಮಾಡಿದ್ದಾರೆ. ಚಾಮರಾಜನಗರದಲ್ಲಿ ವರದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಚಿವ ವಿ. ಸೋಮಣ್ಣ, ಸರಕಾರದ ಹುಳುಕು ಮುಚ್ಚಿಕೊಳ್ಳಲು ಏನ್ ಬೇಕಾದರೂ ಮಾಡುತ್ತಾರೆ. ದೇಶ ಇದ್ದರೆ ನಾವು, ದೇಶಕ್ಕಿಂತ ಯಾರೂ ದೊಡ್ಡವರಿಲ್ಲ. ಈ ಬಗ್ಗೆ ಹಿಂದೆ ಸಲಹೆ ಸೂಚನೆ ಕೊಟ್ಟಿದ್ದೇನೆ. ನಾನು ಹೇಳಿದ್ದು ತಲೆಗೆ ಹೋಗು ತ್ತಿಲ್ಲ ಮಕ್ಕಳ ಆಟ ಅಂತ ಅಂದುಕೊಂಡಿದ್ದಾರೆ ಎಂದು ಕಿಡಿಕಾರಿದ್ದಾರೆ. ಬಳ್ಳಾರಿಯಲ್ಲಿ ಕಾಂಗ್ರೆಸ್ ಮಾಡಿದ ಪಾಪಗಳು ಎಲ್ಲರಿಗೂ ತಿಳಿದಿವೆ. ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕು ಎಂದರು. ಸಚಿವ ಕೆ.ಎಚ್.ಮುನಿಯಪ್ಪ ಹೇಳಿಕೆಗೆ ಪ್ರತಿಕ್ರಿಯಿಸಿದ ಸೋಮಣ್ಣ, ತಮ್ಮ ಸಚಿವ ಸ್ಥಾನವನ್ನು ಉಳಿಸಿಕೊಳ್ಳಲು ಮುಖ್ಯಮಂತ್ರಿ ಸ್ಥಾನದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಮುನಿಯಪ್ಪ ಹೇಳುತ್ತಿದ್ದಾರೆ. ಮುನಿಯಪ್ಪ ಪ್ರಾಮಾಣಿಕವಾಗಿ ಮಾತ 'ನಾಡಲು ಕಲಿಯಬೇಕು ಎಂದು ಹೇಳಿದರು. ಆದಾಗ್ಯೂ, ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನದಲ್ಲಿ ಬದಲಾವಣೆ ಆಗುತ್ತದೆಯೇ ಎಂದು ವರದಿ ಗಾರರು ಅವರನ್ನು ಕೇಳಿದಾಗ ಪ್ರಶ್ನೆಗೆ ಉತ್ತರಿಸದೆ ತೆರಳಿದರು.

ಶಾಸಕಿಗೆ ಅಶ್ಲೀಲ ಕಮೆಂಟ್: ಸೆರೆ

ಚಿಕ್ಕಮಗಳೂರು: ಶಾಸಕಿ ನಯನಾ ಮೋಟಮ್ಮಗೆ ಅಶ್ಲೀಲ ಕಮೆಂಟ್ ಸಂಬಂಧ ರಾಮನಗರ ಮೂಲದ ಯಕ್ಷಿತ್ ರಾಜ್ ಎಂಬಾತನನ್ನು ಮೂಡಿಗೆರೆ ಠಾಣೆ ಪೊಲೀಸರು ಬಂಧಿಸಿದ್ದಾರೆ. ಅಶ್ಲೀಲ ಕಾಮೆಂಟ್ ವಿಚಾರವಾಗಿ ಅಕ್ಟೋಬರ್‌ನಲ್ಲೇ ನಯನಾ ಮೋಟಮ್ಮ ಅವರ ಪಿಎ ದೂರು ನೀಡಿದ್ದರು. ಇದಕ್ಕೆ ಸಂಬಂಧಿಸಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ ಹಾಗೂ ರಾಮನಗರ ಮೂಲದ ಯಕ್ಷಿತ್ ರಾಜ್ ಎಂಬಾತನನ್ನು ಬಂಧಿಸಿದ್ದಾರೆ. ಈತ ಬಟ್ಟೆ ವಿಚಾರವಾಗಿ ಶಾಸಕಿಗೆ ಅಶ್ಲೀಲ ಕಮೆಂಟ್ಸ್ ಮಾಡಿದ್ದ ಎನ್ನಲಾಗಿದೆ. ನನಗೆ ಎರಡು ಇನ್‌ಸ್ಟಾಗ್ರಾಮ್ ಖಾತೆ ಇದೆ. ಒಂದು ರಾಜಕೀಯಕ್ಕೆ ಸಂಬಂಧಿಸಿದ್ದು, ಮತ್ತೊಂದು ನನ್ನ ಪರ್ಸನಲ್. ಕೆಲವರು ವೇಶ್ಯೆ ಎಂದು ಕರೆದಿದ್ದಾರೆ ಎಂದು ಠಾಣೆಗೆ ದೂರು ಕೊಡಲಾಗಿತ್ತು.

ವಿಡಿಯೊ ಹಂಚಿಕೆ: ಎಫ್‌ಐಆರ್

ಕಲಬುರಗಿ: ಯಾದಗಿರಿ ಜಿಲ್ಲಾ ಕ್ರೀಡಾಂಗಣದ ಅವ್ಯವಸ್ಥೆ ಖಂಡಿಸಿ ಪ್ರತಿಭಟನೆ ನಡೆಸಿದ್ದ ಅಥ್ಲೀಟ್ ಲೋಕೇಶ್ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಆರೋಪದ ಮೇಲೆ ತುಮಕೂರು ಮೂಲದ ಶಕುಂತಲಾ ವಿರುದ್ಧ ಇಲ್ಲಿನ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ನಾನಾ ಬೇಡಿಕೆ ಈಡೇರಿಕೆ ಆಗ್ರಹಿಸಿ ಹೋರಾಟ ನಡೆದಿತ್ತು. ಈ ವಿಡಿಯೊ ಹಂಚಿಕೆಯಿಂದ ಸಮಾಜದಲ್ಲಿ ತಪ್ಪು ಸಂದೇಶ ರವಾನೆಯಾಗುತ್ತಿದ್ದು, ಸೌಹಾರ್ದತೆಗೆ ಧಕ್ಕೆ ತರುವಂತಿದೆ ಎಂದು ಆರೋಪಿಸಿ ಕಲಬುರಗಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ದೂರು ನೀಡಿದ್ದರು. ಈ ದೂರಿನನ್ವಯ ಪೊಲೀಸರು ಶಂಕುತಲಾ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬುದ್ಧಿಮಾತಿಗೆ ಬಾಲಕ ಆತ್ಮಹತ್ಯೆ

ತುಮಕೂರು: ಶಾಲೆಗೆ ತಪ್ಪದೇ ಹೋಗು, ಚೆನ್ನಾಗಿ ಓದು–ಬರಹ ಕಲಿ ಎಂದಿದ್ದಕ್ಕೆ ಬಾಲಕನೊಬ್ಬ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಚಿಕ್ಕನಾಯಕನಹಳ್ಳಿ ತಾಲೂಕು ಚೆನ್ನಕಾಟಯ್ಯನಗುಡ್ಲು ಗ್ರಾಮದಲ್ಲಿ ನಡೆದಿದೆ.ಜಗದೀಶ್ (14) ಮೃತ ಬಾಲಕ. ಕೆಂಕೆರೆ ಸರಕಾರಿ ಶಾಲೆಯಲ್ಲಿ 8ನೇ ತರಗತಿಯಲ್ಲಿ ಓದುತ್ತಿದ್ದನು. ಆತನ ತಾಯಿಯ ಕುಟುಂಬ ಅಯ್ಯಪ್ಪ ಮಾಲೆ ಹಾಕಿದ್ದರು. ಈ ಸಂಬಂಧ ಅಲ್ಲಿಗೆ ಹೋಗಿ ಜಗದೀಶ್ ವಾಪಸ್ ಬಂದಿದ್ದ. ನಂತರ ಶಾಲೆಗೆ ಹೋಗಲು ನಿರಾಕರಿಸಿದ್ದ. ಇದರಿಂದ ತಂದೆ ಬುದ್ಧಿವಾದ ಹೇಳಿದ್ದಕ್ಕೆ ಶಾಲೆಗೆ ತೆರಳಿದ್ದ ಬಾಲಕ ಗೆಳೆಯನ ಜತೆಗೆ ಮನೆಗೆ ವಾಪಸ್ ಬರುವಾಗ ಗೆಳೆಯನನ್ನು ಕಳಿಸಿ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಮೊದಲ ಪತ್ನಿಯ ಬರ್ಬರ ಹತ್ಯೆ

ಹಾಸನ: ಪತಿ ಎರಡನೇ ಮದುವೆಯಾಗಿದ್ದನ್ನು ಪ್ರಶ್ನಿಸಿದ್ದಕ್ಕೆ ಮೊದಲ ಪತ್ನಿಯನ್ನು ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಆಲೂರು ತಾಲೂಕಿನ ಯಡೂರಲ್ಲಿ ನಡೆದಿದೆ. ರಾಧಾ (40) ಕೊಲೆಯಾದಕೆ. ಪತಿ ಕುಮಾರ ಕೊಲೆಗೈದ ಆರೋಪಿಯಾಗಿದ್ದಾನೆ. ಕಳೆದ ನಾಲ್ಕು ವರ್ಷಗಳಿಂದ ರಾಧಾ ಪತಿಯಿಂದ ಬೇರೆ ವಾಸವಾಗಿದ್ದಳು. ಕುಮಾರ ಶಬರಿ ಮಲೆಗೆ ತೆರಳಲು ಇರುಮುಡಿ ಕಟ್ಟುವ ವೇಳೆ ಪತ್ನಿ ಸ್ಥಾನದಲ್ಲಿ ಬೇರೊಬ್ಬ ಮಹಿಳೆ ಪೂಜೆ ಮಾಡಿದ ಬಗ್ಗೆ ರಾಧಾಗೆ ಮಾಹಿತಿ ತಿಳಿದಿತ್ತು. ಕುಮಾರ ಶಬರಿಮಲೆಗೆ ಹೋಗಿ ಬಂದ ದಿನವೇ ಇದೇ ವಿಚಾರವನ್ನು ಪ್ರಶ್ನೆ ಮಾಡಿದ್ದಳು. ಜ.10ರ ರಾತ್ರಿ ಯಡೂರಿನಲ್ಲಿ ರಾಧಾಳನ್ನು ಕೊಲೆಮ ಮಾಡಿ ಗಂಡ ಪರಾರಿ ಆಗಿದ್ದಾನೆ. ಈ ಸಂಬಂಧ ಆಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನರೇಗಾ ಬಚಾವ್ ಆಂದೋಲನ ಜನಾಂದೋಲನವಾಗಬೇಕು | ಮಹಾತ್ಮ ಗಾಂಧಿ ಹೆಸರೆಂದರೆ ಬಿಜೆಪಿಗೆ ಅಲರ್ಜಿ: ಸಿಎಂ

ನರೇಗಾ ಯೋಜನೆಯನ್ನು ಕೇಂದ್ರ ಕೊಂದಿದೆ: ಡಿಕೆಶಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಗ್ರಾಮೀಣ ಭಾಗದ ಅಭಿವೃದ್ಧಿಗೆ ನೆರವಾಗಿದ್ದ ಮನರೇಗಾ ಯೋಜನೆಯನ್ನು ಕೇಂದ್ರ ಬಿಜೆಪಿ ಸರಕಾರ ಕೊಂದಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಆಕ್ರೋಶ ವ್ಯಕ್ತಪಡಿಸಿದರು.

ಅರಮನೆ ಮೈದಾನದಲ್ಲಿ ಮಂಗಳವಾರ ನಡೆದ ಮನರೇಗಾ ಬಚಾವ್ ಸಂಗ್ರಾಮ ಹೋರಾಟದ ಪೂರ್ವಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ಸೋನಿಯಾ ಗಾಂಧಿ ಅವರು ಮನಮೋಹನ್ ಸಿಂಗ್ ಅವರ ಸರಕಾರದಲ್ಲಿ ಸಂವಿಧಾನದ ಮೂಲಕ ಬಡವರಿಗೆ ಉದ್ಯೋಗ ಖಾತರಿ ಹಕ್ಕನ್ನು ನೀಡಿದ್ದರು. ಇದರಿಂದ ನಮ್ಮ ರಾಜ್ಯದ ಪಂಚಾಯಿತಿ ಹಾಗೂ ಗ್ರಾಮಗಳ ಮಟ್ಟದಲ್ಲಿ ಪ್ರತಿ ವರ್ಷ 6 ಸಾವಿರ ಕೋಟಿ ಮೊತ್ತದ ಕಾಮಗಾರಿಗಳು ನಡೆಯುತ್ತಿದ್ದವು. ಈ ಕೆಲಸಗಳನ್ನು ಸ್ಥಳೀಯ ಪಂಚಾಯಿತಿ ಸದಸ್ಯರು ತೀರ್ಮಾನ ಮಾಡುತ್ತಿದ್ದರು. ನರೇಗಾ ಉದ್ಯೋಗ ಕಾರ್ಡ್ ಹೊಂದಿರುವವರಿಗೆ ಉದ್ಯೋಗ ನೀಡಬೇಕಿತ್ತು. ಉದ್ಯೋಗ ಸಿಗದಿದ್ದರೆ ಕೂಲಿ ನೀಡಲಾಗುತ್ತಿತ್ತು. ಇದರಲ್ಲಿ ದುರ್ಬಳಕೆ ತಡೆಗಟ್ಟಲು ಹೆಬ್ಬೆರಳಚ್ಚು ಸಂಗ್ರಹ ವಿಧಾನ ಅಳವಡಿಸಿಕೊಳ್ಳಲಾಗಿತ್ತು ಎಂದು ತಿಳಿಸಿದರು.

ನರೇಗಾ ಯೋಜನೆಯಿಂದ ರಾಜ್ಯದ ಪ್ರತಿ ಪಂಚಾಯಿತಿಗಳಿಗೆ ಪ್ರತಿವರ್ಷ ಕನಿಷ್ಠ ಒಂದರಿಂದ ಎರಡು ಕೋಟಿ ರು. ಸರಾಸರಿ ಅನುದಾನ ಸಿಗುತ್ತಿತ್ತು. ಆದರೆ ಕೇಂದ್ರ ಸರಕಾರ ಜಾರಿಗೆ ತಂದಿರುವ ವಿಬಿ ಜಿ ರಾಮ್ ಜಿ ಕಾಯಿದೆಯಿಂದ ಇದೆಲ್ಲದಕ್ಕೂ ಕುತ್ತು ಬಂದಿದೆ. ಈ ಹೊಸ ಕಾಯಿದೆಯಲ್ಲಿ ಗ್ರಾಮಗಳಲ್ಲಿ ಯಾವ ಕಾಮಗಾರಿ ನಡೆಯಬೇಕು ಎಂಬುದನ್ನು ಪಂಚಾಯಿತಿಗಳು ತೀರ್ಮಾನಿಸಲು ಆಗುವುದಿಲ್ಲ. ದೆಹಲಿಯಲ್ಲಿ ಕೂತಿರುವ ಕೇಂದ್ರ ಸರಕಾರ ತೀರ್ಮಾನ ಮಾಡಲಿದೆ. ಇನ್ನು ಈ ಯೋಜನೆಯಲ್ಲಿದ್ದ 90:10 ಅನುಪಾತದ ಅನುದಾನವನ್ನು, 60:40 ಅನುಪಾತಕ್ಕೆ ಬದಲಿಸಿದ್ದು, ಕೇಂದ್ರ ಹಾಗೂ ರಾಜ್ಯ ಸರಕಾರಗಳು ಅನುದಾನ ಹಂಚಿಕೊಳ್ಳಬೇಕಾಗಿದೆ. ಇದರಿಂದ ರಾಜ್ಯ ಸರ್ಕಾರಗಳ ಮೇಲೆ ಹೆಚ್ಚಿನ ಆರ್ಥಿಕ ಹೊರೆ ಬೀಳಲಿದೆ. ಕೇಂದ್ರ ಸರ್ಕಾರ ಎಷ್ಟೇ ಪ್ರಯೋಗ ಮಾಡಿದರೂ ಈ ನೂತನ ಕಾಯ್ದೆಯನ್ನು ಬಿಜೆಪಿ ಆಡಳಿತ ರಾಜ್ಯಗಳಲ್ಲಿ ಜಾರಿಗೆ ತರಲು ಸಾಧ್ಯವಿಲ್ಲ ಎಂದು ಹೇಳಿದರು.

ಈ ಕಾಯ್ದೆ ಜಾರಿ ಅಸಾಧ್ಯ ಎಂದು ಆಂಧ್ರ ಪ್ರದೇಶ ಸಿಎಂ ಚಂದ್ರಬಾಬು ನಾಯ್ಡು ಅವರು ಹೇಳಿದ್ದಾರೆ ಎಂಬ ವರದಿಯನ್ನು ಮಾಧ್ಯಮಗಳಲ್ಲಿ ನೋಡಿದ್ದೇನೆ. ಮನರೇಗಾ ಯೋಜನೆಯಲ್ಲಿ ಬರಗಾಲ ಪೀಡಿತ ಪ್ರದೇಶಗಳಲ್ಲಿ 150 ದಿನಗಳ ಕಾಲ ಉದ್ಯೋಗ ನೀಡುವ ಅವಕಾಶ ಕಲ್ಪಿಸಲಾಗಿತ್ತು. ಕೋವಿಡ್ ನಲ್ಲಿ ಹೆಚ್ಚುವರಿಯಾಗಿ 50 ದಿನ ಕೂಲಿ ನೀಡುವ ಅವಕಾಶವಿತ್ತು. ಆದರೆ ಕೇಂದ್ರ ಸರಕಾರ ಇದ್ಯಾವುದನ್ನೂ ನೀಡಲಿಲ್ಲ. ಇನ್ನು ಈ ಯೋಜನೆಗೆ ಇಡಲಾಗಿದ್ದ ಮಹಾತ್ಮ ಗಾಂಧೀಜಿ ಅವರ ಹೆಸರನ್ನು ಬದಲಿಸಿದ್ದಾರೆ. ಪಂಚಾಯಿತಿಗಳಿಗೆ ಬರುತ್ತಿದ್ದ ಅನುದಾನಕ್ಕೆ ಕತ್ತರಿ ಬಿದ್ದ ಮೇಲೆ ಪಂಚಾಯಿತಿ ಸದಸ್ಯರಿಗೆ ಏನು ಅಧಿಕಾರ, ಕೆಲಸ ಉಳಿಯುತ್ತದೆ? ಈ ಬಗ್ಗೆ ನೀವೆಲ್ಲರೂ ಆಲೋಚನೆ ಮಾಡಬೇಕು. ಬಿಜೆಪಿಯವರು ಈ ಹಿಂದೆ ಗಾಂಧೀಜಿ ಅವರನ್ನು ಕೊಂದರು. ಈಗ ಅವರ ಹೆಸರನ್ನು ಕೊಂದಿದ್ದಾರೆ. ಇದರೊಂದಿಗೆ ಬಿಜೆಪಿಯವರು ಗಾಂಧೀಜಿ ಅವರ ಪ್ರತಿಮೆ ಮುಂದೆ ಧರಣಿ ಮಾಡುವ ಹಕ್ಕನ್ನು ಕಳೆದುಕೊಂಡಿದ್ದಾರೆ. ಗಾಂಧೀಜಿ ಅವರ ಹೆಸರು ಹೇಳುವ ಯೋಗ್ಯತೆಯನ್ನು ಅವರು ಕಳೆದುಕೊಂಡಿದ್ದಾರೆ ಎಂದು ಕಿಡಿಕಾರಿದರು.

ಆಸಕ್ತಿ ತೋರದಿದ್ದರೆ ಕ್ರಮ: ಎಐಸಿಸಿಯವರು ಕಾರ್ಯಕಾರಿ ಸಮಿತಿ ಸಭೆ ಮಾಡಿ, ಈ ವಿಚಾರವಾಗಿ ಪಕ್ಷದ ವತಿಯಿಂದ ಯಾವ ರೀತಿ ಹೋರಾಟ ಮಾಡಬೇಕು ಎಂದು ನಿರ್ದೇಶನ ನೀಡಿದ್ದಾರೆ. ಮೊದಲ ಹಂತದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಉಸ್ತುವಾರಿ ಸಚಿವರುಗಳು ಬಂದು ಸುದ್ದಿಗೋಷ್ಠಿ ನಡೆಸಿ ಮಾತನಾಡಲಿದ್ದಾರೆ. ತಾಲೂಕು ಮಟ್ಟಗಳಲ್ಲಿ ನೀವುಗಳು ಸುದ್ದಿಗೋಷ್ಠಿ ಮಾಡಬೇಕು. ಪರಿಷತ್ ಸದಸ್ಯರು, ಸಂಸದರುಗಳನ್ನು ಶಾಸಕರಿಲ್ಲದ ಕ್ಷೇತ್ರಗಳಿಗೆ ವೀಕ್ಷಕರಾಗಿ ನೇಮಕ ಮಾಡಿದ್ದು, ಎಲ್ಲರೂ ಸುದ್ದಿಗೋಷ್ಠಿ ಮಾಡಬೇಕು. ಎಐಸಿಸಿ ನಿರ್ದೇಶನ ನೀಡಿರುವ ಎಲ್ಲಾ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಮಾಡಲೇಬೇಕು. ಇದನ್ನು ಪಾಲಿಸದ ವೀಕ್ಷಕರು, ಪದಾಧಿಕಾರಿಗಳ ಬಗ್ಗೆ ವರದಿ ನೀಡಿ ಎಂದು ಎಐಸಿಸಿ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಲಾಗಿದ್ದು, ಇದರಲ್ಲಿ ಆಸಕ್ತಿ ತೋರದವರನ್ನು ಕಿತ್ತುಹಾಕಲಾಗುವುದು. ನೂತನ ಜಿಲ್ಲಾಧ್ಯಕ್ಷರ ನೇಮಕಕ್ಕೆ ಹೊರ ರಾಜ್ಯದಿಂದ ತಂಡ ಆಗಮಿಸುತ್ತಿದೆ ಎಂದರು.

ಗ್ಯಾರಂಟಿ ಸಮಿತಿ, ಸ್ಥಳೀಯ ಮಟ್ಟದಲ್ಲಿ ನಾಮನಿರ್ದೇಶನ ಸೇರಿದಂತೆ ಕಾರ್ಯಕರ್ತರಿಗೆ ಈಗಾಗಲೇ ಅಧಿಕಾರ ನೀಡಿದ್ದೇವೆ. 600 ಜನ ರಾಜ್ಯ ಮಟ್ಟದ ನಾಮನಿರ್ದೇಶನ ಹೊರತುಪಡಿಸಿ ಉಳಿದ ಎಲ್ಲಾ ಅಧಿಕಾರಗಳನ್ನು ಹಂಚಿಕೆ ಮಾಡಲಾಗಿದೆ. ಈ ಪಟ್ಟಿಯೂ ಅಂತಿಮವಾಗಿದ್ದು, ಸಣ್ಣಪುಟ್ಟ ತಾಂತ್ರಿಕ ಬದಲಾವಣೆ ಮಾತ್ರ ಬಾಕಿ ಇದೆ. ಇದುವರೆಗೂ ನಾವು 20 ಡಿಸಿಸಿ ಅಧ್ಯಕ್ಷರು, 25 ಪದಾಧಿಕಾರಿಗಳಿಗೆ, 47 ಶಾಸಕರುಗಳಿಗೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡಿದ್ದೇವೆ. ಚುನಾವಣೆ ಸಮಯದಲ್ಲಿ ಟಿಕೆಟ್ ವಂಚಿತ ಕಾರ್ಯಕರ್ತರ ಪೈಕಿ 19 ಜನರಿಗೆ ಅಧ್ಯಕ್ಷ ಸ್ಥಾನ ನೀಡಿದ್ದೇವೆ ಎಂದು ವಿವರಿಸಿದರು.

ಅರಮನೆ ಮೈದಾನದಲ್ಲಿ ಮಂಗಳವಾರ ನಡೆದ ಮನರೇಗಾ ಬಚಾವ್ ಸಂಗ್ರಾಮ ಹೋರಾಟದ ಪೂರ್ವಸಿದ್ಧತಾ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾದ ಕೆ.ಜೆ.ಜಾರ್ಜ್, ಮುನಿಯಪ್ಪಸೇರಿ ಹಲವರು ಕೈ ಮೇಲೆತ್ತಿ ಒಗ್ಗಟ್ಟು ಪ್ರದರ್ಶಿಸಿದರು

ವಿಬಿ ಜಿ ರಾಮ್ ಜಿ ರದ್ದಾಗುವವರೆಗೆ ಹೋರಾಟ

ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮನರೇಗಾ ಪುನಃಸ್ಥಾಪನೆಯಾಗಿ ವಿಬಿ ಜಿ ರಾಮ್ ಜಿ ಕಾಯಿದೆ ರದ್ದಾಗುವವರೆಗೆ ನಮ್ಮ ಹೋರಾಟವನ್ನು ಮುಂದುವರಿಸಬೇಕು. ಇದು ಗ್ರಾಮ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಆಗುವ ಆಂದೋಲನ. ಉತ್ತರ ಭಾರತದಲ್ಲಿ ಕಾಯ್ದೆಗಳ ಬದಲಾವಣೆಗೆ ರೈತರು ಹೋರಾಡಿದಂತೆ ಹೋರಾಟ ಮಾಡಬೇಕು ಎಂದು ಕರೆ ನೀಡಿದರು. ಮನಮೋಹನ ಸಿಂಗ್ ಅವರು ಪ್ರಧಾನಿಯಾಗಿದ್ದಾಗ ನರೇಗಾ ಕಾಯ್ದೆಯನ್ನು ಗ್ರಾಮೀಣ ಪ್ರದೇಶದ ಬಡವರಿಗೆ ಕೆಲಸದ ಹಕ್ಕು ನೀಡಲೆಂದು ಮೂಲಭೂತ ಹಕ್ಕನ್ನಾಗಿದ್ದರು. ನಿರುದ್ಯೋಗ, ಆಹಾರ, ಮಾಹಿತಿ, ಕಾಡಿನಲ್ಲಿ ವಾಸಿಸುವ ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ ಪ್ರಯತ್ನ ಮಾಡಿದರು. ಆಹಾರ ಭದ್ರತಾ ಕಾಯ್ದೆ, ಉದ್ಯೋಗ ಖಾತ್ರಿ, ಮಾಹಿತಿ ಹಕ್ಕು, ಶಿಕ್ಷಣದ ಹಕ್ಕು, ಅರಣ್ಯವಾಸಿಗಳ ಹಕ್ಕು ಒದಗಿಸುವ ಕಾಯ್ದೆಗಳನ್ನು ರೂಪಿಸಿದರು ಎಂದರು. 20 ವರ್ಷಗಳಿಂದ ಜಾರಿಯಲ್ಲಿದ್ದ ಕಾಯ್ದೆಯಡಿ 12.16 ಕೋಟಿ ಕಾರ್ಮಿಕರು ದೇಶದಲ್ಲಿ ಕೆಲಸ ಮಾಡುತ್ತಿದ್ದು, 6.21ಕೋಟಿ ಮಹಿಳೆಯರು ಕೆಲಸಮಾಡುತ್ತಿದ್ದಾರೆ ಎಂದರು.

ಗ್ರಾಮೀಣ ಪ್ರದೇಶದಲ್ಲಿ 365 ದಿನಗಳ ಕಾಲ ಕೆಲಸ ಕೇಳಬಹುದಾಗಿತ್ತು. ಕಾರ್ಮಿಕರು ಅವರ ಊರಿನಲ್ಲಿ, ಅವರ ಜಮೀನಿ ನಲ್ಲಿಯೇ ಕೆಲಸ ಮಾಡಬಹುದಾಗಿತ್ತು. ಇದನ್ನು ಬದಲಾಯಿಸಿ ಮೋದಿ ಸರ್ಕಾರ ವಿಬಿಜಿ ರಾಮ್ ಜಿ ಕಾಯ್ದೆ ಜಾರಿಗೆ ತಂದಿದೆ. ದಶರಥ ರಾಮ, ಸೀತಾ ರಾಮ ಅಥವಾ ಕೌಶಲ್ಯ ರಾಮನಲ್ಲ. ಮಹಾತ್ಮಾ ಗಾಂಧಿ ಕೊಂದ ನಾಥೂರಾಮ ಇದು. ಗಾಂಧಿಯ ವರನ್ನು ಮೊತ್ತೊಮ್ಮೆ ಕೊಲ್ಲುತ್ತಿದ್ದಾರೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಪಕ್ಷದ ಕಚೇರಿ ಕಟ್ಟಡ ನಿರ್ಮಾಣಕ್ಕೆ ತಯಾರಿ ಮಾಡಿಕೊಳ್ಳಿ: ಡಿಸಿಎಂ

ನೂತನ ಕಾಂಗ್ರೆಸ್ ಕಚೇರಿ ಶಂಕುಸ್ಥಾಪನೆ ವಿಚಾರವಾಗಿ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರು ದಿನಾಂಕ ನೀಡಿದ ಬಳಿಕ ಬೆಂಗಳೂರಿನಲ್ಲಿ ಈ ಕಾರ್ಯಕ್ರಮ ಮಾಡುತ್ತೇವೆ. ಅದೇ ದಿನ ನಿಮ್ಮ ಕ್ಷೇತ್ರಗಳಲ್ಲೂ ಶಂಕುಸ್ಥಾಪನೆ ಮಾಡಬೇಕು. ವರ್ಚುವಲ್ ಮೂಲಕ ಈ ಬೆಂಗಳೂರಿನ ಕಾರ್ಯಕ್ರಮದ ಜತೆ ಸಂಪರ್ಕ ಸಾಧಿಸಲಾಗುವುದು. ಈ ಕಾರ್ಯಕ್ರಮಕ್ಕೂ ಮುನ್ನ ನೀವುಗಳು ಕಟ್ಟಡ ನಕ್ಷೆಗೆ ಅನುಮೋದನೆ ಪಡೆದುಕೊಳ್ಳಿ. ಆ ಜಾಗದಲ್ಲಿ ಕಾರ್ಯಕರ್ತರನ್ನು ಸೇರಿಸಿ ಕಾರ್ಯಕ್ರಮ ಮಾಡಿ. ಪಕ್ಷದ ಕಚೇರಿ ಕಟ್ಟಡ ಒಂದು ಹಂತಕ್ಕೆ ಬಂದ ನಂತರ ಕೆಪಿಸಿಸಿ ಕಡೆಯಿಂದ ಆರ್ಥಿಕ ನೆರವು ನೀಡಲಾಗುವುದು. ಪಕ್ಷದ ನಾಯಕರು, ಶಾಸಕರು, ಜಿಲ್ಲಾ ಸಚಿವರು ನಿಧಿ ಸಂಗ್ರಹಿಸಿ, ಕಾರ್ಯಕರ್ತರಿಂದ ದೇಣಿಗೆ ಪಡೆದು ಕಚೇರಿ ಕಟ್ಟಡ ನಿರ್ಮಾಣ ಮಾಡಬೇಕು. ಈ ಹಿಂದೆ ಪಕ್ಷದ ಆಸ್ತಿಯಾಗಿ 19 ನಿವೇಶನ, 45 ಸ್ವಂತ ಕಟ್ಟಡ ಇದ್ದವು. ಈಗ 64 ನಿವೇಶನಗಳ ನೋಂದಣಿಯಾಗಿದೆ. 58 ಆಸ್ತಿಗಳು ನೋಂದಣಿ ಹಂತದಲ್ಲಿವೆ. ಒಟ್ಟು 122 ಆಸ್ತಿಗಳಾಗಿದ್ದು, 186 ಆಸ್ತಿಗಳನ್ನು ಮಾಡಬೇಕಾಗಿದೆ. ಕೋನರೆಡ್ಡಿ, ಶರಣಪ್ರಕಾಶ್ ಪಾಟೀಲ್, ಸುಧಾಕರ್, ಉದಯ್, ಸಿರಗುಪ್ಪ ನಾಗರಾಜ್ ಸೇರಿ ದಂತೆ 22 ಮಂದಿ ತಮ್ಮ ಆಸ್ತಿಯನ್ನು ಪಕ್ಷಕ್ಕೆ ನೀಡಿದ್ದಾರೆ. ಬೆಂಗಳೂರಿನಲ್ಲಿ ಜಾಗ ಇದ್ದರೆ ಹೇಳಿ, ಬಿಡಿಎ, ಪಾಲಿಕೆಯಿಂದ ಮಂಜೂರು ಮಾಡಿಸಲಾಗುವುದು ಎಂದು ಭರವಸೆ ನೀಡಿದರು.

ದಿನ ವಿಶೇಷ

14 ಜನವರಿ 2026 ಬುಧವಾರ

» ಸೂರ್ಯೋದಯ	06-46
» ಸೂರ್ಯಾಸ್ತ	06-11
» ತಿಥಿ	ಏಕಾದಶಿ
» ನಕ್ಷತ್ರ	ಅನುರಾಧಾ
» ಸಂವತ್ಸರ	ವಿಶ್ವಾವಸು
» ಆಯನ	ಉತ್ತರಾಯಣ
» ಋತು	ಶಿಶಿರ
» ಮಾಸ	ಪುಷ್ಯ
» ಪಕ್ಷ	ಕೃಷ್ಣ ಪಕ್ಷ

ವಿಶ್ವವಾಣಿ ಕ್ಲಬ್ ಹೌಸ್ 14.01.2026

ಬುಧವಾರದ ಅತಿಥಿ
ಶ್ರೀ ಶಂಕರನಾರಾಯಣ ಅಡಿಗ
ವಿಷಯ
ಗಂಗಾವತರಣ

vishwavani.news

ವಿಶ್ವವಾಣಿ

ಸಂಪಾದಕೀಯ

ಯಾರು ನಡೆಸಬೇಕು ಕೃಷ್ಣಸಂಧಾನ?

ಸೂರ್ಯನು ಧನುರ್ ರಾಶಿಯಿಂದ ಮಕರ ರಾಶಿಗೆ ಪ್ರವೇಶಿಸುವ ಸಂಕ್ರಮಣ ಕಾಲವನ್ನು 'ಮಕರ ಸಂಕ್ರಾಂತಿ' ಹಣೆಪಟ್ಟಿಯ ಹಬ್ಬದೊಂದಿಗೆ ಸಂಭ್ರಮಿಸುವುದು ಭಾರತೀಯರಲ್ಲಿ ಅನೂಚಾನವಾಗಿ ಬೆಳೆದುಕೊಂಡು ಬಂದಿರುವ ಸಂಪ್ರದಾಯ. ಜತೆಗೆ ಇದು 'ಸುಗ್ಗಿ'ಯ ಮಹತ್ತರ ಕಾಲಘಟ್ಟವೂ ಹೌದು. ಈ ವೇಳೆ ರೈತನ ಕಣಜವನ್ನು ತುಂಬಿಕೊಳ್ಳುವ ಧಾನ್ಯಗಳು ಸಮೃದ್ಧಿಯ ಸಂಕೇತ. ಜತೆಗೆ, ಕುಟುಂಬಿಕರಿಗೆ ಹಾಗೂ ಬಂಧು-ಮಿತ್ರರಿಗೆ 'ಎಳ್ಳು-ಬೆಲ್ಲ'ವನ್ನು ವಿತರಿಸಿ 'ಅನುಗಾಲವೂ ಒಳ್ಳೆಯ ಮಾತಾಡುತ್ತಿರಿ' ಎಂದು ಆಶಿಸುವ ಪರ್ವಕಾಲವೂ ಆಗಿದೆ ಸಂಕ್ರಾಂತಿ. ವಿಪರ್ಯಾಸ ನೋಡಿ! ವಿಶ್ವದ ಬಹಳಷ್ಟು ರಾಷ್ಟ್ರಗಳಲ್ಲಿ 'ಸಮೃದ್ಧಿ' ತುಳುಕಾಡುತ್ತಿದೆ, ಆದರೆ ಕೊರತೆಯಾಗಿರುವುದು 'ಸೌಹಾರ್ದ'ದ ಭಾವದಲ್ಲಿ. 'ವಸುಧೈವ ಕುಟುಂಬಕಂ' ಎಂಬ ಧ್ಯೇಯವಾಕ್ಯದಲ್ಲಿ ಕೆನೆಗಟ್ಟಿರುವ ಸದಾಶಯದಂತೆ ಇಡೀ ವಿಶ್ವವೇ ಒಂದು ಕುಟುಂಬದಂತೆ ಪರಸ್ಪರ ಹೊಂದಿಕೊಂಡು ಹೋಗಬೇಕಾದ ಸಂದರ್ಭದಲ್ಲಿ, ಸಾಕಷ್ಟು ಕಡೆ ದ್ವೇಷಮಯ ವಾತಾವರಣ ತಾಂಡವವಾಡುತ್ತಿದೆ, ಒಂದರ ಹಿಂದೆ ಒಂದರಂತೆ ನಡೆಯುತ್ತಿರುವ ದಾಳಿ-ಪ್ರತಿದಾಳಿಗಳು ಜನರ ನಡುವಿನ ಸೌಹಾರ್ದತೆಗೆ ಸಂಚಕಾರ ತಂದಿವೆ. ಸಂಘರ್ಷದಿಂದ ಮಾತ್ರವೇ ಶಾಂತಿ-ನೆಮ್ಮದಿಯನ್ನು ದಕ್ಕಿಸಿಕೊಳ್ಳಬಹುದು ಎಂಬ 'ಭ್ರಮೆ'ಯೇ ಇಂಥ ಅತಿರೇಕದ ವರ್ತನೆಗೆ ಕಾರಣವಿದ್ದಿರಬಹುದೇ? ಗೊತ್ತಿಲ್ಲ. ಹಾಗೆ ನೋಡಿದರೆ, ಸಂಘರ್ಷದಲ್ಲಿ ತೊಡಗಿರುವವರೆಲ್ಲ 'ದೊಡ್ಡವರು' ಎನಿಸಿಕೊಂಡವರೇ! ಇವರಿಗೆ ಬುದ್ಧಿ ಹೇಳೋದು ಯಾರು? ಸಾಕ್ಷಾತ್ ಶ್ರೀಕೃಷ್ಣನಂಥ ಅವತಾರ ಪುರುಷನಿಗೇ ಕುರುಕ್ಷೇತ್ರ ಯುದ್ಧವನ್ನು ನಿಲ್ಲಿಸಲಾಗಲಿಲ್ಲ, ಅದಕ್ಕೆ ಪೂರ್ವಭಾವಿಯಾಗಿ ಅವನು ಕೈಗೊಂಡ 'ಕೃಷ್ಣ ಸಂಧಾನ' ಕೈಹಿಡಿಯಲಿಲ್ಲ. ಹೀಗಿರುವಾಗ, 'ದೊಡ್ಡವರು' ಎಂಬ ಹಣೆಪಟ್ಟಿ ಕಟ್ಟಿಸಿಕೊಂಡಿರುವ ವರ್ತಮಾನದ ಬೆಕ್ಕುಗಳ ಕೊರಳಿಗೆ ಶಾಂತಿಮಂತ್ರದ ಗಂಟೆ ಕಟ್ಟುವುದು ಹರಸಾಹಸದ ಕೆಲಸವೇ ಸರಿ! ಇನ್ನೇನು ಮಾಡಲಿಕ್ಕಾಗುತ್ತದೆ, ಹರಿವಿನೊಂದಿಗೆ ಸಾಗಬೇಕಷ್ಟೇ...!

ಸೊಂಪಾದಕೀಯ

ಭವಿಷ್ಯ ಅಲ್ಲ, ಭೂತಕಾಲದ ನಿಧಿ

ನಮ್ಮ ಮುಂದಿನ ಜೀವನ ಚೆನ್ನಾಗಿರ್ಲಿ ಅಂತ ಈಗಿನ ಕಾಲದಲ್ಲೇ ದುಡ್ಡು ಉಳಿಸಿ ಇಡುವ ಭವಿಷ್ಯನಿಧಿ ಸ್ಕೀಮುಗಳ ಬಗ್ಗೆ ಎಲ್ಲರಿಗೂ ಗೊತ್ತು. ಆದರೆ ಇದು ಭವಿಷ್ಯ ಅಲ್ಲ, ಭೂತಕಾಲದ ನಿಧಿಯ ಬಗೆಗಿನ ವಿಷಯ. ಬಂಗಾರದ ರೇಟು ಆಕಾಶಕ್ಕೇರಿರುವ ಸಮಯದಲ್ಲಿ ಭೂಮಿಯಲ್ಲೇ ಬಂಗಾರ ಸಿಕ್ಕ ಕಾರಣಕ್ಕೆ ಇಲ್ಲೊಬ್ಬರಿಗೆ ತಲೆನೋವು ಶುರುವಾಗಿದೆ. ಮನೆ ಕಟ್ಟೋಕೆ ಅಂತ ಪಾಯ ತೆಗೆಯಲು ಹೋದರೆ ಅಲ್ಲಿ ಅವರ ಮುತ್ತಾತಂದಿರ ಕಾಲದ ಬಂಗಾರದ ನಿಧಿ ಗೋಚರಿಸಿದೆ. ಅವರೇನೋ ಅದನ್ನು ಪ್ರಾಮಾಣಿಕವಾಗಿ ಎಲ್ಲರಿಗೂ ತೋರಿಸಿ ಸರಕಾರದ ವಶಕ್ಕೆ ಒಪ್ಪಿಸಿದ್ದಾರೆ. ಆದರೆ ಈ ವಿಷಯದಲ್ಲಿ ತಲೆಗೊಂದು ಮಾತಾಡ್ತಾ ಇರೋ ಜನರನ್ನು ಒಪ್ಪಿಸೋದು ಮಾತ್ರ ಕಷ್ಟದ ಕೆಲಸ ಆಗಿದೆ. ಹಾಗಂತ ಜನ ಏನೂ ತಪ್ಪು ಮಾತಾಡ್ತಾ ಇಲ್ಲ. ಅವರ ವಾದವೂ ಸರಿಯಾಗಿಯೇ ಇದೆ. ವಿಷಯ ಏನಪ್ಪಾ ಅಂದ್ರೆ, 'ಹೀಗೆ ನಮ್ಮ ಜಾಗದಲ್ಲಿ ಸಿಗುವ ಬಂಗಾರ ಅಥವಾ ನಿಧಿಯನ್ನು ಸರಕಾರಕ್ಕೆ ಏಕೆ ಕೊಡಬೇಕು?' ಅನ್ನೋದು. ಹೌದು, ಅದು ನಮ್ಮ ಜಾಗ, ಅಲ್ಲಿ ಏನೇ ಸಿಕ್ಕಿದರೂ ಅದಕ್ಕೆ ನಾವೇ ಜವಾಬ್ದಾರಿ ಎಂದಮೇಲೆ ಬಂಗಾರದಂಥ ಭೂಮಿಯಲ್ಲಿ ಬಂಗಾರ ಸಿಕ್ರೆ ಅದು ಹೇಗೆ ಸರಕಾರಕ್ಕೆ ಸೇರುತ್ತೆ ಅನ್ನೋದು ಸರಿಯಾದ ಪ್ರಶ್ನೆಯೇ. ಅದು ನಮ್ಮ ಪೂರ್ವಜರು ಮಾಡಿಟ್ಟಿದ್ದ ನಿಧಿ ಅಲ್ಲವೇ. ನಮ್ಮ ತಾತ, ಮಾಡಿದ್ದು ನನಗೆ ಸೇರುತ್ತದೆ, ನಮ್ಮ ಅಪ್ಪ ಮಾಡಿದ್ದು ನನಗೆ ಸೇರುತ್ತದೆ. ಆದರೆ ತೀರಾ ಹಿಂದಿನ ಪೂರ್ವಜರು ಮಾಡಿಟ್ಟಿದ್ದು ಮಾತ್ರ ಸರಕಾರಕ್ಕೆ ಹೇಗೆ ಸೇರುತ್ತದೆ ಅನ್ನೋದು ಇಲ್ಲಿನ ಪ್ರಶ್ನೆ. ಇದರಲ್ಲಿ ನಮ್ಮ ಪೂರ್ವಜರದ್ದೂ ತಪ್ಪಿದೆ ಬಿಡಿ. ಗಳಿಸಿದ್ದನ್ನು ಮಕ್ಕಳಿಗೆ ಮೊಮ್ಮಕ್ಕಳಿಗೆ ಕೊಟ್ಟು ಹೋಗೋದನ್ನ ಬಿಟ್ಟು ಭೂಮಿಯಲ್ಲಿ ಹೂತಿಟ್ಟು ಆಟ ನೋಡುವ ಚಟ ಅವರಿಗೆ ಯಾಕೆ ಇತ್ತು ಅನ್ನೋದು ಅಗೋಚರ ಸಂಗತಿಯೇ. ಆದರೂ ಸರಕಾರ ಇಂಥ ನಿಧಿಯ ಮೇಲೆ ಕಣ್ಣು ಹಾಕೋದು ಎಲ್ಲರ ಕಣ್ಣನ್ನು ಕೆಂಪಗಾಗಿಸುತ್ತದೆ. ಇದೇ ನಮಗೆ ಸೇರಿದ ಆಸ್ತಿಯಲ್ಲಿ ಒಂದು ವೇಳೆ ಗಾಂಜಾ ಸಿಕ್ಕರೆ ಅದಕ್ಕೂ ನಮಗೂ ಸಂಬಂಧ ಇಲ್ಲ ಅಂತ ಸರಕಾರಕ್ಕೆ ಕೊಟ್ಟರೆ ಸುಮ್ಮನಿರುತ್ತಾರೆಯೇ? ಗಾಂಜಾ ಸಿಕ್ರೆ ಅದು ನಮ್ಮದು, ಬಂಗಾರ ಸಿಕ್ಕರೆ ಅದು ಸರಕಾರದ್ದು ಅನ್ನೋ ಈ ದ್ವಂದ್ವ ನೀತಿ ಯಾಕೆ ಅನ್ನೋ ಗೊಂದಲ ಎಲ್ಲರದ್ದು.

ಸಂಪಾದಕರ ಸದ್ಯಶೋಧನೆ

ವಿಮಾನದ ಹಿಂಭಾಗ ನೆಲಕ್ಕಪ್ಪಳಿಸಿದರೆ?

ವಿಮಾನವು ಟೇಕಾಫ್ ಆಗುವಾಗ ಅದರ ಹಿಂಭಾಗವು (Tail) ನೆಲಕ್ಕೆ ತಗುಲುವ ಘಟನೆಯನ್ನು ತಾಂತ್ರಿಕ ಪರಿಭಾಷೆಯಲ್ಲಿ 'ಟೇಲ್‌ಸ್ಟ್ರೈಕ್' ಎಂದು ಕರೆಯಲಾಗುತ್ತದೆ. ರನ್‌ವೇ ಮೇಲೆ ವಿಮಾನವು ವೇಗವಾಗಿ ಚಲಿಸಿ, ಗಾಳಿಯಲ್ಲಿ ಏರಲು ಸಿದ್ಧವಾದಾಗ ಅದರ ಮುಂಭಾಗವನ್ನು ಮೇಲಕ್ಕೆ ಎತ್ತಲಾಗುತ್ತದೆ. ಈ ಹಂತದಲ್ಲಿ ಸಮತೋಲನ ತಪ್ಪಿ ತುಸು ಎಡವಟ್ಟಾದರೆ ಹಿಂಭಾಗ ನೆಲಕ್ಕೆ ಅಪ್ಪಳಿಸುವ ಅಪಾಯವಿರುತ್ತದೆ. ವಿಮಾನದ ಮುಖ್ಯ ಚಕ್ರಗಳು ವಿಮಾನದ ಗುರುತ್ವಾಕರ್ಷಣ ಕೇಂದ್ರದ ಸ್ವಲ್ಪ ಹಿಂದೆ ಇರುತ್ತವೆ. ಇದು ವಿಮಾನವು 'ಪಿವೋಟ್' ಅಥವಾ ಲಿವರ್‌ನಂತೆ ಕಾರ್ಯನಿರ್ವಹಿಸಲು ಸಹಾಯ ಮಾಡುತ್ತದೆ. ಈ ಚಕ್ರಗಳ ಸ್ಥಾನವು ಸರಿಯಾಗಿದ್ದರೆ, ಮುಂಭಾಗ ಎತ್ತಿದಾಗ ಹಿಂಭಾಗವು ನೆಲಕ್ಕೆ ತಗುಲದಷ್ಟು ಎತ್ತರದಲ್ಲಿರುತ್ತದೆ. ಕೆಲವು ಉದ್ದನೆಯ ವಿಮಾನಗಳಲ್ಲಿ (ಉದಾಹರಣೆಗೆ, ಬೋಯಿಂಗ್ 777 ಅಥವಾ ಏರ್‌ಬಸ್ A 321) ಹಿಂಭಾಗದ ಕೆಳಗೆ ಸಣ್ಣ ಚಕ್ರ ಅಥವಾ ರಕ್ಷಣಾತ್ಮಕ ಪ್ಯಾಡ್ ಅನ್ನು ಅಳವಡಿಸಲಾಗಿರುತ್ತದೆ. ಒಂದು ವೇಳೆ ವಿಮಾನವು ತುಂಬಾ ಕೆಳಕ್ಕೆ ಬಾಗಿದರೂ, ಈ ಬಂಪರ್ ಮೊದಲು ನೆಲಕ್ಕೆ ತಗುಲಿ ವಿಮಾನದ ಮುಖ್ಯಭಾಗಕ್ಕೆ ಹಾನಿಯಾಗದಂತೆ ರಕ್ಷಿಸುತ್ತದೆ. ಆಧುನಿಕ ವಿಮಾನಗಳಲ್ಲಿ ಕಂಪ್ಯೂಟರ್‌ಗಳು ಪೈಲಟ್‌ನ ಚಲನವಲನಗಳನ್ನು ಗಮನಿಸುತ್ತಿರುತ್ತವೆ. ಪೈಲಟ್ ವಿಮಾನದ ಮುಂಭಾಗವನ್ನು ಅತಿ ವೇಗವಾಗಿ ಅಥವಾ ಅತಿ ಎತ್ತರಕ್ಕೆ ಏರಿಸಲು ಪ್ರಯತ್ನಿಸಿದರೆ, ಕಂಪ್ಯೂಟರ್ ಅದನ್ನು ತಾನಾಗಿಯೇ ನಿಯಂತ್ರಿಸಿ ಟೇಲ್‌ಸ್ಟ್ರೈಕ್ ಆಗದಂತೆ ತಡೆಯುತ್ತದೆ. ಟೇಕಾಫ್ ಸಮಯದಲ್ಲಿ ಪೈಲಟ್‌ಗಳು ಅತ್ಯಂತ ಜಾಗರೂಕರಾಗಿರುತ್ತಾರೆ. ಆಗ ಅವರು ಕೆಲವು ಕ್ರಮಗಳನ್ನು ಅನುಸರಿಸುತ್ತಾರೆ. ಪ್ರತಿ ವಿಮಾನಕ್ಕೂ 'ರೊಟೇಷನ್ ಸ್ಪೀಡ್' ಎಂಬ ನಿರ್ದಿಷ್ಟ ವೇಗವಿರುತ್ತದೆ. ವಿಮಾನವು ಆ ವೇಗವನ್ನು ತಲುಪುವ ಮೊದಲು ಪೈಲಟ್ ಮುಂಭಾಗದ ಚಕ್ರವನ್ನು ಎತ್ತಬಾರದು. ಕಡಿಮೆ ವೇಗದಲ್ಲಿ ಮುಂಭಾಗವನ್ನು ಎತ್ತಲು ಪ್ರಯತ್ನಿಸಿದರೆ ವಿಮಾನವು ಗಾಳಿಯಲ್ಲಿ ತೇಲುವ ಬದಲು ಹಿಂಭಾಗವು ನೆಲಕ್ಕೆ ತಾಗುತ್ತದೆ. ಪೈಲಟ್‌ಗಳು ವಿಮಾನದ ಮುಂಭಾಗವನ್ನು ಸೆಕೆಂಡಿಗೆ ಸುಮಾರು ಎರಡರಿಂದ ಮೂರು ಡಿಗ್ರಿಗಳಷ್ಟು ಮಾತ್ರ ನಿಧಾನವಾಗಿ ಎತ್ತಬೇಕು. ಇದನ್ನು ಅತಿ ವೇಗವಾಗಿ ಮಾಡಿದರೆ ಹಿಂಭಾಗವು ನೆಲಕ್ಕೆ ಬಡಿಯುವ ಸಾಧ್ಯತೆ ಇರುತ್ತದೆ. ಎದುರುಗಾಳಿ (Headwind) ಹೆಚ್ಚಿದ್ದಾಗ ವಿಮಾನ ಸುಲಭವಾಗಿ ಏರುತ್ತದೆ. ಆದರೆ ಅಡ್ಡಗಾಳಿ ಅಥವಾ ಹಿಂಗಾಳಿ ಇದ್ದಾಗ ಸಮತೋಲನ ಕಾಯ್ದುಕೊಳ್ಳುವುದು ಸವಾಲಿನ ಕೆಲಸ. ವಿಮಾನದಲ್ಲಿ ಸರಕು (Cargo) ಮತ್ತು ಪ್ರಯಾಣಿಕರು ಎಲ್ಲಿ ಕುಳಿತಿದ್ದಾರೆ ಎಂಬುದು ಸಹ ಬಹಳ ಮುಖ್ಯ. ಒಂದು ವೇಳೆ ವಿಮಾನದ ಹಿಂಭಾಗದಲ್ಲಿ ಅತಿಯಾದ ತೂಕವಿದ್ದರೆ, ವಿಮಾನವು ಟೇಕಾಫ್ ಆಗುವ ಮೊದಲೇ ಹಿಂದಕ್ಕೆ ವಾಲಿಬಿಡಬಹುದು. ಆದ್ದರಿಂದ, ವಿಮಾನ ಹಾರಾಟಕ್ಕೂ ಮುನ್ನ 'ಲೋಡ್ ಶೀಟ್' ಸಿದ್ಧಪಡಿಸಿ, ತೂಕವು ವಿಮಾನದ ಮಧ್ಯಭಾಗದಲ್ಲಿ ಸಮನಾಗಿ ಹಂಚಿಕೆಯಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲಾಗುತ್ತದೆ. ವಿಮಾನವು ಟೇಕಾಫ್ ಆಗುವಾಗ ಲಿಫ್ಟ್ (Lift) ಎಂಬ ಬಲವು ಕಾರ್ಯನಿರ್ವಹಿಸುತ್ತದೆ. ಬರ್ನೌಲಿ ತತ್ವದ ಪ್ರಕಾರ, ರೆಕ್ಕೆಗಳ ಮೇಲೆ ಗಾಳಿ ವೇಗವಾಗಿ ಚಲಿಸಿದಾಗ ಒತ್ತಡ ಕಡಿಮೆಯಾಗಿ ವಿಮಾನವು ಮೇಲಕ್ಕೆ ಏರುತ್ತದೆ. ವಿಮಾನದ ಹಿಂಭಾಗದಲ್ಲಿರುವ 'ಎಲಿವೇಟರ್‌ಗಳು' ಮೇಲಕ್ಕೆ ಚಲಿಸಿದಾಗ, ಗಾಳಿಯ ಒತ್ತಡವು ವಿಮಾನದ ಬಾಲವನ್ನು ಕೆಳಕ್ಕೆ ತಳ್ಳುತ್ತದೆ, ಇದರಿಂದ ಮೂಗು (Nose) ಮೇಲಕ್ಕೆ ಏರುತ್ತದೆ. ಈ ಕ್ರಿಯೆಯು ಹತೋಟಿಯಲ್ಲಿದ್ದರೆ ಮಾತ್ರ ಟೇಲ್‌ಸ್ಟ್ರೈಕ್ ತಪ್ಪಿಸಲು ಸಾಧ್ಯ. ಟೇಲ್‌ಸ್ಟ್ರೈಕ್ ಸಂಭವಿಸಿದರೆ ಏನಾಗುತ್ತದೆ? ಒಂದು ವೇಳೆ ವಿಮಾನದ ಹಿಂಭಾಗ ನೆಲಕ್ಕೆ ತಗುಲಿದರೆ, ವಿಮಾನದ ರಚನೆಗೆ ಹಾನಿಯಾಗಬಹುದು. ಇಂಥ ಸಂದರ್ಭದಲ್ಲಿ ಪೈಲಟ್‌ಗಳು ಹಾರಾಟವನ್ನು ಮುಂದುವರಿಸದೇ ತಕ್ಷಣವೇ ತುರ್ತು ಲ್ಯಾಂಡಿಂಗ್ ಮಾಡುತ್ತಾರೆ. ಏಕೆಂದರೆ ಹಿಂಭಾಗದಲ್ಲಿ ಸಣ್ಣ ಬಿರುಕು ಉಂಟಾದರೂ, ಎತ್ತರಕ್ಕೆ ಹೋದಂತೆ ವಿಮಾನದ ಒಳಗಿನ ಗಾಳಿಯ ಒತ್ತಡವನ್ನು ತಡೆದುಕೊಳ್ಳಲು ವಿಮಾನಕ್ಕೆ ಸಾಧ್ಯವಾಗುವುದಿಲ್ಲ. ವಿಮಾನದ ಹಿಂಭಾಗ ನೆಲಕ್ಕೆ ತಾಗದಂತೆ ತಡೆಯುವುದು ಕೇವಲ ಪೈಲಟ್‌ನ ಕೌಶಲವಲ್ಲ, ಅದು ಅತ್ಯಾಧುನಿಕ ಎಂಜಿನಿಯರಿಂಗ್, ನಿಖರವಾದ ತೂಕದ ಲೆಕ್ಕಾಚಾರ ಮತ್ತು ಭೌತವಿಜ್ಞಾನದ ಸಮನ್ವಯವಾಗಿದೆ. ಸ್ಮಾರ್ಟ್ ಸೆನ್ಸರ್‌ಗಳು ಮತ್ತು ಕಟ್ಟುನಿಟ್ಟಾದ ಸುರಕ್ಷತಾ ನಿಯಮಗಳು ಇಂದಿನ ವಿಮಾನಯಾನವನ್ನು ಅತ್ಯಂತ ಸುರಕ್ಷಿತವಾಗಿಸಿವೆ.

ಕಟ್ರ ಈದ್ಗಾ ಎನ್ನುವುದನ್ನು ಬ್ರಿಟಿಷ್ ಆಡಳಿತವೇ ಒಪ್ಪಿರಲಿಲ್ಲ!

ಮಂಗಳೂರು ಲಿಟ್-ಫೆಸ್ಟ್‌ನಲ್ಲಿ ದೇಶದ ಹಿರಿಯ ಇತಿಹಾಸ ಶಾಸ್ತ್ರಜ್ಞೆ ಡಾ. ಮೀನಾಕ್ಷಿ ಜೈನ್ ಅವರು ಕಾಶಿ, ಮಥುರಾದ ಹಿಂದೂ ದೇವಾಲಯಗಳ ಸಂಘರ್ಷಮಯ ಚರಿತ್ರೆ ಕುರಿತ ಕುತೂಹಲಕಾರಿ ಅಂಶಗಳತ್ತ ಬೆಳಕು ಚೆಲ್ಲಿದರು. ಮಥುರಾದ ಕಟ್ರ ಕೇಶವದೇವರ ಜಮೀನನ್ನು 'ಕಟ್ರ ಈದ್ಗಾ' ಎಂದಿದ್ದನ್ನು ಬ್ರಿಟಿಷ್ ಆಡಳಿತ ಕೂಡ ಒಪ್ಪಿರಲಿಲ್ಲ ಎನ್ನುವುದು ಅವರ ಅಧ್ಯಯನದಲ್ಲೂ ದಾಖಲಾಗಿದೆ.

ಜನಪಥ
ರಾಘವ ಶರ್ಮ ನಿಡ್ಲೆ
vveditoped@gmail.com

ಉತ್ತರ ಪ್ರದೇಶದ ಅಯೋಧ್ಯೆಯಂತೆ ಕೋಟ್ಯಂತರ ಹಿಂದೂಗಳ ಶ್ರದ್ಧಾಕೇಂದ್ರಗಳಾದ ಕಾಶಿ ಮತ್ತು ಮಥುರಾದಲ್ಲೂ ದೇಗುಲ ಸಂಕೀರ್ಣವು ಹಿಂದೂಗಳ ಪಾಲಾಗಬೇಕು ಎಂಬ ಚರ್ಚೆಗಳಾಗುತ್ತಿರುವ ಮಧ್ಯೆ, ಈ ಎರಡೂ ಧಾರ್ಮಿಕ ಸ್ಥಳಗಳ ಕುರಿತ ಪ್ರಕರಣಗಳು ನ್ಯಾಯಾಲಯದ ಅಂಗಳದಲ್ಲಿರುವುದನ್ನು ನಾವು ನೋಡಿದ್ದೇವೆ. ಕಾಶಿ ವಿಶ್ವನಾಥ ದೇಗುಲ ಆವರಣದಲ್ಲಿರುವ ಜ್ಞಾನವಾಪಿ ಮಸೀದಿ ಮತ್ತು ಮಥುರಾ ಶ್ರೀಕೃಷ್ಣ ಜನ್ಮಸ್ಥಾನದ ದೇಗುಲದೊಂದಿಗೆ ಜೋಡಿಸಿಕೊಂಡು ನಿರ್ಮಾಣ ಮಾಡಿರುವ ಶಾಹಿ ಈದ್ಗಾ ಮಸೀದಿಗಳನ್ನು ಆ ಸ್ಥಳಗಳಿಂದ ತೆರವುಗೊಳಿಸಬೇಕು ಎಂದು ಕೋರಿ ಸಲ್ಲಿಸಲಾಗಿರುವ ಅರ್ಜಿಗಳ ಬಗ್ಗೆ ಸ್ಥಳೀಯ ನ್ಯಾಯಾಲಯಗಳಲ್ಲಿ ವಿಚಾರಣೆಗಳು ನಡೆಯುತ್ತಿವೆ. ಕಾಶಿಯಲ್ಲಿ ವೈಜ್ಞಾನಿಕ ಸಮೀಕ್ಷೆಗಳು ನಡೆದು, ವರದಿಗಳು ವಾರಾಣಸಿ ಜಿಲ್ಲಾ ನ್ಯಾಯಾಲಯದ ಮುಂದಿವೆ. ಕಾಶಿ ದೇಗುಲದ ವ್ಯಾಪ್ತಿಯಲ್ಲಿರುವ ಸಂಪೂರ್ಣ ಜಮೀನು ಹಿಂದೂಗಳಿಗೆ ಸೇರುವ ವಿಶ್ವಾಸವನ್ನು ಅನೇಕ ಇತಿಹಾಸಕಾರರು ವ್ಯಕ್ತಪಡಿಸುತ್ತಿದ್ದರೂ, ಮಥುರಾದಲ್ಲಿ ಜನ್ಮಸ್ಥಾನಕ್ಕೆ ಸಂಬಂಧಿಸಿದ ಭೂ ವಿವಾದದಲ್ಲಿ ಹಿಂದೂ ಶ್ರದ್ಧಾಳುಗಳು ದೊಡ್ಡ ಸವಾಲನ್ನೇ ಎದುರಿಸುತ್ತಿದ್ದಾರೆ.

ಈ ಸವಾಲುಗಳ ಬಗ್ಗೆ, ಜನವರಿ 10-11ರಂದು ಮಂಗಳೂರಿನಲ್ಲಿ ದ.ಕ. ಸಂಸದ ಬ್ರಿಜೇಶ್ ಚೌಟ ನೇತೃತ್ವದಲ್ಲಿ ಭಾರತ್ ಫೌಂಡೇಷನ್ ಮೂಲಕ ಆಯೋಜಿಸಲಾಗಿದ್ದ ಲಿಟರೇಚರ್ ಫೆಸ್ಟಿವಲ್‌ನಲ್ಲಿ (ಸಾಹಿತ್ಯೋತ್ಸವ) ರಾಜ್ಯಸಭೆ ಸದಸ್ಯೆ, ಖ್ಯಾತ ಇತಿಹಾಸಕಾರ್ತಿಯಾದ ಡಾ. ಮೀನಾಕ್ಷಿ ಜೈನ್ ಅವರು ಕೆಲ ಕುತೂಹಲಕಾರಿ ಅಂಶಗಳನ್ನು ವಿಚಾರಗೋಷ್ಠಿಯಲ್ಲಿ ಹಂಚಿಕೊಂಡಿದ್ದರು. Vasudeva Krishna and Mathura (ವಾಸುದೇವ ಕೃಷ್ಣ ಮತ್ತು ಮಥುರಾ) ಎಂಬ ಪುಸ್ತಕ ಬರೆದಿರುವ ಡಾ. ಮೀನಾಕ್ಷಿ ಜೈನ್ ಅವರು, ಅಯೋಧ್ಯಾ, ಕಾಶಿ ಮತ್ತು ಮಥುರಾದ ಇತಿಹಾಸಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿರುವ ಕೆಲವೇ ಇತಿಹಾಸಕಾರರಲ್ಲಿ ಒಬ್ಬರು. ಅವರ ಸಾಧನೆ ಹಾಗೂ ಅಧ್ಯಯನಗಳನ್ನು ಪರಿಗಣಿಸಿಯೇ ಕೇಂದ್ರ ಸರಕಾರ ಪದ್ಮಶ್ರೀ ಪುರಸ್ಕಾರ ನೀಡಿ ಗೌರವಿಸಿರುವುದಲ್ಲದೆ, ರಾಜ್ಯಸಭೆಗೆ ನಾಮನಿರ್ದೇಶಿತ ಸದಸ್ಯೆಯನ್ನಾಗಿಯೂ ನೇಮಕ ಮಾಡಿದೆ.

ಮಥುರಾದಲ್ಲಿ ಸವಾಲು ಹೆಚ್ಚಿದೆ ಎನ್ನುವುದಕ್ಕೆ ಡಾ. ಮೀನಾಕ್ಷಿ ಜೈನ್ ಕಾರಣಗಳನ್ನೂ ನೀಡಿದ್ದಾರೆ. ಕೃಷ್ಣ ಜನ್ಮಭೂಮಿಗೆ ಸಂಬಂಧಿಸಿ 1968ರಲ್ಲಿ ಮಹತ್ವದ ಬೆಳವಣಿಗೆಯೊಂದು ಸಂಭವಿಸುತ್ತದೆ. ಶ್ರೀಕೃಷ್ಣ ಜನ್ಮಸ್ಥಾನ ಸೇವಾಸಂಘ ಮತ್ತು ಶಾಹಿ ಈದ್ಗಾ ಸಮಿತಿಯ ನಡುವೆ ಕೃಷ್ಣ ಜನ್ಮಸ್ಥಾನ ದೇವಾಲಯ ಸಂಕೀರ್ಣದ ವಿವಾದಿತ ಭೂಮಿಗೆ ಸಂಬಂಧಿಸಿ ರಾಜಿ ಒಪ್ಪಂದವೊಂದಕ್ಕೆ ಸಹಿ ಹಾಕಲಾಗುತ್ತದೆ. ಒಪ್ಪಂದದ ಪ್ರಕಾರ ದೇವಾಲಯದ ಭೂಮಿಯನ್ನು ಟ್ರಸ್ಟ್‌ಗೆ ಮತ್ತು ಪಕ್ಕದ ಶಾಹಿ ಈದ್ಗಾ ಮಸೀದಿಯ ನಿರ್ವಹಣೆಯನ್ನು ಈದ್ಗಾ ಸಮಿತಿಗೆ ಹಂಚಿಕೆ ಮಾಡಲಾಗುತ್ತದೆ. ಆ ಸಮಯದಲ್ಲಿ ಶ್ರೀಕೃಷ್ಣ ಜನ್ಮಸ್ಥಾನ ಸೇವಾಸಂಘದ ಅಧ್ಯಕ್ಷರಾಗಿದ್ದ ಗಣೇಶ ವಾಸುದೇವ್ ಮಾವಲಂಕರ್ ಅವರು ಕಾಂಗ್ರೆಸ್ ಪಕ್ಷದ ಮುಖಂಡರಾಗಿದ್ದರು. ಅಂದಿನ ಒಪ್ಪಂದಕ್ಕೆ ಸಹಿ ಹಾಕುವ ಗಣೇಶ ವಾಸುದೇವ ಅವರ ಕಾನೂನಾತ್ಮಕ ಅಧಿಕಾರವನ್ನು ಈಗ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ. ಅದೇ ರೀತಿ ಒಪ್ಪಂದದ ಸಿಂಧುತ್ವದ ಕುರಿತ ತಕರಾರು ಅರ್ಜಿಗಳು ಕೂಡ ನ್ಯಾಯಾಲಯಗಳಲ್ಲಿವೆ.

''1968ರಲ್ಲಿ ಕೇಂದ್ರದಲ್ಲಿದ್ದ ಸರಕಾರದ ಪ್ರಭಾವದಿಂದಾಗಿಯೇ ಈ ಒಪ್ಪಂದ ನಡೆದು, ಕಟ್ರ ಕೇಶವ ದೇಗುಲದ (ಶ್ರೀಕೃಷ್ಣ ಜನ್ಮಸ್ಥಾನ) 13 ಎಕರೆ ಭೂಮಿಯಲ್ಲಿ 3 ಎಕರೆ ಭೂಮಿಯನ್ನು ಈದ್ಗಾಕ್ಕೆ ಕಾನೂನಾತ್ಮಕವಾಗಿ ಹಸ್ತಾಂತರ ಮಾಡಲಾಗಿತ್ತು. ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿದ್ದ ರಾಷ್ಟ್ರೀಯ ಪಕ್ಷಕ್ಕೆ ಇತರೆ ಮಿತ್ರಪಕ್ಷಗಳ ಸಹಾಯ ಬೇಕಿದ್ದರಿಂದ ಮಥುರಾ ಜನ್ಮಸ್ಥಾನದ ವಿಷಯದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಯಿತು. ಕೇಂದ್ರದಲ್ಲಿದ್ದ ರಾಷ್ಟ್ರೀಯ ಪಕ್ಷವೊಂದರ ನೆರವಿನಿಂದಲೇ ಇಂಥದ್ದೊಂದು ಕೃತ್ಯ ನಡೆದಿತ್ತು. ಒಪ್ಪಂದವನ್ನು ಕಾನೂನಾತ್ಮಕವಾಗಿಯೇ ಮಾಡಿದ್ದರಿಂದ ಜನ್ಮಸ್ಥಾನದ ವಿಷಯದಲ್ಲಿ ಕಾನೂನಾತ್ಮಕ ಸವಾಲು ಜಾಸ್ತಿ'' ಎನ್ನುವುದು ಡಾ. ಮೀನಾಕ್ಷಿ ಜೈನ್ ಅವರ ಅನಿಸಿಕೆ.

ಮಥುರಾ ಜಮೀನು ವಿವಾದದ ಕೇಸನ್ನು ತಿಳಿದುಕೊಳ್ಳಲು ವಾರಾಣಸಿಯ ರಾಜನಾಗಿದ್ದ ಪಟ್ನಿಮಲ್ ಎಂಬಾತ ಮಥುರಾದ ಕಟ್ರದಲ್ಲಿದ್ದ ಕೇಶವದೇವ ದೇವಾಲಯದ (ಶ್ರೀಕೃಷ್ಣ ಜನ್ಮಸ್ಥಾನ) ಇಡೀ 13.3 ಎಕರೆ ಭೂಮಿಯನ್ನು 1815ರಲ್ಲಿ ಖರೀದಿ ಮಾಡಿದ್ದ ಇತಿಹಾಸವನ್ನೂ ಗಮನಿಸಬೇಕು. ಆಗ ಈದ್ಗಾ ಮಸೀದಿಗೆ ಸಂಬಂಧಪಟ್ಟವರು, ''ಇದು ಕಟ್ರ ಕೇಶವ ದೇವ ದೇಗುಲ ಅಲ್ಲ, ಇದು ಕಟ್ರ ಈದ್ಗಾ'' ಎಂದು ಪ್ರತಿಪಾದಿಸಿದ್ದರು. ಬ್ರಿಟಿಷರು ಭಾರತದಲ್ಲಿದ್ದ ಸಂದರ್ಭದಲ್ಲಿ ಈ ಪ್ರಕರಣ ಕೋರ್ಟುಗಳ ಮೆಟ್ಟಿಲೇರಿ, ಅಂದಿನ ಬ್ರಿಟಿಷ್ ಆಡಳಿತ ಹಾಗೂ ವಿವಿಧ ನ್ಯಾಯಾಧೀಶರೂ ಈದ್ಗಾ ಪಕ್ಷದವರ ವಾದಗಳನ್ನು ಸಾರಸಗಟಾಗಿ ತಳ್ಳಿಹಾಕಿದ್ದರು.

1944ರಲ್ಲಿ ರಾಜ ಪಟ್ನಿಮಲ್‌ನ ಉತ್ತರಾಧಿಕಾರಿ ರಾಯ್ ಕಿಶನ್ ದಾಸ್ ಈ ಇಡೀ ಜಮೀನನ್ನು ಜುಗಲ್ ಕಿಶೋರ್ ಬಿರ್ಲಾ ಅವರಿಗೆ ಹಸ್ತಾಂತರ ಮಾಡುವ ನಿರ್ಧಾರ ಮಾಡುತ್ತಾರೆ. ಇಲ್ಲಿ ಭವ್ಯವಾದ ಶ್ರೀಕೃಷ್ಣ ದೇವಸ್ಥಾನವನ್ನು ನಿರ್ಮಾಣ ಮಾಡಬೇಕೆಂಬ ಆಶಯ ನಮಗಿದ್ದರೂ, ಹಣದ ಕೊರತೆಯಿಂದ ಸಾಧ್ಯವಾಗುತ್ತಿಲ್ಲ. ನಮಗೆ 13 ಸಾವಿರ ರು. ಸಾಲ ತೀರಿಸಬೇಕಿದೆ. ಹೀಗಾಗಿ, ಈ ಜಮೀನನ್ನು ಪಡೆದು, ನೀವು ನಮಗೆ 13 ಸಾವಿರ ರು. ನೀಡಬೇಕು ಎಂದು ರಾಯ್ ಕಿಶನ್ ದಾಸ್ ಮತ್ತು ಕುಟುಂಬಸ್ಥರು ಜುಗಲ್ ಕಿಶೋರ್ ಅವರ ಬಳಿ ಕೇಳುತ್ತಾರೆ. ಇದನ್ನು ಒಪ್ಪಿಕೊಂಡು ಜುಗಲ್ ಕಿಶೋರ್ ಅವರು ಜಮೀನನ್ನು ಪಡೆದು, ದೇಗುಲ ನಿರ್ಮಾಣ ಮಾಡುವ ಸಲುವಾಗಿ ಕೃಷ್ಣ ಜನ್ಮಸ್ಥಾನ ಟ್ರಸ್ಟ್ ರಚನೆ ಮಾಡುತ್ತಾರೆ. ಈ ಟ್ರಸ್ಟ್‌ನಲ್ಲಿ ಪಂಡಿತ ಮದನ ಮೋಹನ ಮಾಲವೀಯ ಸೇರಿ ಅನೇಕರು ಟ್ರಸ್ಟಿಗಳಾಗಿರುತ್ತಾರೆ ಮತ್ತು 1951ರಲ್ಲಿ ಎಲ್ಲಾ ಹಕ್ಕುಗಳನ್ನು ಟ್ರಸ್ಟ್‌ಗೆ ವರ್ಗಾಯಿಸಲಾಗುತ್ತದೆ. ಆದರೆ, ವಿವಿಧ ಕಾರಣಗಳಿಗಾಗಿ ಭವ್ಯ ದೇಗುಲವನ್ನು ನಿರ್ಮಾಣ ಮಾಡಲು ಸಾಧ್ಯವಾಗುವುದಿಲ್ಲ. ಹಿಂದು-ಮುಸ್ಲಿಂ ಸಂಘರ್ಷಗಳು ಮುಂದುವರಿದಂತೆ 1968ರಲ್ಲಿ ಈ ಸಂಘರ್ಷ ತಣಿಸಲೆಂದು ಒಪ್ಪಂದವೊಂದನ್ನು ಮಾಡಿ, ಮಸೀದಿ ಇರುವ 3 ಎಕರೆ ಜಮೀನನ್ನು ಮುಸ್ಲಿಂ ಧರ್ಮೀಯರಿಗೆ ನೀಡಲಾಗುತ್ತದೆ.

ಈಗ ಅಯೋಧ್ಯೆ ಕೇಸಿನಲ್ಲಿ ಹಿಂದೂಗಳು ಗೆದ್ದು, ಮಂದಿರವೂ ನಿರ್ಮಾಣವಾದ್ದರಿಂದ ಕಾಶಿ, ಮಥುರಾದಲ್ಲೂ ಹಕ್ಕು ಸ್ಥಾಪನೆಗಾಗಿ ಕಾನೂನು ಹೋರಾಟಗಳಿಗೆ ಮರುಜೀವ ಬಂದಿದೆ. ಶ್ರೀಕೃಷ್ಣ ಜನ್ಮಭೂಮಿಗೆ ಹೊಂದಿಕೊಂಡಿರುವ ಶಾಹಿ ಈದ್ಗಾ ಮಸೀದಿಯನ್ನು ತೆಗೆದುಹಾಕಬೇಕೆಂದು 2022ರಲ್ಲಿ ಲಖನೌ ನಿವಾಸಿ ರಂಜನಾ ಅಗ್ನಿಹೋತ್ರಿ ಎಂಬುವವರು ಅರ್ಜಿ ಸಲ್ಲಿಸುತ್ತಾರೆ ಮತ್ತು ಇದರ ವಿಚಾರಣೆಗೆ ಸ್ಥಳೀಯ ನ್ಯಾಯಾಲಯದ ನ್ಯಾ. ರಾಜೀವ್ ಭಾರತಿ ಒಪ್ಪಿಗೆ ಕೂಡ ಕೊಟ್ಟಿದ್ದಾರೆ. ಕೃಷ್ಣ ಜನ್ಮಸ್ಥಾನ ಹಾಗೂ ಮಂದಿರದ ಭೂಮಿ ಅತಿಕ್ರಮಿಸಿಕೊಂಡು ಶಾಹಿ ಈದ್ಗಾ ಮಸೀದಿ ನಿರ್ಮಾಣ ಮಾಡಲಾಗಿದೆ ಎನ್ನುವುದು ಅರ್ಜಿದಾರರ ತಕರಾರು. ಈದ್ಗಾ ಮಸೀದಿಯನ್ನು 1669-70ರಲ್ಲಿ ಮೊಘಲ್ ಚಕ್ರವರ್ತಿ ಔರಂಗಜೇಬನ ಆದೇಶದ ಮೇರೆಗೆ ಕೃಷ್ಣ ಜನ್ಮಭೂಮಿಯಲ್ಲಿ ನಿರ್ಮಿಸಲಾಗಿದೆ. ಮಥುರಾದ ಕೇಶವ್ ದೇವ ದೇವಸ್ಥಾನದ 'ಬಾಲ ಭಗವಾನ್ ಕೃಷ್ಣನ ಸ್ನೇಹಿತ' ಎಂದು ಕೋರ್ಟಿನಲ್ಲಿರುವ ಅರ್ಜಿಯಲ್ಲಿ ದಾಖಲಾಗಿದೆ. ಶ್ರೀಕೃಷ್ಣನ ಆರಾಧಕರಾದ ನಮಗೆ ಅವರ ಆಸ್ತಿಯನ್ನು ಮರು ಸ್ಥಾಪಿಸುವಂತೆ ಕೋರಿ ಮೊಕದ್ದಮೆ ಹೂಡುವ ಹಕ್ಕಿದೆ. ಜನ್ಮಭೂಮಿಯ ಮೇಲೆ ಮಸೀದಿ ನಿರ್ಮಿಸಿರುವುದು ತಪ್ಪು. ಆಸ್ತಿ ಹಂಚಿಕೆ ವಿಚಾರದಲ್ಲಿ ಹಲವು ವರ್ಷಗಳ ಹಿಂದೆಯೇ ಒಪ್ಪಂದ ಮಾಡಿಕೊಳ್ಳಲಾಗಿತ್ತು, ಆದರೆ ಆ ಒಪ್ಪಂದ ಕಾನೂನುಬಾಹಿರ ಎಂದು ವಾದಿಸಲಾಗಿದೆ. ಐತಿಹಾಸಿಕ ಪುರಾವೆಗಳನ್ನು ಪರಿಶೀಲಿಸಲು ಅಲಹಾಬಾದ್ ಹೈಕೋರ್ಟ್ 2023ರಲ್ಲಿ ಮಸೀದಿ ಆವರಣದ ಸಮೀಕ್ಷೆಗೆ ಆದೇಶಿಸಿದ್ದು, ಈ ಪ್ರಕ್ರಿಯೆ ನಡೆಯುತ್ತಿದೆ.

ಮಥುರಾದ ಕೃಷ್ಣ ಮಂದಿರವಿರುವ ಸ್ಥಳ ಹಿಂದೂ ಧಾರ್ಮಿಕ ನೆಲೆ ಎನ್ನುವುದಕ್ಕೆ ತಮ್ಮ ಪುಸ್ತಕದಲ್ಲಿ ಹಲವು ಪುರಾವೆಗಳನ್ನು ಒದಗಿಸಿರುವ ಡಾ. ಮೀನಾಕ್ಷಿ ಜೈನ್, ಹಲವು ಶತಮಾನಗಳ ಹಿಂದೆ ಮಥುರಾಕ್ಕೆ ಪ್ರವಾಸ ಕೈಗೊಂಡಿದ್ದ ವಿದೇಶಿ ಪ್ರವಾಸಿಗರ ಗ್ರಂಥಗಳಲ್ಲಿ ಕೃಷ್ಣ ದೇಗುಲದ ಅಸ್ತಿತ್ವದ ಬಗ್ಗೆ ಉಲ್ಲೇಖಿಸಿರುವುದನ್ನೂ ದಾಖಲಿಸಿದ್ದಾರೆ.

1017ರಲ್ಲಿ ಮಹಮ್ಮದ್ ಘಜ್ನವಿ ಮಥುರಾವನ್ನು ಆಕ್ರಮಿಸಿ ಲೂಟಿ ಮಾಡಿದ್ದ. ದೇಗುಲ ವಿನಾಶ ಮಾಡಿದ್ದರ ಬಗ್ಗೆ ಅಲ್-ಉತ್ಬಿ ಎಂಬಾತ ದಾಖಲಿಸಿ, ಅಲ್ಲಿದ್ದ ಹಿಂದೂ ದೇವರ ವಿಗ್ರಹಗಳ ಬಗ್ಗೆ ತಿಳಿಸಿದ್ದ. ಮಹಮ್ಮದ್ ಘಜ್ನವಿ ದೇವಾಲಯಗಳನ್ನು ಸುಟ್ಟು ನೆಲಸಮ ಮಾಡಿದ್ದನ್ನು 11ನೇ ಶತಮಾನದಲ್ಲಿ ಪ್ರವಾಸ ಮಾಡಿದ್ದ ಇರಾನಿನ ಚರಿತ್ರಕಾರ ಅಲ್ಬೆರುನಿ ಬರೆದಿದ್ದಾನೆ. ವಾಸುದೇವ ಇಲ್ಲಿ ಜನಿಸಿದ್ದ ಕಾರಣದಿಂದಾಗಿ ಮಥುರಾ ಪೂಜಾತಾಣವಾಗಿದೆ ಎಂದು ಆತ ಬರೆದಿದ್ದಾನೆ. ಅದೇ ರೀತಿ, ''ಜಜ್ಜ ಎಂಬಾತನು ಮಥುರಾದ ಕೃಷ್ಣ ಜನ್ಮಸ್ಥಾನದಲ್ಲಿ ನಿರ್ಮಾಣ ಮಾಡಿದ್ದ ದೇಗುಲವನ್ನು ಮುಹಮ್ಮದ್ ಘೋರಿಯ ಸೇನಾಧಿಪತಿ ಕುತುಬುದ್ದೀನ್ ಐಬಕ್ ನಾಶಪಡಿಸಿದ್ದ. 12ನೇ ಶತಮಾನದಲ್ಲಿ ಹಿಂದೂ ಅರಸರ ಪ್ರಾಬಲ್ಯ ಕಡಿಮೆಯಾದ್ದರಿಂದ ಮಥುರಾ ಮತ್ತು ಸುತ್ತಮುತ್ತಲಿನ ಎಲ್ಲಾ ಬೌದ್ಧ, ಜೈನ ಮತ್ತು ಹಿಂದೂ ದೇವಾಲಯಗಳು ನಾಶವಾದವು. ಬೌದ್ಧಧರ್ಮವು ಈ ದಾಳಿಯಿಂದ ಚೇತರಿಸಿಕೊಳ್ಳಲಿಲ್ಲ... ನಂತರದ ನಾಲ್ಕು ಶತಮಾನಗಳವರೆಗೆ ಜೈನ, ಹಿಂದೂ ದೇವಾಲಯಗಳನ್ನು ನಾಶಮಾಡುತ್ತಲೇ ಇದ್ದರು'' ಎನ್ನುತ್ತಾರೆ ಮೀನಾಕ್ಷಿ ಜೈನ್.

ಜಹಾಂಗೀರನ ಆಳ್ವಿಕೆಯಲ್ಲಿ (1605-1627) ಬೀರ್ ಸಿಂಗ್ ದೇವ್ ಬುಂದೇಲಾ ಕೇಶವದೇವ ದೇವಾಲಯವನ್ನು ಪುನರ್‌ನಿರ್ಮಾಣ ಮಾಡಿದ್ದರು ಎಂದು ವೆನೆಷಿಯನ್ ಬರಹಗಾರ ಮತ್ತು ಪ್ರವಾಸಿಗ ನಿಕೊಲಾವ್ ಮನುಕ್ಕಿ ಹೇಳುತ್ತಾನೆ. ಅಲ್ಲದೆ ದೇವಾಲಯದ ಎತ್ತರ ಎಷ್ಟಿತ್ತೆಂದರೆ ಅದರ ಮೇಲ್ಭಾಗವನ್ನು ಆಗ್ರಾದಿಂದಲೂ ಕಾಣಬಹುದಿತ್ತು ಎಂದೂ ಆತ ದಾಖಲಿಸಿದ್ದಾನೆ. ಮೊಘಲ್ ಅರಸ ಔರಂಗಜೇಬ್ (1658-1707) 1669ರಲ್ಲಿ ಹಿಂದೂ ಶಾಲೆಗಳು ಮತ್ತು ದೇವಾಲಯಗಳನ್ನು ಕೆಡವಲು ಆದೇಶ ಹೊರಡಿಸಿ 1670ರಲ್ಲಿ ಕಟ್ರ ಕೇಶವದೇವ ದೇವಾಲಯವನ್ನೂ ನಾಶಮಾಡಲು ಸೂಚಿಸುತ್ತಾನೆ. ಇದನ್ನು ಚರಿತ್ರಕಾರ ಸಾಕಿ ಮುಸ್ತೈದ್ ಖಾನ್ ದಾಖಲಿಸಿದ್ದು, ಅದೇ ಸ್ಥಳದಲ್ಲಿ ಎತ್ತರದ ಮಸೀದಿಯನ್ನು ನಿರ್ಮಿಸಲಾಗುತ್ತದೆ ಎಂದು ಹೇಳಿದ್ದಾನೆ.

ಇದಾಗಿ 1770ರಲ್ಲಿ ಮರಾಠ ಅರಸರು ಮಥುರಾ, ಆಗ್ರಾವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡಿದ್ದಾಗ, ಮಥುರಾದ ಕಟ್ರ ಕೇಶವದೇವ ದೇಗುಲದ ಪೂರ್ಣ ಪ್ರದೇಶವನ್ನು ನಜುಲ್ (ಸರಕಾರಿ ಭೂಮಿ) ಎಂದು ಘೋಷಿಸುತ್ತಾರೆ. 1803ರಲ್ಲಿ ಮರಾಠರನ್ನು ಈಸ್ಟ್ ಇಂಡಿಯಾ ಕಂಪನಿ ಸೋಲಿಸಿದ್ದಾಗಲೂ, ಇದನ್ನು ನಜುಲ್ ಭೂಮಿ ಎಂದು ಪರಿಗಣಿಸುವುದನ್ನೇ ಮುಂದುವರಿಸಲಾಗುತ್ತದೆ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಸ್ಥಾಪಕ ಡೈರೆಕ್ಟರ್ ಜನರಲ್ ಆಗಿದ್ದ ಅಲೆಕ್ಸಾಂಡರ್ ಕನ್ನಿಂಗ್‌ಹ್ಯಾಮ್, ಮಥುರಾದ ಜಾಮಾ ಮಸೀದಿಯಲ್ಲಿ ಕೂಡ ಸಮೀಕ್ಷೆಗಳನ್ನು ನಡೆಸಿ ಅಲ್ಲಿ ನಾಗರಿ ಶಾಸನಗಳಿದ್ದದ್ದನ್ನು ಕಂಡುಕೊಂಡಿದ್ದ. ಔರಂಗಜೇಬ್ ಆಳ್ವಿಕೆಯ ಆರಂಭದಲ್ಲಿ ಹಿಂದೂ ದೇವಾಲಯ ಮಥುರಾದಲ್ಲಿತ್ತು ಎನ್ನುವುದು ಕನ್ನಿಂಗ್‌ಹ್ಯಾಮ್‌ನ ಅಭಿಪ್ರಾಯವಾಗಿತ್ತು. ಕೇಶವದೇವ ದೇವಾಲಯ ಭಾರತದಲ್ಲಿನ ಅತಿದೊಡ್ಡ ದೇವಾಲಯಗಳಲ್ಲಿ ಒಂದಾಗಿರಬೇಕು ಎಂದೇ ಆತ ಅಂದಾಜಿಸಿದ್ದಾನೆ.

1815ರಲ್ಲಿ ಕಟ್ರ ಕೇಶವದೇವ ದೇವಸ್ಥಾನದ ಭೂಮಿಯನ್ನು (13.37 ಎಕರೆ) ರಾಜ ಪಟ್ನಿಮಲ್‌ಗೆ ಹರಾಜಿನ ಮೂಲಕ ಮಾರಾಟ ಮಾಡಿದ್ದನ್ನು ಅಂದಿನ ಕಂದಾಯ ಮತ್ತು ಪುರಸಭೆಯ ದಾಖಲೆಗಳಲ್ಲಿ ಅಧಿಕೃತವಾಗಿ ದಾಖಲಿಸಲಾಗಿದೆ. ಈ ಜಮೀನು ಮಾರಾಟದ ವಿರುದ್ಧ ಮುಸ್ಲಿಮರು ಸಲ್ಲಿಸಿದ್ದ ದೂರುಗಳನ್ನು ಅಂದಿನ ನ್ಯಾಯಾಲಯಗಳು ಮತ್ತು ಬ್ರಿಟಿಷ್ ಆಡಳಿತ ಹಲವು ಬಾರಿ ತಿರಸ್ಕರಿಸಿತ್ತು. ಈ ಭೂಮಿ ಮಸೀದಿಗೆ ಸೇರಿಲ್ಲ ಮತ್ತು ಮುಸ್ಲಿಂವಾದಿಗಳ ಸ್ವಾಧೀನದಲ್ಲಿಲ್ಲ. ಕಟ್ರ ಕೇಶವದೇವರನ್ನು ಕಟ್ರ ಈದ್ಗಾ ಎಂದು ಎಲ್ಲಿಯೂ ಹೇಳಲಾಗಿಲ್ಲ ಎಂಬುದನ್ನೂ ಬ್ರಿಟಿಷರ ಕಾಲದಲ್ಲೇ ಸ್ಪಷ್ಟಪಡಿಸಲಾಗಿತ್ತು. ಈ ವಿಚಾರಗಳ ಬಗ್ಗೆ ಡಾ. ಮೀನಾಕ್ಷಿ ಜೈನ್‌ರ ಪುಸ್ತಕದಲ್ಲಿ ಆಳವಾದ ವಿವರಣೆಯಿದೆ.

ಮಂಗಳೂರು ಲಿಟ್‌ಫೆಸ್ಟ್‌ನಲ್ಲಿ ಸಮಯದ ಅಭಾವದ ನಡುವೆಯೂ ಡಾ. ಮೀನಾಕ್ಷಿ ಜೈನ್ ಅವರು ಕಾಶಿ, ಮಥುರಾದ ಕರುಣಾಜನಕ ಕಥೆಗಳನ್ನು ಕೇಳುಗರ ಮನಮುಟ್ಟುವಂತೆ ವಿವರಿಸಿದ್ದರು. ಆಯೋಜಕರು ಇಂಥ ವಿಷಯಗಳ ಬಗೆಗಿನ ಮಾತುಕತೆಗಳನ್ನು ಮತ್ತಷ್ಟು ಅವಧಿಗೆ ವಿಸ್ತರಿಸಬೇಕು ಎಂದು ಕೇಳುಗರಿಗೆ ಅನಿಸಿದ್ದು ಸುಳ್ಳಲ್ಲ.

ದಬ್ಬಾಳಿಕೆಯ ಬೆಂಕಿಯಲ್ಲಿ ಮುದುಡುತ್ತಿರುವ ಗಡಿನಾಡು!

ಕಹಿವಾಸ್ತವ
ರವೀ ಸಜಂಗದ್ದೆ
vveditoped@gmail.com

ಬದುಕಿನಲ್ಲಿ ಅಸ್ತಿತ್ವದ ಹುಡುಕಾಟ ಮಾತ್ರವಲ್ಲದೆ ನಿರಂತರ ಹೋರಾಟವೂ ಇದೆ. ಅದರಲ್ಲೂ ನೀವು ಕಾಸರಗೋಡಿನ ಗಡಿನಾಡ ಕನ್ನಡಿಗರಾಗಿದ್ದರೆ, ಈ ಹುಡುಕಾಟ-ಹೋರಾಟಗಳ ಜತೆಗೆ, ದಶಕಗಳಿಂದ ಆಗುತ್ತಿರುವ ದಬ್ಬಾಳಿಕೆ, ಮಲತಾಯಿ ಧೋರಣೆಗಳನ್ನೂ ತಾಳಿಕೊಂಡು ಬಾಳಬೇಕಾದ ಅನಿವಾರ್ಯತೆಯಿದೆ. ಕನ್ನಡದ ಕುರಿತಾದ ದನಿ, ಅಳಲುಗಳು ಕಡತಗಳಿಗೆ, ಹೋರಾಟದ ಭಾಷಣಗಳಿಗೆ ಸೀಮಿತವಾಗಿಬಿಟ್ಟು, 'ದಿನಾ ಸಾಯೋರಿಗೆ ಅಳೋರ್‍ಯಾರು?' ಅನ್ನುವ ಹಾಗಾಗಿದೆ ಕಾಸರಗೋಡಿನ ಕನ್ನಡಿಗರ ಅಯೋಮಯ ಪರಿಸ್ಥಿತಿ.

'ಕೇರಳ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಮಲಯಾಳಂ ಭಾಷೆಯನ್ನು ಪ್ರಥಮ ಭಾಷೆಯಾಗಿ ಕಲಿಯುವುದು ಕಡ್ಡಾಯ' ಎಂಬ ಅಲ್ಲಿನ ಸರಕಾರದ ಇತ್ತೀಚಿನ ವಿಧೇಯಕವು, ಗಡಿನಾಡಿನ ಕನ್ನಡಿಗರಿಗೆ ಒದಗಿರುವ ಹೊಸ ಪ್ರಹಾರ. ತನ್ಮೂಲಕ ಕಾಸರಗೋಡಿನ ಕನ್ನಡ ಶಾಲೆಗಳಲ್ಲಿ ಕನ್ನಡವನ್ನು ವ್ಯವಸ್ಥಿತವಾಗಿ ಹತ್ತಿಕ್ಕುವ ನಿರ್ಣಾಯಕ ಹಂತವಾಗಿ ಈ ವಿಧೇಯಕದ ಮಂಡನೆಯಾದಂತೆ ಭಾಸವಾಗುತ್ತದೆ.

70 ವರ್ಷಗಳ ಹಿಂದೆ ಭಾಷಾವಾರು ಪ್ರಾಂತ್ಯ ರಚನೆಯ ಸಂದರ್ಭದಲ್ಲಿ ವ್ಯಕ್ತವಾದ 'ಕಾಸರಗೋಡು ಭಾಗವು ಕರ್ನಾಟಕದಲ್ಲಿ ಉಳಿಯಬೇಕು' ಎಂಬ ಆಗ್ರಹವು ಕಡತದಲ್ಲಷ್ಟೇ ಉಳಿದುಬಿಟ್ಟಿತು. ಕೇರಳ ಸರಕಾರದ ಇತ್ತೀಚಿನ ವಿಧೇಯಕದಲ್ಲಿ, 'ಕನ್ನಡ ಮಾಧ್ಯಮ ಶಾಲೆಗಳು ಸೇರಿದಂತೆ ಎಲ್ಲಾ ಸರಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ, ಒಂದರಿಂದ ಹತ್ತನೆಯ ತರಗತಿಯವರೆಗೆ ಮಲಯಾಳಂ ಅನ್ನು ಪ್ರಥಮ ಭಾಷೆಯಾಗಿ ಕಡ್ಡಾಯಗೊಳಿಸಬೇಕು' ಎಂದು ಉಲ್ಲೇಖಿಸಲಾಗಿದೆ.

ಕನ್ನಡದವರೇ ಹೆಚ್ಚಾಗಿ ಇರುವ ಕಾಸರಗೋಡಿನಲ್ಲಿ ವಿದ್ಯಾರ್ಥಿಗಳು ಮಲಯಾಳಂ ಭಾಷೆಯನ್ನು ಕಲಿಯಬೇಕು ಎಂದು ಆಗ್ರಹಿಸುವ ಈ ವಿಧೇಯಕವು ಮಕ್ಕಳ ಮೂಲಭೂತ ಹಕ್ಕಿನ ಸ್ಪಷ್ಟ ಉಲ್ಲಂಘನೆಯಲ್ಲವೇ? ಭಾಷಾ ಅಲ್ಪಸಂಖ್ಯಾತರ ಭಾಷೆ, ಜೀವನ ವಿಧಾನ ಮತ್ತು ಸಂಸ್ಕೃತಿಯನ್ನು ಬೆಂಬಲಿಸುವ ಮತ್ತು ರಕ್ಷಿಸುವ ಉದ್ದೇಶದಿಂದ ಸಂವಿಧಾನದ 350-ಎ ವಿಧಿಯಲ್ಲಿ ಈ ಬಗೆಗಿನ ವಿವರಗಳನ್ನು ಹೀಗೆ ಸ್ಪಷ್ಟವಾಗಿ ಹೇಳಲಾಗಿದೆ: 'ಭಾರತದ ಯಾವುದೇ ರಾಜ್ಯವು ತನ್ನ ಅಧಿಕೃತ ರಾಜ್ಯಭಾಷೆಯನ್ನು ಮಾತ್ರ ಪ್ರಥಮ ಭಾಷೆಯನ್ನಾಗಿ ಮಾಡಲು/ಕಲಿಸುವಂತೆ ನಿರ್ಣಯ ಮಾಡಲಾಗದು'. ಹಾಗೇನಾದರೂ ಯಾವುದೇ ಸರಕಾರ ನಿರ್ಣಯ ಮಾಡಿದರೆ, ಅದು ಮಕ್ಕಳ ಕಲಿಕಾ ಹಕ್ಕು ಮತ್ತು ಭಾಷಾ ಸ್ವಾತಂತ್ರ್ಯದ ಸ್ಪಷ್ಟ ಉಲ್ಲಂಘನೆಯಾಗುತ್ತದೆ. ಕೇರಳ ಸರಕಾರವು ಈ ವಿಚಾರದಲ್ಲಿ ಇಂಥ ಸ್ಪಷ್ಟ ಉಲ್ಲಂಘನೆ ಮಾಡಿರುವುದು ಕಂಡುಬರುತ್ತಿದೆ.

ಕೇರಳ ಸರಕಾರವು ಕಾಸರಗೋಡಿನಲ್ಲಿ ಕನ್ನಡದ ಮೇಲೆ ಹೀಗೆ ನಿರಂತರ ದಾಳಿಯನ್ನು ಮಾಡಿಕೊಂಡೇ ಬಂದಿದೆ. ದಶಕಗಳ ಹಿಂದಿನವರೆಗೂ ಕಾಸರಗೋಡಿನ ಸರಕಾರಿ ಕಚೇರಿಗಳಲ್ಲಿ ಅರ್ಜಿಗಳನ್ನು ಕನ್ನಡದಲ್ಲೇ ಬರೆಯಬಹುದಿತ್ತು ಮತ್ತು ಭರ್ತಿ ಮಾಡಬೇಕಾದ ನಮೂನೆಗಳಲ್ಲಿನ ವಿವರಗಳು ಕನ್ನಡದಲ್ಲೂ ಇರುತ್ತಿದ್ದವು. ಆಗೆಲ್ಲಾ ಸರಕಾರಿ ಕಚೇರಿಗಳಲ್ಲಿ ಕನ್ನಡ ಬಲ್ಲ ಸ್ಥಳೀಯ ಸಿಬ್ಬಂದಿಗಳು ಇರುತ್ತಿದ್ದರು. ಈಗ ಪರಿಸ್ಥಿತಿ ಬದಲಾಗಿ, ಕನ್ನಡದ ಗಂಧ-ಗಾಳಿ ಗೊತ್ತಿಲ್ಲದ ಮಲಯಾಳಿ ನೌಕರರನ್ನು ನೇಮಿಸಲಾಗಿದ್ದು, 'ಮಲಯಾಳಂ ಅಥವಾ ಇಂಗ್ಲಿಷ್‌ನಲ್ಲಿ ಅರ್ಜಿಯನ್ನು ಕೊಡಿ' ಎಂದು ಅವರು ತಾಕೀತುಮಾಡುತ್ತಾರೆ. 'ಕಾಸರಗೋಡು ಭಾಗದಲ್ಲಿ ಪ್ರಕಟವಾಗುವ ಎಲ್ಲಾ ಸರಕಾರಿ ಆದೇಶಗಳು, ಅರ್ಜಿ ನಮೂನೆಗಳು ಕನ್ನಡದಲ್ಲೂ ಇರಬೇಕು' ಎಂದು ಸಾಕಷ್ಟು ಬಾರಿ ಆದೇಶವಾಗಿದೆ. 'ಸರಕಾರಿ ಕಚೇರಿಗಳ ನಾಮಫಲಕ, ರಸ್ತೆಬದಿಯ ಮಾರ್ಗಸೂಚಿ/ಸ್ಥಳಸೂಚಿ ಫಲಕಗಳಲ್ಲಿ ಕನ್ನಡದಲ್ಲೂ ಹೆಸರು/ವಿವರಗಳು ಇರಬೇಕು' ಎನ್ನುವ ನಿಯಮವಿದೆ. 'ಕನ್ನಡ ಮಾಧ್ಯಮ ಶಾಲೆಗಳಲ್ಲಿ, ಕನ್ನಡ ಗೊತ್ತಿರುವವರೇ ಶಿಕ್ಷಕರಾಗಿ ನೇಮಕವಾಗಬೇಕು' ಅಂತಲೂ ಕಡತಗಳಲ್ಲಿದೆ. ಆದರೆ ಇವ್ಯಾವುದೂ ಪಾಲನೆಯಾಗುತ್ತಿಲ್ಲ ಎಂಬುದೇ ದುರಂತ! ಒಟ್ಟಿನಲ್ಲಿ, ಕನ್ನಡದ ಪರವಾಗಿ ಅಲ್ಲಿ ಯಾವುದೂ-ಏನೂ ನಡೆಯುತ್ತಿಲ್ಲ...

ಕರ್ನಾಟಕ ಸರಕಾರವು ಕೇರಳದ ಈ ನಡೆಯನ್ನು ಹೇಳಿಕೆಗಳಲ್ಲಿ ಖಂಡಿಸಿದೆ, ಈ ವಿವಾದಿತ ವಿಧೇಯಕಕ್ಕೆ ಅಂಕಿತ ಹಾಕದಂತೆ ಕೇರಳದ ರಾಜ್ಯಪಾಲರಿಗೆ ಲಿಖಿತ ಮನವಿ ಸಲ್ಲಿಸಿದೆ. ಜತೆಗೆ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಪತ್ರ ಬರೆದು, ಈ ವಿವಾದಿತ ವಿಧೇಯಕವನ್ನು ಹಿಂಪಡೆಯುವಂತೆ ಆಗ್ರಹಿಸಿದ್ದಾರೆ. ಸದ್ಯಕ್ಕೆ ಈ ವಿವಾದ ರಾಜಕೀಯ ಸ್ವರೂಪವನ್ನು ಪಡೆದುಕೊಂಡು, ಕರ್ನಾಟಕ ಮತ್ತು ಕೇರಳದ ರಾಜಕಾರಣಿಗಳು ಹೇಳಿಕೆ-ಪ್ರತಿಹೇಳಿಕೆ ಕೊಡುವುದರಲ್ಲಿ ತಲ್ಲೀನರಾಗಿದ್ದಾರೆ. ಕರ್ನಾಟಕದ ರಾಜಕೀಯ ಪಕ್ಷಗಳು ನೆಲ-ಜಲ-ಭಾಷೆಯ ವಿಚಾರದಲ್ಲಿ ರಾಜಕೀಯವನ್ನು ಬದಿಗಿರಿಸಿ, ನಾಡಿನ ಒಳಿತಿಗಾಗಿ ಒಂದಾಗಿ ಹೋರಾಡಿದ, ಪ್ರತಿಭಟನೆ ನಡೆಸಿದ ಉದಾಹರಣೆಯಿಲ್ಲದಿರುವುದು ನಮ್ಮ ದುರ್ವಿಧಿ.

ಈ ವಿವಾದಿತ ವಿಧೇಯಕವನ್ನು ಹಿಂಪಡೆಯುವ ಅಥವಾ ಕನ್ನಡ ಭಾಷೆಗೆ ಪೂರಕವಾಗಿ ಅದರಲ್ಲಿ ಬದಲಾವಣೆ ತರುವ ಕುರಿತು ಕೇರಳ ಸರಕಾರದಿಂದ ಈವರೆಗೆ ಯಾವುದೇ ಖಚಿತ ಭರವಸೆ ಸಿಕ್ಕಿಲ್ಲ. ಹೀಗಾಗಿ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಕರ್ನಾಟಕ ಸರಕಾರದ ನಿಯೋಗವು ರಾಷ್ಟ್ರಪತಿಗಳಲ್ಲಿಗೆ ತೆರಳಿ ಈ ವಿಧೇಯಕಕ್ಕೆ ತಡೆ ತರುವಂತೆ ಕೋರುವ ತೀರ್ಮಾನವಾಗಿದೆ.

ಆದರೆ, ಕುರ್ಚಿ ಕಾಳಗದಲ್ಲಿ ವ್ಯಸ್ತವಾಗಿರುವ ರಾಜ್ಯ ಸರಕಾರ ಈ ವಿಚಾರದಲ್ಲಿ ಎಷ್ಟರ ಮಟ್ಟಿಗೆ ಗಂಭೀರ ಪ್ರಯತ್ನ ನಡೆಸಲಿದೆ ಎಂಬುದನ್ನು ಕಾದುನೋಡಬೇಕಿದೆ. ಈ ವಿಚಾರಕ್ಕೆ ವಿವಾದದ ಸ್ವರೂಪ ದಕ್ಕಿದ ಹಿನ್ನೆಲೆಯಲ್ಲಿ ಕೇರಳದ ಮುಖ್ಯಮಂತ್ರಿ ಸ್ಪಷ್ಟನೆ ಕೊಟ್ಟು, ''ಕೇರಳದಲ್ಲಿರುವ ಕನ್ನಡ ಮತ್ತು ತಮಿಳು ಭಾಷಾ ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವ ಸ್ಪಷ್ಟ ಷರತ್ತನ್ನು ವಿಧೇಯಕವು ಒಳಗೊಂಡಿದೆ. ನಾವು ಯಾವುದೇ ಭಾಷೆಯನ್ನು ಯಾರ ಮೇಲೂ ಹೇರುತ್ತಿಲ್ಲ; ಭಾಷಾ ಸ್ವಾತಂತ್ರ್ಯವನ್ನು ಸಂಪೂರ್ಣ ರಕ್ಷಿಸಲಾಗಿದೆ'' ಅಂತ ಒಂದಷ್ಟು ತೇಪೆ ಹಚ್ಚಲು ಯತ್ನಿಸಿದ್ದಾರೆ. ಇಂಥ ಅನೇಕ ವಿಧೇಯಕ, ನಿರ್ಣಯ, ವರದಿಗಳು ಈ ಹಿಂದೆಯೂ ಮಂಡನೆಯಾಗಿದ್ದರೂ, ಅವೆಲ್ಲವೂ ಕಡತಗಳಲ್ಲಷ್ಟೇ ಉಳಿದ ಕಹಿ ಉದಾಹರಣೆಗಳಿರುವಾಗ, ಈ ಸಮಜಾಯಿಷಿಯು ಕಡತದಲ್ಲಿನ ದಾಖಲೆಯಾಗಷ್ಟೇ ಉಳಿಯಲಿದೆ ಮತ್ತು ಮುಂಬರುವ ದಿನಗಳಲ್ಲಿ ಕಾಸರಗೋಡಿನಲ್ಲಿ ಕನ್ನಡವು ಕ್ರಮೇಣ ನಶಿಸಲಿದೆ.

ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿರುವ ಕಾಸರಗೋಡು ಪ್ರದೇಶದಲ್ಲಿ ಮಲಯಾಳಂ ಭಾಷೆಯನ್ನು ಮತ್ತಷ್ಟು ಆಳವಾಗಿ ಬೇರೂರಿಸುವ ಯತ್ನದ ನಿರ್ಣಾಯಕ ಘಟ್ಟವಿದು ಎಂದರೆ ತಪ್ಪಾಗಲಾರದು. ಒಂದು ಕಾಲದಲ್ಲಿ ಕನ್ನಡ ಮತ್ತು ಮಲಯಾಳಂ ಅನ್ನು ಸಮಾನವಾಗಿ ಮಾತನಾಡುವ ಜನರಿದ್ದ ಚಂದ್ರಗಿರಿ ನದಿಯಾಚೆಗಿನ ಹೊಸದುರ್ಗದವರೆಗಿನ ಪ್ರದೇಶದಲ್ಲಿ ಮಲಯಾಳಂ ಈಗಾಗಲೇ ಕನ್ನಡವನ್ನು ಮೀರಿ ಬೆಳೆದಿದೆ. ಇನ್ನಿರುವುದು ನದಿಯ ಉತ್ತರ ಭಾಗ, ಅಲ್ಲಿಯೂ ಕನ್ನಡ ಮತ್ತು ಕನ್ನಡಿಗರ ಪರಿಸ್ಥಿತಿ ಚಿಂತಾಜನಕವಾಗಿದೆ. ಈ ನಡುವೆ ಕೆಲವು 'ಕನ್ನಡ ಹೋರಾಟಗಾರರ' ನಿಲುವುಗಳೂ ಕೊಂಚ ವಿಚಿತ್ರವೂ ಕಳವಳಕಾರಿಯೂ ಆಗಿವೆ. ಅವರು, ಕೇರಳದ ಈ ತೀರ್ಮಾನವನ್ನು ವಿರೋಧಿಸುವ ಬದಲಾಗಿ, ನಮ್ಮಲ್ಲೂ ಇಂಥದೇ ವಿಧೇಯಕವನ್ನು ಮಂಡಿಸುವ ನಿರ್ಣಯವನ್ನು ಕರ್ನಾಟಕ ಸರಕಾರವು ಕೈಗೊಳ್ಳಬೇಕು ಎಂದಿರುವುದು ಗಡಿನಾಡು ಕನ್ನಡಿಗರಿಗೆ ನುಂಗಲಾರದ ತುತ್ತಾಗಿದೆ. ಕರ್ನಾಟಕದ ರಾಜಕೀಯ ಪಕ್ಷಗಳು/ಈವರೆಗಿನ ಸರಕಾರಗಳು ಕಾಸರಗೋಡಿನ ಕನ್ನಡಿಗರ ಹಿತರಕ್ಷಣೆಗೆ ಇಚ್ಛಾಶಕ್ತಿಯನ್ನು ಪ್ರದರ್ಶಿಸಿದ್ದರೆ ಗಡಿನಾಡ ಕನ್ನಡಿಗರಿಗೆ ಇಂಥ ಇಕ್ಕಟ್ಟಿನ ಪರಿಸ್ಥಿತಿ ಬರುತ್ತಿರಲಿಲ್ಲ. ಜತೆಗೆ, ಶಾಸಕ/ಸಂಸದರಂಥ ಚುನಾಯಿತ ಜನಪ್ರತಿನಿಧಿಗಳೂ ಅಸಡ್ಡೆ ತೋರಿದರೆ, ಇಲ್ಲಿನ ಕನ್ನಡಿಗರು ಏನನ್ನು ತಾನೇ ನಿರೀಕ್ಷಿಸಲಾದೀತು? ಇದಲ್ಲದೆ ಗಡಿನಾಡಿನಲ್ಲಿ ಐಕ್ಯರಂಗವು ಕನ್ನಡ ಭಾಷೆಯನ್ನೂ, ಎಡರಂಗವು ತುಳುಭಾಷೆಯನ್ನೂ ತಂತಮ್ಮ ರಾಜಕೀಯ ದಾಳವಾಗಿ ಉಪಯೋಗಿಸಿಕೊಂಡು ಬಂದಿರುವುದು ಅಲ್ಲಿನ ಈಗಿನ ಈ ಪರಿಸ್ಥಿತಿಗೆ ಮತ್ತೊಂದು ಕಾರಣವಾಗಿದೆ.

ಪ್ರತಿಯೊಂದು ಭಾಷೆ, ಸಂಸ್ಕೃತಿ, ಆಚಾರ-ವಿಚಾರಗಳನ್ನು ಗೌರವಿಸುವುದು ನಮ್ಮ ದೇಶದ ಏಕತೆ ಮತ್ತು ಶ್ರೇಷ್ಠತೆಯ ಪ್ರತೀಕ. ಭಾಷಾ ಅಲ್ಪಸಂಖ್ಯಾತರ ಹಕ್ಕುಗಳನ್ನು ದಮನಿಸುವ ಕೇರಳದ ಈ ವಿಧೇಯಕವು ರಾಷ್ಟ್ರಪತಿಗಳಿಂದ ತಿರಸ್ಕೃತಗೊಂಡು ಒಂದು ಮಾದರಿ ವ್ಯವಸ್ಥೆ ಸೃಷ್ಟಿಯಾಗಲಿ. ಕಾಸರಗೋಡಿನ ಕನ್ನಡಿಗರನ್ನು ಒಂದಲ್ಲಾ ಒಂದು ರೀತಿಯಲ್ಲಿ ಕೆರಳಿಸುತ್ತಿರುವ ಕೇರಳ ಸರಕಾರದ ಪ್ರಯತ್ನ ವಿಫಲವಾಗಲಿ. ಕಾಸರಗೋಡಿನ ಭಾಷಾ ಅಲ್ಪಸಂಖ್ಯಾತ ಕನ್ನಡಿಗರ ಆಶೋತ್ತರಗಳಿಗೆ ಪೂರಕವಾದ ವಿಧೇಯಕ/ವರದಿ ಹೊರಬಂದು ಅನುಷ್ಠಾನಗೊಳ್ಳುವಂತಾಗಲಿ, ಸೌಹಾರ್ದದ ವಾತಾವರಣ ಹೊಮ್ಮುವಂತಾಗಲಿ. ಹಾಗಾದೀತೇ? ಸದ್ಯಕ್ಕಂತೂ 'ಬೆಂಕಿ ಬಿದ್ದಿದೆ ಮನೆಗೆ ಓ ಬೇಗ ಬನ್ನಿ..!' ಎಂಬ ಕಯ್ಯಾರರ ದಶಕಗಳ ಹಿಂದಿನ ಘೋಷಣೆ ಮತ್ತೆ ಮತ್ತೆ ನೆನಪಾಗುತ್ತಿದೆ.

ವಿಪರ್ಯಾಸವೆಂದರೆ, ಅಂದಿನಿಂದಲೂ ಯಾರೂ 'ಕಾಸರಗೋಡು ಕನ್ನಡಿಗರ' ನೆರವಿಗೆ ಪ್ರಾಮಾಣಿಕವಾಗಿ ಬರಲೇ ಇಲ್ಲ, ಛೇ!

(ಲೇಖಕರು ಗಡಿನಾಡ ಕನ್ನಡಿಗರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಇದು ಹೆಮ್ಮೆಯ ಸಂಗತಿ

ಭಾರತವು ಇಂದು ವಿಶ್ವಸ್ತರದಲ್ಲಿ ತನ್ನ ಇರುವಿಕೆಯ ಪರಿಚಯವನ್ನು ಚೆನ್ನಾಗಿಯೇ ಮಾಡುತ್ತಿದೆ ಎಂಬುದಕ್ಕೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ, ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಅವರ ಈ ಮಾತುಗಳೇ ಸಾಕ್ಷಿ:

''ಕಳೆದೊಂದು ಶತಮಾನದಲ್ಲಿ ಯಾವುದಾದರೊಂದು ದೇಶವು ತೀವ್ರಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿದೆಯೆಂದರೆ ಅದು ಭಾರತ. ಇದರ ಶಕ್ತಿ ಎಲ್ಲಾ ಆಯಾಮಗಳಲ್ಲೂ ಹೆಚ್ಚುತ್ತಿದೆ. ಇದೊಂದು ರೀತಿ ಹೊಸ ಭಾರತ, ಹೊಸ ಜಾಗೃತಿ. ಸದ್ಯ, ಜಗತ್ತಿನ ಬಲಿಷ್ಠ ರಾಷ್ಟ್ರಗಳ ಯಾದಿಯಲ್ಲಿ 5ನೇ ಸ್ಥಾನದಲ್ಲಿರುವ ಭಾರತವು ಹಿಂದೊಮ್ಮೆ ತನ್ನನ್ನು ಆಳಿದ್ದ ಇಂಗ್ಲೆಂಡನ್ನೂ ಹಿಂದಕ್ಕೆ ತಳ್ಳಿದೆ. ಭಾರತದ ಜಿಡಿಪಿ ವೃದ್ಧಿಯು ಶೇ. 6-7ರ ಮಟ್ಟದಲ್ಲಿ ಸಾಗುತ್ತಿದ್ದು, ಇದೇ ಸ್ಥಿತಿಯನ್ನು ಕಾಯ್ದುಕೊಂಡರೆ 2030ರ ಹೊತ್ತಿಗೆ ಅದು ವಿಶ್ವದ ಮೂರನೇ ಅತ್ಯಂತ ಪ್ರಬಲ ರಾಷ್ಟ್ರವಾಗಿ ಹೊರಹೊಮ್ಮುವುದರಲ್ಲಿ ಅನುಮಾನವೇ ಇಲ್ಲ. ಒಂದು ಕಾಲಕ್ಕೆ ಬಡದೇಶ ಎನಿಸಿಕೊಂಡಿದ್ದ ಭಾರತವಿಂದು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಅಗ್ರಸ್ಥಾನದಲ್ಲಿದೆ. ವಿಶ್ವದ ಯಾವುದೇ ಭಾಗದಲ್ಲಿ ಈ ಕ್ಷೇತ್ರದ ಕುರಿತಾದ ಮಾತುಕತೆ ಹೊಮ್ಮಿದಾಗ, ಬೆಂಗಳೂರು-ಹೈದರಾಬಾದ್-ಪುಣೆ ನಗರಗಳ ಉಲ್ಲೇಖ ಬಂದೇ ಬರುತ್ತದೆ. ಇನ್ಫೋಸಿಸ್, ವಿಪ್ರೊ, ಟಿಸಿಎಸ್ ಕಂಪನಿಗಳು ಅಗ್ರಸ್ಥಾನದಲ್ಲಿ ಇರುವುದಷ್ಟೇ ಅಲ್ಲ, ಆ್ಯಪಲ್ ಕಂಪನಿ ಕೂಡ ಭಾರತದಲ್ಲಿ ಗಟ್ಟಿನೆಲೆಯನ್ನು ಕಂಡುಕೊಂಡಿದೆ. ಟೆಸ್ಲಾ ಕಂಪನಿ ಭಾರತದೊಂದಿಗೆ ಮಾತುಕತೆ ನಡೆಸುತ್ತಿದೆ. ಇಂದು ಭಾರತವು ಅತಿ ದೊಡ್ಡ consumer economy ಆಗಿದ್ದು, ಇಲ್ಲಿ ಸರಾಸರಿ 28 ವರ್ಷದವರೇ ಹೆಚ್ಚಿನ ಸಂಖ್ಯೆಯಲ್ಲಿ ದ್ದಾರೆ. 2030ರ ಹೊತ್ತಿಗೆ ಆಧುನಿಕ ಸಲಕರಣೆಗಳ ಸರಬರಾಜಿನ ಪೈಕಿ ನಾಲ್ಕನೇ ಒಂದರಷ್ಟು ಭಾರತದಿಂದಲೇ ಪೂರೈಕೆ ಆದೀತು. ಇನ್ನು ರಕ್ಷಣಾ ಕ್ಷೇತ್ರದಲ್ಲೂ ಭಾರತ ಸಾಕಷ್ಟು ಪ್ರಗತಿ ಸಾಧಿಸು ತ್ತಿದ್ದು, ಸೇನಾಬಲ, ನೌಕಾದಳ, ವಾಯುಪಡೆಗಳಲ್ಲಿ ಮುಂಚೂಣಿಯಲ್ಲಿದೆ. ಇವೆಲ್ಲಕ್ಕೂ ಕಾರಣ ಭಾರತದ ನಾಯಕತ್ವ ಮತ್ತು ವಿದೇಶಾಂಗ ನೀತಿ. ವಿದೇಶಿ ಬಾಂಧವ್ಯವನ್ನು ಹೇಗೆ ಇಟ್ಟುಕೊಂಡು ಬೆಳೆಸಿಕೊಳ್ಳಬೇಕು ಎಂಬ ಸ್ಪಷ್ಟ ಕಲ್ಪನೆ ಭಾರತದ ನಾಯಕರಿಗಿದೆ. ಇದು ಕೇವಲ ನಾಯಕತ್ವದ ವಿಷಯವಲ್ಲ, ಭಾರತೀಯರ ಮನೋಬಲವೂ ಇದಕ್ಕೆ ಕಾರಣವಾಗಿದೆ. ಚೀನಾದಂಥ ರಾಷ್ಟ್ರದೊಡನೆ ಒಂದೆಡೆ ಗಡಿ ತಕರಾರು ಇದ್ದರೂ, ಅದರೊಂದಿಗಿನ ವ್ಯಾಪಾರ-ವ್ಯವಹಾರಗಳು ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳುತ್ತಿರುವುದು ಇದಕ್ಕೊಂದು ನಿದರ್ಶನ. ಜಿ-20 ಒಕ್ಕೂಟದ ಮುಂದಾಳತ್ವ ವಹಿಸಿ ಎಲ್ಲ ದೇಶಗಳೊಂದಿಗೆ ಅತ್ಯಂತ ಸಮತೋಲನದ ಸಂಬಂಧ ಇಟ್ಟುಕೊಂಡಿರುವ ಭಾರತ ಯಾರ ಕೈಗೊಂಬೆಯೂ ಅಲ್ಲ; ಅದು 21ನೇ ಶತಮಾನದ ಎಲ್ಲ ಸವಾಲುಗಳನ್ನೂ ಎದುರಿಸುವ ಶಕ್ತಿ ಹೊಂದಿದೆ. ನವೀಕರಿಸಬಹುದಾದ ಇಂಧನ, ಯೋಗ ಮುಂತಾದ ಕ್ಷೇತ್ರಗಳಲ್ಲೂ ಉನ್ನತ ಸಾಧನೆ ಮಾಡುತ್ತಿದೆ. ವಿಶ್ವದ ದೊಡ್ಡ ದೊಡ್ಡ ಕಂಪನಿಗಳ ಸಿಇಒಗಳು ಭಾರತೀಯರು....''

ಈಗ ಹೇಳಿ, ಭಾರತೀಯರಾಗಿ ನಾವು ಹೆಮ್ಮೆ ಪಡಬೇಕೋ ಬೇಡವೋ? ಅಮೆರಿಕದ ಮಾಜಿ ಅಧ್ಯಕ್ಷರು ಭಾರತವನ್ನು ಮತ್ತು ಭಾರತದ ಶಕ್ತಿಯನ್ನು ಸುಖಾಸುಮ್ಮನೆ ಹೊಗಳಿಲ್ಲ. ಇಂದು ಭಾರತವು, ಅದೆಷ್ಟೇ ಪ್ರಬಲ ಎನ್ನಲಾಗುವ ರಾಷ್ಟ್ರದ ಎದುರೂ ತಲೆಬಗ್ಗಿಸಿ ನಡೆಯುತ್ತಿಲ್ಲ, ಸಾಕಷ್ಟು ರಾಷ್ಟ್ರಗಳು ಭಾರತದ ಮನೋಬಲವನ್ನು ಕುಗ್ಗಿಸುವ ಪ್ರಯತ್ನ ಮಾಡಿದ್ದರೂ, ಇಲ್ಲಿಯತನಕ ಯಾರೂ ಯಶಸ್ಸು ಕಂಡಂತಿಲ್ಲ. ಇಂಥ ಮಹಾನ್ ರಾಷ್ಟ್ರದ ಪ್ರಜೆಗಳು ನಾವು ಎಂದು ಹೇಳಿಕೊಳ್ಳಲು ಸಂತಸಪಡೋಣ, ತಲೆಯೆತ್ತಿ ನಡೆಯೋಣ.

- ಶಂಕರನಾರಾಯಣ ಭಟ್, ಮಾಡಗೇರಿ

ಭಟ್ಟರ್ ಸ್ಕಾಚ್

- **ಪ್ರಭಾಕರ ಸಾಮಂತ, ಬೆಂಗಳೂರು**
ಭಟ್ರೇ, ಅರ್ಥಧಾರಿಗಳು ಒಂದು ಸಣ್ಣ ಪದ್ಯಕ್ಕೆ ಒಂದು ಗಂಟೆ ಅರ್ಥ ಹೇಳುವುದು ಯಾಕೆ?
- **ಪದ್ಯದ ಅರ್ಥ ಜನರಿಗೆ ತಿಳಿಯಲಿ ಅಂತಲ್ಲ, ಇಷ್ಟು ಅರ್ಥ ಹೇಳುವವರೆಗೂ ಭಾಗವತರು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಲಿ ಎಂಬ ಕಾಳಜಿಯಿಂದ!**

- **ವಿವೇಕ ವೈದ್ಯ, ಯಲ್ಲಾಪುರ**
ಭಟ್ರೇ, ತಾಳಮದ್ದಳೆಯಲ್ಲಿ ಎದುರಾಳಿ ಅರ್ಥಧಾರಿಯನ್ನು ಸೋಲಿಸುವುದು ಹೇಗೆ?
- **'ಒಂದು ತಾಸು ಅರ್ಥ ಹೇಳಿದ ಬಳಿಕ ನೀವು ಹೇಳಿದ್ದೇ ಅರ್ಥವಾಗಲಿಲ್ಲ, ಇನ್ನೊಮ್ಮೆ ಹೇಳಿ' ಎಂದರೆ ಸಾಕು!**

- **ಚಂದ್ರು, ಉಜಿರೆ**
ಭಟ್ರೇ, ರಾಮಾಯಣದ ಪ್ರಸಂಗ ನಡೆಯುತ್ತಿರುವಾಗ ಅರ್ಥಧಾರಿಗಳು ರಷ್ಯಾ-ಉಕ್ರೇನ್ ಯುದ್ಧದ ಬಗ್ಗೆ ಮಾತಾಡ್ತಾರಲ್ಲ?
- **ಅದು ವಿಷಯಾಂತರವಲ್ಲ, ತಮ್ಮ ಪಾಂಡಿತ್ಯಕ್ಕೆ 'ಗಡಿ'ಯ ಹಂಗಿಲ್ಲ ಎಂದು ತೋರಿಸುವ ಒಣಪ್ರದರ್ಶನ!**

- **ಅರುಣ ಸಿ., ಮಂಗಳೂರು**
ಭಟ್ರೇ, ಅರ್ಥಧಾರಿಗಳು ಗಂಭೀರವಾಗಿ ವಾದ ಮಾಡುವಾಗ ಆಗಾಗ ನೀರು ಕುಡಿಯುತ್ತಾರಲ್ಲ?
- **ತಮ್ಮ ಬಿಸಿಬಿಸಿ ವಾದಕ್ಕೆ ತಾವೇ ಸುಟ್ಟುಹೋಗಬಾರದು ಎಂದು 'ಕೂಲ್' ಆಗಲು!**

- **ನಾಗೇಂದ್ರ ಭಟ್, ಶಿರಸಿ**
ಭಟ್ರೇ, ಅರ್ಥಧಾರಿಗಳು ಕೈಗಡಿಯಾರ ಕಟ್ಟಿಕೊಳ್ಳುವುದು ಯಾಕೆ?
- **ಎದುರಾಳಿ ಅರ್ಥಧಾರಿಯ ಮಾತು ಮುಗಿಯುವ ಹೊತ್ತಿಗೆ ತಾರೀಖು ಬದಲಾಗಿದೆಯಾ ಎಂದು ಪರೀಕ್ಷಿಸಿಕೊಳ್ಳುವುದಕ್ಕೆ!**

- **ಕಿರಣ್ ಗುರುವಾಯನಕೆರೆ, (ಇಮೇಲ್ ಮೂಲಕ)**
ಭಟ್ರೇ, ಒಬ್ಬ ಶ್ರೇಷ್ಠ ಅರ್ಥಧಾರಿಯ ಲಕ್ಷಣವೇನು?
- **ತಾನು ಹೇಳಿದ್ದು ತನಗೇ ಅರ್ಥವಾಗದಿದ್ದರೂ, ಎದುರಾಳಿ ಮಾತ್ರ ಗೊಂದಲದಲ್ಲಿ ಸೋಲುವಂತೆ ಮಾಡುವುದು!**

ಕಾಸರಗೋಡಿನ ಮಲಯಾಳೀಕರಣಕ್ಕೆ ನಾವೂ ಕಾರಣ!

ಲೋಕಮತ
ಲೋಕೇಶ್ ಕಾಯರ್ಗ
vveditoped@gmail.com

ಕೇರಳದಲ್ಲಿ ಮಲಯಾಳಂ ಕಲಿಕೆ ಕಡ್ಡಾಯಗೊಳಿಸುವ ಮಲಯಾಳಂ ಭಾಷಾ ಮಸೂದೆ-2025 ಕರ್ನಾಟಕ ಮತ್ತು ಕೇರಳ ರಾಜ್ಯಗಳ ನಡುವೆ ಭಾರಿ ಚರ್ಚೆಗೆ ಕಾರಣವಾಗಿದೆ. ಕರ್ನಾಟಕದ ಸಿಎಂ ಸಿದ್ದರಾಮಯ್ಯ ಅವರು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಪತ್ರ ಬರೆದು, ಈ ಮಸೂದೆಯು ಕಾಸರಗೋಡಿನ ಕನ್ನಡಿಗರ ಭಾಷಾ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಈ ನಡುವೆ ಬೆಳಗಾವಿ ವಿಷಯದಲ್ಲಿ 'ಉಗ್ರ' ಹೋರಾಟ ನಡೆಸುವ ರಾಜ್ಯಮಟ್ಟದ ಕೆಲವು ಕನ್ನಡ ಸಂಘಟನೆಗಳು, ಈ ವಿಷಯದಲ್ಲಿ ಕೇರಳ ಸರಕಾರದ ನಿರ್ಧಾರವನ್ನು ಸಮರ್ಥಿಸಿ ಮಾತನಾಡಿದ್ದಾರೆ. ಕೇರಳ ಸರಕಾರದ ನಿಲುವನ್ನು ವಿರೋಧಿಸದೆ ಇದೇ ಮಾದರಿಯಲ್ಲಿ ನಮ್ಮಲ್ಲೂ ಕಾನೂನು ಜಾರಿಗೊಳಿಸಬೇಕೆನ್ನುವುದು ಈ ಸಂಘಟನೆಗಳ ವಾದ. ಕಾಸರಗೋಡನ್ನು ಮತ್ತು ಅಲ್ಲಿನ ಕನ್ನಡಿಗರ ಬವಣೆಯನ್ನು ನಾವು ಎಷ್ಟರ ಮಟ್ಟಿಗೆ ಅರ್ಥ ಮಾಡಿಕೊಂಡಿದ್ದೇವೆ ಎನ್ನಲು ಈ ಮಾತುಗಳೇ ಸಾಕ್ಷಿ !

ಕನ್ನಡ ಪರ ಚಳವಳಿಯಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ನಾರಾಯಣ ಗೌಡರ ಪ್ರಕಾರ, ಕಾಸರಗೋಡು ಕನ್ನಡಿಗರ ಹಿತರಕ್ಷಣೆಗಾಗಿ ಕೇರಳ ಸರಕಾರದ ಈ ನಿರ್ಧಾರವನ್ನು ವಿರೋಧಿಸಿದರೆ ಮುಂದೆ ರಾಜ್ಯಕ್ಕೆ ಸಮಸ್ಯೆಯಾಗಲಿದೆ. ಮುಂದೊಂದು ದಿನ ಕರ್ನಾಟಕದಲ್ಲಿ ಕನ್ನಡ ಕಡ್ಡಾಯಗೊಳಿಸಿ ಕಾನೂನು ರೂಪಿಸಿದರೆ ಅನ್ಯ ಭಾಷಿಕರು ಇದೇ ವಿಷಯ ಮುಂದಿಟ್ಟುಕೊಂಡು ವಿರೋಧಿಸುವ ಸಾಧ್ಯತೆ ಇದೆ. ಮೇಲ್ನೋಟಕ್ಕೆ ಈ ವಾದ ಸರಿ ಎನ್ನಬಹುದು. ಆದರೆ ಈ ಮಾತಿನಲ್ಲಿ ಕಾಸರಗೋಡು ಕರ್ನಾಟಕದ ಭಾಗವಲ್ಲ ಎಂದು ಖಚಿತ ನಿರ್ಧಾರಕ್ಕೆ ಬಂದಂತಿದೆ. ಆದರೆ ಕಾಸರಗೋಡು ಕನ್ನಡಿಗರ ಪಾಲಿಗೆ ಇದು ಕೇರಳ ಸರಕಾರದ ನಿರ್ಧಾರಕ್ಕಿಂತಲೂ ಹೆಚ್ಚು ನೋವು ಕೊಡುವ ವಿಚಾರ. ಸಂಕಷ್ಟದಲ್ಲಿ ಸಿಲುಕಿದ ಹೆಣ್ಣು ಮಗಳೊಬ್ಬಳು ತವರಿನ ಆಸರೆ, ಸಾಂತ್ವನ ಬಯಸುವುದು ಸಹಜ. ತವರು ಮನೆಯವರೇ ದೂರ ಮಾಡಿದರೆ ಆ ಹೆಣ್ಣು ಮಗಳು ಎಲ್ಲಿಗೆ ಹೋಗಬೇಕು? ಕಾಸರಗೋಡು ಕನ್ನಡಿಗರದ್ದೂ ಇದೇ ಪರಿಸ್ಥಿತಿ. ಎಲ್ಲಕ್ಕಿಂತ ಮುಖ್ಯವಾಗಿ ಅಪ್ಪಟ ಕನ್ನಡ ನೆಲವಾದ ಕಾಸರಗೋಡಿನ ಇತಿಹಾಸ ತಿಳಿಯದವರಷ್ಟೇ ಇಂತಹ ಮಾತುಗಳನ್ನು ಆಡಲು ಸಾಧ್ಯ.

ಕಾಸರಗೋಡಿಗೂ ಕರ್ನಾಟಕಕ್ಕೂ ಇರುವ ನಂಟು ಕೇವಲ ಭೌಗೋಳಿಕವಲ್ಲ, ಅದು ಶತಮಾನಗಳ ಸುದೀರ್ಘ ಚರಿತ್ರೆ ಮತ್ತು ಸಂಸ್ಕೃತಿಯ ತಳಹದಿಯ ಮೇಲೆ ನಿಂತಿದೆ. ಕಾಸರಗೋಡು ಐತಿಹಾಸಿಕವಾಗಿ ಯಾವಾಗಲೂ ಕರ್ನಾಟಕದ ಅವಿಭಾಜ್ಯ ಅಂಗವಾಗಿತ್ತು. ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು ಮತ್ತು ವಿಜಯನಗರದ ಅರಸರು ಈ ಭಾಗವನ್ನು ಆಳಿದ್ದಾರೆ. ಕೆಳದಿ ನಾಯಕರ ಕಾಲದಲ್ಲಿ ಕಾಸರಗೋಡು ಅವರ ಪ್ರಮುಖ ಆಡಳಿತ ಕೇಂದ್ರವಾಗಿತ್ತು. ಕಾಸರಗೋಡಿನ ಪ್ರಸಿದ್ಧ ಬೇಕಲ ಕೋಟೆ ಮತ್ತು ಚಂದ್ರಗಿರಿ ಕೋಟೆಗಳನ್ನು ನಿರ್ಮಿಸಿದವರು ಕೆಳದಿಯ ಶಿವಪ್ಪ ನಾಯಕರು.

ಕರ್ನಾಟಕದ ಚರಿತ್ರೆಯಲ್ಲಿ ಕಿತ್ತೂರು ರಾಣಿ ಚೆನ್ನಮ್ಮಳ ಇತಿಹಾಸ ಎಷ್ಟು ಮುಖ್ಯವೋ ಇದಕ್ಕಿಂತಲೂ ಪ್ರಾಚೀನವಾದ ರಾಣಿ ಅಬ್ಬಕ್ಕಳ ಹೋರಾಟವೂ ಅಷ್ಟೇ ಮುಖ್ಯ. ರಾಣಿ ಅಬ್ಬಕ್ಕ ಉಳ್ಳಾಲದ ರಾಣಿಯಾಗಿದ್ದ ವಳು. ಅಂದು ಕಾಸರಗೋಡಿನ ಅರ್ಧ ಭಾಗ ಇದೇ ಉಳ್ಳಾಲದ ಭಾಗವಾಗಿತ್ತು. ಹಿಂದೂಗಳು, ಮಾಪಿಳ್ಳೆಗಳು ಎಂಬ ಭೇದವಿಲ್ಲದೆ ಅಂದು ಎಲ್ಲರೂ ಪೋರ್ಚುಗೀಸರ ವಿರುದ್ಧ ಒಟ್ಟಾಗಿ ಹೋರಾಟ ನಡೆಸಿದ್ದರು. ಕೆಳದಿಯ ವೆಂಕಟಪ್ಪ ನಾಯಕ ಮತ್ತು ಶಿವಪ್ಪ ನಾಯಕ ಕಟ್ಟಿಸಿದ ಬೇಕಲ ಕೋಟೆ ಇಂದಿಗೂ ಕನ್ನಡ ನಾಮಫಲಕದೊಂದಿಗೆ ಇಲ್ಲಿನ ಮೂಲ ಇತಿಹಾಸವನ್ನು ಸಾರಿ ಹೇಳುತ್ತಿದೆ. ಕಾಸರಗೋಡನ್ನು ಬಿಟ್ಟು ನಾವು ಕರ್ನಾಟಕದ ಚರಿತ್ರೆಯನ್ನು ಬರೆಯಲು ಸಾಧ್ಯವೇ ಇಲ್ಲ.

ಕಾಸರಗೋಡಿನ ಉತ್ತರ ಭಾಗದ ಬಹುತೇಕ ಜನರ ಮಾತೃಭಾಷೆ ಕನ್ನಡ ಅಥವಾ ತುಳು. ಈಗಲೂ ಮಲಯಾಳಂ ಸಂಸ್ಕೃತಿಗಿಂತ ತುಳು-ಕನ್ನಡ ಸಂಸ್ಕೃತಿಯೇ ಇಲ್ಲಿ ಪ್ರಬಲವಾಗಿದೆ. ತುಳುನಾಡಿನ ದೈವಾರಾಧನೆ, ಯಕ್ಷಗಾನ, ಕಂಬಳ ಸಂಸ್ಕೃತಿ ಕಾಸರಗೋಡನ್ನು ಕರ್ನಾಟಕದ ಕರಾವಳಿಯೊಂದಿಗೆ ನಿಕಟವಾಗಿ ಬೆಸೆದಿದೆ. ಯಕ್ಷಗಾನದ ಮೂಲಪುರುಷ ಪಾರ್ತಿಸುಬ್ಬ, ಕನ್ನಡದ ಮೊದಲ ರಾಷ್ಟ್ರಕವಿ ಗೋವಿಂದ ಪೈ, ತಮ್ಮ ಇಡೀ ಜೀವನವನ್ನು ಕಾಸರಗೋಡಿನ ಏಕೀಕರಣಕ್ಕೆ ಮುಡುಪಾಗಿಟ್ಟ ಡಾ. ಕಯ್ಯಾರ ಕಿಞ್ಞಣ್ಣ ರೈ ಅವರನ್ನು ಬಿಟ್ಟು ಕನ್ನಡದ ಇತಿಹಾಸವನ್ನು ಬರೆಯಲು ಸಾಧ್ಯವಿಲ್ಲ. ಈ ಭಾವನಾತ್ಮಕ ವಿಷಯಗಳನ್ನು ದೂರವಿಟ್ಟರೂ ಕಾಸರಗೋಡಿನ ಕನ್ನಡಿಗರು ಈಗಲೂ ಮಂಗಳೂರು ಇಲ್ಲವೇ ಬೆಂಗಳೂರು ಜತೆ ಸಂಬಂಧ ಹೊಂದಿದ್ದಾರೆಯೇ ಹೊರತು ದೂರದ ತಿರುವನಂತಪುರದ ಜತೆಗಲ್ಲ.

ಕಾಸರಗೋಡು ಇಂದು ಭೌಗೋಳಿಕವಾಗಿ ಕೇರಳದ ಭಾಗವಾಗಿರಬಹುದು. ಆದರೆ ಈ ನೆಲದಲ್ಲಿ ಇನ್ನೂ ಕನ್ನಡ ಮತ್ತು ತುಳು ಸಂಸ್ಕೃತಿ ಜೀವಿಸುತ್ತಿದೆ. ಇಲ್ಲಿನ ಹಬ್ಬ,ಆಚರಣೆಗಳು, ಆಹಾರ ಪದ್ಧತಿ ಈಗಲೂ ಬದಲಾಗಿಲ್ಲ. ಮಧೂರ ಒಡೆಯ ಗಣೇಶನನ್ನು ಸ್ತುತಿಸಿದ ಬಳಿಕವೇ ಯಕ್ಷಗಾನಕ್ಕೆ ಚಾಲನೆ ನೀಡಲಾಗುತ್ತದೆ. ಮಧೂರು ಮಾತ್ರವಲ್ಲ ಕುಂಬಳೆ ಗೋಪಾಲಕೃಷ್ಣ ದೇವಸ್ಥಾನ, ಅನಂತಪುರ ಪದ್ಮನಾಭಸ್ವಾಮಿ ದೇವಸ್ಥಾನ, ಮಲ್ಲ, ಕೊರಕ್ಕೋಡು ದೇಗುಲ ಸೇರಿದಂತೆ ನೂರಾರು ದೇಗುಲಗಳ ಪೂಜಾ ಪದ್ಧತಿಗಳು ಮತ್ತು ಜನಜೀವನ ತುಳು-ಕನ್ನಡದ ಮಿಶ್ರಣವಾಗಿದೆ. ಮಂಜೇಶ್ವರ ಕ್ಷೇತ್ರದಿಂದ ಕೇರಳ ವಿಧಾನಸಭೆಗೆ ಆಯ್ಕೆಯಾಗುವ ಶಾಸಕರು ಈಗಲೂ ಬಹುತೇಕ ಕನ್ನಡಿಗರೇ ಆಗಿರುತ್ತಾರೆ.

ಜಿಲ್ಲೆಯಲ್ಲಿ ಈಗಲೂ 140ಕ್ಕೂ ಹೆಚ್ಚು ಕನ್ನಡ ಶಾಲೆಗಳಿವೆ. ಮಸೂದೆಯ ಪ್ರಕಾರ, 1 ರಿಂದ 10ನೇ ತರಗತಿಯವರೆಗೆ ಮಲಯಾಳಂ ಅನ್ನು ಮೊದಲ ಭಾಷೆಯನ್ನಾಗಿ ಕಲಿಯುವುದು ಕಡ್ಡಾಯ. ಇದುವರೆಗೂ ಹಲವು ಸವಾಲುಗಳ ಹೊರತಾಗಿಯೂ ಕನ್ನಡವನ್ನು ಮೊದಲ ಭಾಷೆಯಾಗಿ ತೆಗೆದುಕೊಂಡು ಕನ್ನಡ ಮಾಧ್ಯಮದಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳು ಇನ್ನು ತಮ್ಮ ಮಾತೃಭಾಷೆಯಲ್ಲದ ಮಾಲಯಾಳಂ ಭಾಷೆಯಲ್ಲಿ ಓದಬೇಕಾಗಿದೆ. ಮಸೂದೆಯಲ್ಲಿ 'ಕ್ಲಾಸ್ 7' ಎಂಬ ವಿಶೇಷ ನಿಯಮವಿದ್ದು, ಅಲ್ಪಸಂಖ್ಯಾತರು ತಮ್ಮ ಭಾಷೆಯಲ್ಲೇ ಕಲಿಯಲು ಅವಕಾಶವಿದೆ ಎಂದು ಕೇರಳ ಸರಕಾರ ಹೇಳುತ್ತಿದೆ. ಆದರೆ, ಮೊದಲ ಭಾಷೆಯಾಗಿ ಮಲಯಾಳಂ ಕಡ್ಡಾಯವಾಗಿರುವುದ ರಿಂದ ಈ ವಿನಾಯಿತಿ ಕಣ್ಣೊರೆಸುವ ತಂತ್ರ ಎನ್ನುವುದು ಸ್ಪಷ್ಟ.

ಇದುವರೆಗೂ ಇಲ್ಲಿನ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು, ತಮಗೆ ಸಕಾಲದಲ್ಲಿ ಪಠ್ಯಪುಸ್ತಕಗಳು ಸಿಗುತ್ತಿಲ್ಲ. ಶಾಲೆಗಳಿಗೆ ಮಲಯಾಳಂ ಭಾಷಿಕ ಶಿಕ್ಷಕರನ್ನು ನೇಮಿಸುವುದರಿಂದ ಬೋಧನೆ ಮತ್ತು ಕಲಿಕೆಯಲ್ಲಿ ಅಡಚಣೆಯಾಗುತ್ತಿದೆ. ಮಲಯಾಳಂನಿಂದ ನೇರವಾಗಿ ಭಾಷಾಂತರಗೊಂಡ ಪಠ್ಯಗಳು ಬರುತ್ತಿವೆ ಎಂದು ದೂರುತ್ತಿದ್ದರು. ಇನ್ನು ಮುಂದೆ ಇಂತಹ ನೇರವಾಗಿ . ಮಲಯಾಳಂ ಭಾಷೆಯಲ್ಲಿಯೇ ಕಲಿಯುವ ಕಾರಣ ಈ ಯಾವ ದೂರುಗಳಿಗೂ ಅವಕಾಶವಿಲ್ಲ!

ಇನ್ನಿಲ್ಲದ ಪ್ರಯತ್ನ ನಡೆಸಿದರೂ ಬೆಳಗಾವಿ ನಗರದಲ್ಲಿ ಕನ್ನಡ ಸಂಸ್ಕೃತಿಯನ್ನು ಪೂರ್ತಿಯಾಗಿ ಪಸರಿಸಲು ನಮಗೆ ಸಾಧ್ಯವಾಗಿಲ್ಲ. ಆದರೆ ಕೇರಳ ಸರಕಾರ ಕಾಸರಗೋಡಿನಲ್ಲಿ ಈ ಕೆಲಸವನ್ನು ಅತ್ಯಂತ ವ್ಯವಸ್ಥಿತವಾಗಿ ಮಾಡಿದೆ. ತುಳು ಭಾಷಿಕರು ಮತ್ತು ಕನ್ನಡ ಭಾಷಿಕರ ನಡುವೆ ಕಂದಕ ಸೃಷ್ಟಿಸುವ ಪ್ರಯತ್ನ ವನ್ನೂ ಕೇರಳ ಸರಕಾರ ಮಾಡಿತ್ತು. ಪಹಣಿ, ಕಂದಾಯ ದಾಖಲೆ, ರೇಷನ್ ಕಾರ್ಡ್ ಹೀಗೆ ಒಂದೊಂದೇ ದಾಖಲೆಗಳನ್ನು ಕನ್ನಡ ಬಿಟ್ಟು ಮಲಯಾಳಂನಲ್ಲಿ ಮಾತ್ರ ಮುದ್ರಿಸುವ ಮೂಲಕ ಮಲಯಾಳಿ ಭಾಷೆ ಕಲಿಕೆಯನ್ನು ಕಡ್ಡಾಯಗೊಳಿಸಿದ ಕೇರಳ ಈಗ ಮತ್ತೊಂದು ಹೆಜ್ಜೆ ಮುಂದಿಟ್ಟಿದೆ. ಕನ್ನಡ ಭಾಷೆಯಿಂದ ದೂರವಾದರೂ ಕನ್ನಡ, ತುಳು ಸಂಸ್ಕೃತಿಯ ಜತೆ ಮಿಳಿತವಾಗಿರುವ ಖುಷಿ ಇಲ್ಲಿನ ಜನರಲ್ಲಿದೆ. ಆದರೆ ಮಲಯಾಳಂ ಸಂಸ್ಕೃತಿಯ ಪ್ರಭಾವ ಹೆಚ್ಚಾಗುತ್ತಿರುವುದರಿಂದ, ಮುಂದಿನ ತಲೆಮಾರಿನ ಮಕ್ಕಳಿಗೆ ಯಕ್ಷಗಾನ, ತಾಳಮದ್ದಲೆ, ಕಂಬಳ ಮುಂತಾದ ಕನ್ನಡ ಮತ್ತು ತುಳು ಸಂಸ್ಕೃತಿ ಅಪರಿಚಿತ ವಿಷಯಗಳಾಗಬುದೆಂಬ ಆತಂಕ ಇಲ್ಲಿನ ಪೋಷಕರಲ್ಲಿದೆ.

ಹಿಂದೆ ಬಿ.ವಿ ಕಕ್ಕಿಲ್ಲಾಯ, ಐ.ರಾಮ ರೈ, ಎಂ.ರಾಮಣ್ಣ ರೈ ಮೊದಲಾದವರು ಹಲವು ದಶಕಗಳ ಕಾಲ ಕಾಸರಗೋಡು ಕ್ಷೇತ್ರದ ಪ್ರತಿನಿಧಿಗಳಾಗಿ ಸಂಸತ್ತಿನಲ್ಲಿ ಕನ್ನಡದ ಧ್ವನಿಯಾಗಿದ್ದರು. ಈಗ ಈ ವರ್ಚಸ್ಸಿನ ನಾಯಕರೂ ಇಲ್ಲ.ಕರ್ನಾಟಕದ ಬೆಂಬಲವೂ ಇಲ್ಲ. ಕನ್ನಡದ ಧ್ವನಿಯನ್ನು ರಾಜಕೀಯ ಮತ್ತು ಆಡಳಿತಾತ್ಮಕ ತಂತ್ರಗಳ ಮೂಲಕ ವ್ಯವಸ್ಥಿತವಾಗಿ ಹತ್ತಿಕ್ಕಿದ ಕೇರಳ ಸರಕಾರ, ಇಡೀ ಜಿಲ್ಲೆಯನ್ನು ಮಲಯಾಳೀಕರಣ ಮಾಡುವಲ್ಲಿ ಬಹುತೇಕ ಯಶಸ್ಸು ಕಂಡಿದೆ. ಕಾಸರಗೋಡು ಕರ್ನಾಟಕಕ್ಕೆ ಸೇರದೆ ಕೇರಳದ ಪಾಲಾಗಲು ಹಲವು ಐತಿಹಾಸಿಕ, ರಾಜಕೀಯ ಮತ್ತು ಆಡಳಿತಾತ್ಮಕ ತಪ್ಪು ನಿರ್ಧಾರಗಳು ಕಾರಣವಾಗಿದ್ದು ಒಂದೆಡೆಯಾದರೆ ಕರ್ನಾಟಕದ ನಾಯಕರ ಇಚ್ಛಾ ಶಕ್ತಿಯ ಕೊರತೆ ಮತ್ತು ನಿರ್ಲಕ್ಷ್ಯದ ಕಾರಣಕ್ಕೆ ಕಾಸರಗೋಡು ಕರ್ನಾಟಕದಲ್ಲಿ ವಿಲೀನವಾಗಲಿಲ್ಲ ಎನ್ನುವುದು ಹೆಚ್ಚು ಸತ್ಯ.

ಸ್ವಾತಂತ್ರ್ಯಾನಂತರ ರಾಜ್ಯಗಳನ್ನು ಭಾಷಾವಾರು ಆಧಾರದ ಮೇಲೆ ವಿಂಗಡಿಸುವಾಗ, ಅಂದಿನ ದಕ್ಷಿಣ ಕೆನರಾ ಜಿಲ್ಲೆಯ ಭಾಗವಾಗಿದ್ದ ಕಾಸರಗೋಡು ತಾಲ್ಲೂಕನ್ನು ಸಂಪೂರ್ಣವಾಗಿ ಕೇರಳಕ್ಕೆ ಸೇರಿಸಲಾಯಿತು. ಭಾಷಿಕ ಸಮೀಕ್ಷೆಯ ಆಧಾರದ ಮೇಲೆ ಮಲಯಾಳಂ ಮಾತನಾಡುವವರ ಸಂಖ್ಯೆ ಹೆಚ್ಚಿದೆ ಎಂಬ ಕಾರಣವನ್ನು ನೀಡಲಾಗಿತ್ತು. ಆದರೆ ಕಾಸರಗೋಡಿನ ಉತ್ತರ ಭಾಗದಲ್ಲಿ (ಚಂದ್ರಗಿರಿ ನದಿಯ ಉತ್ತರಕ್ಕೆ) ಕನ್ನಡ ಮತ್ತು ತುಳು ಭಾಷಿಕರೇ ಹೆಚ್ಚಾಗಿದ್ದರು ಎಂಬ ಅಂಶವನ್ನು ಪರಿಗಣಿಸಲಿಲ್ಲ. ಆದರೆ ಕಾಸರಗೋಡಿನ ಉತ್ತರ ಭಾಗದಲ್ಲಿ (ಚಂದ್ರಗಿರಿ ನದಿಯ ಉತ್ತರಕ್ಕೆ) ಕನ್ನಡ ಮತ್ತು ತುಳು ಭಾಷಿಕರೇ ಬಹುಸಂಖ್ಯಾತರಾಗಿದ್ದರು. ಆದರೆ, ವೈಜ್ಞಾನಿಕವಾಗಿ ಹಳ್ಳಿಗಳನ್ನು ಪರಿಗಣಿಸುವ ಬದಲು ಇಡೀ ತಾಲ್ಲೂಕನ್ನು ಕೇರಳಕ್ಕೆ ವರ್ಗಾಯಿಸಲಾಯಿತು.

ಕರ್ನಾಟಕ ಮತ್ತು ಕೇರಳ ನಡುವಿನ ಈ ವಿವಾದವನ್ನು ಬಗೆಹರಿಸಲು ಕೇಂದ್ರ ಸರಕಾರ 1966ರಲ್ಲಿ ರಚಿಸಿದ ಜಸ್ಟಿಸ್ ಮೆಹರ್ ಚಂದ್ ಮಹಾಜನ್ ನೇತೃತ್ವದ ಆಯೋಗವು ಕಾಸರಗೋಡು ತಾಲ್ಲೂಕಿನ ಚಂದ್ರಗಿರಿ ಮತ್ತು ಪಯಸ್ವಿನಿ ನದಿಗಳ ಉತ್ತರಕ್ಕಿರುವ 71 ಹಳ್ಳಿಗಳನ್ನು ಕರ್ನಾಟಕಕ್ಕೆ ಸೇರಿಸಬೇಕು ಎಂದು ಶಿಫಾರಸು ಮಾಡಿತ್ತು. ಆದರೆ, ಕೇರಳ ಸರಕಾರವು ಭಾಷಾವಾರು ವಿಂಗಡಣೆ ಆಯೋಗ ವರದಿಯೇ ಅಂತಿಮ ಎಂದು ಹೇಳಿ ಈ ವರದಿಯನ್ನು ತಿರಸ್ಕರಿಸಿದೆ. ಕೇಂದ್ರ ಸರಕಾರವೂ ಈ ವರದಿಯನ್ನು ಜಾರಿಗೆ ತರಲು ಮನಸ್ಸು ಮಾಡಿಲ್ಲ.

ಕಯ್ಯಾರ ಕಿಞ್ಞಣ್ಣ ರೈ ಅವರಂತಹ ಹಿರಿಯ ಹೋರಾಟಗಾರರು ಕಾಸರಗೋಡು ವಿಲೀನಕ್ಕಾಗಿ 'ಕಾಸರಗೋಡು ಏಕೀಕರಣ ಕ್ರಿಯಾ ಸಮಿತಿ'ಯ ಮೂಲಕ ದಶಕಗಳ ಕಾಲ ಆಯೋಗದ ವರದಿ ಜಾರಿಗೆ ಹೋರಾಡಿದರು. ಆದರೆ ಕರ್ನಾಟಕದ ರಾಜಕೀಯ ನಾಯಕರು ಬೆಳಗಾವಿ ಗಡಿ ವಿವಾದಕ್ಕೆ ನೀಡಿದಷ್ಟು ಪ್ರಾಮುಖ್ಯತೆಯನ್ನು ಕಾಸರಗೋಡು ವಿವಾದಕ್ಕೆ ನೀಡಲಿಲ್ಲ ಎಂಬ ಅಸಮಾಧಾನ ಇಂದಿಗೂ ಕಾಸರಗೋಡು ಕನ್ನಡಿಗರಲ್ಲಿದೆ. ಇದೀಗ ಕೇರಳ ಸರಕಾರದ ಭಾಷಾ ನೀತಿಯನ್ನು ವಿರೋಧಿಸುವ ಮೂಲಕ ಕಾಸರಗೋಡಿನಲ್ಲಿ ಮತ್ತೆ ಕನ್ನಡದ ಕಹಳೆ ಮೊಳಗಿಸುವ ಅವಕಾಶ ಸಿಕ್ಕಿದೆ. ಈಗಲಾದರೂ ಕನ್ನಡಿಗರು ಗಡಿನಾಡು ಕಾಸರಗೋಡಿನ ಕನ್ನಡಿಗರ ಜತೆ ಕೈ ಜೋಡಿಸಬೇಕಾಗಿದೆ.

ತಾಳಮದ್ದಳೆ ಸುಲಭವಲ್ಲ: ತಾಳ್ಮೆ ಬೇಕು ತಿಳಿಯಲು...

ತಾಳ-ಮೇಳ
ಮೋಹನ ಭಾಸ್ಕರ ಹೆಗಡೆ
vveditoped@gmail.com

ಯಕ್ಷಗಾನ ಶ್ರೀಮಂತ ಕಲೆ. ಕಲೆಗಳಲ್ಲಿಯೇ ಕಲ್ಪವೃಕ್ಷ. ಇದರ ಎಲ್ಲಾ ಅವಯವಗಳು ವಿಶಿಷ್ಟ ವಿಶೇಷ. ಅಭ್ಯಾಸವಿಲ್ಲದೆ ಯಾವ ವಿಭಾಗವೂ ಒಲಿಯುವುದಿಲ್ಲ. ಪರಿಪೂರ್ಣರಾದ ಒಬ್ಬರೂ ಸಿಗಲಾರರು. ಹಲವರು ಕೆಲವೇ ಅಂಗಗಳಲ್ಲಿ ಒಂದಿಷ್ಟು ಪ್ರವೇಶ ಪಡೆದು ಸಾಕಷ್ಟು ಯಶಸ್ಸು ಗಳಿಸಿದ್ದಾರೆ. ಗಳಿಸಬಹುದು, ಅಷ್ಟು ಉದಾರಿ ಈ ಕಲೆ. ಅಷ್ಟೇ ದುಬಾರಿ! ಬೌದ್ಧಿಕ ಪರಿಶ್ರಮ ಹಾಗೂ ಅಧ್ಯಯನ ಇದಕ್ಕೆ ಬೇಕೇ ಬೇಕು. ಏನೂ ಇಲ್ಲದೇ ಯಶಸ್ಸಿಲ್ಲ. ಹಾಗಾಗಿ ಇದು ಶ್ರೀಮಂತ. ಎಷ್ಟೋ ಸಂದರ್ಭ ಇದರ ಶ್ರೀಮಂತಿಕೆ ತಿಳಿಯದೇ ಇಲ್ಲಿನ ಕಲಾವಿದರೇ ಎಡವೋದೂ ಉಂಟು. ಉಳಿದವರು ಅರಿಯಲು ವಿಫಲರಾದರೆ ಆಶ್ಚರ್ಯವೇನು? ಇದರ ಆಳ, ವಿಸ್ತಾರ ಅಷ್ಟು ಗಾಢ- ಗೂಢ!

ಇದು ಬಳಕೆಯಾಗುತ್ತಿರುವುದು, ಅಂದರೆ ಪ್ರದರ್ಶನಗೊಳ್ಳುತ್ತಿರುವುದು ಬಯಲಲ್ಲಿ. ಅಂದರೆ ಜನರ ಮಧ್ಯದಲ್ಲಿ. ಅದಕ್ಕಾಗಿ ಇದರ ಮೌಲ್ಯಮಾಪನದಲ್ಲಿ ಈ ಕಲೆಗೆ ನ್ಯಾಯ ಸಿಕ್ಕಿಲ್ಲ. ಆಗಾಗ ಅನ್ಯಕ್ಷೇತ್ರದ ಪ್ರಬುದ್ಧರು, ಚಿಂತಕರು, ತಮ್ಮ ಆಸಕ್ತಿಯಿಂದ ಪ್ರವೇಶಿಸಿ, ಇದರ ಮಹತ್ತು ತಿಳಿದರು. ಪ್ರಾಮಾಣಿಕವಾಗಿ ತಮ್ಮ ಕೊಡುಗೆ ಕೊಟ್ಟರು. ಲೋಕವೂ ತಿಳಿಯುವ ಹಾಗೆ ಮಾಡಿದರು. ಮಹತ್ತ್ವದ ಗ್ರಂಥ ಬರೆದರು. ಹಲವರು ಪ್ರಯೋಗವನ್ನೇ ಮಾಡಿದರು. ಸಂಶೋಧನೆ ಮಾಡಿದರು. ಯಕ್ಷಗಾನ ರಂಗಶಿಕ್ಷಣ ಕೇಂದ್ರಗಳನ್ನೇ ತೆರೆದರು. ಇನ್ನೂ ಹಲವರು ಶಿಕ್ಷಣ, ಸಂಗೀತ, ಸಾಹಿತ್ಯ ಕ್ಷೇತ್ರದವರು ಈ ಕಲೆಯ ಮಹತ್ತನ್ನು ಕಂಡು ಲೋಕಕ್ಕೆ ತಿಳಿಸುವ ಪ್ರಯತ್ನ ಮಾಡಿದ್ದಾರೆ. ಆಗಾಗ ಲೇಖನ ಬರೆದು, ಗೋಷ್ಠಿ, ಕಮ್ಮಟ ಏರ್ಪಡಿಸಿ ಜಾಗೃತಿ ಮೂಡಿಸುತ್ತಲೇ ಇದ್ದಾರೆ. ಇನ್ನು ಈ ಕಲೆಯ ರಂಗಸ್ಥಳದಲ್ಲಿ ಕಲಾವಿದರಾಗಿಯೇ ಬಂದು, ಇದರ ಮಹತ್ತನ್ನು ಅರಿತು, ಅದರ ಮೌಲ್ಯ ವಿಸ್ತಾರಕ್ಕೆ ಪ್ರಯತ್ನಶೀಲರಾದವರು ಕೆಲವರು. ಅವರು ನಿಜವಾದ ಪ್ರಯೋಗಪಟುಗಳು. ಅವರುಗಳು ದೂರದರ್ಶಿತ್ವದ ರಂಗ ಕಲಾ ನಾಯಕರು. ಅವರುಗಳು ರಂಗಭೂಮಿಯಲ್ಲಿದ್ದೇ ಸ್ಮರಣೀಯ ಕೊಡುಗೆ ಕೊಟ್ಟವರು. ಇದನ್ನೆಲ್ಲಾ ಪೂರ್ಣವಾಗಿ ನೋಡಲು ಸಾಧ್ಯವೇ ಆಗುತ್ತಿಲ್ಲ.

ಇದೆಲ್ಲಾ ಒಂದೆಡೆಯಾದರೆ, ಹಲವು ಸಂಘ-ಸಂಸ್ಥೆಗಳು, ಮಠ-ಮಾನ್ಯಗಳು ಈ ಕಲೆಯ, ಇಲ್ಲಿನ ಕಲಾವಿದರ ಹಿತಕ್ಕಾಗಿ ಪ್ರಯತ್ನಶೀಲರಾದವರು. ಅವರು ಕಲೆಯ ಪಾರಂಪರಿಕ, ಸ್ಥಳೀಯ ಮೌಲ್ಯ, ರೂಢಿಗಳನ್ನು ಕಾಪಾಡಲು ಪ್ರಯತ್ನಿಸುತ್ತಲೇ ಇದ್ದಾರೆ. ಹಲವಾರು ದೇವಾಲಯಗಳು, ಮೇಳಗಳು, ಮಠಗಳು, ವ್ಯಕ್ತಿಗಳು, ಉದ್ಯಮಿಗಳು, ಸ್ಥಳೀಯ ಸಂಘಗಳು, ಹೊರನಾಡ ಸಂಘಟನೆಗಳು, ವೃತ್ತಿಪರ ಹಾಗೂ ಹವ್ಯಾಸಿ ಕಲಾವಿದರು, ಪರಿಪೂರ್ಣ ಸೇವಾಭಾವದಿಂದ ಭಾಗಿಗಳಾಗಿ, ಪಾಲಕರಾಗಿ, ಪೋಷಕರಾಗಿ ಈ ಕಲೆಯನ್ನು ಪೋಷಿಸುತ್ತಾ ಬಂದಿದ್ದಾರೆ. ಮಕ್ಕಳಲ್ಲಿ-ಮಹಿಳೆಯರಲ್ಲಿ ಆಸಕ್ತಿ ಹುಟ್ಟಿಸುವ ಪ್ರಯತ್ನಗಳೂ ನಡೆದವು. ಈ ಕೊಡುಗೆ ಕೂಡ ಗಮನಾರ್ಹ, ದಾಖಲಾರ್ಹ ಹಾಗೂ ಅಸಾಮಾನ್ಯ. ಇದೆಲ್ಲಾ ಸೇರಿಯೇ ಸಮಗ್ರ ಯಕ್ಷರಂಗ. ಹೇಳಲು ಇನ್ನೆಷ್ಟೋ ಬಾಕಿ ಇದೆ. ಇದರ ಒಂದು ಅಂಗ ತಾಳಮದ್ದಳೆ. ಇದು ಸಹ ವಿಶೇಷ ವೈಭವದಿಂದ ಕೂಡಿದೆ. ಇವಳು ನೃತ್ಯ, ವೇಷಭೂಷಣ, ಅಭಿನಯ ಇಲ್ಲದೇ ಇರುವ ನಿರಾಭರಣ ಸುಂದರಿ. ವಚೋ ವಿಲಾಸದ ವೈಭವ ಇಲ್ಲಿ. ಇದು ಆಕರ್ಷಣೆ ಇರುವ ಕಲಾಪ್ರಕಾರ!

ಕಲಾವಿದರಾಗಿ ಇದರ ಪ್ರವೇಶ ಕಾಣುವಷ್ಟು ಸುಲಭವಲ್ಲ. ಮುಕ್ತ ಪ್ರವೇಶ ಇಲ್ಲಿ ಅನ್ವಯ ಆಗಲಾರದು. ನಮ್ಮಲ್ಲಿ ಬಹುತೇಕ ಸಂಗತಿಗಳು, ಹೊರನೋಟದಿಂದ ಸರಳ ಎಂದು ಕಾಣುತ್ತವೆ, ವಾಸ್ತವವಾಗಿ ಹಾಗಿರುವುದಿಲ್ಲ. ಯಾಕೆ ಈ ಮಾತು ಅಂದರೆ, ಯಾವ ಅಭ್ಯಾಸವೂ ಇಲ್ಲದೇ ಯಾರೊಬ್ಬರೂ ಇದರಲ್ಲಿ ಪ್ರವೇಶಿಸಲು ಅಸಾಧ್ಯ. ಹಾಗೊಂದು ದುಃಸಾಹಸ ಮಾಡಿದರೂ ಅವರು ಅಲ್ಲಿ ನೆಲೆ ನಿಲ್ಲಲಾರರು. ಈ ಅಭಿಮತಕ್ಕೆ ಯಕ್ಷಗಾನ-ತಾಳಮದ್ದಳೆ ಬಗೆಗೆ ನನಗಿರುವ ಆಸಕ್ತಿ, ಪ್ರೀತಿ ಅಥವಾ ನನ್ನ ಮಿತವಾದ ಪ್ರವೇಶ ಅಷ್ಟೇ ಕಾರಣವಲ್ಲ. ಇದರ ಅಂತಃಸತ್ವವೇ ಕಾರಣ. ತಾಳಮದ್ದಳೆಯನ್ನೇ ಸ್ವಲ್ಪ ಅವಲೋಕಿಸೋಣ.

ಆಕರಗಳು: ಈ ಕಲೆಯ ಸತ್ವ ನಿಂತಿದ್ದು ಇದರ ವಸ್ತು-ವಿಷಯದ ಮೇಲೆ. ಇದರ ವಸ್ತು ಎಂಬ ವಿಷಯದ ಬಗ್ಗೆ ನೋಡಿದರೆ ಪುರಾಣಗಳೇ ಮುಖ್ಯವಾದ ಆಕರ. ಅಂದರೆ ಇಲ್ಲಿ ನೀತಿಯುಕ್ತವಾದ, ಸಾತ್ವಿಕವಾದ ಸುಸಂಸ್ಕೃತವಾದ ವಿಚಾರಗಳನ್ನು ಕಥನ ರೂಪದಲ್ಲಿ ತಿಳಿಸುವಂಥ ಕ್ರಮ ಇಲ್ಲಿಯದ್ದು. ಸಾಮಾಜಿಕವಾದ ವಿಷಯಗಳು ಈ ಕ್ಷೇತ್ರಕ್ಕೆ ಒಗ್ಗಲಿಲ್ಲ ಅಥವಾ ಆಧುನಿಕ ದೇಶಭಕ್ತಿ ವಿಚಾರಗಳು ಸಹ ಇದಕ್ಕೆ ಹೊಂದಿಕೆ ಆಗಿಲ್ಲ, ಬದಲಿಗೆ ಪೌರಾಣಿಕ ಪ್ರಸಂಗಗಳು ವಿಶೇಷವಾಗಿ ಹೊಂದಿಕೆಯಾಗಿವೆ. ಆದುದರಿಂದ ಈ ಕಲಾಮಾಧ್ಯಮದ ಮುಖಾಂತರವೇ ಜೀವನದ ಹಲವು ಮಜಲುಗಳ ನೀತಿಯುಕ್ತವಾದ ವಿಚಾರಗಳ ತಿಳಿಸುವಿಕೆ ನಡೆಯುತ್ತಾ ಬಂತು. ಶತಶತಮಾನಗಳಿಂದ ನಡೆದು ಬಂತು. ಪಾತ್ರವೊಂದರ, ಪ್ರಸಂಗವೊಂದರ ಪ್ರಸ್ತುತಿಯಲ್ಲಿ ಸಮಗ್ರ ಹಿನ್ನೆಲೆಯನ್ನು ವಿವಿಧ ದೃಷ್ಟಿಕೋನಗಳಿಂದ ಲೋಕಮುಖವಾಗಿಸುವ ಕಾರ್ಯ ಇಲ್ಲಿ ಅರ್ಥಪೂರ್ಣವಾಗಿ ನಡೆದುಬಂತು. ಇದಕ್ಕಾಗಿ ಉಪನಿಷತ್ತುಗಳ, ಸಮಕಾಲೀನ ಗ್ರಂಥಗಳ ಅಥವಾ ಸಾಹಿತ್ಯಗಳ ವಿಚಾರಗಳು ಸೇರಿಕೊಂಡವು. ಜತೆಯಲ್ಲಿ ಸ್ವಂತ ಜೀವನದ ಅನುಭವಗಳು ಸಹ ಪಾತ್ರೋಚಿತವಾಗಿ ಸೇರಿಕೊಂಡವು. ದೇಶ-ಕಾಲ-ಧರ್ಮಕ್ಕನುಗುಣವಾಗಿ ಸೂಕ್ತವಾದ ವಿಚಾರಗಳು ಸೇರಿಕೊಂಡು ವಸ್ತುನಿಷ್ಠತೆಯನ್ನು ವಿಜೃಂಭಿಸಿತು. ಇದನ್ನೇ ಹಲವು ಸಲ ಎಲ್ಲರೂ ಸಾರಿ ಸಾರಿ ಹೇಳಿದ್ದು. ಈ ಕಲೆಯ ವಿಶೇಷ ಅಭ್ಯಾಸ ಪ್ರಸಂಗ ಪಠ್ಯದ ಕುರಿತು ಇಲ್ಲದಿದ್ದರೆ ಪಾತ್ರದ ಹಿನ್ನೆಲೆ, ಮುನ್ನೋಟ ಮತ್ತು ವರ್ತಮಾನದ ನಡೆ ಸ್ಥಾಪಿಸುವುದಕ್ಕೆ ಸಾಧ್ಯವಿಲ್ಲ. ಅಷ್ಟು ವಿಸ್ತಾರವಾದ ಅಧ್ಯಯನ ಇದಕ್ಕೆ ಬೇಕೇ ಬೇಕು. ಅದಿಲ್ಲದಿದ್ದರೆ ಸಾಧಾರಣವಾದ ಕಥೆ ಸಾಗಲು ಬೇಕಾದ ವಿಷಯವಷ್ಟೇ ಹೇಳಿದಂತಾಗಿ ಕುತೂಹಲವನ್ನು ಸೃಷ್ಟಿಸುವುದಿಲ್ಲ. ಬಹಳ ಹಿಂದಿನ ಕಾಲದಲ್ಲಿ ಇಷ್ಟೇ ಸಾಕಿತ್ತು. ಅಷ್ಟೇ ಅಪೇಕ್ಷೆಯೂ ಆಗಿತ್ತು. ಆದರೆ ಕಾಲ ಬದಲಾದಂತೆ, ಪ್ರೇಕ್ಷಕರ ಅಭಿರುಚಿಗಳು ಬದಲಾದಂತೆ, ನಿರೀಕ್ಷೆಗಳು ಹೆಚ್ಚಾದವು. ಒಂದು ವಿಷಯಕ್ಕೆ ಹತ್ತಾರು ಆಕರ ಗ್ರಂಥಗಳ ಅಧ್ಯಯನದ ಕೊಡುಗೆ, ಉಲ್ಲೇಖ ಅಗತ್ಯವಾಯಿತು. ಅದನ್ನು ಜನಮಾನಸ ಒಪ್ಪಿತು. ಹಾಗಾಗಿ ವಾಚಿಕಾಭಿನಯವು ತಾಳಮದ್ದಳೆಗೆ ವಿಶೇಷವಾದ ಅಧ್ಯಯನಶೀಲತೆಯನ್ನು ತಂದುಕೊಟ್ಟಿತು.

ಕೆಲವು ಕಾಲಗಳಲ್ಲಿ ಅದು ವೈಭವವನ್ನು ಕಂಡರೂ ಪ್ರತಿ ಹಂತದಲ್ಲಿಯೂ ಸಾಕಷ್ಟು ವಿಮರ್ಶೆ, ಟೀಕೆ-ಟಿಪ್ಪಣಿಗಳನ್ನು ಕೂಡ ಎದುರಿಸಿತು. ಆದರೂ ಅಧ್ಯಯನ ಬೇಕು ಎಂಬ ವಿಷಯ ಗೆಲುವನ್ನೇ ಸಾಧಿಸಿತು. ವಿಶೇಷತೆ, ಹೊಸತನ ಇಲ್ಲದ ಸಾಧಾರಣ ಕ್ರಮ ಪತನವಾಯಿತು. ಒಟ್ಟಾರೆಯಾಗಿ ತಾಳಮದ್ದಳೆ ಎಂಬುದು ವೈಷಯಿಕವಾದ ವಿಶೇಷ ಆಕರಗಳನ್ನು ಒದಗಿಸುವ ವೇದಿಕೆಯಾಯಿತು. ಭಾಷೆಯ ಸೊಗಸು, ಪದ, ವಾಕ್ಯಪ್ರಾವೀಣ್ಯ, ಮಾತಿನ ಏರಿಳಿತ, ಸಂವಾದ ಕೌಶಲ, ರೂಪಕ, ಕಾವ್ಯಾಲಂಕಾರ ಬಳಕೆ, ಭಾವಪೂರ್ಣತೆ, ರಸಗಳ ಸೊಗಸಾದ ಸ್ಫುರಣೆ, ಇದೆಲ್ಲ ಹೇಗೆ ಅಗತ್ಯ ಎಂದು ಕಲಾವಿದರು ತೋರಿಕೊಟ್ಟರು. ಹಲವರ ವಿಶೇಷತೆ ಇವುಗಳಲ್ಲಿ ಯಾವುದೋ ಒಂದಾಯಿತು. ಇದನ್ನು ಯಕ್ಷಗಾನ ವೀಕ್ಷಕರು, ಆಸಕ್ತರು, ಕಲಾವಿದರು ಮೊದಲಾದವರೆಲ್ಲರೂ ಗಮನಿಸಿದರು, ಗುರುತಿಸಿದರು, ಸ್ವೀಕರಿಸಿದರು, ಗೌರವಿಸಿದರು. ಇದು ಸತ್ಯ. ಇಷ್ಟಿಲ್ಲದಿದ್ದರೆ ಆ ಕಲಾವಿದ ಇಲ್ಲಿ ಉಳಿಯಲಾರ. ಅಷ್ಟು ನಿರಂತರ ಅಭ್ಯಾಸವನ್ನು, ಮನಶೀಲತೆಯನ್ನು ಈ ಕಲೆ ಬಯಸುತ್ತದೆ. ಆದುದರಿಂದ ತಾಳಮದ್ದಳೆ ಸುಲಭವಲ್ಲ!!

ಶ್ರುತಿ ಜ್ಞಾನ: ಈ ಕ್ಷೇತ್ರ ಬೇರೆ ಬೇರೆ ಕ್ಷೇತ್ರದ ಪರಿಣತರನ್ನು, ವೈಚಾರಿಕ ಪಂಡಿತರನ್ನು ಹರಿದಾಸ ಪಂಥದ ಕಲಾವಿದರನ್ನು, ವಿದ್ವಾಂಸರನ್ನು, ಸಾಹಿತಿಗಳನ್ನು ತನ್ನೆಡೆಗೆ ಕೈಬೀಸಿ ಕರೆದಾಗ ಹೊಸ ಅಲೆ ಸೃಷ್ಟಿಯಾಯಿತು ಅಂದನೆಷ್ಟೇ. ಆದರೆ ಅವರೆಲ್ಲರ ಪ್ರತಿಭಾ ಪ್ರದರ್ಶನ ಇಲ್ಲಿ ಸುಲಭವಾಗಿರಲಿಲ್ಲ. ಅವರು ತಮ್ಮ ಪ್ರತಿಭೆಯನ್ನು ಪಾತ್ರದ ಮುಖೇನ ಪ್ರದರ್ಶಿಸುವಾಗ, ಅಲ್ಲೆಲ್ಲಾ ಪರಿಣಾಮದ ಕುರಿತಾದ ಲಕ್ಷ್ಯವನ್ನು, ಯಕ್ಷಗಾನದ ಶೈಲಿಯನ್ನು ಜನ ಬಯಸಿದರು. ಈ ಕಲಾಮಾಧ್ಯಮದ ಬಳಕೆಯನ್ನೇ ಜನ ಬಯಸಿದರು. ಶುಷ್ಕತೆ ಇರುವ ವಾಗ್ಝರಣೆಯನ್ನು, ಅರ್ಥಧಾರಿಯನ್ನು ಈ ಕ್ಷೇತ್ರ ಒಪ್ಪಲಿಲ್ಲ. ಅಸಂಬದ್ಧ ಪ್ರಲಾಪಿಗಳನ್ನು ಸ್ವೀಕರಿಸಲಿಲ್ಲ, ಅಂದರೆ ಅವರುಗಳು ಕೆಲವೇ ಕಾಲದಲ್ಲಿ ಮರೆಯಾದರು. ಕಾರಣ ಇದಕ್ಕೆ ಇದರದೇ ಆದ ಶ್ರಾವ್ಯ ಸೌಖ್ಯತೆಯನ್ನು ಹೊಂದಿದ ಪ್ರಸ್ತುತಿ ಅತ್ಯಗತ್ಯ. ಅದು ಅರ್ಥವಾಗದಿದ್ದರೆ ಇಲ್ಲಿ ಅವಕಾಶ ಇಲ್ಲ ಎನ್ನುವುದನ್ನು ಈ ಕಲೆ ಎಲ್ಲರಿಗೂ ತೋರಿಕೊಟ್ಟಿತು. ಆಗ ಸ್ಪಷ್ಟವಾಗಿ ತಿಳಿದಿದ್ದು ಶ್ರುತಿ ಭಕ್ತತೆ, ಬದ್ಧತೆ!

ಇಡೀ ವಾತಾವರಣ ಒಂದು ನಿರ್ದಿಷ್ಟವಾದ ಶ್ರುತಿಯಲ್ಲಿ ಸಾಗುತ್ತಿರುವಾಗ ಮಾತ್ರ ಪರಿಣಾಮವನ್ನು ನಿರೀಕ್ಷಿಸಬಹುದು. ಅದು ಈ ಮಾಧ್ಯಮದ ಜೀವಾಳ ಶಕ್ತಿ. ಅಲ್ಲದಿದ್ದರೆ ಅದು ತಾಳಮದ್ದಳೆಯ ಅರ್ಥಗಾರಿಕೆ ಎಂದು ಆಗದೇ, ಹರಟೆಯೋ ಶಿರೋವೇದನೆಯ ವಿಚಾರವೋ ಆಗುತ್ತದೆ. ಎಷ್ಟೋ ಸಂದರ್ಭ ಅರ್ಥಧಾರಿ ತಾನು ಶ್ರುತಿಭದ್ರವಾಗಿ ಮಾತನಾಡುತ್ತಿದ್ದೇನೆ ಎಂದೇ ತಿಳಿದುಕೊಂಡಿರುತ್ತಾನೆ. ಆದರೆ ವಾಸ್ತವದಲ್ಲಿ ಅವರಿಗೆ ಶ್ರುತಿಜ್ಞಾನವಾಗಲಿ, ರಾಗದ ಅರಿವಾಗಲಿ ಇರುವುದಿಲ್ಲ. ರಾಗದ ವಿಷಯ ತುಂಬಾ ದೊಡ್ಡದಾದರೂ ಇರುವ ಶ್ರುತಿಗೆ ತನ್ನ ಮಾತನ್ನು ಹೊಂದಿಸಿ ಹೇಳಬೇಕು ಎನ್ನುವ ತಿಳುವಳಿಕೆ ಈ ಅರ್ಥಧಾರಿಗಳಿಗೆ ಇರಲೇಬೇಕು. ಇಷ್ಟು ಮಾಡದಿದ್ದವರು ಈ ಕ್ಷೇತ್ರವನ್ನು ಪ್ರವೇಶಿಸಬಾರದು. ಏಕೆಂದರೆ ಇದು ಈ ಕಲಾಮಾಧ್ಯಮದ ಅನಿವಾರ್ಯ ಅರ್ಹತೆಗಳಲ್ಲಿ ಒಂದು. ಹಾಗೆ ತನ್ನ ಅಗಾಧ ಅಧ್ಯಯನವನ್ನು ಅಪೂರ್ಣವಾದ ಶ್ರುತಿಬದ್ಧತೆಯಲ್ಲಿ ಪ್ರಸ್ತುತಪಡಿಸಿದಾಗ ಆ ಕಲಾವಿದನ ಪ್ರಯತ್ನ ಸಂಪೂರ್ಣ ವಿಫಲ. ಪ್ರಯತಪೂರ್ವಕ ಶ್ರುತಿಬದ್ಧ ಮಾತುಗಾರಿಕೆಯನ್ನು ರೂಢಿಸಿಕೊಂಡರೆ ಅವನು, ಅವನು ವಹಿಸಿದ ಪಾತ್ರ, ಜತೆಗೆ ಈ ಕಲೆಯ ಶಕ್ತಿ ಉನ್ನತ ಪರಿಣಾಮವನ್ನುಂಟು ಮಾಡುತ್ತದೆ. ಈ ರೀತಿಯ ಹಿಡಿತವನ್ನೇ ವ್ಯಕ್ತಿಯೊಬ್ಬನ ಮಾಧ್ಯಮದ ಮೇಲಿನ ಹಿಡಿತ ಎನ್ನುವುದು. ಮಾಧ್ಯಮದ ಮೇಲೆ ಪ್ರಾಮಾಣಿಕ ಹಿಡಿತ ಇದ್ದರೆ, ಪರಿಣಾಮದಲ್ಲಿ ಗೆಲುವು ಖಂಡಿತಾ. ಅದು ಈ ಕಲೆಯ ಶಕ್ತಿ. ಇದನ್ನು ಅರಿಯಲು ಸುದೀರ್ಘ ಅಭ್ಯಾಸ ಬೇಕು. ಅದನ್ನು ಈ ಕಲೆ ಕಲಾವಿದನಿಂದ ಸದಾ ನಿರೀಕ್ಷಿಸುತ್ತದೆ.

ಆದುದರಿಂದ ಈ ತಾಳಮದ್ದಳೆ ಸುಲಭವಲ್ಲ!!

ಔಚಿತ್ಯಪ್ರಜ್ಞೆ: ಸಾಕಷ್ಟು ಅಭ್ಯಾಸ ಮಾಡಿದ ಪರಿಣತ ಕಲಾವಿದ ಶ್ರುತಿಬದ್ಧವಾಗಿ ಪಾತ್ರಚಿತ್ರಣ ಮಾಡುತ್ತಿದ್ದರೂ, ಅವರು ತಿಳಿದಿರಲೇಬೇಕಾದ ಮಹತ್ವದ ಸಂಗತಿ ಔಚಿತ್ಯಪ್ರಜ್ಞೆ. ಇದು ಕಠಿಣ ಅಭ್ಯಾಸದಿಂದ ಮೈಗೂಡಿಸಿಕೊಳ್ಳಬೇಕಾದ ವಿಚಾರ. ಪ್ರಸಂಗನಿಷ್ಠನಾಗಿ, ಪಾತ್ರನಿಷ್ಠನಾಗಿ, ಕಲಾಮಾಧ್ಯಮ ನಿಷ್ಠನಾಗಿ, ಹೊಣೆಗಾರಿಕೆಯನ್ನು ನಿರ್ವಹಿಸುವ ಕಲಾವಿದ, ತಾನು ವಹಿಸುವ ಪಾತ್ರದ ಔಚಿತ್ಯವನ್ನು ತನ್ನ ಮೇಧಾ ಕೌಶಲದಿಂದಲೇ ಕಾಪಾಡಬೇಕು. ಎಷ್ಟೇ ದೊಡ್ಡ ವಿದ್ವಾಂಸರಾದರೂ ಪಾತ್ರ ಯಾವ ಸ್ವಭಾವವನ್ನು ಬಯಸುತ್ತದೆಯೋ ಅದನ್ನು ಮೈಗೂಡಿಸಿಕೊಳ್ಳಬೇಕಾದದ್ದು ಅಗತ್ಯ. ಎಂದೋ ಆದ ಘಟನೆಗಳನ್ನು ಇಂದು ವಾಚಿಕಾಭಿನಯದಿಂದ ತೋರುವ ಕಲಾವಿದ, ಔಚಿತ್ಯವನ್ನು ಮೀರುವ ಅಥವಾ ಭಂಗಿಸುವ ಸ್ವಾತಂತ್ರ್ಯವನ್ನು ಹೊಂದಿಲ್ಲ. ಈ ಪ್ರಜ್ಞೆ ಪಾತ್ರದ ಸಾದ್ಯಂತ ಅಭಿವ್ಯಕ್ತಿ ಆಗಲೇಬೇಕು. ಇದನ್ನು ತಪ್ಪಿದರೆ ಕಲಾಶಿಲ್ಪ ಭಂಗವಾಗುತ್ತದೆ. ಅಲಿಖಿತವಾದರೂ ಕಲಾ ಸಂವಿಧಾನವೊಂದು ಭಂಗಗೊಳ್ಳುತ್ತದೆ. ತಾಳಮದ್ದಳೆ ವಿರೂಪ ಗೊಳ್ಳುತ್ತದೆ. ಆದುದರಿಂದಲೇ ತಾಳಮದ್ದಳೆಯ ಅರ್ಥದಾರಿಯ ಮಾತು ಅಂದರೆ ಅದು ಪ್ರವಚನವಲ್ಲ ಹರಿಕಥೆ ಅಲ್ಲ, ಭಾಷಣವಲ್ಲ, ಗಮಕ ವಾಚನವಲ್ಲ, ಶಾಲಾ ಪಾಠವಲ್ಲ. ಅದು ರಸಭಾವಗಳಿಂದ ಕೂಡಿದ ವಾಚಕ ಅಭಿನಯ. ಅದು ದೇಶ-ಕಾಲ ಬದ್ಧವಾಗಿರಬೇಕು. ಇದು ಔಚಿತ್ಯ! ಇದನ್ನರಿತು, ತನ್ನ ಸಿದ್ಧಿಯನ್ನಾಗಿಸಿಕೊಂಡು ಜನಮಾನಸಕ್ಕೆ ತಲುಪಿಸುವ ಪ್ರಯತ್ನಶೀಲ ಕಲಾವಿದ ನ್ಯಾಯಯುತವಾಗಿ ಸ್ವೀಕರಿಸಲ್ಪಡುತ್ತಾನೆ. ಬೇಗ ತೆರೆಯಿಂದ ಮರೆಯಾಗದೆ, ಬಹುಕಾಲ ಸ್ಥಿರವಾಗುತ್ತಾನೆ. ಈ ಪರಿಶ್ರಮ, ಪ್ರಜ್ಞೆ ಇಲ್ಲಿಯ ಅರ್ಹತೆ. ಅದನ್ನು ಈ ಕ್ಷೇತ್ರ ಬಯಸುತ್ತದೆ. ಆದುದರಿಂದ ತಾಳಮದ್ದಳೆ ಸುಲಭವಲ್ಲ!!

ಹೊಂದಾಣಿಕೆ: ಈ ರೀತಿಯ ಎಲ್ಲಾ ಗುಣಗಳು ಸೇರಿಕೊಂಡು ಒಬ್ಬ ಅರ್ಹ ಅರ್ಥಧಾರಿ ಈ ಕ್ಷೇತ್ರದಲ್ಲಿದ್ದರೆ ಅದು ಹೆಮ್ಮೆ. ಅವನು ಸಮರ್ಥ. ಈ ಮಾಧ್ಯಮದ ಸಶಕ್ತ ಸಾಧ್ಯತೆಗಳನ್ನು ಲೋಕಕ್ಕೆ ಕೊಟ್ಟ ಧನ್ಯತೆ ಅವನಿಗೂ, ಈ ಕ್ಷೇತ್ರಕ್ಕೂ ಸಲ್ಲುತ್ತದೆ. ಹೀಗಾಗುವಾಗ, ಇಲ್ಲಿ ದೇಶ-ಕಾಲ ಪೂರಕವಾದ ಸಾಮಾಜಿಕ ಪ್ರಜ್ಞೆಯೂ ಅನಿವಾರ್ಯ. ಹಲವರೊಡನೆ ಕೂಡಿಕೊಂಡು ಇರಬೇಕಾದುದರಿಂದ ಹೊಂದಾಣಿಕೆ ಪ್ರತಿಯೊಬ್ಬರಿಗೂ ಬಹಳ ಮುಖ್ಯ. ಎಷ್ಟೆಂದರೂ ಕಲೆ ಎನ್ನುವುದು ಆ ಕ್ಷಣದ ಸ್ಫೂರ್ತಿ. ಇದಂತೂ ಆಶುಪ್ರತಿಭಾ ಕಣ. ಪ್ರತಿಭಾವಂತ ಕಲಾವಿದರಿಂದ ಹೊಸ ಹೊಸ ಅರ್ಥ ಸಾಧ್ಯತೆಗಳು ಸ್ಫುರಿಸುತ್ತಾ ಹೊಸ ಹೊಸ ರೂಪಗಳನ್ನು ಪಡೆದುಕೊಳ್ಳುತ್ತಲೇ ಇರುತ್ತದೆ. ಆ ಕಾರಣದಿಂದಲೇ ಇಲ್ಲಿ ಸಿದ್ಧ ವಾಚಿಕ ವಿಧಾನ ಇಲ್ಲದಿರುವುದು ಇದರ ಹೆಗ್ಗಳಿಕೆಗೂ ಕಾರಣವಾಗಿದೆ. ಇದು ಹಾಗೆಯೇ ಇರಬೇಕು ಅಂತಾದರೆ ಎಲ್ಲಾ ಅರ್ಹತೆಗಳನ್ನು ಮೈಗೂಡಿಸಿಕೊಂಡರೂ, ಕಲಾವಿದನು ಹೊಂದಾಣಿಕೆ ಎನ್ನುವ ಒಂದು ಸಾಮಾಜಿಕ ಕಲಾಸಿದ್ಧಾಂತಕ್ಕೆ ತನ್ನನ್ನು ಒಪ್ಪಿಸಿಕೊಳ್ಳಬೇಕು. ಎಂಥ ಸಂದರ್ಭದಲ್ಲಿಯೂ ಮೂಲಸೂತ್ರಗಳನ್ನು ಬಾಧಿಸುವ ಕೃತ್ಯಗಳನ್ನು ವಾಚಿಕಾಭಿನಯದಲ್ಲಿ ಮಾಡುವಂತಿಲ್ಲ. ಒಂದು ವೇಳೆ ಹಾಗೆ ಮಾಡುವುದಕ್ಕೆ ಮುಂದಾದರೆ ಅದು ದ್ರೋಹ. ಅದರಿಂದ ಕೆಲವು ಕ್ಷಣಿಕ ಹಾಗೂ ವಿಕೃತ ಆನಂದ ಉಂಟಾಗಬಹುದು. ಆದರೆ ಅವೆಲ್ಲ ಕಲಾವಿದರ ದೋಷ. ಅವನ್ನೆಲ್ಲ ಈ ಕಲೆಯ ನಿಜವಾದ ಪ್ರೇಕ್ಷಕ ವರ್ಗ ಸ್ವೀಕರಿಸುವುದಿಲ್ಲ. ಬಲುಬೇಗ ಅಂಥವರುಗಳನ್ನು ಮೂಲೆಗೆ ಸರಿಸುತ್ತದೆ. ಹಿಂದೆ ಎತ್ತರದ ಗೌರವದ ಸ್ಥಾನಗಳನ್ನು ಪಡೆದ ಹಲವರು, ಹೊಂದಾಣಿಕೆ ಸ್ವಭಾವ ಇಲ್ಲದ ಎಷ್ಟೋ ಸಮರ್ಥರು ಕಾರಣವಿಲ್ಲದೆ ಕಾಣೆಯಾಗಿದ್ದಾರೆ. ಈ ಪಥ್ಯ ಈ ಕಲೆಯ ಅರ್ಥಧಾರಿಗಳಿಗೆ ಬಹಳ ಮುಖ್ಯವಾದ ಅರ್ಹತೆ. ಸರ್ವತ್ರ ಉತ್ತಮ ಅಭಿಪ್ರಾಯಗಳನ್ನು ಹೊಂದಿರುವ ಕಲಾವಿದರುಗಳಲ್ಲಿ ಈ ಹೊಂದಾಣಿಕೆಯ ಗುಣ ಕಾಣುತ್ತದೆ. ಇದೂ ಅರಿತು ಅಳವಡಿಸಿಕೊಳ್ಳಬೇಕಾದ ಗುಣ ಲಕ್ಷಣವೇ. ಆದುದರಿಂದಲೇ ತಾಳಮದ್ದಳೆ ಸುಲಭವಲ್ಲ!!

ಸಮಯಪ್ರಜ್ಞೆ: ಇಷ್ಟೆಲ್ಲಾ ಪರಿಶ್ರಮಗಳನ್ನು ತನ್ನ ಸಹಜ ಸ್ವಭಾವ ಸ್ಥಿತಿಗತಿಗಳಿಗೆ ಹೊಂದಿಸಿಕೊಂಡಿರುವ ಕಲಾವಿದರು ತಾಳಮದ್ದಳೆ ಎನ್ನುವ ಈ ಕಲಾಪ್ರಕಾರದಲ್ಲಿ ರೂಢಿಸಿಕೊಂಡಿರಲೇಬೇಕಾದ ಇನ್ನೊಂದು ಆದ್ಯತೆಯ ಗುಣ ಸಮಯಪ್ರಜ್ಞೆ!

ಈ ಸಮಯ ಎನ್ನುವುದನ್ನು ನಾನು ಬೇರೆ ಬೇರೆ ಕೋನಗಳಿಂದ ನೋಡುವ ಪ್ರಯತ್ನ ಮಾಡಿದ್ದೇನೆ ಅಂದರೆ, ತನ್ನ ವಿಚಾರ ಅದರ ಕಲಾತ್ಮಕ ಸ್ವರೂಪ, ಅದು ಪರಿಣಾಮ ಉಂಟುಮಾಡಬೇಕು ಎನ್ನುವ ಪ್ರಜ್ಞೆ, ಆ ಪಾತ್ರದ ಸ್ವಭಾವ ಇವುಗಳೆಲ್ಲದರ ಜತೆ ಅಂದಿನ ಕಾಲವನ್ನು ಕಾಣಿಸುವ ಸ್ಪಷ್ಟತೆ ಅರ್ಥಧಾರಿಗೆ ಬೇಕು. ಅದು ವಾಚಕ ಅಭಿನಯ. ಇದರ ಜತೆಗೆ ವರ್ತಮಾನದ ಸ್ಥಿತಿಗಳನ್ನು ಅರಿತಿರಬೇಕು. ಎಲ್ಲವೂ ದೇಶ-ಕಾಲ ಚೋದಿತವಾಗಿರುವಾಗ ತಾವು ಪ್ರಸ್ತುತಪಡಿಸುವ ವಿಚಾರಗಳನ್ನು ದೇಶ-ಕಾಲದ ಮರ್ಯಾದೆಯ ಒಳಗೆ ತಿಳಿಸಬೇಕು. ಈ ಪ್ರಜ್ಞೆಯ ದೃಶ್ಯ ರೂಪ- ಕಾಲಮಿತಿ. ಇದನ್ನು ಒಂದು ಸವಾಲು ಹಾಗೂ ಶಿಸ್ತು ಎಂಬ ದೃಷ್ಟಿಯಿಂದ ಸ್ವೀಕರಿಸುವಾಗ ಅದಕ್ಕೊಂದು ಸೌಂದರ್ಯ ಬರುತ್ತದೆ. ಹಾಗಂತ ಅದು ಸ್ವಲ್ಪ ಹಿಗ್ಗಿದರೆ ಅದು ಅಪರಾಧ ಎಂಬ ಅರ್ಥವು ಸರಿಯಲ್ಲ, ಪರಕಾಯ ಪ್ರವೇಶ ಮಾಡಿರುವಾಗ ಕೆಲವೊಮ್ಮೆ ಸ್ವಲ್ಪ ವಿಸ್ತಾರ ಸಹಜವಾಗಿ ಆಗಿಬಿಡುತ್ತದೆ. ಆದರೆ ಅತಿಯಾಗಿ ಲಂಬಿಸಲ್ಪಟ್ಟರೆ ಅದು ಅಕ್ಷಮ್ಯ. ಅದು ಅಗೌರವ. ಇದರ ಜತೆಗೆ ಸುಂದರ ಶಿಲ್ಪಕಾಗಿ ಈ ಸವಾಲನ್ನು ಕಲಾವಿದ ತನ್ನ ಕೌಶಲದಿಂದ ಕಟ್ಟಿದರೆ ಅದು ಆಪ್ಯಾಯಮಾನ. ವಿಸ್ತಾರದ ಧಾವಂತದಲ್ಲಿ ಕಳೆದುಹೋಗುವ ಹಲವು ಸಂಗತಿಗಳಿಗೆ ಕಡಿವಾಣ ಹಾಕಿ ಸುಂದರ ಸ್ವರೂಪವನ್ನು ನೀಡಲು ಸಮರ್ಥ ಕಲಾವಿದನಿಗೆ ಯಾವತ್ತೂ ಸಾಧ್ಯ. ಇಲ್ಲಿಯೂ ಗಮನಿಸಬೇಕಾದ ಒಂದು ಅಂಶ ಎಲ್ಲಾ ಕಾಲಗಳಲ್ಲಿಯೂ ವಿಸ್ತಾರಕ್ಕೂ ಹಾಗೂ ಮಿತಿಗೂ ಒಂದಿಷ್ಟು ಚರ್ಚೆ ವಿಮರ್ಶೆ ಬಂದಿದೆ. ಒಂದಿಷ್ಟು ಒಮ್ಮತ ವಿರೋಧ ಸೃಷ್ಟಿಯಾಗಿದೆ. ಎಲ್ಲದರ ಸಾರವಾಗಿ ನೋಡುವುದಾದರೆ ಕಲಾವಿದರಾದವರು ಈ ಎಲ್ಲ ವಿಚಾರಗಳನ್ನು ತಿಳಿಯುವ ಮತ್ತು ಅದಕ್ಕೆ ಸ್ಪಂದಿಸುವ ಗುಣಾತ್ಮಕ ಪ್ರದರ್ಶನವನ್ನೇ ನೀಡುವಂತಾಗಬೇಕು. ಪಾತ್ರದಲ್ಲಿ ಎಷ್ಟೇ ತನ್ಮಯರಾದರೂ ಆ ಎಚ್ಚರವನ್ನು ಮರೆಯಬಾರದು. ಜಾಗೃತಿ ಅಗತ್ಯ. ಹೀಗಾದಾಗ ಹೊಸತನದಲ್ಲಿ ಹಿರಿತನದ ಶಿಸ್ತು ಸೊಗಸು ಕಾಣುತ್ತದೆ. ಆದುದರಿಂದ ಸಮಯಮಿತಿ ಎನ್ನುವುದು ಗುಣಾತ್ಮಕ ಪ್ರದರ್ಶನದ ಮಿತಿಯಾಗಬಾರದು ಎಂಬ ಕಾಳಜಿ ಕಲಾವಿದರಿಗೆ ಇರಬೇಕು. ಈ ಸೂಕ್ಷ್ಮ ಕಾಳಜಿ ವಹಿಸಬೇಕು ಎನ್ನುವುದನ್ನು ಅಭ್ಯಾಸದಿಂದ ರೂಢಿಸಿಕೊಳ್ಳಬೇಕಾಗುತ್ತದೆ. ಭಾವಜೀವಿಯಾದ ಕಲಾವಿದರಿಗೆ ಇದು ಸಣ್ಣ ವಿಷಯವಲ್ಲ. ಇದನ್ನೂ ಅರಿವಿನಿಂದಲೇ ತಿಳಿಯಬೇಕು.

ಆದುದರಿಂದ ತಾಳಮದ್ದಳೆ ಸುಲಭವಲ್ಲ!!

ರಂಗಪ್ರಜ್ಞೆ: ಆಗಲೇ ಒಂದು ಸಂದರ್ಭ ನಾನು ಪ್ರಸ್ತಾಪಿಸಿದಂತೆ ಈ ಕಲೆ ಹಲವರನ್ನು, ಅನ್ಯಾನ್ಯ ಕ್ಷೇತ್ರಗಳ ಆಸಕ್ತರನ್ನು ಕೈಬೀಸಿ ಕರೆದರೂ ಈ ರಂಗಪ್ರಜ್ಞೆ ಎನ್ನುವುದು ಸ್ವಲ್ಪವಾದರೂ ಇರದಿದ್ದರೆ ಹಾಗೆ ಬಂದವರು ಇಲ್ಲಿ ಯಶಸ್ವಿಯಾಗಲಾರರು. ಅವರು ಬಹುಬೇಗ ಸೋಲುತ್ತಾರೆ. ಏನು ಈ ರಂಗಪ್ರಜ್ಞೆ ಅಂದರೆ, ಯಕ್ಷಗಾನಕ್ಕಾಗಿ ಸಿದ್ಧಗೊಂಡ ಪಠ್ಯವೂ ಹಲವು ಅಭಿವ್ಯಕ್ತಿಯ ಅಗತ್ಯವನ್ನು ಹೊಂದಿದೆ. ರಸ ವೈಶಿಷ್ಟ್ಯಗಳಿಂದ ಕೂಡಿದೆ. ಇದು ತಿಳಿಯದಿದ್ದರೆ ವಾಚಿಕವು ವಾಚಿಕ ಅಭಿನಯ ಆಗುವುದಿಲ್ಲ. ಅದು ಕೇವಲ ಬಡಬಡಿಕೆಯಾಗುತ್ತದೆ. ಯಾವ ಆಹಾರ್ಯ ಇಲ್ಲದಿದ್ದಾಗಲೂ, ಮಾತು ಪರಿಣಾಮಕಾರಿ ಆಗಬೇಕು ಎಂದಾಗ ಅದು ಅಭಿನಯದ ಕೆಲವು ಭಾವಗಳನ್ನು ಮುಖದಲ್ಲಿ ಕೈಯಲ್ಲಿ ನಿರೀಕ್ಷಿಸುತ್ತದೆ. ನೋಟಗಳಲ್ಲಿ ನಿರೀಕ್ಷಿಸುತ್ತದೆ. ಕೆಲವು ಸೂಕ್ಷ್ಮ ಉದ್ಗಾರಗಳಲ್ಲಿ ನಿರೀಕ್ಷಿಸುತ್ತದೆ. ಅದನ್ನು ಮಾಡದೆ ಅಥವಾ ಅಳವಡಿಸಿಕೊಳ್ಳದೆ ಸುಮ್ಮನಿದ್ದರೆ ಬೇರೆ ಕ್ಷೇತ್ರದ ಎಷ್ಟು ದೊಡ್ಡವರಾದರೂ ಈ ಕೊರತೆಯಿಂದ ಸೋಲುತ್ತಾರೆ. ಇದು ರಂಗದಲ್ಲಿ ಎಷ್ಟು ಅಗತ್ಯವೋ, ತಾಳಮದ್ದಳೆಯಲ್ಲಿಯೂ ಅಷ್ಟೇ ಅಗತ್ಯ. ವಾಚಿಕ ಅಭಿನಯ ಎಂದು ಹೇಳುವಾಗ ಅದು ಆಕಾರ ಬದ್ಧತೆಯನ್ನು ಅವಲಂಬಿಸಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಇದನ್ನ ರೂಢಿಸಿಕೊಳ್ಳದಿದ್ದರೆ ಮಾಡಿದ ಅಭಿನಯವು ವಿಕಾರವಾಗಿ ಕಂಡರೆ ಅಲ್ಲಿಯೂ ಸೋಲೇ ಗತಿ. ಅಂಥವರು ಬಹುಕಾಲ ಮೆರೆಯಲಾರರು. ಅವರ ವ್ಯಂಗ್ಯ ವಿಕಾರ ಅಭಿನಯಗಳು ನಗೆಪಾಟಲಿಗೀಡಾಗಿ ಅಂಥವರು ಸೋಲುತ್ತಾರೆ. ಈ ಅರಿವು ಈ ಕ್ಷೇತ್ರದ ಪ್ರವೇಶ ಬಯಸುವ ಅರ್ಥಧಾರಿಗಳಿಗೆ ಅತ್ಯಗತ್ಯ.

ಆದುದರಿಂದ ತಾಳಮದ್ದಳೆ ಸುಲಭವಲ್ಲ!!

ಕೂಟಕಲೆ: ಈ ಕಲೆ ಪ್ರದರ್ಶನದಲ್ಲಿ ರಂಜನೆಯನ್ನು ನೀಡಬೇಕು, ಬೋಧನೆಯನ್ನು ನೀಡಬೇಕು ಎನ್ನುವ ಮೂಲ ಸಿದ್ಧಾಂತವನ್ನು ಒಪ್ಪಿಕೊಂಡು ಆ ಕಣ್ಣಿನಿಂದ ನೋಡುವುದಾದರೆ, ಇದು ಕುಸ್ತಿಯ ಅಖಾಡವಲ್ಲ, ಇದು ಕೂಟಕಲೆ. ಇದಕ್ಕೆ ಹಿಮ್ಮೇಳ ಹಾಗೂ ಮುಮ್ಮೇಳ ಬೇಕು. ಎರಡರ ಸಾಂಗತ್ಯ ಒಂದು ಸುಂದರ ಸೌಧವಾಗಬೇಕು. ವ್ಯಕ್ತಿ, ಸನ್ನಿವೇಶ, ರಸಗಳು, ಭಾವಾಭಿವ್ಯಕ್ತಿಗಳು ಸಮ್ಮಿಲನಗೊಂಡು ರಂಜನೆಯನ್ನು ಒದಗಿಸುತ್ತ ಒಂದು ಆನಂದದ ಸ್ಥಿತಿಯತ್ತ ಕೊಂಡೊಯ್ಯಬೇಕು. ಕಲಾವಿದರ ಮನಸ್ಥಿತಿಯಂತೂ ಉತ್ತಮ ಪ್ರದರ್ಶನ ನೀಡಬೇಕು ಎಂದಾಗಿರಬೇಕು. ಇದರಲ್ಲಿ ಯಶಸ್ವಿ ಅರ್ಥಧಾರಿ ಆಗಬೇಕು ಎಂಬುದು ಅರ್ಥಧಾರಿಯ ಮೂಲಗುಣ ಆಗಿರಬೇಕು. ''ನನ್ನ ಪಾತ್ರ ಮಾತ್ರ ವಿಜೃಂಭಿಸಬೇಕು, ಎಲ್ಲ ಸಹಜ ನಡೆಯ ಕ್ರಮಗಳನ್ನ ಮೀರಿಯಾದರೂ ತನ್ನ ಪಾತ್ರವನ್ನು ವೈಭವೀಕರಿಸಬೇಕು'' ಎನ್ನುವ ಧೋರಣೆಯ, ವ್ಯಕ್ತಿ ಪ್ರತಿಷ್ಠೆಯ ಸ್ವಭಾವದವರಿಗೆ ಈ ಕಲೆ ಅಲ್ಲ, ಏಕೆಂದರೆ ಇದು ಕೂಟಕಲೆ. ದುರಹಂಕಾರ, ಆಕ್ರಮಣಶೀಲತೆ, ಭ್ರಮೆಯನ್ನು ಹುಟ್ಟಿಸಿ ದಾರಿ ತಪ್ಪಿಸುವ ಕ್ರಮ, ಇದೆಲ್ಲ ಯಾರನ್ನೂ ಶ್ರೇಷ್ಠರನ್ನಾಗಿಸುವುದಿಲ್ಲ ಅಥವಾ ಅಂಥವರು ಈ ಕಲೆಗೆ ಅನಿವಾರ್ಯ ಎನಿಸುವುದಿಲ್ಲ. ಬಹಳ ಸಂದರ್ಭ, ಇಂಥ ಭ್ರಮೆಗಳಿಂದ ಕೂಡಿದ ಎಷ್ಟೋ ಜನ ಬಲುಬೇಗ ಜನರ ಮನಸ್ಸಿನಿಂದ ದೂರವಾಗಿಬಿಡುತ್ತಾರೆ. ಅಥವಾ ಅವರನ್ನು ನೆನಪಿಸುವ ಅಭಿಮಾನಿಗಳ ಸಂಖ್ಯೆ ಕೂಡ ಮಿತವಾಗಿರುತ್ತದೆ. ಇದು ಎಂದಿಗೂ ವ್ಯಕ್ತಿ ಪ್ರತಿಷ್ಠೆಯ ಪ್ರದರ್ಶನದ ಆಖಾಡವಲ್ಲ. ಬದಲಿಗೆ ಮಹಾನ್ ತತ್ವ ಸಿದ್ಧಾಂತಗಳನ್ನು, ಮುದ ನೀಡುವ ವಿಚಾರಗಳನ್ನು ಕಲಾತ್ಮಕವಾದ ಸ್ವರೂಪದಲ್ಲಿ ನೀಡುವ ಒಂದು ಕೂಟಕಲೆ. ಇದನ್ನು ಅರಿತವ ಉಳಿದಾನು, ಅರಿಯದವ ಅಳಿದಾನು. ಈ ಎಚ್ಚರಿಕೆ ಕಲಾವಿದರಲ್ಲಿ ಸದಾ ಇರಬೇಕಾಗುತ್ತದೆ. ಅದನ್ನು ಅಭ್ಯಾಸದಿಂದಲೇ ರೂಢಿಸಿಕೊಳ್ಳಬೇಕು. ಇವೆಲ್ಲವನ್ನೂ ತಿಳಿಯಲು ತಾಳ್ಮೆ ಬೇಕು. ಪ್ರಾಮಾಣಿಕತನ ಬೇಕು. ಕಲಾಧೋರಣೆ ಬೇಕು.

ಆದುದರಿಂದ ತಾಳಮದ್ದಳೆ ಸುಲಭವಲ್ಲ...

(ಲೇಖಕರು ಯಕ್ಷಗಾನದ ಹಿರಿಯ ಅರ್ಥಧಾರಿಗಳು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 253

ಮಾಸಾಂತ್ಯಕ್ಕೆ ಭಾರತ-ಇ.ಯು ಮುಕ್ತ ವ್ಯಾಪಾರ ಒಪ್ಪಂದ ಸಹಿ

ಮೊಟ್ಟಮೊದಲ ಭಾರತ ಪ್ರವಾಸದಲ್ಲಿರುವ ಜರ್ಮನಿ ಚಾನ್ಸಲರ್ ಫ್ರೆಡ್ರಿಕ್ ವಿಶ್ವಾಸ

ಅಮೆರಿಕ ಸುಂಕ ಹೊರೆ ತಪ್ಪಿಸಿಕೊಳ್ಳಲು ಯುರೋಪ್ ಮಾರುಕಟ್ಟೆಯತ್ತ ನೋಟ

ರಕ್ಷಣಾ ಕ್ಷೇತ್ರದಲ್ಲಿನ ಪರಸ್ಪರ ಸಹಕಾರ ಬಲವರ್ಧನೆಗೆ ಭಾರತ-ಜರ್ಮನಿ ಒಪ್ಪಂದ

ನಿಯಮ ಆಧರಿಸಿದ ಅಂತಾರಾಷ್ಟ್ರೀಯ ಬೇಡಿಕೆಗಳಿಗೆ ಉಭಯ ದೇಶಗಳೂ ಬದ್ಧ

ಜರ್ಮನಿಯ ಸರಕಾರಿ ಮತ್ತು ಖಾಸಗಿ ಕಂಪನಿಯ ಜಂಟಿ ತಯಾರಿಕೆ 'ಎಐಪಿ' ಸಿಸ್ಟಂ ಜಲಾಂತರ್ಗಾಮಿ

ದೆಹಲಿ: ಯೂರೋಪಿಯನ್ ಯೂನಿಯನ್ (ಯೂರೋಪ್ ದೇಶಗಳ ಒಕ್ಕೂಟ-ಇ.ಯು) ಜತೆಗಿನ ಭಾರತದ ವ್ಯಾಪಾರ ಒಪ್ಪಂದವನ್ನು ಇದೇ ಮಾಸಾಂತ್ಯದೊಳಗೆ ಪೂರ್ಣಗೊಳಿಸಲು ಬದ್ಧವಾಗಿರುವುದಾಗಿ ಭಾರತ ಸರಕಾರ ಜರ್ಮನಿ ಸರಕಾರಕ್ಕೆ ಭರವಸೆ ನೀಡಿದೆ ಎಂದು ಹೇಳಲಾಗಿದೆ.

ಯೂರೋಪ್ ಒಕ್ಕೂಟ ಮತ್ತು ಭಾರತದ ನಡುವಿನ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಇದೇ ಜನವರಿಯಲ್ಲೇ ಉಭಯತ್ರರಿಂದ ಅಂಕಿತ ಬೀಳಲಿದೆ ಎಂಬ ವಿಶ್ವಾಸವನ್ನು ಜರ್ಮನಿ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್ ಸುದ್ದಿಸಂಸ್ಥೆಗಳ ಬಳಿ ಸೋಮವಾರ ವ್ಯಕ್ತಪಡಿಸಿದ್ದಾರೆ.

ಅಮೆರಿಕ ಜತೆಗಿನ ವ್ಯಾಪಾರ ಒಪ್ಪಂದ ಹಲವು ಸುತ್ತುಗಳ ಮಾತುಕತೆಗಳ ಬಳಿಕವೂ ಪೂರ್ಣಗೊಂಡಿಲ್ಲದೇ ಇರುವ ಈ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಯೂರೋಪ್ ದೇಶಗಳ ದೊಡ್ಡ ಮಾರುಕಟ್ಟೆ ಭಾರತದ ಮಟ್ಟಿಗೆ ಬಹಳ ಮಹತ್ವದ್ದಾಗಿದೆ. ಹಾಗಾಗಿಯೇ 'ಇ.ಯು' ಜತೆಗಿನ ವ್ಯಾಪಾರ ಒಪ್ಪಂದಕ್ಕೆ ಭಾರತ ಆದ್ಯತೆ ನೀಡಿದೆ ಎನ್ನಲಾಗಿದೆ. ಈ ವಿಚಾರವಾಗಿ ಇದೇ ಮೊದಲ ಬಾರಿಗೆ ಭಾರತ ಪ್ರವಾಸದಲ್ಲಿರುವ ಜರ್ಮನಿ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಅವರೇ ಭರವಸೆ ನೀಡಿದ್ದಾರೆ ಎಂದು ಮೂಲಗಳಿಂದ ತಿಳಿದುಬಂದಿದೆ. ಮೆರ್ಜ್ ಅವರ ಜತೆಗೆ ಜರ್ಮನಿಯ ಅತಿದೊಡ್ಡ ವ್ಯಾಪಾರಿ ನಿಯೋಗ ಭಾರತಕ್ಕೆ ಆಗಮಿಸಿದೆ ಎಂಬುದು ಗಮನಾರ್ಹ ಅಂಶವಾಗಿದೆ.

ರಕ್ಷಣಾ ಮತ್ತು ಭದ್ರತಾ ಸಂಬಂಧ ವೃದ್ಧಿ ಗುರಿ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿನ ಪಾಲುದಾರಿಕೆ, ಜಂಟಿ ಅಭಿವೃದ್ಧಿ ಮತ್ತು ರಕ್ಷಣಾ ಸಾಮಗ್ರಿಗಳ ಸಹ ಉತ್ಪಾದನೆ, ರಕ್ಷಣಾ ಕೈಗಾರಿಕಾ ಸಹಕಾರ ಮಾರ್ಗಸೂಚಿ ಅಭಿವೃದ್ಧಿ ಉದ್ದೇಶದ ಘೋಷಣೆ ಸೇರಿದಂತೆ ಹಲವಾರು ಮಹತ್ವದ ಕ್ರಮಗಳ ಕುರಿತು ಭಾರತ-ಜರ್ಮನಿ ಜಂಟಿ ಘೋಷಣೆ ಮಾಡಿವೆ.

ದ್ವಿಪಕ್ಷೀಯ ರಕ್ಷಣಾ ಸಹಕಾರವನ್ನು ಮತ್ತಷ್ಟು ಹೆಚ್ಚಿಸಲು 2025ರ ನವೆಂಬರ್‌ನಲ್ಲಿ ದೆಹಲಿಯಲ್ಲಿ ನಡೆದ ಉನ್ನತ ರಕ್ಷಣಾ ಸಮಿತಿ ಸಭೆಯ ಫಲಿತಾಂಶಗಳಿಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಜರ್ಮನಿ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್ ಮೆಚ್ಚುಗೆ ವ್ಯಕ್ತಪಡಿಸಿದರು.

ಕಳೆದ ನವೆಂಬರ್‌ನಲ್ಲಿ ಭಾರತದ ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಮತ್ತು ಜರ್ಮನಿ ರಕ್ಷಣಾ ಕಾರ್ಯದರ್ಶಿಗಳ ಜಂಟಿ ಅಧ್ಯಕ್ಷತೆಯಲ್ಲಿ ನಡೆದಿದ್ದ ಉನ್ನತ ಮಟ್ಟದ ರಕ್ಷಣಾ ಸಮಿತಿ ಸಭೆ ಭಾರತ-ಜರ್ಮನಿ ನಡುವಿನ ರಕ್ಷಣಾ ಸಹಕಾರವನ್ನು ಮತ್ತಷ್ಟು ವೃದ್ಧಿಪಡಿಸುವತ್ತ ಗಮನಹರಿಸಿತ್ತು. ಜತೆಗೆ ಸೇನಾಪಡೆಗಳ ಸಹಕಾರವನ್ನು ಹೆಚ್ಚಿಸುವ ಬದ್ಧತೆಯನ್ನೂ ಪುನರುಚ್ಚರಿಸಿತ್ತು.

ಎರಡೂ ದೇಶಗಳ ನಡುವಿನ ಹೊಸ ಟ್ರ್ಯಾಕ್ 1.5 ವಿದೇಶಿ ನೀತಿ ಮತ್ತು ಭದ್ರತಾ ವಿಭಾಗದ ಮಾತುಕತೆಗಳನ್ನು ಉಭಯ ದೇಶಗಳ ಪ್ರಮುಖ ನಾಯಕರಿಬ್ಬರೂ ಸ್ವಾಗತಿಸಿದ್ದಾರೆ ಎಂದು ಪ್ರಧಾನಿ ಕಾರ್ಯಾಲಯ ತಿಳಿಸಿದೆ.

ಜರ್ಮನಿ ಆಗ್ರಹ: ಕಚ್ಚಾತೈಲ ಮತ್ತು ರಕ್ಷಣಾ ಸಲಕರಣೆಗಳಿಗೆ ರಷ್ಯಾ ಮೇಲಿನ ಅವಲಂಬನೆಯನ್ನು ಭಾರತ ಕಡಿಮೆ ಮಾಡಬೇಕು. ರಕ್ಷಣಾ ಸಲಕರಣೆಗಳಿಗೆ ಜರ್ಮನಿಯತ್ತಲೂ ಗಮನ ಹರಿಸಬೇಕು ಎಂಬುದು ಭಾರತ ಸರಕಾರಕ್ಕೆ ಜರ್ಮನಿ ನಿಯೋಗದ ಆಗ್ರಹವಾಗಿತ್ತು ಎಂದೂ ತಿಳಿದುಬಂದಿದೆ.

ಪ್ರಧಾನಿ ನರೇಂದ್ರ ಮೋದಿ ಅವರ 'ಕಾರ್ ಪೂಲಿಂಗ್ ಡಿಪ್ಲೊಮೆಸಿ' ಇತ್ತೀಚೆಗೆ ಹೆಚ್ಚು ಚರ್ಚೆಯಾಗುತ್ತಿದ್ದು, ಜರ್ಮನಿ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್ ಜತೆ ಅಹಮದಾಬಾದ್‌ನಲ್ಲಿ ಕಾರಿನೊಳಗೇ ನಾಯಕರಿಬ್ಬರ ಗಹನ ಚರ್ಚೆ.

ಇಯು ವ್ಯಾಪಾರ ಒಪ್ಪಂದ

ಭಾರತ ಮತ್ತು ಯೂರೋಪ್ ಒಕ್ಕೂಟದ ನಡುವಿನ ವ್ಯಾಪಾರ ಒಪ್ಪಂದದಲ್ಲಿ ಚರ್ಚೆಯಾಗುತ್ತಿರುವ ಅಂಶಗಳಲ್ಲಿಯೂ ಸುಂಕ ಪ್ರಮಾಣ ಕಡಿತವೇ ಪ್ರಧಾನವಾಗಿದೆ. ಜರ್ಮನಿಯಿಂದ ಭಾರತಕ್ಕೆ ರಫ್ತಾಗುವ ಕಾರುಗಳು, ವೈದ್ಯಕೀಯ ಉಪಕರಣಗಳು, ವೈನ್-ಮದ್ಯಸಾರ ಮತ್ತು ಮಾಂಸದ (ಮಾಂಸಾಹಾರ) ಉತ್ಪನ್ನಗಳ ಆಮದು ಮೇಲಿನ ಸುಂಕವನ್ನು ಭಾರತ ಸರಕಾರ ಕಡಿತಗೊಳಿಸಬೇಕು ಎಂಬುದು ಯೂರೋಪ್ ಒಕ್ಕೂಟದ ಪ್ರಮುಖ ಆಗ್ರಹವಾಗಿದೆ. ಅದೇ ರೀತಿ ಭಾರತದಲ್ಲಿ ಕಾರ್ಮಿಕರ ಶ್ರಮದಿಂದ ಸಿದ್ಧವಾಗುವ ಉತ್ಪನ್ನಗಳ ಮಾರಾಟಕ್ಕೆ ಯೂರೋಪ್ ಒಕ್ಕೂಟ ದೇಶಗಳಲ್ಲಿನ ಮಾರುಕಟ್ಟೆಯನ್ನು ಮುಕ್ತಗೊಳಿಸಬೇಕು ಮತ್ತು ಸುಂಕ ರಹಿತವಾಗಿಸಬೇಕು ಎಂಬುದು ಭಾರತ ಸರಕಾರದ ಒತ್ತಾಯವಾಗಿದೆ.

84,250 ಕೋಟಿ ರು.ಗಳ ಜಲಾಂತರ್ಗಾಮಿ ಖರೀದಿ

ದೆಹಲಿ: ರಕ್ಷಣಾ ಕ್ಷೇತ್ರದಲ್ಲಿ ಪರಸ್ಪರ ಸಹಕಾರವನ್ನು ಇನ್ನಷ್ಟು ದೃಢವಾಗಿಸುವ ಕುರಿತು ಭಾರತ ಮತ್ತು ಜರ್ಮನಿ ನಡುವೆ ಒಪ್ಪಂದವಾಗಿರುವ ಮಧ್ಯೆಯೇ 800 ಕೋಟಿ ಯುರೋ(84,250 ಕೋಟಿ ರು.) ಮೌಲ್ಯದ ಜರ್ಮನಿಯ ಅತ್ಯಾಧುನಿಕ ಜಲಾಂತರ್ಗಾಮಿಯನ್ನು ಭಾರತ ಖರೀದಿಸಲು ಮುಂದಾಗಿದೆ. 'ಪ್ರಾಜೆಕ್ಟ್ 75 ಇಂಡಿಯ' (ಪಿ-75ಐ) ಅಡಿಯಲ್ಲಿ ಜರ್ಮನಿಯಲ್ಲಿ ತಯಾರಾಗುವ ಹೊಸ ಪೀಳಿಗೆಯ 'ಏರ್ ಇಂಡಿಪೆಂಡೆಂಟ್ ಪ್ರೊಪಲ್ಷನ್'(ಎಐಪಿ) ಸಿಸ್ಟಂ ಒಳಗೊಂಡಿರುವ ಯುದ್ಧ ಸನ್ನದ್ಧ 6 ಸಬ್‌ಮರೀನ್‌ಗಳ ಖರೀದಿ ವಹಿವಾಟು ಇನ್ನಷ್ಟೇ ಪೂರ್ಣಗೊಳ್ಳಬೇಕಿದೆ.

ಜರ್ಮನಿಯ 'ಥೈಸ್ಸೆನಕ್ರುಪ್ ಮರೀನ್ ಸಿಸ್ಟಮ್ಸ್' ಕಂಪನಿಯು ಜರ್ಮನಿ ಸರಕಾರದ ಅಂಗಸಂಸ್ಥೆಯಾದ 'ಮಝುಗಾನ್ ಡಾಕ್ ಶಿಪ್ ಬಿಲ್ಡರ್' ಜತೆಗೂಡಿ ಆರು ಬಲಿಷ್ಠ ಜಲಾಂತರ್ಗಾಮಿಗಳನ್ನು ಭಾರತೀಯ ನೌಕಾಪಡೆಗಾಗಿ ಸಿದ್ಧಪಡಿಸಿಕೊಡಲು ಸಿದ್ಧವಾಗಿದೆ.

ಈವರೆಗೂ ರಷ್ಯಾದಿಂದ ಜಲಾಂತರ್ಗಾಮಿಗಳನ್ನು ಖರೀದಿಸುತ್ತಿದ್ದ ಭಾರತ, ಈಗ ಜರ್ಮನಿಯ ಜಲಾಂತರ್ಗಾಮಿ ಖರೀದಿಗೆ ಮುಂದಾಗಿರುವುದು ಜರ್ಮನಿ ಸರಕಾರದ ಪಾಲಿಗೆ ದೊಡ್ಡ ಹಾಗೂ ಬಹುಮುಖ್ಯವಾದ ವಹಿವಾಟಾಗಿದೆ. ಈ ವಹಿವಾಟು ಪೂರ್ಣಗೊಂಡಲ್ಲಿ ಭಾರತ-ಜರ್ಮನಿ ನಡುವಿನ ರಕ್ಷಣಾ ಕ್ಷೇತ್ರದಲ್ಲಿನ ಪರಸ್ಪರ ಸಹಕಾರ ಒಪ್ಪಂದಕ್ಕೆ ಇನ್ನಷ್ಟು ಬಲ ಬರಲಿದೆ ಎಂದೇ ವ್ಯಾಖ್ಯಾನಿಸಲಾಗುತ್ತಿದೆ.

ಸಕಾರಾತ್ಮಕ ಚರ್ಚೆ: 'ಸದ್ಯ ಈ ಜಲಾಂತರ್ಗಾಮಿ ಖರೀದಿ ಒಪ್ಪಂದವು ತಾಂತ್ರಿಕ ಹಾಗೂ ಹಣಕಾಸು ವಿಚಾರ ಮತ್ತು ವಾಣಿಜ್ಯಿಕ ಅಂಶಗಳ ಮೇಲೆ ನಿಂತಿದೆ. ಈ ಕುರಿತು ಎರಡೂ ದೇಶಗಳ ನಡುವೆ ಮಾತುಕತೆಗಳು ಸಕಾರಾತ್ಮಕವಾಗಿ ಮುಂದುವರಿದಿವೆ. ಯಾವಾಗ ಪೂರ್ಣಗೊಳ್ಳಲಿವೆ ಎಂದು ಈಗಲೇ ನಿಖರವಾಗಿ ಹೇಳಲು ಸಾಧ್ಯವಿಲ್ಲ' ಎಂದು ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ ಅವರು ಸುದ್ದಿಸಂಸ್ಥೆಗೆ ಮಂಗಳವಾರ ಪ್ರತಿಕ್ರಿಯಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಗ್ಯಾಂಗ್‌ಸ್ಟರ್ ನಂಟು, 500 ಜನರ ಬಂಧನ

ದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಪೊಲೀಸ್ ಇಲಾಖೆ 'ಆಪರೇಷನ್ ಗ್ಯಾಂಗ್ ಬಸ್ಟ್' ಕಾರ್ಯಾಚರಣೆಯನ್ನು ಭಾನುವಾರ ಆರಂಭಿಸಿದ್ದು, ಮಂಗಳವಾರದ ವೇಳೆಗೆ 500ಕ್ಕೂ ಹೆಚ್ಚು ಜನರನ್ನು ಬಂಧಿಸಿದೆ. ಗ್ಯಾಂಗ್‌ಸ್ಟರ್‌ಗಳ ಜತೆಗೆ ಗುರುತಿಸಿಕೊಂಡಿದ್ದ, ಸಂಪರ್ಕ ಹೊಂದಿದ್ದವರೆಲ್ಲರನ್ನೂ ಬಂಧಿಸಲಾಗುತ್ತಿದೆ. ಮುಖ್ಯವಾಗಿ ಕೊಲೆ, ಕೊಲೆ ಯತ್ನ, ದರೋಡೆ, ಶಸ್ತ್ರಾಸ್ತ್ರ ಹೊಂದಿದ್ದವರ ಜತೆ ನಂಟಿರುವವರನ್ನು ಮುನ್ನೆಚ್ಚರಿಕೆ ಕ್ರಮವಾಗಿ ಬಂಧಿಸಲಾಗುತ್ತಿದೆ ಎಂದು ಪೊಲೀಸರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

10 ನಿ.ಕ್ಕೆ ಮನೆಗೆ ದಿನಸಿ ವ್ಯವಸ್ಥೆ ಕೈಬಿಟ್ಟ ಬ್ಲಿಂಕಿಟ್

ದೆಹಲಿ: ಮನೆ ಬಾಗಿಲಿಗೇ ಆಹಾರ, ದಿನಸಿ, ತರಕಾರಿ, ಔಷಧ ತಲುಪಿಸುವ 'ಗಿಗ್' ಕಾರ್ಮಿಕರ ಮುಷ್ಕರ ಮತ್ತು ವೇಗವಾಗಿ ದ್ವಿಚಕ್ರ ವಾಹನ ಚಾಲನೆ ವೇಳೆಯ ಅಪಾಯಗಳ ಬಗ್ಗೆ ವ್ಯಕ್ತವಾದ



ಕಳವಳ ಹಿನ್ನೆಲೆ ಸೇವಾದಾರ ಕಂಪನಿ 'ಬ್ಲಿಂಕಿಟ್' ವ್ಯವಸ್ಥೆಯಲ್ಲಿ ಬದಲಾವಣೆ ತರಲು ಮುಂದಾಗಿದೆ. 10 ನಿಮಿಷಕ್ಕೆಲ್ಲಾ ಮನೆ ಬಾಗಿಲಿಗೆ ಸರಕು ಪೂರೈಕೆ ಸೇವೆಯನ್ನೇ ರದ್ದು ಗೊಳಿಸಿದೆ. ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ ಮಧ್ಯ ಪ್ರವೇಶಿಸಿ, 'ವಿತರಣಾ ಸಮಯ ಮಿತಿ' ರದ್ದುಗೊಳಿಸಲು ಸಲಹೆ ನೀಡಿದ ನಂತರ ಬ್ಲಿಂಕಿಟ್ ಈ ನಿರ್ಧಾರ ಪ್ರಕಟಿಸಿದೆ. 10 ನಿಮಿಷಗಳ ತ್ವರಿತ ಸೇವೆಯ ತೀವ್ರ ಒತ್ತಡಕ್ಕೆ ಸಿಲುಕಿ ಸವಾರರು ಪರಿತಪಿಸುತ್ತಿದ್ದರು. ವೇಗವಾಗಿ ಬೈಕ್ ಚಲಾಯಿಸಬೇಕಾಗಿದ್ದರಿಂದ ಅವರ ಜೀವಕ್ಕೇ ಅಪಾಯ ಎದುರಾಗುವಂತಾಗಿತ್ತು. ಈ ಬಗ್ಗೆ ಜಾಲತಾಣಗಳಲ್ಲಿ ಭಾರೀ ಚರ್ಚೆ ನಡೆದಿತ್ತು. ಅಲ್ಲದೇ, ಉದ್ಯೋಗ ಭದ್ರತೆಗೆ ಒತ್ತಾಯಿಸಿ, ಕೆಲಸದ ಒತ್ತಡ ತಗ್ಗಿಸುವ ಬೇಡಿಕೆಯೊಂದಿಗೆ ಡಿ.31ರಂದು ಸ್ವಿಗ್ಗಿ, ಜೊಮ್ಯಾಟೊ, ಫ್ಲಿಪ್‌ಕಾರ್ಟ್, ಬ್ಲಿಂಕಿಟ್ ಸೇರಿದಂತೆ ಎಲ್ಲಾ ಬಗೆಯ ಆನ್‌ಲೈನ್ ಆ್ಯಪ್‌ಗಳ 'ಗಿಗ್' ಕಾರ್ಮಿಕರು ಮುಷ್ಕರ ನಡೆಸಿದ್ದರು.

ಅವಾಮಿ ಲೀಗ್ ನಾಯಕ ಪೊಲೀಸ್ ವಶದಲ್ಲಿ ಸಾವು

ಢಾಕಾ: ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಕ್ ಹಸೀನಾ ನೇತೃತ್ವದ 'ಅವಾಮಿ ಲೀಗ್ ಪಕ್ಷ'ದ ಹಿಂದೂ ನಾಯಕ ಪ್ರೊಲೊಯ್ ಚಾಕಿ ಪೊಲೀಸ್ ಕಸ್ಟಡಿಯಲ್ಲಿದ್ದಾಗ ರಾಜ್‌ಶಾಹಿ ವೈದ್ಯ ಕಾಲೇಜು ಆಸ್ಪತ್ರೆಯಲ್ಲಿ ಸಾವಿಗೀಡಾಗಿದ್ದಾರೆ. ಅನಾರೋಗ್ಯ

ಕಾರಣ ಪ್ರೊಲೊಯ್ ಸಾವಿಗೀಡಾಗಿದ್ದಾರೆ, ಪಬ್ನಾ ಜೈಲಿನ ಸೂಪರಿಂಟೆಂಡೆಂಟ್ ಎಂಡಿ ಒಮರ್ ಫಾರೂಕ್ ಮಾತನಾಡಿ, ಅವರಿಗೆ ಮಧುಮೇಹ ಮತ್ತು ಹೃದ್ರೋಗ ಸೇರಿದಂತೆ ಹಲವು ಆರೋಗ್ಯ ಸಮಸ್ಯೆಗಳಿದ್ದವು ಎಂದು ಜೈಲು ಅಧಿಕಾರಿಗಳು ಸಮಜಾಯಿಷಿ ನೀಡಿದ್ದಾರೆ. ಆದರೆ, ಪ್ರೊಲೊಯ್ ಕುಟುಂಬ ದವರು ಜೈಲು ಅಧಿಕಾರಿಗಳೇ ಸಕಾಲದಲ್ಲಿ ವೈದ್ಯಕೀಯ ಶುಶ್ರೂಷೆ ಒದಗಿಸದೇ ನಿರ್ಲಕ್ಷ್ಯ ತೋರಿ ಸಾವಿಗೆ ಕಾರಣವಾಗಿದ್ದಾರೆ ಎಂದು ಆರೋಪಿಸಿದ್ದಾರೆ. ಹಿಂದೂಗಳ ಮೇಲಿನ ಸರಣಿ ಹಲ್ಲೆ-ದೌರ್ಜನ್ಯ ಪ್ರಕರಣಗಳ ಮಧ್ಯೆ ನಡೆದಿರುವುದು ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ಸಮುದಾ ಯದ ಹೀನಾಯ ಸ್ಥಿತಿಗೆ ಕನ್ನಡಿ ಹಿಡಿದಿದೆ, 60 ವರ್ಷದ ಪ್ರೊಲೊಯ್ ಚಾಕಿ ಗಾಯಕರಾಗಿದ್ದರು. ಅವಾಮಿ ಲೀಗ್ ಪಕ್ಷದ ಪಬ್ನಾ ಜಿಲ್ಲಾ ಘಟಕದ ಸಾಂಸ್ಕೃತಿಕ ವ್ಯವಹಾರಗಳ ಕಾರ್ಯದರ್ಶಿಯಾಗಿದ್ದರು.

ಅಜ್ಮೀರ್ ದರ್ಗಾ ಶಿವ ದೇಗುಲ: ಹೊಸದಾವೆ

ಅಜ್ಮೀರ್: ರಾಜಸ್ಥಾನ ರಾಜ್ಯದ ಪ್ರಸಿದ್ಧ ಅಜ್ಮೀರ್ ದರ್ಗಾ ಮೂಲತಃ ಶಿವನ ದೇವಾಲಯವಾಗಿತ್ತು. ನಂತರ ಅದನ್ನು ದರ್ಗಾ ಮಾಡಲಾಗಿದೆ. ದರ್ಗಾ ಇರುವ ಸ್ಥಳದಲ್ಲಿ ಭಾರತೀಯ ಪುರಾತತ್ವ ಇಲಾಖೆಯಿಂದ ಸರ್ವೇಕ್ಷಣೆ ಆಗಬೇಕು ಎಂದು ಬಲಪಂಥೀಯ ಸಂಘಟನೆ 'ಮಹಾರಾಣಾ ಪ್ರತಾಪ್ ಸೇನೆ'ಯ ರಾಷ್ಟ್ರೀಯ ಅಧ್ಯಕ್ಷ ರಾಜವರ್ಧನ್ ಸಿಂಗ್ ಪರ್ಮಾರ್ ಅವರು ಅಜ್ಮೀರ್ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಒತ್ತಾಯಿಸಿದ್ದಾರೆ ಎಂದು ಹಿರಿಯ ವಕೀಲ ಎ.ಪಿ.ಸಿಂಗ್ ಹೇಳಿದ್ದಾರೆ. ಈ ವಿಚಾರವಾಗಿ ವರ್ಷಗಳಿಂದಲೂ ಹೋರಾಟ ನಡೆಸುತ್ತಿದ್ದೇನೆ. ರಾಷ್ಟ್ರಪತಿಗೂ ಮನವಿ ಸಲ್ಲಿಸಿದ್ದೆ. ರಾಜಸ್ಥಾನ ಮುಖ್ಯ ಕಾರ್ಯದರ್ಶಿಗೂ ಅರ್ಜಿ ರವಾನಿಸಲಾಗಿದೆ. ಹಿಂದೂ ಸೇನೆ ಅಧ್ಯಕ್ಷ ವಿಷ್ಣು ಗುಪ್ತಾ ಕೂಡ 2024ರಲ್ಲಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು ಎಂದು ರಾಜವರ್ಧನ್ ಹೇಳಿದ್ದಾರೆ.

{ **ಉದ್ಧವ್ ಠಾಕ್ರೆ** } ಶಿವಸೇನೆ (ಯುಬಿಟಿ)

ಬಿಜೆಪಿ ಸರಕಾರ ಒಬ್ಬ ಉದ್ಯಮಿಗಷ್ಟೇ ಒಲವು ತೋರುತ್ತಿದೆ. ಬ್ರಿಟಿಷರಿಗಿಂತಲೂ ಭಾರೀ ಪ್ರಮಾಣದಲ್ಲಿ ಬಿಜೆಪಿಯವರು ದೇಶವನ್ನು ಲೂಟಿ ಮಾಡುತ್ತಿದ್ದಾರೆ. ಗುಜರಾತ್ ಮೂಲದ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಬಿಜೆಪಿಯ ಪ್ರಮುಖ ಲೂಟಿಕೋರರು. ಏಕನಾಥ ಶಿಂಧೆ ಒಬ್ಬ 'ಗದ್ದಾರ್' (ದೇಶದ್ರೋಹಿ).

ಇರಾನ್ ಜತೆ ವ್ಯವಹರಿಸುವ ದೇಶಗಳಿಗೂ ಶೇ.25 ಸುಂಕ

ವಾಷಿಂಗ್ಟನ್: ಪ್ರಸ್ತುತ ಕೆಲವು ವಾರಗಳಿಂದ ಸಾರ್ವಜನಿಕ ಪ್ರತಿಭಟನೆಯ ಆಕ್ರೋಶದ ಬೆಂಕಿಯಲ್ಲಿ ದಹಿಸುತ್ತಿರುವ ಇರಾನ್ ಮತ್ತು ಅಲ್ಲಿನ ಸರಕಾರದ ಮೇಲೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಿಟ್ಟು ಸುಂಕದ ರೀತಿಯಲ್ಲಿ ವ್ಯಕ್ತವಾಗಿದೆ.

ಇರಾನ್ ಜತೆ ವ್ಯಾಪಾರ ಮಾಡುವ ದೇಶಗಳ ಮೇಲೆ ಶೇ.25ರಷ್ಟು ದಂಡ ಸುಂಕವನ್ನು ವಿಧಿಸುವುದಾಗಿ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಇರಾನ್ ಜತೆ ವ್ಯವಹಾರ ನಡೆಸುವ ದೇಶವು ಅಮೆರಿಕಕ್ಕೆ ರಫ್ತು ಮಾಡುವ ಎಲ್ಲಾ ಬಗೆಯ ಸರಕುಗಳ ಮೇಲೆ ಶೇ.25ರಷ್ಟು ಸುಂಕ ವಿಧಿಸಲಾಗುತ್ತದೆ. ಈ ಆದೇಶವು ಅಂತಿಮ ಮತ್ತು ನಿರ್ಣಾಯಕ. ಅಲ್ಲದೇ ಈ ಆದೇಶ ತಕ್ಷಣದಿಂದಲೇ ಜಾರಿಗೆ ಬರಲಿದೆ ಎಂದೂ ಟ್ರಂಪ್ ತಮ್ಮ 'ಟ್ರೂತ್' ಖಾತೆಯಲ್ಲಿ ಪ್ರಕಟಿಸಿದ್ದಾರೆ.

ಚೀನಾ, ಟರ್ಕಿ, ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಇರಾಕ್ ಇರಾನ್‌ನ ಪ್ರಮುಖ ವ್ಯಾಪಾರ ಪಾಲುದಾರ ದೇಶಗಳಾಗಿವೆ. ಭಾರತದಿಂದಲೂ ಬಾಸ್ಮತಿ ಅಕ್ಕಿ, ಸಾಂಬಾರ ಪದಾರ್ಥಗಳು ಸೇರಿದಂತೆ ಹಲವು ಸರಕುಗಳು ಇರಾನ್‌ಗೆ ರಫ್ತಾಗುತ್ತವೆ.

ಭಾರತ ರಫ್ತು: 2025-26ನೇ ಹಣಕಾಸು ವರ್ಷದಲ್ಲಿ ಭಾರತದಿಂದ ಇರಾನ್‌ಗೆ 5.99 ಲಕ್ಷ ಟನ್ ಬಾಸ್ಮತಿ ಅಕ್ಕಿಯನ್ನು ರಫ್ತು ಮಾಡಲಾಗಿತ್ತು. ಈ ವಹಿವಾಟಿನ ಮೊತ್ತ 46.81 ಕೋಟಿ ಅಮೆರಿಕನ್ ಡಾಲರ್(4224 ಕೋಟಿ ರು.)ಗಳಾಗಿತ್ತು. ಭಾರತದ ಒಟ್ಟಾರೆ ಬಾಸ್ಮತಿ ಅಕ್ಕಿ ಮಾರಾಟದಲ್ಲಿ ಇರಾನ್ ದೇಶವೊಂದಕ್ಕೇ ಶೇ.33ರಷ್ಟು ಮಾರಾಟವಾಗುತ್ತಿತ್ತು.

ಭ್ರಷ್ಟ ಸರಕಾರಿ ಅಧಿಕಾರಿ ತನಿಖೆಗೆ ಅನುಮತಿ: ಸುಪ್ರೀಂ ಭಿನ್ನ ತೀರ್ಪು

ದೆಹಲಿ: ಸರಕಾರಿ ಅಧಿಕಾರಿಗಳ ವಿರುದ್ಧದ ಭ್ರಷ್ಟಾಚಾರ ಪ್ರಕರಣಗಳ ತನಿಖೆಗೆ ಪೂರ್ವಾನುಮತಿ ಕಡ್ಡಾಯಗೊಳಿಸಿರುವ ಭ್ರಷ್ಟಾಚಾರ ತಡೆ ಕಾಯಿದೆಯ 'ಸೆಕ್ಷನ್ 17ಎ' ಸಾಂವಿಧಾನಿಕ ಸಿಂಧುತ್ವದ ಕುರಿತ ಪ್ರಶ್ನೆಗೆ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ, ಮಂಗಳವಾರ ಭಿನ್ನ ತೀರ್ಪು ನೀಡಿದೆ. ವಿಚಾರಣೆ ವೇಳೆ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಅವರು ಸೆಕ್ಷನ್ 17ಎ ಅಸಂವಿಧಾನಿಕ. ಹಾಗಾಗಿ ಅದನ್ನು ರದ್ದುಗೊಳಿಸಬೇಕು ಎಂದು ಅಭಿಪ್ರಾಯಪಟ್ಟರು. ಅಲ್ಲದೇ, ಭ್ರಷ್ಟಾಚಾರದ ಆರೋಪ ಹೊತ್ತಿರುವ ಸರಕಾರಿ ಅಧಿಕಾರಿ ವಿರುದ್ಧ ತನಿಖೆ ಆರಂಭಿಸುವುದಕ್ಕೆ ಯಾವುದೇ ಪೂರ್ವ ಅನುಮತಿಯ ಅಗತ್ಯವಿಲ್ಲ ಎಂದು ಒತ್ತಿ ಹೇಳಿದರು.

ಅನುಮತಿ ಅನಗತ್ಯ ಎಂದ ನ್ಯಾ.ಬಿ.ವಿ.ನಾಗರತ್ನ

ಅನುಮತಿ ಅಗತ್ಯ ಎಂದ ನ್ಯಾ.ಕೆ.ವಿ.ವಿಶ್ವನಾಥ್

ಪೂರ್ವಾನುಮತಿ ಅಗತ್ಯ ಎನ್ನುವ ಕಲಂ ಕಾಯಿದೆಯ ಮೂಲ ಉದ್ದೇಶಕ್ಕೇ ವಿರುದ್ಧವಾಗಿದೆ. ಈ ಕಲಂ ಭ್ರಷ್ಟರನ್ನು ರಕ್ಷಿಸುತ್ತದೆ ಎಂದೂ ಅಭಿಪ್ರಾಯಪಟ್ಟರು.

ಆದರೆ, ನ್ಯಾ. ಕೆ.ವಿ. ವಿಶ್ವನಾಥನ್ ಅವರು, ಸೆಕ್ಷನ್ 17ಎ ಅಸಾಂವಿಧಾನಿಕವೇನಲ್ಲ. ಭ್ರಷ್ಟಾಚಾರ ಆರೋಪ ಹೊತ್ತಿರುವ ಸರಕಾರಿ ಅಧಿಕಾರಿ ವಿರುದ್ಧದ ತನಿಖೆಗೆ ಲೋಕಪಾಲ್ ಅಥವಾ ಲೋಕಾಯುಕ್ತರು ಸರಕಾರದ ಅನುಮೋದನೆ ಪಡೆಯಬೇಕಾಗುತ್ತದೆ ಎಂಬ ಕಾಯಿದೆ ಅಂಶವೊಂದನ್ನು ಓದಿ ಹೇಳಿದರು. ಪೂರ್ವಾನುಮತಿ ಷರತ್ತಿಗೆ ಒಳಪಟ್ಟಿರುವ ಸೆಕ್ಷನ್ 17ಎ ಸಾಂವಿಧಾನಿಕವಾಗಿ ಮಾನ್ಯ ಎಂದೂ ಸ್ಪಷ್ಟಪಡಿಸಿದರು. ಪ್ರಾಮಾಣಿಕ ಸರಕಾರಿ ಅಧಿಕಾರಿಗಳನ್ನು ಕ್ಷುಲ್ಲಕ ತನಿಖೆಗಳಿಂದ ರಕ್ಷಿಸದೇ ಇದ್ದರೆ 'ಪಾಲಿಸಿ ಪ್ಯಾರಾಲಿಸಿಸ್'(ಆಡಳಿತಕ್ಕೇ ಪಾರ್ಶ್ವವಾಯು) ಉಂಟಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಅರ್ಜಿದಾರ ಸಂಸ್ಥೆ ಎನ್‌ಜಿಒ ಸೆಂಟರ್ ಫಾರ್ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್' ಪರವಾಗಿ ವಕೀಲ ಪ್ರಶಾಂತ್ ಭೂಷಣ್, ತನಿಖೆಗೆ ಪೂರ್ವಾನುಮತಿ ಕಡ್ಡಾಯ ಎಂಬ ನಿಬಂಧನೆ ಭ್ರಷ್ಟಾಚಾರ ಪ್ರಕರಣಗಳ ತನಿಖೆಯನ್ನೇ ದುರ್ಬಲಗೊಳಿಸುತ್ತದೆ ಎಂದು ವಾದಿಸಿದ್ದರು.

ವಂದೇ ಭಾರತ್ ಸ್ಲೀಪರ್ 'ಎಸಿ' ಟಿಕೆಟ್ ದರ ನಿಗದಿ



ದೆಹಲಿ: ಭಾರತೀಯ ರೈಲ್ವೆ ಇಲಾಖೆ ಇದೇ ಮೊದಲ ಬಾರಿಗೆ ಆರಂಭಿಸುತ್ತಿರುವ 'ವಂದೇ ಭಾರತ್ ಸ್ಲೀಪರ್ ಎಕ್ಸ್‌ಪ್ರೆಸ್' ರೈಲಿನ ಪ್ರಯಾಣದ ಟಿಕೆಟ್ ದರವನ್ನು ಮಂಗಳವಾರ ಪ್ರಕಟಿಸಿದೆ.

- **ಮೊದಲ ದರ್ಜೆ ಎಸಿ ಬೋಗಿ ಪ್ರಯಾಣಕ್ಕೆ ಪ್ರತಿ ಕಿ.ಮೀ.ಗೆ 3.80 ರು. ಶುಲ್ಕ**
- **ದ್ವಿತೀಯ ದರ್ಜೆ ಎಸಿ ಕೋಚ್‌ನಲ್ಲಿನ ಪ್ರಯಾಣಕ್ಕೆ ಪ್ರತಿ ಕಿ.ಮೀ.ಗೆ 3.10 ರು. ದರ ನಿಗದಿ**
- **ತೃತೀಯ ಶ್ರೇಣಿ ಎಸಿ ಬೋಗಿಗೆ ಕಿ.ಮೀ.ಗೆ 2.40 ರು. ದರ ನಿಗದಿ**

ವಂದೇ ಭಾರತ್ ಸ್ಲೀಪರ್ ರೈಲಿನಲ್ಲಿ ಶರವೇಗ, ಅತ್ಯಾಧುನಿಕ ಸೌಲಭ್ಯ ಮತ್ತು ಸುರಕ್ಷಿತ ಪ್ರಯಾಣ ಸೇವೆಗಳಿಗೆ ಆದ್ಯತೆ ನೀಡಿರುವ ಭಾರತೀಯ ರೈಲ್ವೆ ಟಿಕೆಟ್ ದರವನ್ನೂ ಗರಿಷ್ಠ ಮಟ್ಟದಲ್ಲಿರಿಸಿದೆ. ಮೊದಲ ದರ್ಜೆ ಎಸಿ ಬೋಗಿ ಪ್ರಯಾಣಕ್ಕೆ ಪ್ರತಿ ಕಿ.ಮೀ.ಗೆ 3.80 ರು. ಶುಲ್ಕ ನಿಗದಿಯಾಗಿದ್ದರೆ, ದ್ವಿತೀಯ ದರ್ಜೆ ಎಸಿ ಕೋಚ್‌ನಲ್ಲಿನ ಪ್ರಯಾಣಕ್ಕೆ ಪ್ರತಿ ಕಿ.ಮೀ.ಗೆ 3.10 ರು. ದರ ನಿಗದಿ ಪಡಿಸಲಾಗಿದೆ. ತೃತೀಯ ಶ್ರೇಣಿ ಎಸಿ ಬೋಗಿಗೆ ಕಿ.ಮೀ.ಗೆ 2.40 ರು. ದರ ನಿಗದಿಯಾಗಿದೆ.

ಉದಾಹರಣೆಗೆ, 400 ಕಿಮೀ ಅಂತರದ ಪ್ರಯಾಣಕ್ಕೆ ವಂದೇಭಾರತ್ ಸ್ಲೀಪರ್ ಎಕ್ಸ್‌ಪ್ರೆಸ್ ರೈಲಿನ 1ನೇ ದರ್ಜೆ ಎಸಿಯಲ್ಲಿ 1520 ರು. ಟಿಕೆಟ್ ದರವಿದ್ದರೆ, 2ನೇ ಶ್ರೇಣಿ ಎಸಿ ಕೋಚ್‌ನಲ್ಲಿ ಸಂಚರಿಸಲು 1240 ರು. ಮತ್ತು 3ನೇ ದರ್ಜೆ ಎಸಿಗೆ 960 ರು. ಪಾವತಿಸಬೇಕಿದೆ. ಜತೆಗೆ ಈ ಟಿಕೆಟ್ ಮೂಲ ದರಕ್ಕೆ ಜಿಎಸ್‌ಟಿ ಪ್ರತ್ಯೇಕವಾಗಿ ಸೇರಿಕೊಂಡು ಟಿಕೆಟ್ ದರ ಮತ್ತಷ್ಟು ಹೆಚ್ಚಲಿದೆ.

ವಂದೇ ಭಾರತ್ ಸ್ಲೀಪರ್ ಎಕ್ಸ್‌ಪ್ರೆಸ್ ಮೊದಲ ರೈಲು ಅಸ್ಸಾಂ ರಾಜಧಾನಿ ಗುವಾಹಟಿ ನಗರದಿಂದ ಪಶ್ಚಿಮ ಬಂಗಾಳದ ಹೌರಾ ನಗರಕ್ಕೆ ಸಂಚರಿಸಲಿದ್ದು, ಈ ರೈಲುಗಾಡಿ ಪ್ರಯಾಣಕ್ಕೆ 1ನೇ ಎಸಿಗೆ 3800 ರು., 2ನೇ ಎಸಿಗೆ 3100 ರು. ಮತ್ತು ತೃತೀಯ ಶ್ರೇಣಿ ಎಸಿ ಬೋಗಿ ಪ್ರಯಾಣಕ್ಕೆ 2400 ರು. ಟಿಕೆಟ್ ದರವಿದೆ.

ಕಾಶ್ಮೀರ: ಮಸೀದಿ, ಇಮಾಮ್, ಮುಝಿನ್ ಮಾಹಿತಿ ಸಂಗ್ರಹ

ಶ್ರೀನಗರ: ಜಮ್ಮು-ಕಾಶ್ಮೀರದ ಪೊಲೀಸರು ಕೇಂದ್ರಾಡಳಿತ ಪ್ರದೇಶದಲ್ಲಿ ಸದ್ಯ ಇರುವ ಮಸೀದಿಗಳ ಇಮಾಮ್‌ಗಳು, ಮುಝಿನ್, ಧಾರ್ಮಿಕ ಸಂಸ್ಥೆಯ ಆಡಳಿತ ಸಮಿತಿಗಳ ಸದಸ್ಯರ ವೈಯಕ್ತಿಕ ವಿವರಗಳು ಹಾಗೂ ಮಸೀದಿ-ಮದರಸಾಗಳ ಕುರಿತ ಮಾಹಿತಿಗಳನ್ನೂ ಸಂಗ್ರಹಿಸಲು ಕಸರತ್ತು ಆರಂಭಿಸಿದ್ದಾರೆ.

ಮುಸ್ಲಿಂ ಧಾರ್ಮಿಕ ಸಂಸ್ಥೆಗಳ ಹಣಕಾಸು ವಹಿವಾಟು ವಿವರ, ಮಸೀದಿಗಳಿಗೆ ಸಂಬಂಧಿಸಿದವರ ಮೊಬೈಲ್ ಫೋನ್ ಮಾದರಿ, ಅದರ ಐಇಎಂಐ ಸಂಖ್ಯೆ, ಮತದಾರರ ಗುರುತಿನ ಚೀಟಿ ಸಂಖ್ಯೆ ಮತ್ತು ಸಾಮಾಜಿಕ ಮಾಧ್ಯಮ ಖಾತೆ, ಎಟಿಎಂ/ಕ್ರೆಡಿಟ್ ಕಾರ್ಡ್, ಪಡಿತರ ಚೀಟಿ ವಿವರ ಸೇರಿ ವೈಯಕ್ತಿಕ ವಿವರಗಳನ್ನು ಪೊಲೀಸರು ಸಂಗ್ರಹಿಸುತ್ತಿದ್ದಾರೆ.

ಮಸೀದಿ ಮಾಹಿತಿಗೆ 1 ಪುಟ ಮತ್ತು ಇಮಾಮ್‌ಗಳ ವೈಯಕ್ತಿಕ ವಿವರಗಳ ಸಂಗ್ರಹಕ್ಕೆ 3 ಪುಟ ಮೀಸಲಿಡಲಾಗಿದೆ. ಮಾಹಿತಿ ಸಂಗ್ರಹಕ್ಕೆ ಕಂದಾಯ ಇಲಾಖೆ ನೌಕರರ ಮೂಲಕ ಕಾಶ್ಮೀರದಾದ್ಯಂತ ಈ ಫಾರ್ಮ್ ವಿತರಿಸಲಾಗುತ್ತಿದೆ. ಪೊಲೀಸ್ ಇಲಾಖೆ ಹೀಗೆ ಮಾಹಿತಿ ಸಂಗ್ರಹಿಸುತ್ತಿರುವುದು ಜಮ್ಮು-ಕಾಶ್ಮೀರದಲ್ಲಿ ಇದೇ ಮೊದಲು ಎನ್ನಲಾಗಿದೆ.

ಬರೇಲ್ವಿ, ಹನಫಿ, ದೇವಬಂದಿ ಅಥವಾ ಅಹ್ಲೆ-ಹದೀಸ್ ಸಿದ್ಧಾಂತಗಳಲ್ಲಿ ಯಾವುದನ್ನು ಅನುಸರಿಸುತ್ತಾರೆ? ಎಂಬುದೂ ಸೇರಿದಂತೆ ಮಸೀದಿ ಜತೆ ಯಾರೆಲ್ಲಾ ಸಂಬಂಧ ಹೊಂದಿದ್ದಾರೆ. ಮಸೀದಿ ನಿರ್ಮಾಣ ವೆಚ್ಚ, ಹಣಕಾಸು ವಹಿವಾಟು ವಿವರ ಸೇರಿದಂತೆ ಎಲ್ಲಾ ವಿವರಗಳನ್ನು ಕೇಳಲಾಗಿದೆ. ಮಸೀದಿಗಳ ಮಾಸಿಕ ಬಜೆಟ್, ಅವರ ಬ್ಯಾಂಕ್ ಖಾತೆ ವಿವರಗಳು ಮತ್ತು ಅವುಗಳನ್ನು ಹೇಗೆ ನಿರ್ವಹಿಸಲಾಗುತ್ತದೆ, ಹಾಗೆಯೇ ಮಸೀದಿಗಳನ್ನು ನಿರ್ಮಿಸುವ ಭೂಮಿಯ ಸ್ವರೂಪದ ಬಗೆಗೂ ವಿವರ ಪಡೆಯಲಾಗುತ್ತಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಉಗ್ರ ನಂಟು: 5 ಕಾಶ್ಮೀರಿ ಸರಕಾರಿ ನೌಕರರು ವಜಾ

ಲೆ.ಗವರ್ನರ್ ಮನೋಜ್ ಸಿನ್ಹಾ

ಭಯೋತ್ಪಾದಕರೊಂದಿಗೆ ನಂಟು ಹೊಂದಿರುವ ಆರೋಪ

ಐವರು ಸರಕಾರಿ ನೌಕರರ ವಜಾ

ಶ್ರೀನಗರ: ಭಯೋತ್ಪಾದಕರೊಂದಿಗೆ ನಂಟು ಹೊಂದಿರುವ ಆರೋಪದಡಿ ಜಮ್ಮು-ಕಾಶ್ಮೀರದ ಐವರು ಸರಕಾರಿ ನೌಕರರನ್ನು ಸೇವೆಯಿಂದ ವಜಾಗೊಳಿಸಲಾಗಿದೆ. ಈ ಸಂಬಂಧ ಜಮ್ಮು-ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಸಂವಿಧಾನದ 311(2) (ಸಿ) ವಿಧಿಯಡಿ ನೌಕರರ ವಜಾ ಆದೇಶವನ್ನು ಮಂಗಳವಾರ ಹೊರಡಿಸಿದ್ದಾರೆ.

ಶಿಕ್ಷಕ ಮೊಹಮ್ಮದ್ ಇಶ್ಫಾಕ್, ಪ್ರಯೋಗಾಲಯ ತಜ್ಞ ತಾರಿಕ್ ಅಹ್ಮದ್ ರಾಹ್, ಸಹಾಯಕ ಲೈನ್‌ಮನ್ ಬಶೀರ್ ಅಹ್ಮದ್ ಮಿರ್, ಅರಣ್ಯ ಇಲಾಖೆ ಕ್ಷೇತ್ರಪಾಲಕ ಫಾರೂಕ್ ಅಹ್ಮದ್ ಭಟ್ ಮತ್ತು ಆರೋಗ್ಯ ಇಲಾಖೆ ವಾಹನ ಚಾಲಕ ಮೊಹಮ್ಮದ್ ಯೂಸುಫ್ ಇಂದು ವಜಾಗೊಂಡ ಸರಕಾರಿ ನೌಕರರು.

ಇಲಾಖೆಗಳ ಮೇಲ್ವಿಚಾರಣೆ ಸಮಯದಲ್ಲಿಯೇ ಈ ಐವರೂ ಉಗ್ರ ಸಂಘಟನೆಗಳ ಜತೆಗೆ ಸಂಪರ್ಕ ಹೊಂದಿದ್ದರು. ಬೇರೆ ಬೇರೆ ರೀತಿಯಲ್ಲಿ ಉಗ್ರರಿಗೆ ನೆರವಾಗುತ್ತಿದ್ದರು ಎಂಬುದು ಕಂಡುಬಂದ ನಂತರ ತನಿಖೆ ನಡೆಸಿ ಆರೋಪ ದೃಢಪಟ್ಟ ಬಳಿಕ ವಜಾಗೊಳಿಸಿ ಕ್ರಮ ಕೈಗೊಳ್ಳಲಾಗಿದೆ. 2020ರಿಂದ ಇಲ್ಲಿಯವರೆಗೆ 85 ಸರಕಾರಿ ನೌಕರರನ್ನು ಸೇವೆಯಿಂದ ವಜಾಗೊಳಿಸಲಾಗಿದೆ.

ರಾ. ರಕ್ಷಣಾ, ನೌಕಾ ಅಕಾಡೆಮಿ ಪರೀಕ್ಷೆ

ದೆಹಲಿ: ರಾಷ್ಟ್ರೀಯ ರಕ್ಷಣಾ ಅಕಾಡೆಮಿ ಮತ್ತು ನೌಕಾ ಅಕಾಡೆಮಿ ಪರೀಕ್ಷೆ(ಐ)ಗಾಗಿ 2026ನೇ ಶೈಕ್ಷಣಿಕ ಸಾಲಿನ ಪರೀಕ್ಷೆಯನ್ನು ಏ.12ರಂದು ದೇಶಾದ್ಯಂತ(ಆಫ್‌ಲೈನ್ ಮಾದರಿ) ನಡೆಸಲಾಗುವುದು ಎಂದು ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್ (ಯುಪಿಎಸ್‌ಸಿ) ಮಂಗಳವಾರ ಪ್ರಕಟಿಸಿದೆ. ಗಣಿತ ಪರೀಕ್ಷೆ ಮೊದಲ ಪಾಳಿ ಬೆಳಗ್ಗೆ 10ರಿಂದ

ಮಧ್ಯಾಹ್ನ 12.30ರವರೆಗೆ ಮತ್ತು ಸಾಮಾನ್ಯ ಸಾಮರ್ಥ್ಯ ಪರೀಕ್ಷೆ ಮಧ್ಯಾಹ್ನ 2ರಿಂದ ಸಂಜೆ 4.30ರವರೆಗೆ ನಡೆಯಲಿದೆ. ಸಂಯೋಜಿತ ರಕ್ಷಣಾ ಸೇವೆಗಳ(ಸಿಡಿಎಸ್) ಪರೀಕ್ಷೆ ಏ.12 ರಂದು ನಡೆಯಲಿದೆ. ಅಂದು ಇಂಗ್ಲಿಷ್ ಪತ್ರಿಕೆ ಬೆಳಗ್ಗೆ 9ರಿಂದ 11 ಗಂಟೆ, ಸಾಮಾನ್ಯ ಜ್ಞಾನ ಪರೀಕ್ಷೆ ಮಧ್ಯಾಹ್ನ 12.30ರಿಂದ 2.30ರವರೆಗೆ, ಪ್ರಾಥಮಿಕ ಗಣಿತ ಸಂಜೆ 4ರಿಂದ 6ರವರೆಗೆ ನಡೆಯಲಿದೆ. 12ನೇ ತರಗತಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ರಾಷ್ಟ್ರೀಯ ರಕ್ಷಣಾ ಅಕಾಡೆಮಿ, ಭಾರತೀಯ ನೌಕಾ ಅಕಾಡೆಮಿಯ ಸೇನಾಪಡೆ, ನೌಕಾಪಡೆ ಮತ್ತು ವಾಯುಪಡೆ ವಿಭಾಗಗಳಿಗೆ ಪ್ರವೇಶ ಪಡೆಯಲು ಇದು ಸದಾವಕಾಶವಾಗಿದೆ. ಸೇನಾಪಡೆಯಲ್ಲಿ 208, ನೌಕಾಪಡೆಗೆ 42, ವಾಯುಪಡೆಗೆ 120, ನೌಕಾ ಅಕಾಡೆಮಿಗೆ 24 ಮಂದಿಗೆ ಅವಕಾಶವಿದೆ. ಯುವಕರಿಗೆ 370, ಯುವತಿಯರಿಗೆ 24 ಹುದ್ದೆಗಳಿವೆ ಎಂದು ಪ್ರಕಟಣೆ ತಿಳಿಸಿದೆ.

ಹಳೇ ಪಿಎಂಒ ಕಟ್ಟಡ ಭಾರತ್ ಮ್ಯೂಸಿಯಂ

ದೆಹಲಿ: 1947ರಲ್ಲಿ ಭಾರತ ಸ್ವಾತಂತ್ರ್ಯಗೊಂಡಾಗಿನಿಂದಲೂ ದೆಹಲಿಯ ಅಧಿಕಾರದ ಮೊಗಸಾಲೆಯ 'ಸೌತ್ ಬ್ಲಾಕ್'ನಲ್ಲಿಯೇ ಇರುವ 'ಪ್ರಧಾನ ಮಂತ್ರಿಗಳ ಕಚೇರಿ'(ಪಿಎಂಒ)ಯನ್ನು ಹೊಸದಾಗಿ, 1,189 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲಾಗಿರುವ 'ಸೇವಾ ತೀರ್ಥ' ಕಚೇರಿಗಳ ಸಮುಚ್ಚಯಕ್ಕೆ 'ಮಕರ ಸಂಕ್ರಾಂತಿ' ಹಬ್ಬದಂದು ಸ್ಥಳಾಂತರಗೊಳಿಸಲಾಗುತ್ತಿದೆ. ಆ ಬಳಿಕ ಖಾಲಿಯಾಗಿ ಉಳಿಯುವ 'ಪಿಎಂಒ' ಕಟ್ಟಡ ಸೇರಿದಂತೆ ವಿವಿಧ ಸಚಿವಾಲಯಗಳು ಇರುವ ಸೌತ್ ಮತ್ತು ನಾರ್ತ್ ಬ್ಲಾಕ್‌ನಲ್ಲಿನ ಕಟ್ಟಡಗಳನ್ನು ಏನು ಮಾಡಲಾಗುತ್ತದೆ? ಎಂಬ ಪ್ರಶ್ನೆಗೆ, 'ಸಾರ್ವಜನಿಕ ವಸ್ತು ಸಂಗ್ರಹಾಲಯ'ವಾಗಿ ಬದಲಿಸಲಾಗುತ್ತದೆ ಎಂಬ ಉತ್ತರ ದೊರೆತಿದೆ. 'ಪಿಎಂಒ' ಸ್ಥಳಾಂತರ ನಂತರ ದಕ್ಷಿಣ ಮತ್ತು ಉತ್ತರ ಬ್ಲಾಕ್ ಕಟ್ಟಡಗಳನ್ನು 'ಯುಗೇ ಯುಗೇನ್ ಭಾರತ್ ಮ್ಯೂಸಿಯಂ' ಹೆಸರಿನಲ್ಲಿ ಸಾರ್ವಜನಿಕ ವಸ್ತುಸಂಗ್ರಹಾಲಯಗಳಾಗಿ ಪರಿವರ್ತಿಸಲಾಗುತ್ತದೆ. ಈ ಸಂಬಂಧ ಬಹಳ ಯೋಜಿತ ರೀತಿಯಲ್ಲಿ ವಸ್ತು ಸಂಗ್ರಹಾಲಯವಾಗಿ ಬದಲಿಸಲು ಫ್ರಾನ್ಸ್ ದೇಶದ 'ಮ್ಯೂಸಿಯಂ ಡೆವಲಪ್‌ಮೆಂಟ್ ಏಜೆನ್ಸಿ' ತಾಂತ್ರಿಕ ಸಹಾಯ ಪಡೆಯಲಾಗುವುದು. ಅದಕ್ಕಾಗಿ 2024ರ ಡಿ.19ರಂದೇ ಫ್ರಾನ್ಸ್ ಸಂಸ್ಥೆಯ ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬಂಗಾಳ ಇಬ್ಬರಿಗೆ ನಿಫಾ ವೈರಸ್ ಸೋಂಕು

ಕೋಲ್ಕತ್ತ: ಪಶ್ಚಿಮ ಬಂಗಾಳ ರಾಜ್ಯದಲ್ಲಿ ಇಬ್ಬರು ಶುಶ್ರೂಷಕಿಯಯರಿಗೆ ನಿಫಾ ಸೋಂಕು ತಗುಲಿದ್ದು, ಇಬ್ಬರನ್ನೂ ಜ.6ರಿಂದಲೂ 24 ಉತ್ತರ ಪರಗಣ ಜಿಲ್ಲೆಯ ಖಾಸಗಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ(ಐಸಿಯು) ಇರಿಸಿ ಚಿಕಿತ್ಸೆ



ಕೊಡಲಾಗುತ್ತಿದೆ. ಆದರೆ, ಸೋಂಕಿತರಿಬ್ಬರ ದೇಹಸ್ಥಿತಿ ಗಂಭೀರವಾಗಿದೆ. 25 ಮತ್ತು 27 ವಯೋಮಾನದ ಇಬ್ಬರೂ ಶುಶ್ರೂಷಕಿಯರು ಪೂರ್ವ ಬರ್ಧಮಾನ್ ಮತ್ತು ಪೂರ್ವ ಮಿಡ್ನಾಪುರ ಜಿಲ್ಲೆಯವರು. ಆರಂಭದಲ್ಲಿ ಇಬ್ಬರಲ್ಲೂ ತಲೆನೋವು, ಗಂಟಲು ಬೇನೆ, ಪ್ರಜ್ಞಾಹೀನತೆ, ಸೆಳೆತ, ಜ್ವರ ರೋಗ ಲಕ್ಷಣಗಳು ಕಾಣಿಸಿದ್ದವು. 2001ರ ನಂತರ ಪಶ್ಚಿಮ ಬಂಗಾಳದಲ್ಲಿ ನಿಫಾ ವೈರಸ್ ಸೋಂಕು ವರದಿ ಆಗಿರುವುದು ಇದೇ ಮೊದಲು. ರೋಗ ಹರಡುವಿಕೆ ತಡೆಗೆ ತಕ್ಷಣವೇ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ರಾಜ್ಯ ಸರಕಾರವನ್ನು ಒತ್ತಾಯಿಸಲಾಗಿದೆ ಎಂದು ಸರಕಾರಿ ವೈದ್ಯರ ವೇದಿಕೆ ಕಾರ್ಯದರ್ಶಿ ಡಾ.ಉತ್ಪಲ್ ಬ್ಯಾನರ್ಜಿ ಸುದ್ದಿಸಂಸ್ಥೆ ಮಂಗಳವಾರ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ನಿರ್ಬಂಧ

ಬಳ್ಳಾರಿ: ನಗರದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ ಜ.12 ರಿಂದ 20 ವರೆಗೆ ವಾಣಿಜ್ಯ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ಕೇಂದ್ರದ ಸುತ್ತಲಿನ 200 ಮೀಟರ್‌ವ್ಯಾಪ್ತಿಯ ಪ್ರದೇಶವನ್ನು ಭಾರತೀಯ ನಾಗರೀಕ ಸುರಕ್ಷಾ ಸಂಹಿತಾ 2023 ರ ಕಲಂ 163 ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ನಿರ್ಬಂಧಿತ ಪ್ರದೇಶ ಎಂದು ಘೋಷಿಸಿ ಜಿಲ್ಲಾ ದಂಡಾಧಿಕಾರಿಯೂ ಆದ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಆದೇಶಿಸಿದ್ದಾರೆ. ಪರೀಕ್ಷಾ ಕೇಂದ್ರಗಳ ಸುತ್ತಲೂ ಇರುವ ಜೆರಾಕ್ಸ್ ಸೆಂಟರ್‌ಮತ್ತು ಇಂಟರ್‌ನೆಟ್ ಸೆಂಟರ್‌ಗಳನ್ನು ಕಾರ್ಯನಿರ್ವಹಿಸದಂತೆ ಪ್ರತಿಬಂಧಿಸಲು ಆದೇಶಿಸಿದ್ದು, ಆ ಪ್ರದೇಶದಲ್ಲಿ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶ ನಿಷೇಧಿಸಲಾಗಿದೆ. ಈ ಆದೇಶವು ಪರೀಕ್ಷೆಯ ಮೇಲ್ವಿಚಾರಣೆ ಕಾರ್ಯನಿರ್ವಹಿಸುವ ಸಿಬ್ಬಂದಿಯವರಿಗೆ ಅನ್ವಯಿಸುವುದಿಲ್ಲ ಎಂದು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ರಾಜ್ಯ ಯುವ ಪ್ರಶಸ್ತಿಗೆ ಭರಮರೆಡ್ಡಿ ಆಯ್ಕೆ

ರಾಯಚೂರು: ರಾಜ್ಯ ಯುವ ಸಂಘಗಳ ಒಕ್ಕೂಟ ನೀಡುವ 2025-26ನೇ ಸಾಲಿನ ರಾಜ್ಯ ಯುವ ಪ್ರಶಸ್ತಿಗೆ ಆದಿಕವಿ ಮಹರ್ಷಿ ವಾಲ್ಮೀಕಿ ವಿವಿ

ವಿದ್ಯಾರ್ಥಿ ಭರಮರೆಡ್ಡಿ ನಾಯಕ ಆಯ್ಕೆ ಆಗಿದ್ದಾನೆ.

2019 ರಿಂದ 26ರ ವರೆಗೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಸಾಮಾಜಿಕ ಸೇವೆ ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಎನ್‌ಎಸ್‌ಎಸ್ ಮೂಲಕ ಜನರಿಗೆ ಸ್ವಚ್ಛತೆ, ಪರಿಸರ ಪ್ರಜ್ಞೆ, ಮತದಾನದ ಅರಿವು, ಅಪೌಷ್ಟಿಕತೆ, ಮಹಿಳಾ ಶೌಚಾಲಯ ಸೇರಿದಂತೆ ಅನೇಕ ವಿಷಯಗಳ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಜ.18ರಂದು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನಲ್ಲಿ ಸ್ವಾಮಿ ವಿವೇಕಾನಂದ ಜಯಂತಿ ಪ್ರಯುಕ್ತ ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಯುವ ಸಂಘಗಳ ಒಕ್ಕೂಟದ ಸಹಯೋಗದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಪ್ರಶಸ್ತಿ ಸ್ವೀಕರಿಸಲು ಕಡ್ಡಾಯವಾಗಿ ಆಗಮಿಸಬೇಕು ಎಂದು ರಾಜ್ಯ ಯುವ ಸಂಘಗಳ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಡಾ.ಎಸ್.ಬಾಲಾಜಿ ತಿಳಿಸಿದ್ದಾರೆ.

ಅನುದಾನ ನೀಡಲು ಶಾಸಕರಿಗೆ ಮನವಿ

ಮುದಗಲ್: ಪಟ್ಟಣದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಪತ್ರಿಕಾ ಭವನ ನಿರ್ಮಾಣ ಮಾಡಲು ಅನುದಾನ ನೀಡಬೇಕು ಎಂದು ಲಿಂಗಸುಗೂರು ಶಾಸಕ ಮಾನಪ್ಪ, ಡಿ, ವಜ್ಜಲ್ ರವರಿಗೆ ಮುದಗಲ್ ಪತ್ರಕರ್ತರು ಮಂಗಳವಾರ ಮನವಿ ಪತ್ರ ಸಲ್ಲಿಸಿದರು. ಇದೆ ವೇಳೆ ಶಾಸಕ ಮಾನಪ್ಪ ವಜ್ಜಲ್ ನೂತನ ಪತ್ರಿಕಾ ಭವನ ನೀಡಲು ವಿಶೇಷ ಅನುದಾನ ನೀಡಿ ಸಂಪೂರ್ಣ ಸಹಾಯ ಸಹಕಾರ ನೀಡಲಾಗುವುದು ಎಂದು ಮುದಗಲ್ ಪತ್ರಕರ್ತರಿಗೆ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಮುದಗಲ್ ಘಟಕದ ಅಧ್ಯಕ್ಷ ದೇವಪ್ಪ ರಾಠೋಡ, ಪ್ರಧಾನ ಕಾರ್ಯದರ್ಶಿ ಶಿವರಾಜ ಸುಂಕದ, ತಾಲೂಕ ಕಾರ್ಯದರ್ಶಿ ಶಶಿಧರ ಕಂಚಿಮಠ, ಸದಸ್ಯ ಬಸವರಾಜ ಆಶಿಹಾಳ, ಬಸವರಾಜ ಹೂನೂರು, ಸುರೇಶ ವಿಶ್ವಕರ್ಮ, ಶಿವಶಂಕ್ರಯ್ಯ ಒಡೆಯರ್, ವಾಹೀದ್ ಖುರೇಶಿ, ಇದ್ದರು.

ಕೊಡಲ್ಲ ಅಂದ್ರ ಕೊಡಲ್ಲ ನಾಟಕ ಯಶಸ್ವಿ ಶೋ

ಮಸ್ಕಿ: ಇಲ್ಲಿಯ ಭ್ರಮರಾಂಬ ದೇವಸ್ಥಾನ ಬಳಿ ಶಕೀಲ್ ಅಹ್ಮದ್ ನಿರ್ದೇಶನದ ನಿರ್ದಿಗಂತ ತಂಡ ಮೈಸೂರು ಪ್ರಸ್ತುತಪಡಿಸಿದ ಕೊಡಲ್ಲ ಅಂದ್ರ ಕೊಡಲ್ಲ ನಾಟಕ ಪ್ರದರ್ಶನ ಪ್ರೇಕ್ಷಕರ ಮನ ಗೆದ್ದಿತು. ತಾಲೂಕು ಕನ್ನಡ ಸಾಹಿತ್ಯ ಪರಿಷತ್, ಸರಕಾರಿ ನೌಕರರ ಸಂಘ, ಕರ್ನಾಟಕ ರಾಜ್ಯ ವೈಜ್ಞಾನಿಕ ಪರಿಷತ್ತು, ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘ, ಲಯನ್ಸ್ ಕ್ಲಬ್, ಇಶ್ಲಿ ಫೌಂಡೇಶನ್ ಸಹಯೋಗದಲ್ಲಿ ಜರುಗಿದ ನಾಟಕದಲ್ಲಿ ರಂಗ ಕಲಾವಿದರಾದ ಹುಬ್ಬಳ್ಳಿ ಮಂಜುನಾಥ ಮೂಡಲಗಿರಿ, ಧಾರವಾಡ ಸಲ್ಮಾ ದಂಡಿನ್, ಮಂಗಳೂರು ಚರಿತ್ ಸುವರ್ಣ, ಶಿವಮೊಗ್ಗ ದಿನೇಶ್ ನಾಯ್ಕ, ಚರಿತ್ ಶಾರದಾ ಉಡುಪಿ ಅವರ ವಿವಿಧ ಪಾತ್ರಗಳಿಗೆ ಜೀವ ತುಂಬಿದರು. ತೆರೆಯ ಹಿಂದೆ ಕಲ್ಲಪ್ಪ ಪೂಜಾರ್,ಅವರು ಪ್ರಸ್ತುತಪಡಿಸಿದರು. ಮಾಡಿದ್ದ ಕಳ್ಳತನದಿಂದ ತಪ್ಪಿಸಿಕೊಳ್ಳಲು ಮಹಿಳೆಯರು ಗರ್ಭಿಣಿಯರಂತೆ ನಟಿಸಿದ್ದು, ಅನ್ಯಾಯ ಖಂಡಿಸುವ ಹೋರಾಟಗಾರ ಕೊನೆಗೆ ತಾನು ಕದಿಯುವ ವಿಡಂಬನಾತ್ಮಕ, ಇಬ್ಬರು ಪುರುಷರು ಜಗಳ ನಿಲ್ಲಿಸಿ, ತಮ್ಮ ಹೆಂಡತಿಯರಿಗೆ ಧೈರ್ಯ ತುಂಬಿದ ಹಾಸ್ಯದ ಪರಿ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿತು.

{ಸಿ.ಟಿ.ರವಿ} ಮಾಜಿ ಸಚಿವ

ನರೇಗಾ ವಿಚಾರವಾಗಿ ಸರಕಾರ ವಿಶೇಷ ಅಧಿವೇಶನ ಮಾಡಿ, ಚರ್ಚೆ ಮಾಡಲಿ ನಾವು ಸಿದ್ಧ. ಈಗಾಗಲೇ ವಿಜಯೇಂದ್ರ, ಅಶೋಕ್ ಮತ್ತು ಕುಮಾರಸ್ವಾಮಿ ಅವರು ಇದರಿಂದ ರಾಜ್ಯದ ಹಿತಾಸಕ್ತಿಗೆ ಏನು ಧಕ್ಕೆ ಆಗಿದೆ ಅಂತ ಪ್ರಶ್ನೆ ಮಾಡಿದ್ದಾರೆ. ಇದಕ್ಕೆ ಮೊದಲು ಸಿದ್ದರಾಮಯ್ಯ ಉತ್ತರ ಕೊಡ್ಲಿ. ಬೇಕಾದರೆ ಸಾರ್ವಜನಿಕವಾಗಿ ಕೂಡ ಚರ್ಚೆ ಮಾಡೋಣ.

ಸಮಿತಿಯಲ್ಲಿರುವ ಅಧಿಕಾರಿಗಳು ತಮಗೆ ವಹಿಸಿದ ಕಾರ್ಯ ಅಚ್ಚುಕಟ್ಟಾಗಿ ನಿರ್ವಹಿಸಿ: ಡಿಸಿ ನಾಗೇಂದ್ರ ಪ್ರಸಾದ್

ಗಣರಾಜ್ಯೋತ್ಸವ ಆಚರಣೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಿ

ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಗಣರಾಜ್ಯೋತ್ಸವ ಪೂರ್ವಭಾವಿ ಸಭೆಯಲ್ಲಿ ಡಿಸಿ ನಾಗೇಂದ್ರ ಪ್ರಸಾದ್.ಕೆ ಮಾತನಾಡಿದರು.

ಬಳ್ಳಾರಿ: ಜಿಲ್ಲಾ ಕೇಂದ್ರದಲ್ಲಿ ಜನವರಿ 26ರಂದು ಶಿಷ್ಟಾಚಾರದಂತೆ ಗಣರಾಜ್ಯೋತ್ಸವ ಆಚರಣೆಗೆ ಅಗತ್ಯ ಸಿದ್ಧತೆ ಮಾಡಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಗಣರಾಜ್ಯೋತ್ಸವ ಪೂರ್ವಭಾವಿ ಸಭೆ ಅಧ್ಯಕ್ಷತೆವಹಿಸಿ ಮಾತನಾಡಿದರು. ಗಣರಾಜ್ಯೋತ್ಸವದ ಮುಖ್ಯ ಕಾರ್ಯಕ್ರಮವು ನಗರದ ಬಿಎಂಸಿಆರ್‌ಸಿ ಕ್ರೀಡಾಂಗಣದಲ್ಲಿ ಆಯೋಜಿಸಿದ್ದು, ಅಂದು ಬೆಳಗ್ಗೆ 9 ಗಂಟೆಗೆ ಹಜ್ ಮತ್ತು ಪೌರಾಡಳಿತ ಸಚಿವ ರಹೀಂ ಖಾನ್ ಅವರು ಧ್ವಜಾರೋಹಣಾ ನೆರವೇರಿಸುವರು. ಕಾರ್ಯಕ್ರಮದಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿ ಕಡ್ಡಾಯ ಭಾಗವಹಿಸಬೇಕು ಎಂದು ಸೂಚಿಸಿದರು. ಶಿಷ್ಟಾಚಾರದ ನಿಯಮಗಳಂತೆ ಗಣರಾಜ್ಯೋತ್ಸವ ಸಮಾರಂಭದ ಆಹ್ವಾನ ಪತ್ರಿಕೆ ಮುದ್ರಿಸಿ, ಆಹ್ವಾನ ಪತ್ರಿಕೆಗಳನ್ನು ಜನಪ್ರತಿನಿಧಿಗಳಿಗೆ, ಗಣ್ಯರಿಗೆ ವಿತರಿಸಲು ಕ್ರಮವಹಿಸಬೇಕು ಎಂದರು. ಗಣರಾಜ್ಯೋತ್ಸವ ಆಚರಣೆಗೆ ಸಂಬಂಧಿಸಿದಂತೆ ಸ್ವಾಗತ, ಶಿಷ್ಟಾಚಾರ, ಆಹ್ವಾನ ಪತ್ರಿಕೆ ಹಾಗೂ ವೇದಿಕೆ ಸಮಿತಿ, ಸನ್ಮಾನ, ಪರೇಡ್ ಸಮಿತಿ, ಸಾಂಸ್ಕೃತಿಕ ಕಾರ್ಯಕ್ರಮಗಳ ಸಮಿತಿ ಸೇರಿದಂತೆ ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು, ಆಯಾ ಸಮಿತಿಯಲ್ಲಿರುವ ಅಧಿಕಾರಿಗಳು ತಮಗೆ ವಹಿಸಿದ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ತಿಳಿಸಿದರು. ಕಾರ್ಯಕ್ರಮವನ್ನು ಅರ್ಥಪೂರ್ಣ ವಾಗಿ ಆಚರಿಸಲು ವಿವಿಧ ಇಲಾಖೆಗಳು ಸಮನ್ವಯ ತೆಯಿಂದ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿ ಗಣರಾಜ್ಯೋತ್ಸವವನ್ನು ಆಚರಿಸಬೇಕು. ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಹಿಸಿದ ಜವಾಬ್ದಾರಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸೂಚನೆ ನೀಡಿದರು.

ಕಾರ್ಯಕ್ರಮವು ಅಚ್ಚುಕಟ್ಟಾಗಿ ಶಿಷ್ಟಾಚಾರದಂತೆ ನಡೆಯುವಂತಾಗಬೇಕು. ಶಿಸ್ತುಬದ್ಧವಾಗಿ ವೇದಿಕೆ ನಿರ್ಮಾಣವಾಗಬೇಕು. ಕ್ರೀಡಾಂಗಣದಲ್ಲಿ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ, ಮೊಬೈಲ್ ಶೌಚಾಲಯ ಸೇರಿದಂತೆ ನೀರನ್ನು ಸಿಂಪಡಿಸಿ ಧೂಳು ಆಗದಂತೆ ನೋಡಿಕೊಳ್ಳಬೇಕು. ನಗರದ ಪ್ರಮುಖ ವೃತ್ತಗಳಲ್ಲಿ ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಮಾಡಬೇಕು ಎಂದು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ತಿಳಿಸಿದರು.

ಅದೇರೀತಿಯಾಗಿ ಎಲ್ಲಾ ಸರಕಾರಿ ಕಚೇರಿಗಳಿಗೂ ಸಹ ದೀಪಾಲಂಕಾರ ಮಾಡಬೇಕು. ನಗರದ ಏಕಶಿಲಾ ಬೆಟ್ಟಕ್ಕೂ ವಿದ್ಯುತ್ ದೀಪಾಲಂಕಾರ ಕೈಗೊಳ್ಳಬೇಕು. ಇದಕ್ಕೆ ನಿರಂತರ ವಿದ್ಯುತ್ ವ್ಯವಸ್ಥೆ ಇರುವಂತೆ ಜೆಸ್ಕಾಂ ಅಧಿಕಾರಿಗಳು ಕ್ರಮ ವಹಿಸಬೇಕು ಎಂದರು.

ಜಿಲ್ಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಅರ್ಹರನ್ನು ಸನ್ಮಾನಿಸಲು ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ, ಅರ್ಜಿ ಸ್ವೀಕಾರ ಮುಖಾಂತರ ಆಯ್ಕೆ ಮಾಡಬೇಕು ಎಂದು ಸೂಚಿಸಿದರು. ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳಿಂದ ಜನಾಕರ್ಷಣೆಯವಾಗಿ ದೇಶಭಕ್ತಿ ಬಿಂಬಿಸುವ ಕನ್ನಡ ಹಾಡುಗಳಿಗೆ ಹೆಚ್ಚಿನ ಆದ್ಯತೆ ನೀಡಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವ್ಯವಸ್ಥಿತಗೊಳಿಸಬೇಕು ಎಂದು ಜಿಲ್ಲಾಧಿಕಾರಿಯವರು ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಧ್ವಜಾರೋಹಣ ಪ್ರಯುಕ್ತ ಪಥ ಸಂಚಲನವು ಅಚ್ಚುಕಟ್ಟಾಗಿ ನಡೆಯಬೇಕು. ಪೊಲೀಸ್ ಇಲಾಖೆ, ಗೃಹರಕ್ಷಕ ದಳ, ಸ್ಕೌಟ್ಸ್ ಮತ್ತು ಗೈಡ್ಸ್, ಶಾಲಾ ಶಿಕ್ಷಣ ಇಲಾಖೆ ಸೇರಿದಂತೆ ಕವಾಯತು ತಂಡಗಳನ್ನು ರಚಿಸಬೇಕು. ಪೂರ್ವತಯಾರಿ ನಡೆಸಬೇಕು. ಕುಡಿಯುವ ನೀರು, ಲಘು ಉಪಾಹಾರ ವ್ಯವಸ್ಥೆ ಮಾಡಬೇಕು. ನುರಿತ ವೈದ್ಯರನ್ನು ಒಳಗೊಂಡ ಚಿಕಿತ್ಸಾ ಆಂಬ್ಯುಲೆನ್ಸ್, ಅಗ್ನಿಶಾಮಕ ವಾಹನ, ಸೂಕ್ತ ಪೊಲೀಸ್ ಬಂದೋಬಸ್ತ್ ಕೈಗೊಳ್ಳಿ.

- ನಾಗೇಂದ್ರ ಪ್ರಸಾದ್.ಕೆ, ಜಿಲ್ಲಾಧಿಕಾರಿ

ನಂತರ ಅಂದು ಸಂಜೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ದೇಶಪ್ರೇಮ ಪ್ರಸ್ತುತಪಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಬಾವುಟಗಳನ್ನು ಬಿಸಾಡುವಂತಿಲ್ಲ. ಈ ಕುರಿತು ಶಾಲಾ ಮಕ್ಕಳಿಗೆ ಅರಿವು ಮೂಡಿಸಬೇಕು ಮತ್ತು ವಾಹನಗಳಿಗೂ ಸಹ ತ್ರಿವರ್ಣ ಧ್ವಜವನ್ನು ಕಟ್ಟುವಂತಿಲ್ಲ. ಈ ಕುರಿತು ಸಂಬಂಧಿಸಿದ ಅಧಿಕಾರಿಗಳು ಅರಿವು ಜಾಗೃತಿ ನೀಡಬೇಕು ಎಂದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್,ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್, ಡಿಎಂಎಫ್ ವಿಶೇಷ ಅಧಿಕಾರಿ ಲೋಕೇಶ್, ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಭಾರತೀಯ ಸೇವಾದಳ, ಎನ್ಸಿಸಿ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

ಬ್ಯಾನರ್ ಅಳವಡಿಕೆಗೆ ಪೂರ್ವಾನುಮತಿ ಕಡ್ಡಾಯ

ಗಣರಾಜ್ಯೋತ್ಸವ ಅಂಗವಾಗಿ ಜಿಲ್ಲೆಯಲ್ಲಿ ಶುಭಾಶಯ ಕೋರುವ ಬ್ಯಾನರ್‌ಗಳನ್ನು ಅಳವಡಿಸುವ ಅವಕಾಶವಿದ್ದು, ಇದಕ್ಕೆ ಕಡ್ಡಾಯವಾಗಿ ಪೂರ್ವಾನುಮತಿ ಪಡೆಯಬೇಕು. ಮಹಾನಗರ ಪಾಲಿಕೆ ಆಯುಕ್ತರು ಹಾಗೂ ನಗರ ಸ್ಥಳೀಯ-ಸಂಸ್ಥೆಗಳ ಮುಖ್ಯಾಧಿಕಾರಿಗಳು ಕಡ್ಡಾಯವಾಗಿ ಪರಿಶೀಲನೆ ನಡೆಸುತ್ತಿರಬೇಕು. ಫ್ಲೆಕ್ಸ್ ಗಳಿಗೆ ಅವಕಾಶವಿಲ್ಲ. ಪರಿಸರ ಸ್ನೇಹಿ ಬ್ಯಾನರ್‌ಅಳವಡಿಸಬಹುದಾಗಿದೆ. ಹಾಗಾಗಿ ಅಧಿಕಾರಿಗಳು ತಪ್ಪದೇ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಹೇಳಿದರು.

ವಿವೇಕಾನಂದರ ಆದರ್ಶ ಎಂದಿಗೂ ಪ್ರಸ್ತುತ

ಕೊಪ್ಪಳದ ಸ್ವಾಮಿ ವಿವೇಕಾನಂದ ಪಬ್ಲಿಕ್ ಶಾಲೆಯ 32ನೇ ವಾರ್ಷಿಕೋತ್ಸವ ಮತ್ತು ಸ್ವಾಮಿ ವಿವೇಕಾನಂದರ ಜಯಂತಿ ಅಂಗವಾಗಿ ನಡೆದ ಆನಂದೋತ್ಸವ ಸಾಂಸ್ಕೃತಿಕ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಗಂಗಾವತಿ: ವಿವೇಕಾನಂದರ ಆದರ್ಶ, ಬೋಧನೆ ಯುವ ಜನಾಂಗಕ್ಕೆ ಎಂದಿಗೂ ಪ್ರಸ್ತುತ. ಅವರ ನಡೆ- ನುಡಿ ಮತ್ತು ಜೀವನದ ಪ್ರಸಂಗಗಳು ದಂತ ಕಥೆಗಳಾಗಿವೆ ಎಂದು ಸ್ವಾಮಿ ವಿವೇಕಾನಂದ ಪಬ್ಲಿಕ್ ಶಾಲೆ ಅಧ್ಯಕ್ಷ ಚಿನ್ನುಪಾಟಿ ಪ್ರಭಾಕರ ಹೇಳಿದರು.

ನಗರದ ಸ್ವಾಮಿ ವಿವೇಕಾನಂದ ಪಬ್ಲಿಕ್ ಶಾಲೆಯ 32ನೇ ವಾರ್ಷಿಕೋತ್ಸವ ಮತ್ತು ಸ್ವಾಮಿ ವಿವೇಕಾನಂದರ ಜಯಂತಿ ಅಂಗವಾಗಿ ನಡೆದ ಆನಂದೋತ್ಸವ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಜೀವನದಲ್ಲಿ ಸಾಧನೆಗಾಗಿ ಯುವಕರು ಒಂದು ದೃಢವಾದ ಗುರಿಯನ್ನು ಇಟ್ಟುಕೊಳ್ಳಬೇಕು. ಗುರಿಯ ಮೇಲೆ ಗಮನ ಹರಿಸಿದರೆ ಅವರು ಇಂದಲ್ಲ, ನಾಳೆ ತಮ್ಮ ಜೀವನದಲ್ಲಿ ದೊಡ್ಡ ಸಾಧನೆ ಮಾಡುತ್ತಾರೆ ಎಂದರು.

ಶಾಲೆಯ ಕಾರ್ಯದರ್ಶಿ ಜಗನ್ನಾಥ್ ಆಲಂಪಲ್ಲಿ ಮಾತನಾಡಿ,ಯುವಕರು ದೇಶದ ಸಂಪತ್ತು ಉತ್ತಮವಾದ ಸಮಾಜ ಕಟ್ಟುವಲ್ಲಿ ಯುವಕರ ಪಾತ್ರ ಮುಖ್ಯವಾಗಿದೆ, ಯುವಕರು ಯಾವುದೇ ರೀತಿಯ ದುಶ್ಚಟಗಳಿಗೆ ಬಲಿಯಾಗದೆ ಉತ್ತಮ ನಾಗರಿಕರಾಗಿ ಜೀವನ ನಡೆಸಬೇಕು ಎಂದು ಹೇಳಿದರು.

ಶಾಲೆಯಲ್ಲಿ ಆಯೋಜಿಸಿದ್ದ ಆಹಾರ ಮೇಳದಲ್ಲಿ ವಿದ್ಯಾರ್ಥಿಗಳು ವಿವಿಧ ರೀತಿಯ ಖಾದ್ಯಗಳು ಮಾಡಿ ಮಾರಾಟ ಮಾಡಿ ಸಂತಸ ಪಟ್ಟರು. ಪಾಲಕರು ಉತ್ಸಾಹದಿಂದ ಆಹಾರ ಮೇಳದಲ್ಲಿ ಪಾಲ್ಗೊಂಡು ಮಕ್ಕಳ ಮಾಡಿದ ಆಹಾರ ಸೇವಿಸಿ ಖುಷಿ ಪಟ್ಟರು.

ಶಾಲೆಯ ಸಂಸ್ಥಾಪಕ ಪಾರ್ಥಸಾರಥಿ, ಉಪಾಧ್ಯಕ್ಷೆ ಪ್ರಿಯಾ ಕುಮಾರಿ ರಂಜನಿ ಆಲಂಪಲ್ಲಿ,ಕೃಷ್ಣಮೂರ್ತಿ ಆಲಂಪಲ್ಲಿ, ವೆಂಕಟಕೃಷ್ಣ ಪೂಲಿನ ಹಾಗೂ ಶಾಲೆಯ ಹಳೆಯ ವಿದ್ಯಾರ್ಥಿಗಳಾದ ಡಾಕ್ಟರ್ ಪವನ್ ಸಾಯಿ , ಡಾ. ಶಿವನಾರಾಯಣ, ಇಬ್ರಾಹಿಂ ಮುಖ್ಯೋಪಾಧ್ಯಾಯೆ ಶಾರೂನ್ ಕುಮಾರಿ ಸೇರಿ ಇತರರು ಇದ್ದರು.

ಸದೃಢ ಆರೋಗ್ಯಕ್ಕೆ ಕ್ರೀಡೆ ಅವಶ್ಯ

ದಿ ಶರಣಗೌಡ ಸಿದ್ದನಗೌಡ ಮಾಲಿ ಪಾಟೀಲ್ ರವರ 16 ನೇ ವರ್ಷದ ಪುಣ್ಯ ಸ್ಮರಣ್ಯವಾಗಿ ಆಯೋಜಿಸಿದ್ದ ಮುಕ್ತ ಕಬ್ಬಡ್ಡಿ ಪಂದ್ಯಾವಳಿಗೆ ಬಿಜೆಪಿ ಪಕ್ಷದ ಯುವ ಮುಖಂಡ ಈಶ್ವರ ವಜ್ಜಲ್ ಚಾಲನೆ ನೀಡಿದರು.

ಮುದಗಲ್: ಪಟ್ಟಣ ಸಮೀಪದ ಹೂನೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ರಾಮತ್ನಾಳ ಗ್ರಾಮದ ದಿ ಶರಣಗೌಡ ಸಿದ್ದನಗೌಡ ಮಾಲಿ ಪಾಟೀಲ್ ರವರ 16 ನೇ ವರ್ಷದ ಪುಣ್ಯ ಸ್ಮರಣ್ಯವಾಗಿ ಹೊನಲು ಬೆಳಕಿನ ಮುಕ್ತ ಕಬ್ಬಡ್ಡಿ ಪಂದ್ಯಾವಳಿ ಏರ್ಪಡಿಸಲಾಗಿತ್ತು.

ಬಿಜೆಪಿ ಪಕ್ಷದ ಯುವ ಮುಖಂಡ ಈಶ್ವರ ವಜ್ಜಲ್ ಅವರು ಕಬ್ಬಡ್ಡಿ ಪಂದ್ಯಾವಳಿ ಉದ್ಘಾಟನೆ ಮಾಡಿ ಮಾತನಾಡಿದ ಅವರು, ಕ್ರೀಡಾಪಟುಗಳಿಗೆ ಸೋಲು ಗೆಲುವು ಮುಖ್ಯವಲ್ಲ ಕ್ರೀಡೆಯಲ್ಲಿ ಭಾಗವಹಿಸುವುದರಿಂದ ದೈಹಿಕ ಸಾಮರ್ಥ್ಯ ಮತ್ತು ಮಾನಸಿಕ ದೃಢತೆಯನ್ನು ಹೆಚ್ಚಿಸುತ್ತದೆ. ಹಾಗೂ ಮನಸ್ಸನ್ನು ಆರೋಗ್ಯವಾಗಿಡಲು ಸಹಾಯಕವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ನಗರ ಘಟಕ ಅಧ್ಯಕ್ಷ ಕರಿಯಪ್ಪ ಯಾದವ, ಈರಣ್ಣ ಸುಂಕದ ಮಾಕಾಪೂರು, ಬಿಜೆಪಿ ಕಾರ್ಯದರ್ಶಿ ಮಂಜುನಾಥ ನಂದವಾಡಗಿ, ಶೇಖರಗೌಡ ದಳಪತಿ, ವಿರೇಶ ಅರಹಳ್ಳಿ,ರಮೇಶ ಇಟಗಿ, ವಿಜಯಕುಮಾರ ಮಾಕಾಪೂರು ಹನುಮಂತ ತೋವಿ, ಸಂಗನಗೌಡ ಪಾಟೀಲ್ ಸೇರಿದಂತೆ ಮುಂತಾದವರು ಇದ್ದರು.

ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ. ಸುರೇಶ ಇಟ್ನಾಳ ಸೂಚನೆ

ಎಸ್ಸೆಸ್ಸೆಲ್ಸಿ ಫಲಿತಾಂಶ ಹೆಚ್ಚಳಕ್ಕೆ ಒತ್ತು ನೀಡಿ

ಕೊಪ್ಪಳ: ಸ್ಫೂರ್ತಿ ನಡೆ ವಿಶೇಷ ಯೋಜನೆ ಸದ್ಬಳಕೆ ಮಾಡಿಕೊಂಡು, ಜಿಲ್ಲೆಯ ಎಲ್ಲ ವಸತಿ ನಿಲಯಗಳ ವಿದ್ಯಾರ್ಥಿಗಳ ಎಸ್ಸೆಸ್ಸೆಲ್ಸಿ ಫಲಿತಾಂಶ ಹೆಚ್ಚಳಕ್ಕೆ ವಾರ್ಡನ್‌ಗಳು ಒತ್ತು ನೀಡಬೇಕು ಎಂದು ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಹೇಳಿದರು.

ಎಸ್ಸಿ/ ಎಸ್ಟಿ ವಸತಿ ನಿಲಯದಲ್ಲಿ ವಿದ್ಯಾರ್ಥಿಗಳ ಕಲಿಕಾ ಮಟ್ಟ ಹೆಚ್ಚಿಸಲು ಹಾಸ್ಟೆಲ್ ನಲ್ಲಿ ಕಂಪ್ಯೂಟರ್‌ಬಳಕೆ ಮಾಡಿಕೊಂಡು, ಅವರಿಗೆ ಆನ್‌ಲೈನ್ ಮುಖಾಂತರ ಪ್ರಶ್ನೆ ಪತ್ರಿಕೆ ಮಾದರಿ ಅನುಸರಿಸಿ ಪರೀಕ್ಷಾ ಪೂರ್ವ ತಯಾರಿಕೆ ಕ್ರಮ ಕೈಗೊಳ್ಳಲಾಗುತ್ತಿದೆ.

- ಅಜ್ಜಪ್ಪ ಸೊಗಲದ, ಉಪನಿರ್ದೇಶಕ, ಸಮಾಜ ಕಲ್ಯಾಣ ಇಲಾಖೆ

ನಗರದ ಜಿಲ್ಲಾ ಪಂಚಾಯತ್ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಮೆಟ್ರಿಕ್ ಪೂರ್ವ ಹಾಸ್ಟೆಲ್ ನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗಾಗಿ ಆರಂಭಿಸಿರುವ ''ಸ್ಫೂರ್ತಿ ನಡೆ'' ಯೋಜನೆ ಜಾರಿ ಕುರಿತು ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಂಗಳವಾರ ಮಾತನಾಡಿದರು.

ಕೊಪ್ಪಳ ಜಿಲ್ಲೆಯಲ್ಲಿನ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಸುತ್ತಿರುವ ಒಟ್ಟು 82 ಮೆಟ್ರಿಕ್ ಪೂರ್ವ ವಸತಿ ನಿಲಯದಲ್ಲಿ ಸಾವಿರಾರು ವಿದ್ಯಾರ್ಥಿಗಳಿದ್ದಾರೆ. ಹಾಸ್ಟೇಲ್ ನಲ್ಲಿದ್ದು ಶಾಲೆಗೆ ಹೋಗುವ ವಿದ್ಯಾರ್ಥಿ,ವಿದ್ಯಾರ್ಥಿನಿಯರಿಗೆ ಬರುವ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ ಯಶಸ್ವಿಯಾಗಿ ಎದುರಿಸಲು ''ಸ್ಫೂರ್ತಿ ನಡೆ'' ವಿನೂತನ ಕಾರ್ಯಕ್ರಮ ಜಾರಿ ಮಾಡಲಾಗುತ್ತಿದೆ. ಈ ಯೋಜನೆಯಡಿ ಪ್ರತಿದಿನ ಎಲ್ಲ ಹಾಸ್ಟೆಲ್ ನಲ್ಲಿ ಸಂಜೆ 6ಗಂಟೆಯಿಂದ ರಾತ್ರಿ 8 ಗಂಟೆ ವರೆಗೆ ಆನ್ ಲೈನ್ ಮೂಲಕ ವಿಶೇಷ ವರ್ಗ(ಕ್ಲಾಸ್)ಗಳನ್ನು ಆಯೋಜಿಸಬೇಕು. ಅನುಭವಿ ಶಿಕ್ಷಕರಿಂದ ಬೋಧನೆ ಮಾಡಿಸಬೇಕು ಎಂದು ಮಾಹಿತಿ ನೀಡಿದರು.

ವಿದ್ಯಾರ್ಥಿಗಳಿಗೆ ಕಠಿಣವೆನಿಸುವ ವಿಷಯಗಳ ಬಗ್ಗೆ ಈ ತರಗತಿಯ ಕೊನೆಯಲ್ಲಿ ನೇರವಾಗಿ ಪ್ರಶ್ನೆ ಕೇಳಲು ಮತ್ತು ಅವುಗಳಿಗೆ ಉತ್ತರ ಪಡೆಯಲು ಅವಕಾಶ ಇರುತ್ತದೆ. ಹಾಸ್ಟೇಲ್ ವಿದ್ಯಾರ್ಥಿಗಳಿಗೆ ಪರೀಕ್ಷೆ ಎದುರಿಸಲು ಅನುಕೂಲ ಮಾಡಿಕೊಡಬೇಕು. ಈ ಹಿನ್ನೆಲೆಯಲ್ಲಿ ವಸತಿ ಶಿಕ್ಷಣ ಇಲಾಖೆ ಅಧಿಕಾರಿಗಳು, ಆಯಾ ವಸತಿ ನಿಲಯಗಳ ನಿಲಯ ಪಾಲಕರು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಇಂಗ್ಲಿಷ್, ಗಣಿತ ಮತ್ತು ವಿಜ್ಞಾನ ವಿಷಯ ಬೋಧನೆಗೆ ನುರಿತ ಶಿಕ್ಷಕರನ್ನು ನೇಮಕ ಮಾಡಬೇಕು. ಒಬ್ಬರು ಶಿಕ್ಷಕರಿಗೆ ದಿನಕ್ಕೆ 300 ರೂ.ಗೌರವ ಧನ ನೀಡಲಾಗುತ್ತದೆ. ಗೂಗಲ್ ಮೀಟ್ ನಲ್ಲಿ ಬೋಧನೆ ಮಾಡಬಹುದು. ಮೆಟ್ರಿಕ್ ಪೂರ್ವ ಹಾಸ್ಟೆಲ್ ವಾರ್ಡನ್‌ಗಳು ವಿಶೇಷ ವರ್ಗ ಆಯೋಜಿಸಬೇಕು. ಈ ಮೂಲಕ ಸ್ಫೂರ್ತಿ ನಡೆ ವಿನೂತನ ಕಾರ್ಯಕ್ರಮ ಸದ್ಬಳಕೆ ಮಾಡಿಕೊಳ್ಳಬೇಕು. ಹಾಸ್ಟೆಲ್ ನ ಒಬ್ಬ ವಿದ್ಯಾರ್ಥಿ ಅನುತ್ತೀರ್ಣನಾದರೂ ಆಯಾ ಹಾಸ್ಟೆಲ್ ವಾರ್ಡನ್ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

- ಡಾ. ಸುರೇಶ ಇಟ್ನಾಳ, ಜಿಲ್ಲಾಧಿಕಾರಿ, ಕೊಪ್ಪಳ

ಸರಕಾರದ ಯೋಜನೆಗಳ ಸದ್ಬಳಕೆಯಾಗಲಿ

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ವಿಶೇಷಚೇನರಿಗೆ ಮತ್ತು ಹಿರಿಯ ನಾಗರಿಕರಿಗೆ ಸಾಧನಾ ಸಲಕರಣೆಗಳನ್ನು ನೀಡುವ ಕಾರ್ಯಕ್ರಮವನ್ನು ಸಂಸದ ಈ.ತುಕಾರಾಂ ಉದ್ಘಾಟಿಸಿದರು.

ಹೊಪೇಟೆ: ಜಿಲ್ಲೆಯ ಹಿರಿಯ ನಾಗರಿಕರು, ವಿಶೇಷ ಚೇತನರು ಸರಕಾರದ ಯೋಜನಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಹ ಸರಕಾರದ ಯೋಜನೆಗಳು ಸಮರ್ಪಕವಾಗಿ ಸಿಗುವಂತಾಗಬೇಕು ಎಂದು ಸಂಸದ ಈ.ತುಕಾರಾಂ ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಅಲಿಂಕೋ ಸಂಸ್ಥೆ ವತಿಯಿಂದ ಆಯೋಜಿಸಲಾಗಿದ್ದ ವಿಜಯನಗರ ಜಿಲ್ಲೆಯಾದ್ಯಂತ ವಿಶೇಷಚೇನರಿಗೆ ಮತ್ತು ಹಿರಿಯ ನಾಗರಿಕರಿಗೆ ಸಾಧನಾ ಸಲಕರಣೆಗಳನ್ನು ನೀಡುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಾನವ ಜನ್ಮ ಸಹಜವಾದುದು ಆದರೆ ಜನಿಸುವಾಗ ಕೆಲವು ಪೌಷ್ಟಿಕಾಂಶ ಹಾಗೂ ಇತರೆ ಕಾರಣಗಳಿಂದ ಅಂಗವೈಕಲ್ಯರಾಗಿ ಹುಟ್ಟುತ್ತಾರೆ. ಅದನ್ನು ಶಾಪವಾಗಿ ಪರಿಗಣಿಸದೇ ಪ್ರತಿಯೊಬ್ಬರೂ ಸರಕಾರದ ಯೋಜನೆಗಳನ್ನು ಸದ್ಬಳಕೆ ಮಾಡಿಕೊಂಡು ಅಂಗವೈಕಲ್ಯತೆಯನ್ನೂ ಮೀರಿ ಯಶಸ್ವಿ ಜೀವನ ಸಾಗಿಸಬೇಕು. ಇಲಾಖೆಗಳು ಸಹ ಸರಕಾರದ ಯೋಜನೆ ಗಳನ್ನು ಸಕಾಲಕ್ಕೆ ಅರ್ಹ ಫಲಾನುಭವಿಗಳಿಗೆ ತಲುಪಿಸಬೇಕು ಎಂದು ಹೇಳಿದರು. ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಮಾತನಾಡಿ, ದೈಹಿಕವಾಗಿ ಸದೃಢರಾಗಿರುವ ವರಲ್ಲಿಯೇ ಮಾನಸಿಕ ಮತ್ತು ದೈಹಿಕವಾಗಿ ಕೆಲವು ನ್ಯೂನತೆಗಳು ಇರುತ್ತವೆ. ಅಂಗವೈ ಕಲ್ಯ, ವಿಶೇಷಚೇತನರಿಗೆ ಇನ್ನು ಕಷ್ಟವಾಗ ಲಿದೆ. ಅಂತಹ ಅರ್ಹ ಫಲಾನುಭವಿಗಳಿಗೆ ಸ್ಥಳೀಯ ಪ್ರದೇಶಾಭಿ ವೃದ್ಧಿ ಯೋಜನೆ ಯಡಿ ನೀಡಲಾಗುವ ಸಾಧನ, ಸಲಕರಣೆ ಗಳು ಹಿರಿಯ ನಾಗರಿಕರಿಗೆ ಮತ್ತು ವಿಶೇಷಚೇತನರಿಗೆ ತುಂಬಾ ಉಪಯುಕ್ತವಾ ಗಲಿವೆ ಎಂದರು. ಈ ವೇಳೆ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ತಿಮ್ಮಪ್ಪ, ನಗರಸಭೆ ಅಧ್ಯಕ್ಷ ಎನ್.ರೂಪೇಶ್ ಕುಮಾರ್, ದಿನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಇಮಾಮ್ ನಿಯಾಜಿ, ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ವೆಂಕಟರಮಣ ಸೇರಿದಂತೆ ವಿವಿಧ ಇಲಾಖೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು, ಚುನಾಯಿತ ಸದಸ್ಯರು ಇದ್ದರು.

ವಿಶೇಷ ಚೇತನರಿಗೆ 77,55,898 ರು. ವೆಚ್ಚದ ವಿವಿಧ ಸಾಧನ ಸಲಕರಣೆ ವಿತರಣೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಅರ್ಹ ಫಲಾನುಭವಿಗಳಿಗೆ ವ್ಹೀಲ್‌ಚೇರ್, ದೃಷ್ಟಿದೋಷವುಳ್ಳವರಿಗೆ ಸ್ಮಾರ್ಟ್‌ಫೋನ್, ತ್ರಿಚಕ್ರ ವಾಹನ, ಬ್ಲೈಂಡ್‌ಸ್ಟಿಕ್, ಮುಂತಾದವುಗಳನ್ನು ನೀಡುವ ಸಲುವಾಗಿ ಜಿಲ್ಲೆಯ 6 ತಾಲೂಕುಗಳಲ್ಲಿ ವೈದ್ಯಕೀಯ ಶಿಬಿರಗಳನ್ನು ಆಯೋಜಿಸಲಾಗಿತ್ತು. ಅದರಲ್ಲಿ ಭಾಗವಹಿಸಿದ ಫಲಾನುಭವಿಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಆಯ್ಕೆಯಾದ ಅರ್ಹ 356 ಪುರುಷ, 213 ಮಹಿಳೆ ಸೇರಿ ಒಟ್ಟು 569 ಅರ್ಹ ವಿಶೇಷಚೇತನರಿಗೆ ಹಾಗೂ 95 ಹಿರಿಯ ನಾಗರೀಕರಿಗೆ 77,55,898 ವೆಚ್ಚದ ವ್ಹೀಲ್‌ಚೇರ್, ವಾಕಿಂಗ್ ಸ್ಟಿಕ್, ಬ್ರೆಲ್ ಕಿಟ್, ಸಿ.ಪಿ ವೀಲ್‌ಚೇರ್ ಟಿ.ಎಲ್.ಎಂ.ಕಿಟ್, ಸ್ಮಾರ್ಟ್ ಫೋನ್, 49 ತ್ರಿಚಕ್ರ ವಾಹನ ಸೇರಿದಂತೆ ವಿವಿಧ ಸಾಧನ ಸಲಕರಣೆ ವಿತರಿಸಲಾಯಿತು.

ತಾಲೂಕಿನ ಅಭಿವೃದ್ಧಿಗಾಗಿ ಪ್ರಾಮಾಣಿಕ ಪ್ರಯತ್ನ

ಹರಪನಹಳ್ಳಿ: ತಾಲೂಕಿನಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ಸೇರಿದಂತೆ ಇತರೆ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಹೇಳಿದರು.

ತಾಲೂಕಿನ ಶೃಂಗಾರ ತೋಟದ ಬಳಿ ಇರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಸಿಬ್ಬಂದಿಳಿಗೆ ವಸತಿ ನಿಲಯಗಳ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಈಗಾಗಲೇ ನಿರ್ಮಾಣವಾಗಿದ್ದು, ಇದೀಗ ವಸತಿ ಶಾಲೆಯ ಸಿಬ್ಬಂದಿ ವಾಸಿಸಲು ಗೃಹ ನಿರ್ಮಾಣದ ಕಾಮಗಾರಿ 6.33 ಕೋಟಿ ಗಳಲ್ಲಿ ಕೈಗೊಳ್ಳಲಾಗಿದೆ, ಮುಂದಿನ ಶೈಕ್ಷಣಿಕ ವರ್ಷಕ್ಕೆ ಶಾಲೆ ಹಾಗೂ ಸಿಬ್ಬಂದಿಗಳ ಗೃಹಗಳನ್ನು ಲೋಕಾರ್ಪಣೆ ಮಾಡಲಾಗುವುದು ಎಂದು ತಿಳಿಸಿದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿ ಜಾವೇದ ಕರಿಲಿಂಗನವರು ಮಾತನಾಡಿ, ವಿಜಯನಗರ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಅಭಿವೃದ್ದಿಗೆ ಹೆಚ್ಚಿನ ಅನುದಾನ ಬಂದಿರೋದ ಹರಪನಹಳ್ಳಿ ತಾಲೂಕಿಗೆ ಮಾತ್ರ. ತಾಲೂಕಿನಲ್ಲಿ 4 ಎಕರೆ ಭೂಮಿಯನ್ನು ಮೌಲಾನ ಅಜಾದ ಶಾಲೆಗೆ ಕಾಯ್ದಿರಲಾಗಿದೆ,900 ಮಕ್ಕಳು ಮೌಲಾನ ಅಜಾದ ಶಾಲೆಯಲ್ಲಿ ಇರುತ್ತಾರೆ ಎಂದು ತಿಳಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ, ಕ್ಷೇತ್ರಶಿಕ್ಷಣಾಧಿಕಾರಿ ಎಚ್. ಲೇಪಾಕ್ಷಪ್ಪ, ಅಂಜುಮನ್ ಸಮಿತಿ ಮಾಜಿ ಅಧ್ಯಕ್ಷ ಎಂ.ಜಾವೇದ್, ರಿಯಾಜ್, ಅಲ್ಪಸಂಖ್ಯಾತರ ಮುರಾರ್ಜಿ ವಸತಿ ಶಾಲೆಯ ಪ್ರಾಚಾರ್ಯ ಚಂದ್ರಶೇಖರ, ತಾಲೂಕು ಅಭಿವೃದ್ಧಿ ಅಧಿಕಾರಿ ಜಯಪ್ರಕಾಶ ಹಾಗೂ ಸಿಬ್ಬಂದಿ ಹಾಜರಿದ್ದರು.

ತಜ್ಞ ವೈದ್ಯರ ನೇಮಕಕ್ಕೆ ಅರೆಬೆತ್ತಲೆ ಪ್ರತಿಭಟನೆ

ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ವೈದ್ಯರನ್ನು ನೇಮಕ ಮಾಡುವಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ ಕಾರ್ಯಕರ್ತರು ಅರೆಬೆತ್ತಲೆ ಪ್ರತಿಭಟನೆ ನಡೆಸಿದರು.

ಲಿಂಗಸೂಗೂರು: ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಹೃದಯ ರೋಗ, ಕಿವಿ, ಮೂಗು, ಗಂಟಲು ತಜ್ಞರನ್ನು ನೇಮಕ ಮಾಡುವಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ ಕಾರ್ಯಕರ್ತರು ಅರೆಬೆತ್ತಲೆ ಪ್ರತಿಭಟನೆ ಮಾಡುವ ಮೂಲಕ ಆರೋಗ್ಯಧಿಕಾರಿಗಳ ಮೂಲಕ ಅರೋಗ್ಯ ಸಚಿವರಿಗೆ ಮನವಿ ಸಲ್ಲಿಸಿದರು.

ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಪ್ರತಿ ದಿನ ನೂರಾರು ಬಡ ಮತ್ತು ಮಧ್ಯಮ ವರ್ಗದ ಜನರು ವಿವಿಧ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ಪಡೆಯಲು ಆಗಮಿಸುತ್ತಿದ್ದಾರೆ. ಹೃದಯ ಸಂಬಂಧಿತ ರೋಗಗಳು ಹೆಚ್ಚಾಗುತ್ತಿದ್ದು, ಹೃದಯ ರೋಗ ತಜ್ಞರ ಕೊರತೆ ಇರುವುದರಿಂದ, ಹೃದಯ ಸಮಸ್ಯೆಗಳಿಂದ ಬಳಲುವ ರೋಗಿಗಳು ಖಾಸಗಿ ಆಸ್ಪತ್ರೆಗಳತ್ತ ಹೋಗಬೇಕಾಗಿದ್ದು, ಜನರು ಆರ್ಥಿಕ ಹೊರೆ ಎದುರಿಸುತ್ತಿದ್ದಾರೆ. ಬಡ ಮತ್ತು ಸಾಮಾನ್ಯ ಜನರ ಹಿತದೃಷ್ಟಿಯಿಂದ, ಸಾರ್ವಜನಿಕ ಆಸ್ಪತ್ರೆಯಲ್ಲಿ ಶಾಶ್ವತವಾಗಿ ಹೃದಯ ರೋಗ ಕಿವಿ, ಮೂಗು, ಗಂಟಲು ತಜ್ಞರನ್ನು ನೇಮಕ ಮಾಡುವಂತೆ ಒತ್ತಾಯಿಸಿದರು. ಮನವಿಯನ್ನು ಗಂಭೀರವಾಗಿ ಪರಿಗಣಿಸಿ ಶೀಘ್ರ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಸಾರ್ವಜನಿಕ ಆಸ್ಪತ್ರೆಯ ಮುಂದೆ ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ತಾಲೂಕು ಅಧ್ಯಕ್ಷ ಜೀಲಾನಿ ಪಾಷಾ, ರವಿಕುಮಾರ್,ಮೋಸಿನ ಖಾನ, ಅಜೀಜ್, ಪರಮಣ್ಣ, ತಿಮ್ಮನಗೌಡ, ಪ್ರಭು, ಬಸನಗೌಡ, ಶ್ರೀನಿವಾಸ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಗುಡದೂರು ಬಳಿಯ ಕಿರಿದಾದ ಮೇಲ್ಸೇತುವೆ ಬಳಿ ಗೋಡೆ ಶಿಥಿಲ

ಎಡದಂಡೆ ಕಾಲುವೆ ಸೇತುವೆಗಿಲ್ಲ ದುರಸ್ತಿ ಭಾಗ್ಯ

ಖಲೀಲ್ ಅಹ್ಮದ್ ಮಸ್ಕಿ:

ಮಸ್ಕಿ ಸಮೀಪದ ತುಂಗಭದ್ರಾ ಎಡ ದಂಡೆ ಮುಖ್ಯ ಕಾಲುವೆ 66 ನೇ ಮೈಲ್ ಬಳಿಯ ಮೇಲ್ಸೇತುವೆ ರಕ್ಷಣಾ ಗೋಡೆ ಶಿಥಿಲ ಗೊಂಡು ಹಲವು ವರ್ಷ ಕಳೆದರೂ ಸಂಬಂಧ ಪಟ್ಟ ಇಲಾಖೆ ಅಧಿಕಾರಿಗಳು ರಕ್ಷಣಾ ಗೋಡೆ ದುರಸ್ತಿಗೆ ಮುಂದಾಗಿಲ್ಲ ಎಂದು ಹಳ್ಳಿಗಳ ಜನರು ಆರೋಪಿಸಿದ್ದಾರೆ.

ಕೆಲವು ತಿಂಗಳ ಹಿಂದೆ ಕಾಲುವೆ ಮೇಲ್ಸೇತುವೆ ರಕ್ಷಣಾ ಗೋಡೆ ದುರಸ್ತಿ ಗೊಳಿಸಲಾಗಿತ್ತು. ಗೋಡೆ ಮತ್ತೆ ಹಾಳಾಗಿರುವ ಮಾಹಿತಿ ಇದೆ ಶೀಘ್ರದಲ್ಲಿ ರಕ್ಷಣಾ ಗೋಡೆ ದುರಸ್ತಿ ಗೊಳಿಸಲಾಗುವುದು.

-ದಾವೂದ್, ಎಇಇ ನೀರಾವರಿ ನಿಗಮ ಮಸ್ಕಿ.

ಬೀದರ್- ಬೆಂಗಳೂರು ನಗರಗಳಿಗೆ ಸಂಪರ್ಕ ಕಲ್ಪಿಸುವ ಗುಡದೂರು ಬಳಿಯ ಕಿರಿದಾದ ಮೇಲ್ಸೇತುವೆ ಬಳಿ ಅನೇಕ ಅಪಘಾತ ಗಳು ಸಂಭವಿಸಿ ಅನೇಕ ಜನರು ಜೀವ ಕಳೆದು ಕೊಂಡಿದ್ದಾರೆ . ಕೆಲ ದಿನಗಳ ಹಿಂದೆ ಸೇತುವೆಗೆ ಲಾರಿ ಡಿಕ್ಕಿ ಹೊಡೆದ ಕಾರಣ ಸೇತುವೆ ಗೋಡೆ ಹಾಳಾಗಿತ್ತು ನೀರಾವರಿ ನಿಗಮ ಎಂಜಿನಿಯರ್‌ಗಳು ಸೇತುವೆ ತಾತ್ಕಲಿಕ ದುರಸ್ತಿ ಕೈ ಗೊಂಡ ಬಳಿಕ ಹೆದ್ದಾರಿ ನಿಗಮದವರು ಸೇತುವೆ ಎರಡು ಬದಿ ಎಚ್ಚರಿಕೆ ಫಲಕ ಹಾಕಿ ಕೈ ತೊಳೆದು ಕೊಂಡಿದ್ದು ಬಿಟ್ಟರೆ ಇಲ್ಲಿ ತನಕ ಸೇತುವೆಗೆ ದುರಸ್ತಿ ಭಾಗ್ಯ ಕೂಡಿ ಬಂದಿಲ್ಲ. ಮೇರನಾಳ, ಗೋನಾಳ, ಹಂಚಿನಾಳ, ಪರಾಪೂರ ಇನ್ನಿತರ ಗ್ರಾಮ ಗಳಿಗೆ ರಸ್ತೆ ಸಂಪರ್ಕ ಕಲ್ಪಿಸುವ ಪ್ರಮುಖ 4 ರಸ್ತೆ ಕೂಡುವ ಸ್ಥಳ ಬಳಿಯ ಕಾಲುವೆ ಮೇಲ್ಸೇತುವೆ ರಕ್ಷಣಾ ಗೋಡೆ ಶಿಥಿಲ ಗೊಂಡು ಅಪಾಯಕ್ಕೆ ಆಹ್ವಾನ ನೀಡುತ್ತಿದ್ದರೂ ಸಂಬಂಧ ಪಟ್ಟ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ ಎಂದು ಸಾರ್ವಜನಿಕರು ದೂರಿದ್ದಾರೆ. ಕಿರಿದಾದ ಸೇತುವೆ ಬಳಿ ಚಾಲಕರು ಎಚ್ಚರಿಕೆ ಯಿಂದ ವಾಹನ ಚಲಾಯಿಸ ಬೇಕು ಬೈಕ್ ಸವಾರರು ಎಚ್ಚರಿಕೆ ಯಿಂದ ಬೈಕ್ ಓಡಿಸ ಬೇಕು. ಪಾದಚಾರಿ ಗಳು ರಸ್ತೆ ದಾಟುವ ಎದುರಿಗೆ ವಾಹನ ಬಂದರೆ ಜೀವ ಕೈ ಯಲ್ಲಿ ಹಿಡಿದು ಕೊಂಡು ರಸ್ತೆ ದಾಟ ಬೇಕು ಆ ಯಾ ತಪ್ಪಿದರೆ ನೇರವಾಗಿ ಕಾಲುವೆಗೆ ಬೀಳುವ ಸಾಧ್ಯತೆ ಗಳಿವೆ.

ಮಸ್ಕಿ ಸಮೀಪದ ತುಂಗ ಭದ್ರಾ ಎಡ ದಂಡೆ ಮುಖ್ಯ ಕಾಲುವೆ ಮೇಲ್ಸೇತುವೆ ರಕ್ಷಣಾ ಗೋಡೆ ಹಾಳಾಗಿರುವುದು.

ಗುಡ ದೂರು ಬಳಿಯು ಮುಖ್ಯ ಕಾಲುವೆ ಮೇಲ್ಸೇತುವೆ ರಕ್ಷಣಾ ಗೋಡೆ ಶಿಥಿಲ ಗೊಂಡು ಅಪಘಾತಕ್ಕೆ ಆಹ್ವಾನ ನೀಡುತ್ತಿದ್ದರೂ ಸಂಬಂಧ ಪಟ್ಟ ಅಧಿಕಾರಿಗಳು ಗಮನ ಹರಿಸುತ್ತಿಲ್ಲ ಸೇತುವೆ ಬಳಿ ಅವಘಡಗಳು ಸಂಭವಿಸುವ ಮುಂಚೆ ಅಧಿಕಾರಿಗಳು ಗೋಡೆ ದುರಸ್ತಿ ಗೊಳಿಸಲು ಮುಂದಾಗ ಬೇಕು.

-ಗೋವಿಂದಪ್ಪ ನಾಯಕ, ರಂಗಾಪೂರ ಗ್ರಾಮಸ್ಥ

ಸಮಾಚಾರ ಸಣ್ಣದಲ್ಲ

ಶಬರಿಮಲೆ: ರಾಜ್ಯದ ಭಕ್ತರ ಬಸ್ ತಡೆ

ಶಬರಿಮಲೆ: ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯಿಂದ ಶಬರಿಮಲೆಗೆ ತೆರಳಿರುವ ಅಯ್ಯಪ್ಪ ಮಾಲಾಧಾರಿಗಳು ಕೇರಳ ಸರಕಾರ ಹಾಗೂ ಅಲ್ಲಿನ ಪೊಲೀಸರ ವಿರುದ್ಧ ಮಂಗಳವಾರ ಶಬರಿಮಲೆ ಬಳಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಕರ್ನಾಟಕದ ವಾಹನಗಳನ್ನು ಎರಿಮಲೆಯಲ್ಲೇ ತಡೆ ಹಿಡಿದಿರುವ ಕೇರಳ ಪೊಲೀಸರು ಅಲ್ಲಿಂದ ಮುಂದಕ್ಕೆ ಪ್ರಯಾಣಿಸಲು ಕೇರಳದ ಖಾಸಗಿ ಮತ್ತು ಸರಕಾರಿ ಬಸ್ಸುಗಳಿಗೆ ಮಾತ್ರ ಅವಕಾಶ ನೀಡುತ್ತಿದ್ದಾರೆ ಎಂದು ಮಾಲಾಧಾರಿಗಳು ಆರೋಪಿಸಿದ್ದಾರೆ. ಎರಿಮಲೆಯಿಂದ ಶಬರಿಮಲೆಗೆ ಸುಮಾರು 100 ಕಿ.ಮೀ. ದೂರವಿದ್ದು, ಭಕ್ತರು ಅನಿವಾರ್ಯವಾಗಿ ತಮ್ಮ ವಾಹನಗಳನ್ನು ಬಿಟ್ಟು ಕೇರಳದ ವಾಹನಗಳನ್ನೇ ಅವಲಂಬಿಸಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಈ ವ್ಯವಸ್ಥೆಗೆ ಅಸಮಾಧಾನ ವ್ಯಕ್ತಪಡಿಸಿರುವ ಮಾಲಾಧಾರಿಗಳು ರಸ್ತೆ ಮಧ್ಯೆಯೇ ಮಲಗಿ ಪ್ರತಿಭಟನೆ ನಡೆಸುತ್ತಿದ್ದಾರೆ. ಕೇರಳ ಸರಕಾರ ಹಾಗೂ ಪೊಲೀಸರ ನಡೆಗೆ ಮಾಲಾಧಾರಿಗಳು ಆಕ್ರೋಶ ಹೊರಹಾಕಿದರು. ಕರ್ನಾಟಕದ ವಾಹನಗಳಿಗೆ ಸೂಕ್ತ ಸ್ಪಂದನೆ ನೀಡದ ಕೇರಳ ಸರಕಾರದ ವಿರುದ್ಧ ಕಿಡಿಕಾರಿದ್ದಾರೆ. ಬಾಡಿಗೆ ವಾಹನ ಮಾಡಿಕೊಂಡು ಹೋಗಿರುವ ತರೀಕೆರೆಯ ಭಕ್ತರು ಈಗ ಅತ್ತ ಹೋಗಲಾಗದೆ, ಇತ್ತ ಮರಳಲಾಗದೆ ಸಂಕಷ್ಟಕ್ಕೆ ಸಿಲುಕಿದ್ದರು.

ಚಿಲ್ಲರೆ ಹಣದುಬ್ಬರ ಶೇ.1.3ಗೆ ಏರಿಕೆ

ದೆಹಲಿ: ಕನ್ಸ್ಯೂಮರ್ ಪ್ರೈಸ್ ಇಂಡೆಕ್ಸ್(ಸಿಪಿಐ) ಆಧರಿಸಿದ ಭಾರತದಲ್ಲಿನ ಚಿಲ್ಲರೆ ಹಣದುಬ್ಬರ 2025ರ ಡಿಸೆಂಬರ್‌ನಲ್ಲಿ ಮತ್ತೆ ಏರಿಕೆ ಕಂಡಿದ್ದು, ಶೇ.1.3ಕ್ಕೆ ಮುಟ್ಟಿತ್ತು. ಇದು ಸೆಪ್ಟೆಂಬರ್-ನವೆಂಬರ್ ಅವಧಿಯಲ್ಲಿನ ಹಣದುಬ್ಬರಕ್ಕೆ ಹೋಲಿಸಿದರೆ ಗರಿಷ್ಠ ಪ್ರಮಾಣವಾಗಿದೆ ಎಂದು ಕೇಂದ್ರದ ಅಂಕಿ ಅಂಶ ಸಚಿವಾಲಯ ತಿಳಿಸಿದೆ. 2024ರ ಡಿಸೆಂಬರ್‌ನಲ್ಲಿ ಚಿಲ್ಲರೆ ಹಣದುಬ್ಬರ ಶೇ.5.2ರಷ್ಟಿತ್ತು. ವರ್ಷದ ಬಳಿಕ ಶೇ.1.3ರಲ್ಲಿದೆ. ವರ್ಷದ ಹಿಂದಿನ ಹಣದುಬ್ಬರ ಪ್ರಮಾಣಕ್ಕೆ ಹೋಲಿಸಿದರೆ ಇದು ಬಹಳ ಕಡಿಮೆಯೇ ಇದೆ. ಆದರೆ, 2025ರ ನವೆಂಬರ್‌ನಲ್ಲಿದ್ದ ಶೇ.0.7 ಚಿಲ್ಲರೆ ಹಣದುಬ್ಬರಕ್ಕೆ ಹೋಲಿಸಿದರೆ ಶೇ.0.6ರಷ್ಟು ಹೆಚ್ಚಳವಾಗಿದೆ.

ಬಿಗ್‌ಬಾಸ್ ಗಿಲ್ಲಿ ಪರ ಮಂಡ್ಯ ರಾಜಕಾರಣಿಗಳು

ಬೆಂಗಳೂರು: ಬಿಗ್ ಬಾಸ್ ಕನ್ನಡ ಸೀಸನ್ 12ರಲ್ಲಿ ಗಿಲ್ಲಿ ನಟ ಅವರು ತಮ್ಮ ಕ್ರೇಜ್‌ನಿಂದ ಎಲ್ಲರ ಗಮನ ಸೆಳೆದಿದ್ದಾರೆ. ಈಗಾಗಲೇ ಫಿನಾಲೆ ತಲುಪಿರುವ ಗಿಲ್ಲಿ ನಟ ಈ ಬಾರಿ ಟ್ರೋಫಿಯನ್ನು ಎತ್ತುವ ಸಾಧ್ಯತೆಗಳು ಜಾಸ್ತಿಯೇ ಇವೆ. ಸೋಶಿಯ್ ಮೀಡಿಯಾದಲ್ಲಿ ಅವರ ಪರವಾದ ದೊಡ್ಡ ಅಲೆ ಇದೆ, ಈ ನಡುವೆ ಮಂಡ್ಯದ ಕೆಲ ರಾಜಕಾರಣಿಗಳು ಕೂಡ ಗಿಲ್ಲಿ ಪರವಾಗಿ ಧ್ವನಿ ಎತ್ತಿದ್ದಾರೆ

ಶಾಸಕ ಸ್ವಾಮಿ ಹೇಳಿಕೆ: ನಾಡಿನ ಸಮಸ್ತ ಜನತೆಗೆ ನಮಸ್ಕಾರ.. ಮಳವಳ್ಳಿಯ ಹೆಮ್ಮೆಯ ನಟರಾಜ್, ಗಿಲ್ಲಿ ನಟ ಬಿಗ್ ಬಾಸ್ ಸ್ಪರ್ಧೆಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ, ಅಂತಿಮ ಘಟ್ಟಕ್ಕೆ ಬಂದಿರುವ ಸಂದರ್ಭದಲ್ಲಿ, ಆತನ ಕಲೆ ಮತ್ತು ಆತನ ಪ್ರಾಮಾಣಿಕ ಪ್ರಯತ್ನವನ್ನು ಸರ್ವರೂ ಬೆಂಬಲಿಸಬೇಕು. ನಮ್ಮ ಮಳವಳ್ಳಿಯ ಹೊಸ ಪ್ರತಿಭೆಯನ್ನು ಸೃಷ್ಟಿಯಾಗಲು ಆಶೀರ್ವಾದ ಮಾಡಿ. ಗಿಲ್ಲಿ ನಟನನ್ನು ಬೆಂಬಲಿಸಿ, ಆತನಿಗೆ ಅತೀ ಹೆಚ್ಚಿನ ಮತಗಳನ್ನು ನೀಡಿ ಎಂದು ಮಳವಳ್ಳಿಯ ಶಾಸಕ ನರೇಂದ್ರ ಸ್ವಾಮಿ ಮನವಿ ಮಾಡಿಕೊಂಡಿದ್ದಾರೆ. ಉತ್ತಮತನಕ್ಕೇ ಅಂತಿಮ ಗೆಲುವು' 'ಗಿಲ್ಲಿ ನಟ ಅವರು ಕಾರ್ಯಕ್ರಮಕ್ಕೆ ಕಾಲಿಟ್ಟ ದಿನದಿಂದಲೂ ತಮ್ಮದೇ ಆದ ಗುರುತು ಮೂಡಿಸಿದ್ದು, ಕೃತಕ ಮತ್ತು ಆರ್ಭಟದ ಆಟವನ್ನು ಬಿಟ್ಟು ನೈಜತೆ, ಮಾನವೀಯತೆ ಮತ್ತು ಸಮತೋಲನದಿಂದ ನಡೆದುಕೊಂಡಿದ್ದಾರೆ, ಅವರ ಗೆಲುವು ಕೇವಲ ಒಂದು ಪ್ರಶಸ್ತಿ ಅಲ್ಲ, ಅದು ಲಕ್ಷಾಂತರ ಜನಗಳ ಧ್ವನಿ. ಅವರ ಮೇಲೆ ಇರುವ ನಂಬಿಕೆ, ಭರವಸೆ, ಮತ್ತು ಉತ್ತಮತನವೇ ಅಂತಿಮ ಗೆಲುವು ಎಂಬ ಸಂದೇಶಕ್ಕೆ ಮುದ್ರೆಯಾಗಲಿ. ಈ ಸೀಸನ್‌ನ ಟ್ರೋಫಿಗೆ ಅವರು ಅತ್ಯಂತ ಯೋಗ್ಯ ಸ್ಪರ್ಧಿ ಎಂದು ಭಾವಿಸುತ್ತಾ ಶುಭವಾಗಲಿ' ಎಂದು ಹಾರೈಸುತ್ತೇನೆ ಎಂದು ಡಿ.ಸಿ. ತಮ್ಮಣ್ಣ ಹೇಳಿದ್ದಾರೆ.

ಚೀನಾ ಕಮ್ಯುನಿಸ್ಟ್ ಪಕ್ಷ- ಆರೆಸ್ಸೆಸ್ ನಾಯಕರ ಭೇಟಿ

ದೆಹಲಿ: ಚೀನಾದ ಕಮ್ಯುನಿಸ್ಟ್ ಪಕ್ಷದ ನಾಯಕರು ಮಂಗಳವಾರ ಆರ್‌ಎಸ್‌ಎಸ್ ಪ್ರಧಾನ ಕಚೇರಿಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಸಹಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರನ್ನು ಭೇಟಿಯಾದರು. ಸಭೆ ಸುಮಾರು ಅರ್ಧ ಗಂಟೆಗಳ ಕಾಲ ನಡೆಯಿತು ಎಂದು ಮೂಲಗಳು ತಿಳಿಸಿವೆ. ಸಂಘಟನೆಯ ಮೂಲಗಳ ಪ್ರಕಾರ, ಚೀನಾ ನಿಯೋಗ ಆರ್‌ಎಸ್‌ಎಸ್ ನಾಯಕತ್ವದೊಂದಿಗೆ ಸಂವಹನ ನಡೆಸುವ ಬಯಕೆಯನ್ನು ವ್ಯಕ್ತಪಡಿಸಿದ ನಂತರ ಈ ಬೆಳವಣಿಗೆ ಸಂಭವಿಸಿದ್ದು, ಸಭೆಯು ಕೇವಲ ಸೌಜನ್ಯ ಭೇಟಿಯಾಗಿತ್ತು. ಸಂವಾದದ ಸಮಯದಲ್ಲಿ ಯಾವುದೇ ಔಪಚಾರಿಕ ಕಾರ್ಯಸೂಚಿಯನ್ನು ಚರ್ಚಿಸಲಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಮಹಾರಾಷ್ಟ್ರ ಪಾಲಿಕೆ ಮತದಾನದ ಕಣದಲ್ಲಿ 15,000 ಅಭ್ಯರ್ಥಿಗಳು | ಹಲವು ರಾಜ್ಯಗಳಿಗಿಂತ ದೊಡ್ಡದಿದೆ ಮುಂಬೈ ಪಾಲಿಕೆ ಬಜೆಟ್

ನಾಳೆ ಮಹಾರಾಷ್ಟ್ರದ 29 ಪಾಲಿಕೆಗಳಲ್ಲಿ ಚುನಾವಣೆ

ಮುಂಬೈ: ಮಹಾರಾಷ್ಟ್ರದ 29 ಮಹಾನಗರ ಪಾಲಿಕೆಗಳಲ್ಲಿ ಹೊಸ ಮೇಯರ್‌ಗಳ ಆಯ್ಕೆಗಾಗಿ ನಾಳೆ (ಗುರುವಾರ) ಚುನಾವಣೆ ನಡೆಯಲಿದೆ. ಮಹಾ ರಾಷ್ಟ್ರ ರಾಜ್ಯಾದ್ಯಂತ 15,000ಕ್ಕೂ ಹೆಚ್ಚು ಅಭ್ಯರ್ಥಿ ಗಳು ಕಣದಲ್ಲಿದ್ದಾರೆ. ದೇಶದ ಅತ್ಯಂತ ಶ್ರೀಮಂತ ಸ್ಥಳೀಯ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಬೃಹತ್ ಮುಂಬೈ ಮಹಾನಗರ ಪಾಲಿಕೆ (ಬಿಎಂಸಿ) ಈ ಚುನಾವಣೆಯ ಕೇಂದ್ರಬಿಂದು.

ಕೇವಲ ಮುಂಬೈಯಲ್ಲಿಯೇ 227 ವಾರ್ಡ್‌ಗಳಿದ್ದು, ಸುಮಾರು 1,700 ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ. 2025-26ರ ಹಣಕಾಸು ವರ್ಷಕ್ಕೆ 74,000 ಕೋಟಿ ರುಪಾಯಿಗೂ ಅಧಿಕ ಬಜೆಟ್ ಹೊಂದಿರುವ ಬಿಎಂಸಿಯ ಅಧಿಕಾರದ ಚುಕ್ಕಾಣಿ ಹಿಡಿಯಲು ತೀವ್ರ ಪೈಪೋಟಿ ನಡೆಯುತ್ತಿದೆ. 2025-26ರ ಹಣಕಾಸು ವರ್ಷದಲ್ಲಿ ಬಿಎಂಸಿ 2025, ಫೆಬ್ರವರಿ 4ರಂದು 74,427 ಕೋಟಿ ರುಪಾಯಿ ಬಜೆಟ್ ಮಂಡಿಸಿದ್ದು, ಅದು ಇತಿಹಾಸದಲ್ಲೇ ಅತೀ ದೊಡ್ಡ ಆಯ-ವ್ಯಯ ಪತ್ರ ಆಗಿದೆ. ಇದು ಹಿಂದಿನ ವರ್ಷದ ಅವಧಿಗಿಂತ ಸುಮಾರು ಶೇ. 14ರಷ್ಟು ಹೆಚ್ಚು. 2022ರ ಮಾರ್ಚ್ 7ರಂದು ಪಾಲಿಕೆ ಸದಸ್ಯರ ಅವಧಿ ಮುಗಿದಿದ್ದು, ಸದ್ಯ ಬೃಹತ್ ಮುಂಬೈ ಮಹಾನಗರ ಪಾಲಿಕೆ ಆಡಳಿತಾಧಿಕಾರಿಯ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಹಲವು ರಾಜ್ಯಗಳಿಗಿಂತ ದೊಡ್ಡ ಬಜೆಟ್: ಬಿಎಂಸಿ ಕೇವಲ ಮಹಾನಗರ ಪಾಲಿಕೆಯಾಗಿದ್ದರೂ ಸಹ 74,427 ಕೋಟಿ ರುಪಾಯಿ ಮೊತ್ತದ ಬಜೆಟ್ ಮಂಡಿಸಿದ್ದು, ಇದು ಭಾರತದ ಹಲವು ರಾಜ್ಯಗಳ ಸಂಪೂರ್ಣ ಬಜೆಟ್‌ಗಳಿಗಿಂತ ದೊಡ್ಡದಾಗಿದೆ. ಕೆಲವು ಚಿಕ್ಕ ರಾಜ್ಯಗಳ ಬಜೆಟ್ ಹೀಗಿದೆ-ಗೋವಾ: 202526ರ ಒಟ್ಟು ಬಜೆಟ್ 28,162 ಕೋಟಿ ರುಪಾಯಿ, ಅರುಣಾಚಲ ಪ್ರದೇಶ: 39,842 ಕೋಟಿ ರುಪಾಯಿ, ಹಿಮಾಚಲ ಪ್ರದೇಶ: 58,514 ಕೋಟಿ ರುಪಾಯಿ, ಸಿಕ್ಕಿಂ: 16,196 ಕೋಟಿ ರುಪಾಯಿ, ತ್ರಿಪುರ: 31,412 ಕೋಟಿ ರುಪಾಯಿ.

ದೇಶದ ಇತರ ಮಹಾನಗರ ಪಾಲಿಕೆಗಳ ಬಜೆಟ್: ದೆಹಲಿ ಮಹಾನಗರ ಪಾಲಿಕೆ (ಎಂಸಿಡಿ) 2026-27ಗಾಗಿ 16,530 ಕೋಟಿ ರುಪಾಯಿ ಬಜೆಟ್ ಪ್ರಸ್ತಾಪಿಸಿದ್ದರೆ, ಬೆಂಗಳೂರು ಬಿಬಿಎಂಪಿ 2025-26ಗಾಗಿ ಸುಮಾರು 19,930 ಕೋಟಿ ರುಪಾಯಿಯ ಆಯ-ವ್ಯಯ ಪತ್ರ ಮಂಡಿಸಿತ್ತು.

ಮಹಾನಗರ ಪಾಲಿಕೆ ಆಫ್ ಗ್ರೇಟರ್ ಮುಂಬೈ (ಎಂಸಿಜಿಎಂ) ಎಂತಲೂ ಕರೆಯಲ್ಪಡುವ ಬಿಎಂಸಿ, ಮುಂಬೈ ಹಾಗೂ ಅದರ ಕೆಲವು ಉಪನಗರಗಳನ್ನು ಒಳಗೊಂಡಿದೆ. 1888ರ ಬಾಂಬೆ ಮಹಾನಗರ ಪಾಲಿಕೆ ಕಾಯ್ದೆಯಡಿ ಸ್ಥಾಪಿತವಾದ ಈ ಸಂಸ್ಥೆ, ನಗರದ ಮೂಲಸೌಕರ್ಯ ಅಭಿವೃದ್ಧಿ ಮತ್ತು ನಾಗರಿಕ ಆಡಳಿತಕ್ಕಾಗಿ ಕಾರ್ಯ ನಿರ್ವಹಿಸುತ್ತಿದೆ.

2025-26ರ ಬಜೆಟ್‌ನಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ 7,410 ಕೋಟಿ ರುಪಾಯಿ ಹೆಚ್ಚಳವಾಗಿದ್ದು, ಅದರಲ್ಲಿ 43,166 ಕೋಟಿ ರುಪಾಯಿ (58%) ಅನ್ನು ಬಂಡವಾಳ ವೆಚ್ಚಕ್ಕೆ ಮೀಸಲಿಡಲಾಗಿದೆ.

ಒಟ್ಟು ಬಜೆಟ್‌ನ ಕನಿಷ್ಠ ಶೇ. 10ರಷ್ಟನ್ನು ಆರೋಗ್ಯ ಸೇವೆಗಳಿಗೆ ಮೀಸಲಿಡಲಾಗಿದೆ. 2012-13ರಿಂದ 2025ರ ಜನವರಿ ವರೆಗೆ ಬಿಎಂಸಿ ಬೃಹತ್ ಮುಂಬೈ ಎಲೆಕ್ಟ್ರಿಕ್ ಸಪ್ಲೈ ಟ್ರಾನ್ಸ್‌ಪೋರ್ಟ್‌ಗೆ (ಬೆಸ್ಟ್) 11,304.59 ಕೋಟಿ ರುಪಾಯಿ ಆರ್ಥಿಕ ನೆರವು ನೀಡಿದೆ.

2025-26ನೇ ಸಾಲಿಗೆ ಬೆಸ್ಟ್‌ಗೆ 1,000 ಕೋಟಿ ರುಪಾಯಿ ಅನುದಾನ ಪ್ರಸ್ತಾಪಿಸಲಾಗಿದೆ, ಇದಲ್ಲದೆ, ವಿದ್ಯುತ್ ಬಸ್‌ಗಳ ಖರೀದಿಗಾಗಿ 15ನೇ ಹಣಕಾಸು ಆಯೋಗದಿಂದ 992 ಕೋಟಿ ರುಪಾಯಿ ಮಂಜೂರಾಗಿದ್ದು, ಅದರಲ್ಲಿ 493.38 ಕೋಟಿ ರುಪಾಯಿ ಈಗಾಗಲೇ ಬಿಡುಗಡೆ ಮಾಡಲಾಗಿದೆ.

ಬಿಎಂಸಿಯ ಖರ್ಚು-ವೆಚ್ಚ: ರಸ್ತೆಗಳು, ಸೇತುವೆಗಳು, ಒಳಚರಂಡಿ ವ್ಯವಸ್ಥೆ, ಸಾರ್ವಜನಿಕ ಆರೋಗ್ಯ, ಶಿಕ್ಷಣ, ಭದ್ರತೆ, ಸಿಬ್ಬಂದಿ ವೇತನ ಮತ್ತು ಪಿಂಚಣಿ ಸೇರಿದಂತೆ ಮೂಲಸೌಕರ್ಯ ಅಭಿವೃದ್ಧಿಯೇ ಬಿಎಂಸಿಯ ಪ್ರಮುಖ ವೆಚ್ಚ. 2024ರಲ್ಲಿ ಬಿಎಂಸಿ ತನ್ನ ಆದಾಯದ ಶೇ. 47ರಷ್ಟನ್ನು ಮುಂಬೈಯ ಮೂಲಸೌಕರ್ಯ ಅಭಿವೃದ್ಧಿಗೆ ವ್ಯಯ ಮಾಡಿದೆ. ಕಳೆದ 10 ವರ್ಷಗಳಲ್ಲಿ ನಗರ ನಿರ್ವಹಣೆ ಮತ್ತು ಅಭಿವೃದ್ಧಿಗಾಗಿ 1,11,600 ಕೋಟಿ ರುಪಾಯಿ ವೆಚ್ಚ ಮಾಡಲಾಗಿದೆ.

ಬಿಎಂಸಿ ಆದಾಯ ಮೂಲಗಳು

ಬಿಎಂಸಿಯ ಪ್ರಮುಖ ಆದಾಯ ಮೂಲಗಳೆಂದರೆ ತೆರಿಗೆಗಳು, ಶುಲ್ಕಗಳು, ಅಭಿವೃದ್ಧಿ ಶುಲ್ಕಗಳು ಹಾಗೂ ಹೂಡಿಕೆಗಳು. 2024-25ರಲ್ಲಿ ಬಿಎಂಸಿಯ ಆದಾಯವನ್ನು 35,749.03 ಕೋಟಿ ರುಪಾಯಿಯಿಂದ 40,693.85 ಕೋಟಿ ರುಪಾಯಿಗೆ ಪರಿಷ್ಕರಿಸಲಾಯಿತು. 2024ರ ಡಿಸೆಂಬರ್ 31ರವರೆಗೆ ಸಂಗ್ರಹಿಸಲಾದ ಆದಾಯ 28,308.37 ಕೋಟಿ ರುಪಾಯಿ. 2025-26 ಸಾಲಿನ ಆದಾಯ 43,159.40 ಕೋಟಿ ರುಪಾಯಿ ಎಂದು ಅಂದಾಜಿಸಲಾಗಿದ್ದು, ಇದು 2024-25ರ ಪ್ರಾರಂಭಿಕ ಅಂದಾಜಿಗಿಂತ ಸುಮಾರು ಶೇ. 20.73ರಷ್ಟು ಹೆಚ್ಚು. 2024-25ರಲ್ಲಿ ಆಸ್ತಿ ತೆರಿಗೆಯ ಮೂಲ ಅಂದಾಜು 4,950 ಕೋಟಿ ರುಪಾಯಿ ಆಗಿದ್ದು, ಅದನ್ನು 6,200 ಕೋಟಿ ರುಪಾಯಿಗೆ ಹೆಚ್ಚಿಸಲಾಯಿತು. 2025-26ರಲ್ಲಿ ಆಸ್ತಿ ತೆರಿಗೆ ಆದಾಯವನ್ನು 5,200 ಕೋಟಿ ರುಪಾಯಿ ಎಂದು ಅಂದಾಜಿಸಲಾಗಿದೆ.

ಅಮೆರಿಕದಿಂದ 2025ರಲ್ಲಿ 8,000 ವಿದ್ಯಾರ್ಥಿಗಳು ಸೇರಿದಂತೆ ರದ್ದಾಗಿರುವುದು 1 ಲಕ್ಷಕ್ಕೂ ಹೆಚ್ಚು ವೀಸಾ

ಒಂದು ಲಕ್ಷಕ್ಕೂ ಹೆಚ್ಚು ಅಮೆರಿಕ ವೀಸಾ ರದ್ದು

ವಾಷಿಂಗ್ಟನ್: ವಲಸೆಯನ್ನು ಹತ್ತಿಕ್ಕುವ ವ್ಯಾಪಕ ಪ್ರಯತ್ನಗಳ ಭಾಗವಾಗಿ, ಅಮೆರಿಕ 2025ರಲ್ಲಿ ಒಂದು ಲಕ್ಷಕ್ಕೂ ಹೆಚ್ಚು ವೀಸಾಗಳನ್ನು ರದ್ದುಗೊಳಿಸಿದೆ. ಇದರಲ್ಲಿ ಸುಮಾರು 8,000 ವಿದ್ಯಾರ್ಥಿಗಳ ವೀಸಾಗಳು ಸೇರಿದೆ ಎಂದು ಅಂಕಿ-ಅಂಶಗಳು ತಿಳಿಸಿವೆ. ಇದೊಂದು ದಾಖಲೆ ಸಂಖ್ಯೆಯ ವೀಸಾ ರದ್ದತಿ ಆಗಿದ್ದು, 2024ರಲ್ಲಿ ಅಧ್ಯಕ್ಷರಾಗಿದ್ದ ಜೋ ಬೈಡನ್ ಅವರ ಆಡಳಿತದ ಕೊನೆಯ ವರ್ಷದಲ್ಲಿ ರದ್ದುಗೊಂಡ ವೀಸಾಗಳ ಸಂಖ್ಯೆಯ ಎರಡು ಪಟ್ಟು ಹೆಚ್ಚಾಗಿದೆ.

ರದ್ದುಗೊಂಡ ವೀಸಾಗಳಲ್ಲಿ ಸುಮಾರು 8,000 ವಿದ್ಯಾರ್ಥಿ ವೀಸಾಗಳು ಮತ್ತು ಕ್ರಿಮಿನಲ್ ಚಟುವಟಿಕೆಗೆ ಸಂಬಂಧಿಸಿದಂತೆ ಅಮೆರಿಕದ ಕಾನೂನು ಜಾರಿ ಸಂಸ್ಥೆಗಳೊಂದಿಗೆ ಈ ಹಿಂದೆ ಮುಖಾಮುಖಿಯಾಗಿದ್ದ 2,500 ವಿಶೇಷ ವೀಸಾಗಳು ಸೇರಿವೆ ಎಂದು ಮೂಲಗಳು ತಿಳಿಸಿವೆ.

ಅಮೆರಿಕವನ್ನು ಸುರಕ್ಷಿತವಾಗಿಡಲು ನಾವು ಗಡೀಪಾರು ಮಾಡುವುದನ್ನು ಮುಂದುವರಿಸುತ್ತೇವೆ ಎಂದು ಸರಕಾರ ಹೇಳಿದೆ. ಟ್ರಂಪ್ ವಿದೇಶಿ ಪ್ರಜೆಗಳ ಪರಿಶೀಲನೆಯನ್ನು ಬಿಗಿಗೊಳಿಸಿದ ಕಾರ್ಯಕಾರಿ ಆದೇಶದ ನಂತರ ವೀಸಾ ರದ್ದತಿಯಲ್ಲಿ ಹೆಚ್ಚಳ ಕಂಡುಬಂದಿದೆ. 2024ರಲ್ಲಿ 40,000 ವೀಸಾಗಳನ್ನು ರದ್ದು ಮಾಡಲಾಗಿತ್ತು. 2025ರಲ್ಲಿ ಹೆಚ್ಚು ಪ್ರಮಾಣದಲ್ಲಿ ರದ್ದತಿಯಾದ ವೀಸಾಗಳು ವ್ಯಾಪಾರ ಮತ್ತು ಪ್ರವಾಸಿ ವೀಸಾಗಳಾಗಿದ್ದು, ಅವರೆಲ್ಲ ವೀಸಾ ಅವಧಿ ಮುಗಿದ ನಂತರವೂ ಅಲ್ಲಿಯೇ ಉಳಿದುಕೊಂಡಿದ್ದರು.

ವಿಶೇಷ ಕಾರ್ಮಿಕರಲ್ಲಿ ಸುಮಾರು ಅರ್ಧದಷ್ಟು ಪ್ರಕರಣ ಕುಡಿದು ವಾಹನ ಚಲಾಯಿಸಿದ ಬಂಧನಗಳಿಗೆ ಸಂಬಂಧಿಸಿದೆ, ಜತೆಗೆ ಇತರರ ಮೇಲೆ ಹಲ್ಲೆ, ಕಳ್ಳತನ, ಮಕ್ಕಳ ಮೇಲಿನ ದೌರ್ಜನ್ಯ, ಮಾದಕವಸ್ತು ಸಂಬಂಧಿತ ಅಪರಾಧಗಳು, ವಂಚನೆ ಮತ್ತು ದುರುಪಯೋಗ ಒಳಗೊಂಡಿವೆ.

ವರದಿಯೊಂದರ ಪ್ರಕಾರ, ಸುಮಾರು 500 ವಿದ್ಯಾರ್ಥಿಗಳು ಮಾದಕ ವಸ್ತುಗಳನ್ನು ಹೊಂದಿರುವುದು ಹಾಗೂ ವಿತರಣೆ ಮಾಡಿದ ಆರೋಪದ ಹಿನ್ನೆಲೆಯಲ್ಲಿ ತಮ್ಮ ವೀಸಾಗಳನ್ನು ಕಳೆದುಕೊಂಡಿದ್ದಾರೆ. ಅದೇ ವೇಳೆ, ಮಕ್ಕಳ ಮೇಲಿನ ದೌರ್ಜನ್ಯ ಆರೋಪಗಳ ಹಿನ್ನೆಲೆ ನೂರಾರು ವಿದೇಶಿ ಕಾರ್ಮಿಕರಿಂದ ವೀಸಾಗಳನ್ನು ರದ್ದು ಪಡಿಸಲಾಗಿದೆ. ಅರ್ಜಿದಾರರಿಗೆ ವೀಸಾ ನಿರಾಕರಿಸಲು ಅಧಿಕಾರಿಗಳಿಗೆ ಅವಕಾಶ ನೀಡುವ ಸಾರ್ವಜನಿಕ ಶುಲ್ಕ ನೀತಿಯನ್ನು ಜಾರಿಗೊಳಿಸುವುದು ಸೇರಿದಂತೆ ಇಲಾಖೆ ವೀಸಾ ನಿಯಮಗಳನ್ನು ಬಿಗಿಗೊಳಿಸಿದೆ. ಟ್ರಂಪ್ ಆಡಳಿತವು ಅಕ್ರಮ ಮತ್ತು ಕಾನೂನುಬದ್ಧವಲ್ಲದ ವಲಸೆಯ ವಿರುದ್ಧ ಕಠಿಣ ಕ್ರಮಗಳನ್ನು ತೀವ್ರಗೊಳಿಸಿದೆ. ಉದ್ಯೋಗ ಅಥವಾ ಅಧ್ಯಯನಕ್ಕಾಗಿ ಅಮೆರಿಕಕ್ಕೆ ಪ್ರವೇಶಿಸಲು ಬಯಸುವ ವ್ಯಕ್ತಿಗಳಿಗೆ ನಿಯಮಗಳನ್ನು ಬಿಗಿಗೊಳಿಸಿದೆ. ಡಿಸೆಂಬರ್ 15ರಿಂದ ವಿದೇಶಾಂಗ ಇಲಾಖೆಯು ಸಾಮಾಜಿಕ ಮಾಧ್ಯಮಗಳ ಪರಿಶೀಲನೆ ಸೇರಿದಂತೆ ಎಚ್-1 ಬಿ ಮತ್ತು ಅವಲಂಬಿತ ಎಚ್-4 ವೀಸಾ ಅರ್ಜಿದಾರರ ವರ್ಧಿತ ಸ್ಕ್ರೀನಿಂಗ್ ಅನ್ನು ಪ್ರಾರಂಭಿಸಿತು. ಭಾರತದಾದ್ಯಂತ ನಿಗದಿಯಾಗಿದ್ದ ಹಲವಾರು ಎಚ್-1ಬಿ ವೀಸಾ ಸಂದರ್ಶನಗಳನ್ನು ಮುಂದೂಡಲಾಗಿದ್ದು, ವೀಸಾ ಸ್ಟ್ಯಾಂಪಿಂಗ್‌ಗಾಗಿ ಪ್ರಯಾಣಿಸಿದ್ದ ಅನೇಕ ಅರ್ಜಿದಾರರು ತಿಂಗಳುಗಟ್ಟಲೆ ಅಸಹಾಯಕ ಸ್ಥಿತಿಯಲ್ಲಿ ಸಿಲುಕಿದ್ದಾರೆ.

ಅಮೆರಿಕಾ ಧೋರಣೆ

ಟ್ರಂಪ್ ಆಡಳಿತವು ಅಮೆರಿಕ ನಂಬರ್ ಒನ್ ಸ್ಥಾನದಲ್ಲಿ ಮುಂದುವರಿಯುವುದನ್ನು ಬಯಸುತ್ತದೆ ಮತ್ತು ಸಾರ್ವಜನಿಕ ಸುರಕ್ಷತೆ ಅಥವಾ ರಾಷ್ಟ್ರೀಯ ಭದ್ರತೆಗೆ ಅಪಾಯವನ್ನುಂಟು ಮಾಡುವ ವಿದೇಶಿ ಪ್ರಜೆಗಳಿಂದ ನಮ್ಮ ರಾಷ್ಟ್ರವನ್ನು ರಕ್ಷಿಸುತ್ತದೆ' ಎಂದು ಅಮೆರಿಕ ರಾಜ್ಯ ಆಡಳಿತದ ಪ್ರಧಾನ ಉಪ ವಕ್ತಾರ ಟಾಮಿ ಪಿಗ್ಗಾಟ್ ಹೇಳಿದರು.

ಆಪರೇಷನ್ ಸಿಂದೂರ್ ಚಾಲ್ತಿಯಲ್ಲಿದೆ: ದ್ವಿವೇದಿ

ದೆಹಲಿ: ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರ(ಪಿಒಕೆ)ದಲ್ಲಿರುವ ಭಯೋತ್ಪಾದಕ ಸಂಘಟನೆಗಳ ಶಿಬಿರಗಳನ್ನು ಗುರಿಯಾಗಿಸಿ ಭಾರತದ ಸೇನಾಪಡೆಗಳಿಂದ 2025ರಲ್ಲಿ ನಡೆಸಲಾದ 'ಆಪರೇಷನ್ ಸಿಂದೂರ' ಕಾರ್ಯಾಚರಣೆ ಕೊನೆಗೊಂಡಿಲ್ಲ, ಈಗಲೂ ಅದು ಚಾಲ್ತಿಯಲ್ಲಿದೆ ಎಂದು ಭಾರತೀಯ ಸೇನಾಪಡೆ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಮಂಗಳವಾರ ಹೇಳಿದ್ದಾರೆ. ದೆಹಲಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಜನರಲ್ ದ್ವಿವೇದಿ, ನೆರೆ ರಾಷ್ಟ್ರವೇನಾದರೂ ಭವಿಷ್ಯದಲ್ಲಿ ದುಸ್ಸಾಹಸ ಮಾಡಿದರೆ ಅದರ ಪರಿಣಾಮವನ್ನು ಆ ದೇಶ ಎದುರಿಸಲೇಬೇಕಾಗುತ್ತದೆ ಎಂದು ಎಚ್ಚರಿಕೆ ಸಂದೇಶ ರವಾನಿಸಿದ್ದಾರೆ. 'ಆಪರೇಷನ್ ಸಿಂದೂರ್' ವೇಳೆ ಭಾರತೀಯ ಸೇನಾಪಡೆ ತನ್ನ ಸೈನಿಕರನ್ನು ಎಲ್ಲಾ ರೀತಿಗಳಿಂದಲೂ ಸಜ್ಜುಗೊಳಿಸಿತ್ತು. ಪಾಕ್ ಏನಾದರೂ ತಪ್ಪು ಹೆಜ್ಜೆ ಇಟ್ಟಿದ್ದರೆ ನೇರ ಕಾರ್ಯಾಚರಣೆಗೆ ಇಳಿದು ಅದಕ್ಕೆ ತಕ್ಕ ಪಾಠ ಕಲಿಸುತ್ತಿತ್ತು ಎಂದು ಹೇಳಿದರು. 2025ರ ಮೇ 10ರ ಸಂಜೆ 5 ಗಂಟೆಯಿಂದ ಕದನ ವಿರಾಮ ಜಾರಿ ಆದಾಗಿನಿಂದ ಜಮ್ಮು-ಕಾಶ್ಮೀರದಲ್ಲಿನ ಪರಿಸ್ಥಿತಿ ಸೂಕ್ಷ್ಮವಾಗಿಯೇ ಇದೆ. ಆದರೆ ನಿಯಂತ್ರಣದಲ್ಲಿದೆ ಎಂದ ಜನರಲ್ ದ್ವಿವೇದಿ, ಜಮ್ಮು-ಕಾಶ್ಮೀರ ಭಾಗದಲ್ಲಿ ಚಟುವಟಿಕೆಯಲ್ಲಿರುವ ಸ್ಥಳೀಯ ಉಗ್ರರ ಸಂಖ್ಯೆ ಈಗ ಒಂದಂಕಿಗೆ ಇಳಿದಿದೆ ಎಂದು ವಿಶ್ವಾಸದಿಂದ ಹೇಳಿದರು.

ಅರ್ಥಧಾರಿಗಳಿಗೆ ಅವಹೇಳನ: ಕ್ಷಮೆಯಾಚನೆಗೆ ಆಗ್ರಹ

ಉಡುಪಿ: ನಾಡಿನ ಶ್ರೇಷ್ಠ ಕಲೆಯಾಗಿರುವ ತಾಳ ಮದ್ದಳೆ ಹಾಗೂ ಅರ್ಥಧಾರಿಗಳ ಬಗ್ಗೆ ಅವಹೇಳನ ಕಾರಿ ಬರಹಗಳನ್ನು ಪ್ರಕಟಿಸಿರುವ ವಿಶ್ವವಾಣಿ ಪತ್ರಿಕೆ ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್ ಅವರು ಸಾರ್ವಜನಿಕವಾಗಿ ಕ್ಷಮೆ ಯಾಚಿಸಬೇಕು ಎಂದು ತಾಳ ಮದ್ದಳೆ ಕಲಾವಿದರು ಆಗ್ರಹಿಸಿದ್ದಾರೆ.

ಉಡುಪಿಯ ಯಕ್ಷಗಾನ ಕಲಾರಂಗದಲ್ಲಿ ಮಂಗಳ ವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ತಾಳಮದ್ದಳೆ ಕಲಾವಿದರು, ವಿಶ್ವೇಶ್ವರ ಭಟ್ ಅವರು ತಮ್ಮ ಪತ್ರಿಕೆಯ 'ಭಟ್ಟರ್ ಸ್ಕಾಚ್' ಪ್ರಶೋತ್ತರ ಅಂಕಣದಲ್ಲಿ ಯಕ್ಷಗಾನ ವಿದ್ವಾಂಸ, ಖ್ಯಾತ ಅರ್ಥಧಾರಿ ಡಾ. ಎಂ. ಪ್ರಭಾಕರ ಜೋಶಿ ವಿರುದ್ಧ ತಾಳಮದ್ದಳೆ ಅರ್ಥಧಾರಿಗಳ ಕುರಿತು ನಿರಂತರ ವಾಗಿ ಅಸಂಬದ್ಧ, ಅವಮಾನಕಾರಿ ಬರಹಗಳನ್ನು ಬರೆಯುತ್ತಿದ್ದಾರೆ ಎಂದವರು ಅಸಮಾಧಾನ ಹೊರ ಹಾಕಿದರು. ನಾವು ಅರ್ಥಧಾರಿಗಳೆಂಬ ಕಾರಣಕ್ಕೆ ನಮ್ಮ ಬಗ್ಗೆ ಏನು ಹೇಳಿದರೂ ಅದು ವಿಮರ್ಶೆ ಎಂಬ ಹೆಸರಿನಲ್ಲಿ ಸಹಿಸಲೇಬೇಕು ಎಂಬ ತಾತ್ಸಾರ ಧೋರಣೆ ಸಮಾಜದಲ್ಲಿ ಮೂಡಬಾರದು. ಪತ್ರಕರ್ತರಾದ ವಿಶ್ವೇಶ್ವರ ಭಟ್ಟರು ಪತ್ರಿಕಾ ಧರ್ಮ ವನ್ನು ಮೀರಿದ ರೀತಿಯಲ್ಲಿ ವರ್ತಿಸುತ್ತಿದ್ದಾರೆ ಎಂದು ದೂರಿದರು.

ಡಾ.ಎಂ.ಪ್ರಭಾಕರ ಜೋಶಿ ಮಾತನಾಡಿ, ಕಲೆ ಮತ್ತು ಕಲಾವಿದರ ಕುರಿತಾದ ಸಭ್ಯ ವಿಮರ್ಶೆಗೆ ನಾವು ಸದಾ ತೆರೆದ ಮನಸ್ಸಿನಿಂದ ಸಿದ್ಧರಿದ್ದೇವೆ. ಆದರೆ, ವಿಮರ್ಶೆಯ ಹೆಸರಿನಲ್ಲಿ ಕಲಾವಿದರ ತೇಜೋವಧೆ ಮಾಡುವುದು, ಪತ್ರಿಕಾಧರ್ಮಕ್ಕೆ ವಿರುದ್ಧ. ತಾಳಮದ್ದಳೆಯಂತಹ ಶ್ರೇಷ್ಠ ಕಲೆಯನ್ನು ಅರಿಯದೇ ಅವಹೇಳನ ಮಾಡುವುದು ನೋವಿನ ಸಂಗತಿ ಎಂದರು.

ಸುದ್ದಿಗೋಷ್ಠಿಯಲ್ಲಿ ಕಲಾವಿದರಾದ ಸರ್ಪಂಗಳ ಈಶ್ವರ ಭಟ್, ಗಣೇಶ್ ಶೆಟ್ಟಿ ಕನ್ನಡಿಕಟ್ಟೆ, ವಿದ್ವಾನ್ ಉಮಾಕಾಂತ ಭಟ್, ಹಿರಣ್ಯ ವೆಂಕಟೇಶ ಭಟ್, ಸುಣ್ಣಂಬಳ ವಿಶ್ವೇಶ್ವರ ಭಟ್, ಅಶೋಕ್ ಭಟ್ ಉಜಿರೆ, ರಾಧಾಕೃಷ್ಣ ಕಲ್ಚಾರ್, ಜಯಪ್ರಕಾಶ್ ಶೆಟ್ಟಿ ಪೆರ್ಮುದೆ, ಹರೀಶ್ ಬಳಂತಿಮುಗರು, ವಾಸುದೇವ ರಂಗಾ ಭಟ್, ಡಾ. ಪ್ರದೀಪ್ ಸಾಮಗ, , ಪವನ್ ಕಿರಣ್ಕೆರೆ, ದಿನೇಶ್ ಶೆಟ್ಟಿ ಕಾವಳಕಟ್ಟೆ, ಕಲಾರಂಗದ ಗಂಗಾಧರ ರಾವ್, ಮುರಳಿ ಕಡೆಕಾರ್, ನಾರಾಯಣ ಹೆಗ್ಡೆ ಇದ್ದರು.

ಸಂಗಮನಾಥನ ದರ್ಶನ ಪಡೆದ ಮಹಾ ಮಾಜಿ ಸಿಎಂ ಶಿಂಧೆ

ಬಾಗಲಕೋಟೆ: ಜಿಲ್ಲೆಯ ಕೂಡಲ ಸಂಗಮಕ್ಕೆ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರದ ಮಾಜಿ ಗೃಹ ಸಚಿವ ಸುಶೀಲ ಕುಮಾರ ಶಿಂಧೆ ಭೇಟಿ ನೀಡಿದರು.

ಸುಶೀಲ ಕುಮಾರ ಶಿಂಧೆ ಅವರೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಇಬ್ಬರು ಗಣ್ಯರು ಜಗಜ್ಯೋತಿ ಬಸವೇಶ್ವರರ ಐಕ್ಯ ಮಂಟಪದಲ್ಲಿ ಮತ್ತು ಕೂಡಲ ಸಂಗಮೇಶ್ವರರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬಸವಣ್ಣನವರ ಆದರ್ಶಗಳಾದ ಕಾಯಕ, ದಾಸೋಹ, ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಮಹತ್ವ ವನ್ನು ಸ್ಮರಿಸಿದರು. ಕೂಡಲಸಂಗಮವು ಭಾರತೀಯ ಸಂಸ್ಕೃತಿಯ ಪವಿತ್ರ ತೀರ್ಥಕ್ಷೇತ್ರವಾಗಿದ್ದು, ಬಸವೇಶ್ವರರ ಆಧ್ಯಾತ್ಮಿಕ ಜೀವನದ ಪ್ರಮುಖ ಸ್ಥಳವಾಗಿದೆ. ಇಲ್ಲಿ ನಡೆದ ಈ ಪೂಜಾ ಕಾರ್ಯಕ್ರಮವು ಧಾರ್ಮಿಕ ಮತ್ತು ಸಾಮಾಜಿಕ ಸಾಮರಸ್ಯದ ಸಂಕೇತವಾಗಿ ಎಂದು ಗಣ್ಯರು ಅಭಿಪ್ರಾಯ ವ್ಯಕ್ತಪಡಿಸಿದರು.

ಕೂಡಲಸಂಗಮದ ಸಂಗಮನಾಥನ ದರ್ಶನ ಪಡೆದ ಮಹಾರಾಷ್ಟ್ರದ ಮಾಜಿ ಸಿಎಂ ಸುಶೀಲ ಕುಮಾರ ಶಿಂಧೆಗೆ ಸಚಿವ ಆರ್.ಬಿ.ತಿಮ್ಮಾಪುರ ಸಾಥ್ ನೀಡಿದರು.

ಆಂಧ್ರದಿಂದ ಕಡಲೆಕಾಯಿ ಆಗಮನ | ತಮಿಳುನಾಡು ಮಾಳಿಗೆ ಹೂವು ಆವಕ | ಎಳ್ಳು ಬೆಲ್ಲ ದುಬಾರಿ

ಸಂಕ್ರಾಂತಿ ಹಬ್ಬಕ್ಕೆ ಹೂವು, ಹಣ್ಣು ಬೆಲೆ ಏರಿಕೆ

ಈ ಮೊದಲು ಅವರೆಕಾಯಿ, ಕಡಲೆಕಾಯಿ, ಗೆಣಸು, ಹೂವು ಬೆಲೆ ಕಡಿಮೆ ಇತ್ತು. ಹಬ್ಬ ಸಮಿಸುತ್ತಿದ್ದಂತೆ ಪ್ರತಿ ಕಿಲೋಗೆ 20-30 ರು. ಸಹಜವಾಗಿ ಏರಿಕೆಯಾಗಿದೆ, ಎಷ್ಟೇ ದರ ಏರಿಕೆಯಾದರೂ ನಮ್ಮ ಹಿಂದು ಸಂಪ್ರದಾಯದಂತೆ ಹಬ್ಬ ಮಾಡಲೇಕು. -**ಶಿಲ್ಪಾ ಆರ್,** ಗ್ರಾಹಕಿ, ಬೆಂಗಳೂರು

ಆಗಸ್ಟ್ ತಿಂಗಳ ಬಾರೀ ಮಳೆಯಿಂದ ಬೆಳೆ ಇಳುವರಿ ಕುಸಿತ ಕಂಡಿದೆ. ಸರಬರಾಜು ಕಡಿಮೆಯಾಗಿ ಬೆಲೆ ಏರಿಕೆಗೆ ಕಾರಣವಾಗಿದೆ. ಹಾಗಾಗಿ ಈ ಸಂಕ್ರಾಂತಿಗೆ ಗ್ರಾಹಕರು ಕಡಿಮೆ ಪ್ರಮಾಣದಲ್ಲಿ ಖರೀದಿಗೆ ಬರಬಹುದು ಎಂಬ ಆತಂಕ ಕಾಡುತ್ತಿದೆ. -**ಗೋವಿಂದಪ್ಪ,** ವ್ಯಾಪಾರಿ, ಕೆ ಆರ್ ಮಾರುಕಟ್ಟೆ

ಹೂವಪ್ಪ. ಐ. ಹೆಚ್. ಬೆಂಗಳೂರು

ಸುಗ್ಗಿ ಹಬ್ಬ ಸಂಕ್ರಾಂತಿ, ವರ್ಷದ ಮೊದಲನೇ ಹಬ್ಬವೂ ಹೌದು. ಸುಗ್ಗಿ ಹಬ್ಬ ಎಂದೇ ಕರೆಯುವ ಸಂಕ್ರಾಂತಿ ಆಚರಣೆಗೆ ಸಜ್ಜಾಗಿರುವ ಜನರಿಗೆ ಬೆಲೆ ಏರಿಕೆ ಬಿಸಿ ಸರಿಯಾಗಿಯೇ ತಟ್ಟಿದೆ. ಖರೀದಿ ಸಂಭ್ರಮ ಜೋರಾಗಿದೆ. ಬೆಲೆ ಏರಿಕೆ ನಡುವೆಯೂ ನಗರದ ಮಾರುಕಟ್ಟೆಯಲ್ಲಿ ಕಬ್ಬು, ಗೆಣಸು, ಕಡಲೆಕಾಯಿ, ಅವರೇಕಾಯಿ ಮಾರಾಟವು ಭರದಿಂದ ಸಾಗಿದೆ. ಜನರು ಅಳೆದು ತೂಗಿ ಹಬ್ಬದ ಖರೀದಿ ಮಾಡುತ್ತಿದ್ದಾರೆ. ಹೊಸ ವರ್ಷದ ಮೊದಲ ಹಬ್ಬ ಎಂಬ ಕಾರಣಕ್ಕೆ ಅದ್ಧೂರಿ ವ್ಯಾಪಾರ ನಡೆದಿದೆ.

'ಎಳ್ಳು, ಬೆಲ್ಲ ಹಂಚಿ ಒಳ್ಳೆಯ ಮಾತನಾಡು' ಎಂಬ ಉತ್ತಮ ಸಂದೇಶ ಸಾರುವ ಹಬ್ಬಕ್ಕೆ ಶೇಂಗಾ, ಎಳ್ಳು-ಬೆಲ್ಲ, ಹೂವು-ಹಣ್ಣು, ತರಕಾರಿ ಹೀಗೆ ಎಲ್ಲ ಅಗತ್ಯ ವಸ್ತುಗಳ ಏರಿಕೆಯಾಗಿದ್ದು, ಜನರ ಜೇಬಿಗೆ ಕತ್ತರಿ ಬಿದ್ದಿದೆ.

ಬೆಲೆ ದುಬಾರಿ: ಮಾರುಕಟ್ಟೆಯಲ್ಲಿ ಹಬ್ಬಕ್ಕೆ ಬೇಕಾದ ಸರಕುಗಳೆಲ್ಲ ಕಳೆದ ಸಾಲಿಗಿಂತ ಶೇ, 25ರಷ್ಟು ದುಬಾರಿಯಾಗಿವೆ. ಬೆಂಗಳೂರಿನಲ್ಲಿ ಅವರೆಕಾಯಿ ಬೆಲೆ ಸಗಟು ದರ 40-50 ರು.ಇದ್ದು, ಚಿಲ್ಲರೆ ದರ ಪ್ರತಿ ಕೆ.ಜಿ.ಗೆ 70 ರು.ನಿಂದ 80 ರು.ವರೆಗೂ ತಲುಪಿದೆ. ಕಡಲೆಕಾಯಿ ಕೆ.ಜಿಗೆ ಸಗಟು 70-80 ರು. ಚಿಲ್ಲರೆ ದರ 100-110 ರು. ಮಾರಾಟವಾಗುತ್ತಿದೆ. ಕಟಿಂಗ್ ಬೆಲ್ಲ ಕೆ.ಜಿಗೆ ಚಿಲ್ಲರೆ ದರ 90-120 ರು, ಗೆಣಸು 40-60 ರು., ಕಬ್ಬು ಒಂದು ಜಾಲ್ಲಿಗೆ 50-60 ರು. ಅಗತ್ಯ ವಸ್ತುಗಳಾದ ಅಗತ್ಯ ಅಡುಗೆ ಎಣ್ಣೆ ಬೇಳೆ, ಬೇಳೆಕಾಳುಗಳ ಬೆಲೆ ಏರಿಕೆಯಾಗಿದೆ.

ಹೂಗಳ ಬೆಲೆಯೂ ಏರಿಕೆ: ಸೇವಂತಿಗೆ ಹೂವು ಹೊರತುಪಡಿಸಿ ಮಲ್ಲಿಗೆ, ಕಾಕಡ ಸುಗಂಧರಾಜ ಹಿಂದಿನಗಿಂತ ಶೇ.30ರಷ್ಟು ಹೂವು ದರ ಏರಿಕೆಯಾಗಿದೆ, ಹಣ್ಣುಗಳ ಬೆಲೆಯೂ ಏರಿಕೆಯಾಗಿವೆ. ಡಾಲಬ್ರಿ ಕೆ.ಜಿ.ಗೆ 200-250 ರೂ. ಶೇಬು 220-270 ರು. ದ್ರಾಕ್ಷಿ 220-240 ರು. ಏಲಕ್ಕಿ ಬಾಳೆ ಹಣ್ಣು 70-80 ರು.ಆಗಿದೆ. ಹಣ್ಣು, ಹೂವುಗಳಿಗೆ ಹೋಲಿಸಿದರೆ ತರಕಾರಿ ಬೆಲೆಯಲ್ಲಿ ಹೇಳಿಕೊಳ್ಳುವಂತಹ ಏರಿಕೆಯಾಗಿಲ್ಲ.

ಕ್ಯಾರೆಟ್, ಬೀನ್ಸ್, ನುಗ್ಗೆಕಾಯಿ ಹೊರತುಪಡಿಸಿ ಬೆಂಡೆಕಾಯಿ, ಹೂವು ಕೋಸ್, ಎಲೆಕೋಸ್, ಬದನೇಕಾಯಿ, ಬಿಟ್ರೋಟ್, ಮೂಲಂಗಿ ಸೌತೆಕಾಯಿ, ಹಿರೇಕಾಯಿ, ಬಟಾಣಿಕಾಯಿ 30-60 ರು. ಒಳಗೆ ಮಾರಾಟವಾಗುತ್ತಿದೆ. ಕ್ಯಾರೆಟ್, ಬೀನ್ಸ್, ಗೋರಿಕಾಯಿ 60-80 ರು. ಗೆ ಮಾರಟವಾಗುತ್ತಿದೆ.

ಕೆ.ಆರ್. ಮಾರುಕಟ್ಟೆ ದರ

ಪ್ರತಿ ಕೆ. ಹೂವು	
ಸೇವಂತಿಗೆ	50- 120 ರು.
ಕನಕಾಂಬರ	500- 650 ರು.
ಕಾಕಡ ಮಲ್ಲಿಗೆ	400- 550 ರು.
ಗುಂಡು ಮಲ್ಲಿಗೆ	1,400-2,500 ರು.
ಕಣಗಲ	200-300 ರು.
ಗುಲಾಬಿ	140- 170 ರು.

ಕೆ.ಆರ್. ಮಾರುಕಟ್ಟೆ ದರ

ಪ್ರತಿ ಕೆ.ಜಿ ತರಕಾರಿ	
ನುಗ್ಗೆಕಾಯಿ	300-350 ರು.
ಗ್ರೀನ್ ಬಟಾಣಿ	50-60 ರು.
ಬೀನ್ಸ್	60-70 ರು
ತೊಗರಿಕಾಯಿ	60-70 ರು.
ಕ್ಯಾರೆಟ್	60-80 ರು.
ಬೆಂಡೇಕಾಯಿ	50-60 ರು.
ಟೊಮೆಟೊ	30-40 ರು.

ಸಂಕ್ರಾಂತಿ ವಿಶೇಷ ಪರಿಕರಿಗಳು

ಪ್ರತಿ ಕೆ.ಜಿ.ಗೆ	
ಎಳ್ಳು ಬೆಲ್ಲ ಮಿಶ್ರಿತ	400-450 ರು
ಕಡಲೆಕಾಯಿ	100-120 ರು.
ಅವರೆಕಾಯಿ	70-80 ರು.
ಕಟ್ ಮಾಡಿದ ಬೆಲ್ಲ	100-120 ರು.
ಕಟ್ ಮಾಡಿದ ಕೊಬ್ಬರಿ	350-400 ರು.
ಗೆಣಸು	50-60 ರು.
ಏಲಕ್ಕಿ	70-80 ರು.
ಪಚ್ಚಬಾಳೆ	35-40 ರು.

ಎಳ್ಳು ಬೆಲ್ಲ ಮಿಶ್ರಿತ ಪೊಟ್ಟಣಗಳು ವಿವಿಧ ಗಾತ್ರಗಳಲ್ಲಿ ಲಭ್ಯ ಇವೆ. ಸಣ್ಣ ಪೊಟ್ಟಣದ ಒಂದು ಕೆ.ಜಿ.ಯ ಎಳ್ಳುಬೆಲ್ಲ ಮಿಶ್ರಿತ ಪೊಟ್ಟಣದ ದರ 350ರಿಂದ 450 ರು. ಇದೆ. ಅರ್ಧ ಕೆ.ಜಿ ಸಕ್ಕರೆ ಅಚ್ಚು 150ರಂತೆ ಮಾರಾಟವಾಗುತ್ತಿದೆ.

ಬೆಂಗಳೂರಿನ ಪ್ರಮುಖ ರಸ್ತೆಗಳಲ್ಲಿ ತಾತ್ಕಾಲಿಕ ಅಂಗಡಿ ತೆರೆದಿದ್ದರೂ ನಗರದ ಗಾಂಧಿ ಬಜಾರ್ ಯಶವಂತಪುರ, ಮಲ್ಲೇಶ್ವರಂ ಕೋರಮಂಗಲ ಹಾಗೂ ಕೆ.ಆರ್. ಮಾರುಕಟ್ಟೆಯಲ್ಲಿ ಉತ್ತಮ ವ್ಯಾಪಾರ ನಡೆದಿದೆ. ರಾಶಿ ರಾಶಿ ಕಬ್ಬು, ಅವರೇಕಾಯಿ, ಗೆಣಸನ್ನು ವ್ಯಾಪಾರಿಗಳು ಮಾರಾಟ ಮಾಡುತ್ತಿದ್ದು, ಹಬ್ಬಗಳಲ್ಲಿ ಬೆಳೆ ಏರಿಕೆ ಸಹಜ, ಹೀಗಾಗಿ ಗ್ರಾಹಕರು ಅಳೆದು ತೂಗಿ ಚೌಕಾಸಿ ಮಾಡಿ ಖರೀದಿ ಮಾಡುತ್ತಿದ್ದಾರೆ ಎನ್ನುತ್ತಾರೆ ಮಲ್ಲೇಶ್ವರಂ ವ್ಯಾಪಾರಿ ಸಂತೋಷ್ ಕುಮಾರ.

ನೆಲಗಡಲೆ ಕಬ್ಬು ಬೇಡಿಕೆ: ಸಂಕ್ರಾಂತಿ ಹಬ್ಬಕ್ಕೆ ವಿಶೇಷ ಎಂದರೆ ಕಡಲೆಕಾಯಿ, ಕಬ್ಬು. ಅದರಲ್ಲೂ ಕರಿಕಬ್ಬಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ. ನಮ್ಮ ರಾಜ್ಯದಲ್ಲಿ ಇದನ್ನು ಹೆಚ್ಚಾಗಿ ಬೆಳೆಯುವುದಿಲ್ಲ. ತಮಿಳುನಾಡಿನಿಂದ ಈ ಕಬ್ಬು ಹೆಚ್ಚಿನ ಪ್ರಮಾಣದಲ್ಲಿ ಸರಬರಾಜಾಗುತ್ತಿದೆ. ಇನ್ನೊಂದೆಡೆ, ನೆಲಗಡಲೆ ನಮ್ಮಲ್ಲಿ ಬೆಳೆದರೂ ಆಂಧ್ರಪ್ರದೇಶದಿಂದ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದು, ಹಬ್ಬದ ಕಾರಣ ಬೆಲೆಯಲ್ಲೂ ಏರಿಕೆಯಾಗಿದೆ ಎಂದು ಹೇಳುತ್ತಾರೆ ಕಡಲೆಕಾಯಿ ವ್ಯಾಪಾರಿ ಸುಂದರ್. ಹಬ್ಬದ ದಿನ ನೆಲಗಡಲೆ ಜೊತೆ ಅವರೇಕಾಯಿಯನ್ನು ಬೇಯಿಸಿ ತಿನ್ನುವುದು ಸಂಪ್ರದಾಯ. ಈಗಲೂ ಈ ನಿಯಮ ಮುಂದುವರಿದಿದೆ.

ಹಳ್ಳಿಗಳಲ್ಲಿ ಹಳೇ ಸೊಗಡಿನಲ್ಲೆ ಹಬ್ಬ: ಈ ಬಾರಿ ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿತ್ತು. ಹೀಗಾಗಿ ಹೊಸ ವರ್ಷದ ಮೊದಲ ಹಬ್ಬ ಸಂಕ್ರಾಂತಿಯನ್ನು ಭರ್ಜರಿಯಾಗಿ ಆಚರಿಸಲು ಜನರು ಸಿದ್ಧತೆಗಳನ್ನು ನಡೆಸಿದ್ದಾರೆ. ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಸಂಕ್ರಾಂತಿ ಹಬ್ಬವನ್ನು ಅದ್ದೂರಿಯಾಗಿ ಆಚರಿಸುತ್ತಿದ್ದು, ಈಗಲೂ ಕೆಲವು ಗಳು ನಡೆಯುತ್ತಿರುವುದು ವಿಶೇಷ.

ದರ್ಭಾಂಗ ರಾಜಮನೆತನದ ಅಧ್ಯಾಯ ಅಂತ್ಯ

ಪಾಟ್ನಾ: ದರ್ಭಾಂಗ ರಾಜಮನೆತನದ ಕೊನೆಯ ಮಹಾರಾಣಿ ಕಾಮಸುಂದರಿ ದೇವಿ ಸೋಮವಾರ ನಿಧನರಾಗಿದ್ದಾರೆ. ದಶಕಗಳಿಂದ, ದರ್ಭಂಗಾ ಎಸ್ಟೇಟ್ ದೇಶದ ಅತ್ಯಂತ ಶ್ರೀಮಂತ ರಾಜ ಕುಟುಂಬಗಳಲ್ಲಿ ಒಂದಾಗಿತ್ತು. ಅವರ ಸಾವು ದರ್ಭಂಗಾ ರಾಜಮನೆತನಕ್ಕೆ ಮಾತ್ರವಲ್ಲದೆ, ವಿಶಾಲವಾದ ಮಿಥಿಲಾಂಚಲ್ ಪ್ರದೇಶಕ್ಕೂ ಒಂದು ಗೌರವಾನ್ವಿತ ಅಧ್ಯಾಯದ ಅಂತ್ಯವನ್ನು ಸೂಚಿಸುತ್ತದೆ. ದರ್ಭಾಂಗ ರಾಜಮನೆತನವು ರಾಷ್ಟ್ರೀಯ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ, ವಿಶೇಷವಾಗಿ 1962ರ ಭಾರತ-ಚೀನಾ ಯುದ್ಧದ ಸಮಯದಲ್ಲಿ ಅವರ ಕೊಡುಗೆ ಅಪಾರವಾಗಿದೆ.

ರಾಷ್ಟ್ರೀಯ ಬಿಕ್ಕಟ್ಟಿನ ಸಂದರ್ಭದಲ್ಲಿ ಸರಕಾರವು ನಾಗರಿಕರಿಗೆ ಬೆಂಬಲಕ್ಕಾಗಿ ಮನವಿ ಮಾಡಿದಾಗ, ಮೊದಲು ಪ್ರತಿಕ್ರಿಯಿಸಿದವರು ದರ್ಭಂಗಾ ರಾಜಮನೆತನವಾಗಿದೆ. ಆ ಮನೆತನ ರಾಷ್ಟ್ರದ ರಕ್ಷಣೆಗಾಗಿ ಭಾರತ-ಚೀನಾ ಯುದ್ಧದ ಸಂದರ್ಭದಲ್ಲಿ ಸುಮಾರು 600 ಕೆ.ಜಿ ಚಿನ್ನವನ್ನು ಸರಕಾರಕ್ಕೆ ಯುದ್ಧ ನಿಧಿಯ ರೂಪದಲ್ಲಿ ನೀಡಿತ್ತು, ಇದಲ್ಲದೆ ಅವರು ಮೂರು ಖಾಸಗಿ ವಿಮಾನಗಳು ಮತ್ತು 90 ಎಕರೆ ಖಾಸಗಿ ವಿಮಾನ ನಿಲ್ದಾಣವನ್ನು ಸರಕಾರಕ್ಕೆ ಹಸ್ತಾಂತರಿಸಿದರು. ಇಂದಿನ ದರ್ಭಾಂಗಾ ವಿಮಾನ ನಿಲ್ದಾಣವು ಅದೇ ಭೂಮಿಯಲ್ಲಿದೆ. ಇತಿಹಾಸಕಾರರು ಈ ಕೃತ್ಯವನ್ನು ಭಾರತೀಯ ರಾಜ್ಯಕ್ಕೆ ನೀಡಿದ ಅತ್ಯಂತ ಮಹತ್ವದ ರಾಜ ಕೊಡುಗೆಗಳಲ್ಲಿ ಒಂದೆಂದು ಬಣ್ಣಿಸಿದ್ದಾರೆ.

ಸ್ವಾತಂತ್ರ್ಯ ಚಳವಳಿಯ ಆರಂಭಿಕ ವರ್ಷಗಳಲ್ಲಿ, ದರ್ಭಂಗಾ ರಾಜಮನೆತನವು ಮಹಾತ್ಮ ಗಾಂಧಿಯವರಿಗೆ ನಿರ್ಣಾಯಕ ಬೆಂಬಲವನ್ನು ನೀಡಿತ್ತು. ಮಹಾರಾಜ ಲಕ್ಷ್ಮೇಶ್ವರ ಸಿಂಗ್ ಆರ್ಥಿಕ ನೆರವು ನೀಡುವುದಲ್ಲದೆ, ಚಳುವಳಿಯನ್ನು ಸಕ್ರಿಯವಾಗಿ ಉತ್ತೇಜಿಸಿದರಲ್ಲದೆ, ನ್ಯಾಷನಲ್ ಕಾಂಗ್ರೆಸ್ ಪಕ್ಷದ ಜತೆ ಗುರುತಿಸಿಕೊಂಡಿದ್ದರು.1

ಅನುದಿನವೂ ವಿರಾಮಕ್ಕೆ ಒಂದು ನೆಪ
ಆರಾಮ
ವಿಶ್ವವಾಣಿ
@vishwavaninews
ಬೆಂಗಳೂರು
14-01-2026 ಬುಧವಾರ

ಮನುಕುಲಕ್ಕೆ ವರವೋ ಇಲ್ಲ ಶಾಪವೋ?



ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
naasomeswara@gmail.com

ಮಾನವನ ಇತಿಹಾಸವು ಯಾವಾಗಲೂ ರಾಜಮಹಾರಾಜರನ್ನು, ಮಹಾ ದಂಡನಾಯಕರನ್ನು ಹಾಗೂ ಪುರಾಣ ಪುಣ್ಯಪುರುಷರನ್ನು ನೆನಪಿನಲ್ಲಿ ಇಟ್ಟುಕೊಳ್ಳುತ್ತದೆ. ನೇಗಿಲನ್ನು ಕಂಡುಹಿಡಿದವನನ್ನಾಗಲಿ, ಕಪಿಲೆಯನ್ನು ಕಂಡುಹಿಡಿದವನನ್ನಾಗಲಿ, ಮದ್ಯಸಾರವನ್ನು ಮೊದಲ ಬಾರಿಗೆ ತಯಾರಿಸಿದವನನ್ನಾಗಲಿ ಯಾರೂ ನೆನಪಿನಲ್ಲಿ ಇಟ್ಟುಕೊಳ್ಳುವುದಿಲ್ಲ. ಆದರೆ ವಿಜ್ಞಾನಿಗಳಲ್ಲಿ ಕೆಲವರು ತಮಗರಿವಿಲ್ಲದಂತೆಯೇ ತಾವು ಕಂಡುಹಿಡಿದುದನ್ನು ಮುಂದುವರಿಸಲಾಗದೆ, ಅಲ್ಲಿಯೇ ಬಿಟ್ಟು ಮುಂದೆ ಹೋಗಲಾಗದೆ ತೊಳಲಿದ ಘಟನೆಗಳು ನಡೆದಿವೆ. ಅಂಥವರಲ್ಲಿ ಒಬ್ಬ ಡಾ. ಆಲ್ಬರ್ಟ್ ಹಾಫ್ಮನ್ (1906–2008). 1943. ಸ್ವಿಜ಼ರ್ಲೆಂಡಿನ ಬಾಸೆಲ್ ಪ್ರದೇಶದಲ್ಲಿದ್ದ ಒಂದು ಸಾಮಾನ್ಯ ಪ್ರಯೋಗಾಲಯ. ಮಾನವ ಪ್ರಜ್ಞೆಯನ್ನು (ಹ್ಯೂಮನ್ ಕಾನ್ಷಿಯಸ್ನೆಸ್) ಬದಲಾಯಿಸುವ ಯಾವುದೇ ಉದ್ದೇಶವಿಲ್ಲದೆ ಸಂಶೋಧನೆಯಲ್ಲಿ ತೊಡಗಿದ್ದ. ಆದರೆ ಅವನಿಗರಿವಿಲ್ಲದಂತೆಯೇ ಅದು ಘಟಿಸಿಯೇ ಬಿಟ್ಟಿತು. ಎಂದೆಂದಿಗೂ ಬದಲಾಯಿಸಲಾಗದಂತೆ ನಡೆದೇಹೋಯಿತು. ಆತ 'ಲೈಸರ್ಜಿಕ್ ಆಸಿಡ್ ಡೈಈಥೈಲಮೈಡ್ 'ಎಂಬ ರಾಸಾಯನಿಕವನ್ನು ಪ್ರಯೋಗಾಲಯದಲ್ಲಿ ಸೃಜಿಸಿದ್ದ. ಈ ರಾಸಾಯನಿಕದ ಹೆಸರನ್ನು ಕೇಳಿದರೆ, ಅದರ ಮಹತ್ವವು ಥಟ್ ಅಂತ ನಮಗೆ ಅರ್ಥವಾಗದಿರಬಹುದು. ಅದರ ಸಂಕ್ಷಿಪ್ತ ರೂಪವಾದ 'ಎಲ್ಎಸ್‌ಡಿ' ಎಂದರೆ ಅದು ಬಹಳಷ್ಟು ಜನರಿಗೆ ಪರಿಚಿತವಾದದ್ದಾಗಿರುತ್ತದೆ. ಆಧುನಿಕ ವಿಜ್ಞಾನದಲ್ಲಿ ಎಲ್ಎಸ್‌ಡಿಯ ಕಥನವು ಅಪರೂಪವಾದದ್ದು. ಸ್ವಲ್ಪ ಆಕಸ್ಮಿಕ, ಸ್ವಲ್ಪ ಅಂತಃಪ್ರಜ್ಞೆ (ಇಂಟ್ಯೂಶನ್) ಹಾಗೂ ಸ್ವಲ್ಪ ಸಾಹಸದಿಂದ ಬೆಳಕಿಗೆ ಬಂದಿತು. ಇದು ಕೇವಲ ಔಷಧ ಒಂದರ ಕಥೆಯಲ್ಲ. ಇದು ಮನುಷ್ಯನ ಕುತೂಹಲದ ಕಥೆ. ಮನುಷ್ಯನ ವಿಭ್ರಮಚಿತ್ರಗಳ ಗ್ರಹಿಕೆಯ ಕಥೆ. ಸಾಂಸ್ಕೃತಿಕ ಮೌಲ್ಯಗಳ ಅಲ್ಲೋಲ ಕಲ್ಲೋಲ ಕಥೆ. ಇದೊಂದು ದುಃಸ್ವಪ್ನವೆಂಬಂತೆ ವಿಜ್ಞಾನವು ಆಗಾಗ್ಗೆ ಮರೆತುಹೋದರೂ, ಪ್ರಜ್ಞಾಪೂರ್ವಕವಾಗಿ, ಮತ್ತೆ ಮತ್ತೆ ಕಂಡುಹಿಡಿಯುವ ಒತ್ತಡಕ್ಕೆ ಒಳಗಾದದ್ದು ಒಂದು ವಿಪರ್ಯಾಸವೇ ಸರಿ!

ಮಾನವನ ಮಿದುಳು: ಮನುಷ್ಯನ ಮಿದುಳಿನಲ್ಲಿ ಎರಡು ಪ್ರಧಾನ ವ್ಯವಸ್ಥೆಗಳು

ಅಸ್ತಿತ್ವದಲ್ಲಿವೆ. ಮೊದಲನೆಯದು 'ಪೂರ್ವ ನಿಯೋಜಿತ ಕಾರ್ಯವಿಧಾನ ಜಾಲ' ಅಥವಾ 'ಮಿದುಳಿನ ಸ್ವಯಂಕ್ರಿಯಾ ಚಿಂತನ ಜಾಲ'. ಇದನ್ನು 'ಡಿಫಾಲ್ಟ್ ಮೋಡ್ ನೆಟ್‌ವರ್ಕ್' (ಡಿಎಂಎನ್) ಎನ್ನುವರು. ಇದು ಮಿದುಳಿನಾದ್ಯಂತ ಹರಡಿರುವ ಆಳವಾದ ಹಾಗೂ ವಿಸ್ತೃತವಾದ ನರಜಾಲ. ಇದರ ಕೆಲಸ ಕಾರ್ಯಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ. ನೀವು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸ್ವಸ್ಥ ಸ್ಥಿತಿಯಲ್ಲಿದ್ದೀರಿ. ಯಾವುದೇ ರೀತಿಯ ಒತ್ತಡಗಳಿಲ್ಲ. ಯಾವುದೇ ರೀತಿಯ ಕೆಲಸಗಳೂ ಇಲ್ಲ. ಕುಳಿತ ಕಡೆಯೇ ಕಣ್ಣು ಮುಚ್ಚಿಕೊಳ್ಳುತ್ತೀರಿ. ನಿಮ್ಮ ಮಿದುಳು ವೇಗವಾಗಿ ಕೆಲಸ ಮಾಡಲಾರಂಭಿಸುತ್ತದೆ. ಮೊದಲು ಆತ್ಮಾವಲೋಕನವನ್ನು (ಇಂಟ್ರೋಸ್ಪೆಕ್ಷನ್) ಮಾಡಿಕೊಳ್ಳಲಾರಂಭಿಸುತ್ತದೆ. ನಿಮ್ಮ ಬದುಕು ನೀವು ಅಂದುಕೊಂಡ ಹಾಗೆ ನಡೆಯುತ್ತಾ ಇದೆಯೇ ಎನ್ನುವುದರ ಬಗ್ಗೆ ಯೋಚಿಸುತ್ತದೆ. ಹಗಲುಗನಸನ್ನು ಕಾಣಲಾರಂಭಿಸುತ್ತೀರಿ. ನಿಮ್ಮ ನಿರೀಕ್ಷೆಯಂತೆ ಬದುಕು ನಡೆಯದಿರಲು ಏನು ಕಾರಣ ಎಂದು ಹೊಳೆಯುತ್ತಲೇ, ಅದನ್ನು ಸರಿಪಡಿಸಲು ಯೋಜನೆಗಳನ್ನು ರೂಪಿಸುತ್ತೀರಿ. ಅವು ಯಶಸ್ವಿಯಾಗಿ ಕಾರ್ಯರೂಪಕ್ಕೆ ಬಂದಾಗ, ನಿಮ್ಮ ಬದುಕು ಬಂಗಾರವಾಗುವ ಬಗ್ಗೆ ಹಿರಿಹಿರಿ ಹಿಗ್ಗುತ್ತೀರಿ. ನಿಮ್ಮ ಹಳೆಯ ನೆನಪುಗಳನ್ನೆಲ್ಲ ಒಮ್ಮೆ ಸ್ಮರಿಸಿಕೊಳ್ಳುತ್ತೀರಿ. ಜತೆಗೆ ನಿಮ್ಮ ಹಿರಿಯರಿಂದ, ಸಹೋದ್ಯೋಗಿಗಳಿಂದ, ಪುಸ್ತಕಗಳಿಂದ, ಲೋಕವೀಕ್ಷಣೆಯಿಂದ ಗಳಿಸಿದ ಎಲ್ಲ ಅನುಭವಗಳನ್ನು ಸ್ಮರಣೆಗೆ ತಂದುಕೊಂಡು ನಿಮ್ಮ ಕಾರ್ಯಯೋಜನೆಯನ್ನು ಹೇಗೆ ಪರಿಣಾಮಕಾರಿಯಾಗಿ ತರಬಲ್ಲಿರಿ ಎನ್ನುವುದರ ಬಗ್ಗೆ ಯೋಚಿಸುತ್ತೀರಿ. ಈ ಎಲ್ಲ ಚಿಂತನ–ಮಂಥನಗಳಾದ ಮೇಲೆ ಮುಂದಿನ ಕಾರ್ಯವಿಧಾನದ ನೀಲನಕ್ಷೆಯು ನಿಮ್ಮ ಮನಸ್ಸಿನಲ್ಲಿ ರೂಪುಗೊಳ್ಳುತ್ತದೆ. ಇದನ್ನು ಪ್ರಧಾನ ಸಂಪಾದಕ– 'ಎಡಿಟರ್ ಇನ್ ಚೀಫ್'– ಎಂದು ಕರೆದರೆ ಅಡ್ಡಿಯಿಲ್ಲ.

ಎರಡನೆಯ ಪ್ರಧಾನ ನರವ್ಯವಸ್ಥೆಯಿದೆ. ಇದನ್ನು 'ಗುರಿ ನಿರ್ದೇಶಿತ ಕಾರ್ಯೋನ್ಮುಖ ನರಜಾಲ' ಅಥವಾ 'ಟಾಸ್ಕ್ ಪಾಸಿಟಿವ್ ನೆಟ್‌ವರ್ಕ್' (ಟಿಪಿಎನ್) ಎಂದು ಕರೆಯಬಹುದು. ನಮ್ಮ ಯಾವುದಾದರೊಂದು ಸಮಸ್ಯೆಯನ್ನು ಬಿಡಿಸುವಾಗ ಅಥವಾ ಕೆಲಸವನ್ನು ಮಾಡುವಾಗ ಜಾಗೃತವಾಗುವ ನರಜಾಲವಿದು. ಇವೆರಡರ ನಡುವೆ ಏನು ವ್ಯತ್ಯಾಸ ಎನ್ನುವ ಪ್ರಶ್ನೆಯು ನಮ್ಮ ಮನಸ್ಸಿನಲ್ಲಿ ಮೂಡಬಹುದು.

- ಡಿಎಂಎನ್, ಓರ್ವ ಆಂತರಿಕ ಸಮನ್ವಯಕಾರ. ತನ್ನ ಕಥೆಯನ್ನು ತಾನೇ ಹೇಳುವ, ತಾನೇ ಕೇಳುವ, ತಾನೇ ವಿಶ್ಲೇಷಿಸುವ, ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳುವ ಇವನನ್ನು ಮನೋವೈಜ್ಞಾನಿಕ ಪರಿಭಾಷೆಯಲ್ಲಿ 'ಅಹಂ' ಅಥವಾ 'ಇಗೋ' ಎನ್ನಬಹುದು.
- ಟಿಪಿಎನ್, ಹೇಳಿದ ಕೆಲಸವನ್ನು ಕಾರ್ಯರೂಪಕ್ಕೆ ತರುವ ನಂಬುಗೆಯ ಬಂಟ. ಈಗ ನೀವು ಓದುತ್ತಿರುವ ಲೇಖನದ ಪ್ರತಿಯೊಂದು ಸಾಲು ಹಾಗೂ ಪ್ರತಿಯೊಂದು ಪದದ ಅರ್ಥವನ್ನು ಮನವರಿಕೆ ಮಾಡಿಕೊಡುವುದು ಟಿಪಿಎನ್‌ನ ಸದ್ಯದ ಕೆಲಸ. ಹಿಡಿದ ಕೆಲಸವನ್ನು ಇತ್ಯಾತ್ಮಕವಾಗಿ ಪೂರ್ಣಗೊಳಿಸುವುದೇ ಟಿಪಿಎನ್ ಹೆಗ್ಗಳಿಕೆ.

ಎಲ್ಎಸ್‌ಡಿ ಪೂರ್ವ ಜಗತ್ತು: 20ನೆಯ ಶತಮಾನ. ರಸಾಯನ ವಿಜ್ಞಾನದ ಸುವರ್ಣಕಾಲ. ಪ್ರಕೃತಿಯು ತನ್ನಲ್ಲಿ ಅಡಗಿಸಿಟ್ಟುಕೊಂಡಿರುವ ಒಂದೊಂದೇ ರಹಸ್ಯಗಳನ್ನು ನಾವು ಒಡೆಯುತ್ತೇವೆ ಎಂದು ಉತ್ಸಾಹದಿಂದ ವಿಜ್ಞಾನಿಗಳು ಮುನ್ನುಗ್ಗುತ್ತಿದ್ದ ಕಾಲ. 'ರೈ' ಎನ್ನುವ ಧಾನ್ಯದ ಮೇಲೆ 'ಕ್ಲಾವಿಸೆಪ್ಸ್ ಪರ್ಪ್ಯೂರ' ಎಂಬ ಪರಾವಲಂಬಿ ಶಿಲೀಂಧ್ರ ಬೆಳೆಯುತ್ತಿತ್ತು. ಜನಸಾಮಾನ್ಯರು ಇದನ್ನು ಎರ್ಗಾಟ್ ಎಂದು ಕರೆಯುತ್ತಿದ್ದರು. 'ಎರ್ಗಾಟ್' ಹಾಗೂ ಮನುಕುಲದ ನಡುವಿನ ಅನುಬಂಧ ಅನಾದಿ ಕಾಲದ್ದು. ಮಧ್ಯಯುಗದ ಯುರೋಪ್ ಎರ್ಗಾಟ್ ಎಂದರೆ ಬೆಚ್ಚಿ ಬೀಳುತ್ತಿತ್ತು. ರೈಯನ್ನು ರೊಟ್ಟಿ ಮಾಡಲು ಬಳಸುತ್ತಿದ್ದರು. ರೈ ಮೇಲೆ ಎರ್ಗಾಟ್ ಬೆಳೆಯುವಾಗ (ರೈ ತೆನೆಯಿಂದ ಕುಡುಗೋಲಿನಂಥ ಎರ್ಗಾಟ್ ಬೆಳವಣಿಗೆಯನ್ನು ಗಮನಿಸಿ) ಅದರ ವಿಷವಸ್ತುಗಳು ರೈಯಲ್ಲಿ ಸೇರಿಕೊಳ್ಳುತ್ತವೆ. ಆ ವಿಷವಸ್ತುವಿರುವ ರೈ ಬಳಸಿ ಮಾಡಿದ ರೊಟ್ಟಿಯನ್ನು ಸೇವಿಸಿದಾಗ, ಸೇವಿಸಿದವರಲ್ಲಿ 'ಎರ್ಗಾಟ್ ವಿಷ ಲಕ್ಷಣಗಳು' ಕಾಣಿಸಿಕೊಳ್ಳುತ್ತವೆ. ಮೊದಲು ಸೆಳವು ಕಾಣಿಸಿಕೊಳ್ಳುತ್ತದೆ. ಭ್ರಮೆಗಳು (ಹ್ಯಾಲುಸಿನೇಷನ್) ಆರಂಭವಾಗುತ್ತವೆ. ಊರಿಗೆ ಊರೇ ಸಮೂಹಸನ್ನಿಗೆ (ಮಾಸ್ ಸೈಕೋಸಿಸ್) ಒಳಗಾಗುತ್ತದೆ. ಇಡೀ ಹಳ್ಳಿಯ ಜನರು ಬೀದಿಗೆ ಬಂದು ರಸ್ತೆಯಲ್ಲಿ ಕುಣಿಯುತ್ತಲೇ, ಚೀರುತ್ತಲೇ, ಅರಚುತ್ತಲೇ ಜೀವವನ್ನು ಬಿಡುತ್ತಿದ್ದರು. ಅಕಸ್ಮಾತ್ ಬದುಕಿದರೆ ಅವರ ಕೈ ಅಥವಾ ಕಾಲುಗಳು ಅಂಗಕ್ಷಯಕ್ಕೆ (ಗ್ಯಾಂಗ್ರೀನ್) ತುತ್ತಾಗಿ ಜೀವನಪರ್ಯಂತ ಹೆಳವರಾಗಿ ಉಳಿಯುತ್ತಿದ್ದರು. ಇದನ್ನು ಯುರೋಪಿನಲ್ಲಿ 'ಸಂತ ಆಂಥೋನಿಯ ಬೆಂಕಿ' (ಸೈಂಟ್ ಆಂಟನೀಸ್ ಫೈರ್) ಎಂದು ಕರೆಯುತ್ತಿದ್ದರು. ಆದರೆ ಇಲ್ಲೊಂದು ವಿಪರ್ಯಾಸವು ಅಡಗಿತ್ತು. ದಾದಿಯರು ತಾಯಂದಿರಿಗೆ ಹೆರಿಗೆಯನ್ನು ಮಾಡಿಸುವ ಪ್ರಸವೋತ್ತರ ರಕ್ತಸ್ರಾವ ಸಾಮಾನ್ಯವಾಗಿರುತ್ತಿತ್ತು. ಈ ಎರ್ಗಾಟನ್ನು ನಿಗದಿತ ಪ್ರಮಾಣದಲ್ಲಿ ನೀಡಿದಾಗ, ಪ್ರಸವೋತ್ತರ ರಕ್ತಸ್ರಾವ ನಿಲ್ಲುತ್ತಿತ್ತು. ವೈದ್ಯರು ಎರ್ಗಾಟಿನ ಇತರ ವೈದ್ಯಕೀಯ ಉಪಯೋಗಗಳ ಬಗ್ಗೆ ಅತೀವ ಕುತೂಹಲಿಗಳಾಗಿದ್ದರು. ಎರ್ಗಾಟಿನ ಈ ಉಭಯ ಅಲುಗು ರಸಾಯನ ತಜ್ಞರ ಕುತೂಹಲವನ್ನು ಕೆರಳಿಸಿತು.

ಅನುಪಯುಕ್ತ: ಸ್ಯಾಂಡೋಜ಼್ ಎನ್ನುವುದು ಸ್ವಿಸ್ ಔಷಧಗಳ ಉತ್ಪಾದನಾ ಸಂಸ್ಥೆ. ಅಲ್ಲಿ ಆಲ್ಬರ್ಟ್ ಹಾಫ್ಮನ್ ಈ ಎರ್ಗಾಟಿನಲ್ಲಿರುವ ಎಲ್ಲ ರಾಸಾಯನಿಕ ಘಟಕಗಳನ್ನು ಪ್ರತ್ಯೇಕಿಸುವ ಕೆಲಸದಲ್ಲಿ ತೊಡಗಿದ. ರಕ್ತಪರಿಚಲನೆ, ಮೈಗ್ರೇನ್ ತಲೆನೋವು ಹಾಗೂ ಪ್ರಸವೋತ್ತರ ರಕ್ತಸ್ರಾವದ ನಿಯಂತ್ರಣಕ್ಕೆ ನೆರವಾಗುವ ಘಟಕಗಳ ಹುಡುಕಾಟದಲ್ಲಿದ್ದ. 1938. ಎರ್ಗಾಟಿನಲ್ಲಿದ್ದ 'ಲೈಸರ್ಜಿಕ್ ಆಸಿಡ್'ನಿಂದ 25ನೆಯ ರಾಸಾಯನಿಕವನ್ನು ಬೇರ್ಪಡಿಸಿದ. ಅದಕ್ಕೆ ಎಲ್ಎಸ್‌ಡಿ–25 ಎಂದು ನಾಮಕರಣ ಮಾಡಿದ. ಅದನ್ನು ಪ್ರಯೋಗಾಲಯದ ಪಶುಗಳ ಮೇಲೆ ಪ್ರಯೋಗಿಸಿದ. ಅಂಥ ಪರಿಣಾಮವೇನೂ ಕಂಡುಬರಲಿಲ್ಲ. ಹಾಗಾಗಿ ಇದೊಂದು ಅನುಪಯುಕ್ತ ರಾಸಾಯನಿಕ ಎಂದು ತೀರ್ಮಾನಿಸಿ ಪಕ್ಕಕ್ಕಿಟ್ಟ.

ಹಲವು ವರ್ಷಗಳು ಕಳೆದವು. ಮನುಷ್ಯನಿಗೆ ಯಾವಾಗಲೂ ಒಂದು ಅಂತಃಪ್ರೇರಣೆಯಿರುತ್ತದೆ. ಹಾಗೆಯೇ ಹಾಫ್ಮನ್‌ನ ಅಂತಃಪ್ರೇರಣೆಯೂ, ಎಲ್ ಎಸ್‌ಡಿ–25 ಅನ್ನು ಮತ್ತೊಮ್ಮೆ ಪರಿಶೀಲಿಸುವಂತೆ ಪ್ರಚೋದಿಸಿತು. ಪರಿಶುದ್ಧ ವಿಜ್ಞಾನದಲ್ಲಿ ಅಂತಃಪ್ರೇರಣೆ ಇತ್ಯಾದಿಗಳನ್ನು ಮೌಢ್ಯವೆಂದು ಪರಿಗಣಿಸುವುದುಂಟು. 1943. ವಿಶ್ವದ ಮಹಾಯುದ್ಧದ ಕಾರ್ಮೋಡ ಎಲ್ಲೆಡೆ ಕವಿದಿತ್ತು. ಹಾಫ್ಮನ್ ಎಲ್ ಎಸ್‌ಡಿಯನ್ನು ಪ್ರಯೋಗಾಲಯದಲ್ಲಿ ಸೃಜಿಸಿದ. ಹಾಗೆ ಸೃಜಿಸುವಾಗ ಎಲ್ ಎಸ್‌ಡಿಯ ಅತ್ಯಂತ ಅಲ್ಪಪ್ರಮಾಣದ ರಾಸಾಯನಿಕವು ಅವನ ಚರ್ಮದ ಮೂಲಕ ದೇಹವನ್ನು ಪ್ರವೇಶಿಸಿಬಿಟ್ಟಿತು. ಅವನಿಗೆ ತಕ್ಷಣವೇ ವಿಚಿತ್ರ ಅನುಭವಗಳಾಗಲಾರಂಭಿಸಿದವು. ಚಡಪಡಿಕೆ ಆರಂಭವಾಯಿತು. ಬವಳಿ

ಬರಲಾರಂಭಿಸಿತು. ಅವನ ಕಣ್ಣ ಮುಂದೆ ನಾನಾ ರೀತಿಯ ಕಲ್ಪನೆಗಳು ಒಂದರ ಹಿಂದೆ ಒಂದರಂತೆ ನಿರಂತರವಾಗಿ ಬರಲಾರಂಭಿಸಿದವು. ಅವತ್ತು ಅವನು ಮನೆಗೆ ಬೇಗ ಹಿಂದಿರುಗಿದ.

ಮೂರು ದಿನಗಳಾದವು. ಹಾಫ್ಮನ್ನನು ಈ ಎಲ್ಎಸ್‌ಡಿಯಲ್ಲಿ ಏನೋ ವಿಶೇಷ ಇರುವುದನ್ನು ಗ್ರಹಿಸಿದ. ಅದನ್ನು ಪರಿಪೂರ್ಣವಾಗಿ ಅನ್ವೇಷಿಸಲು ಸಿದ್ಧನಾದ. ಪ್ರಯೋಗಾಲಯಕ್ಕೆ ಬಂದ. 250 ಮೈಕ್ರೋಗ್ರಾಂ ಎಲ್ಎಸ್‌ಡಿಯನ್ನು ನುಂಗಿದ. ಇದು 'ಅತ್ಯಲ್ಪ ಡೋಸ್' ಎಂದು ಅವನ ಭಾವನೆ. ವಾಸ್ತವದಲ್ಲಿಇದು 10–15 ಜನರಿಗಿಂತಲೂ ಹೆಚ್ಚಿನವರಿಗೆ ಸಾಕಾಗಬಹುದಾದ ಬೃಹತ್ ಡೋಸ್!

ಮುಂದೇನಾಯಿತು ಎನ್ನುವುದು ವೈದ್ಯಕೀಯ ಇತಿಹಾಸದಲ್ಲಿ ದಾಖಲಾಗಿದೆ. ಅವನ ಸುತ್ತಮುತ್ತಲಿದ್ದ ಎಲ್ಲ ವಸ್ತುಗಳು ತಮ್ಮ ಸಹಜ ಗಾತ್ರ, ಬಣ್ಣ, ಆಕೃತಿಯನ್ನು ಕಳೆದುಕೊಂಡು ವಿರೂಪಗೊಂಡವು. ಸಮಯ ಎನ್ನುವುದು ತುಂಡುತುಂಡಾಯಿತು. ಆತಂಕವು ಮುಗಿಲನ್ನು ಮುಟ್ಟಿತು. ತನಗೆ ಹುಚ್ಚು ಹಿಡಿಯಲಿದೆ ಎಂಬ ಭೀತಿಯು ಅವನನ್ನು ಆವರಿಸಿತು. ಆಗ ಅವನು ತನ್ನ ಸಹಾಯಕನನ್ನು ಕರೆದು, ತನ್ನನ್ನು ಮನೆಗೆ ಬಿಟ್ಟು ಬರುವಂತೆ ಕೇಳಿಕೊಂಡ. ಅದು ದ್ವಿತೀಯ ಮಹಾಯುದ್ಧದ ಕಾಲವಾಗಿದ್ದ ಕಾರಣ, ಕಾರಿನ ಬಳಕೆಗೆ ಅನುಮತಿಯಿರಲಿಲ್ಲ. ಹಾಗಾಗಿ ಹಾಫ್ಮನ್‌ನನ್ನು ಸೈಕಲ್ಲಿನ ಮೇಲೆ ಕೂರಿಸಿಕೊಂಡು ಮನೆಯ ಕಡೆಗೆ ಹೊರಟ. ಈ ದಿನವನ್ನು ಈಗ 'ಬೈಸಿಕಲ್ ಡೇ' (ಏಪ್ರಿಲ್ 19, 1943) ಎನ್ನುವ ಹೆಸರಿನಲ್ಲಿ ಆಚರಿಸುತ್ತಾರೆ. ಇದು ಮನುಕುಲದ ಇತಿಹಾಸದಲ್ಲಿ ಎಲ್ಎಸ್‌ಡಿಯನ್ನು ಕುರಿತ ಮೊತ್ತ ಮೊದಲ ಪ್ರಯೋಗವಾಗಿತ್ತು.

ಹಾಫ್ಮನ್ ಸಂಪೂರ್ಣ ತಿಳಿವಿಗೆ ಬಂದ. ತನ್ನ ಅನುಭವವನ್ನು ಬಿಡಿಬಿಡಿಯಾಗಿ ದಾಖಲಿಸಿದ. ಕಲೈಡೋಸ್ಕೋಪಿಕ್ ವಿಷನ್ ಸಾಮಾನ್ಯವಾಗಿತ್ತು (ನಮ್ಮ ಬಾಲ್ಯದಲ್ಲಿ ಮೂರು ಗಾಜಿನ ಪಟ್ಟಿಗಳನ್ನು ಒಂದಕ್ಕೊಂದು ಲಂಬವಾಗಿ ಜೋಡಿಸಿ, ಒಂದು ಬಾಯಿಗೆ ಪ್ಲಾಸ್ಟಿಕ್ ಹಾಳೆ ಕಟ್ಟಿ, ಮತ್ತೊಂದು ಕಡೆಯಿಂದ ಗಾಜಿನ ಚೂರುಗಳನ್ನು ಹಾಕಿ ನೋಡುತ್ತಿದುದನ್ನು ನೆನಪಿಸಿಕೊಳ್ಳಬಹುದು. ಒಂದೊಂದು ಸಲ ಕುಲುಕಿದಾಗಲೂ ಒಂದು ರೀತಿಯ ಬಣ್ಣ ಮತ್ತು ನಮೂನೆಗಳು ರೂಪುಗೊಳ್ಳುತ್ತಿದ್ದವು). ತೀವ್ರವಾಗಿ ಉದ್ದೀಪನಗೊಳ್ಳುವ ಭಾವನೆಗಳು. ಅಳು–ನಗು ಯಾವುದರ ಮೇಲೂ ನಿಯಂತ್ರಣವಿರುತ್ತಿರಲಿಲ್ಲ. ವಿಪರೀತ ಭಯ. ಗಾಳಿಯಲ್ಲಿ ತೇಲಿಹೋಗುತ್ತಿರುವ ಅನುಭವ. ಇದ್ದಕ್ಕಿದ್ದ ಹಾಗೆ ನಾನು ಸಾಯುತ್ತಿದ್ದೇನೆ ಎಂಬ ಭೀತಿ. ಮತ್ತೊಂದು ಕ್ಷಣದಲ್ಲಿ ತಾನು ಈ ಜಗತ್ತಿನಲ್ಲಿ ಜನ್ಮವೆತ್ತುತ್ತಿದ್ದೇನೆ ಎಂಬ ಸಂತಸ. ಬೆಳಗ್ಗೆ ಎದ್ದಾಗ ಜಗತ್ತಿನಲ್ಲಿ ಏನೋ ಒಂದು ಭರವಸೆಯಿರುವ ಅನುಭವ.

ಬಿಡುಗಡೆ: ಸ್ಯಾಂಡೋಜ಼್ ಕಂಪನಿಯು 'ಡೆಲ್ಸಿಡ್' ಎಂಬ ಹೆಸರಿನಲ್ಲಿ ಎಲ್ ಎಸ್‌ಡಿಯನ್ನು ಮಾರುಕಟ್ಟೆಗೆ ಬಿಡುಗಡೆಮಾಡಿತು.

- ಇದು ತಾತ್ಕಾಲಿಕವಾಗಿ ಸ್ಕಿಜ಼ೋಫ್ರೀನಿಯವನ್ನು ಹೋಲುತ್ತಿತ್ತು
- ಆತ್ಮವಿಶ್ಲೇಷಣೆಯ ಸಾಮರ್ಥ್ಯವನ್ನು ಹೆಚ್ಚಿಸುತ್ತಿತ್ತು.
- ಕೆಲವು ಜಿಗುಟು ಭಾವನೆಗಳಿಂದ ಬಿಡುಗಡೆ (ಉದಾ: ಸ್ವಹತ್ಯೆ ಮಾಡಿಕೊಳ್ಳುವ ಅದಮ್ಯ ಬಯಕೆ)
- ಒಂದು ರೀತಿಯ ಅನುಭಾವದ ಅನುಭವ (ಮಿಸ್ಟಿಕ್ ಎಕ್ಸ್‌ಪೀರಿಯನ್ಸ್) ಮಾನಸಿಕ ಕಾಯಿಲೆಗಳನ್ನು ಪತ್ತೆಹಚ್ಚಲು ಎಲ್ಎಸ್‌ಡಿಯನ್ನು ಬಳಸಬಹುದು ಎಂಬ ವಿಚಾರವು ಪ್ರಚಲಿತಕ್ಕೆ ಬಂದಿತು.

1950 ಮತ್ತು 60ರ ದಶಕ. ಆಲ್ಡಸ್ ಹಕ್ಸಲೆ, ತಿಮೋಟೀ ಲೀರಿ, ಕೆನ್ ಕೀಸೆ, ಫ್ರಾನ್ಸಿಸ್ ಕ್ರಿಕ್, ಕ್ಯಾರಿ ಮುಲ್ಲಿಸ್, ಅಲನ್ ವ್ಯಾಟ್ಸ್, ಬೀಟಲ್ಸ್ ಕಲಾವಿದರು, ಜಿಮಿ ಹೆಂಡ್ರಿಕ್ಸ್, ಪಿಂಕ್ ಫ್ಲಾಯ್ಡ್, ಸ್ಟೀವ್ ಜಾಬ್ಸ್– ಹೀಗೇ ಅನೇಕ ಜನರು ಎಲ್ಎಸ್‌ಡಿಯ ಪ್ರಾಥಮಿಕ ಅನುಭವವನ್ನು ಪಡೆದರು.

ಮಿದುಳಿನಲ್ಲಿ ಏನಾಗುತ್ತದೆ?: ಡಿಎಂಎನ್, ನಮ್ಮ ಮಿದುಳಿನ ಹಲವು ಕೇಂದ್ರಗಳ ಸಮನ್ವಯಕಾರ ಎನ್ನುವುದನ್ನು ಈಗಾಗಲೇ ತಿಳಿದಿದ್ದೇವೆ. ಇದನ್ನು 'ಎಡಿಟರ್–ಇನ್–ಚೀಫ್' ಎಂದೆವು. ಎಲ್ಎಸ್‌ಡಿಯು, ಡಿಎಂಎನ್‌ನ ಕೆಲಸಕಾರ್ಯಗಳನ್ನು ಸ್ಥಗಿತಗೊಳಿಸುತ್ತದೆ. ಡಿಎಂಎನ್ ಸಮನ್ವಯವನ್ನು ಸಾಧಿಸುವ ಹಲವು ಕೇಂದ್ರಗಳ ನಡುವೆ ಇರುವ ನರಸಂಪರ್ಕ ಜಾಲವನ್ನು ಅಲ್ಲೋಲಕಲ್ಲೋಲಗೊಳಿಸುತ್ತದೆ. ಮನುಷ್ಯನ 'ಅಹಂ' ಕರಗಿ ನೀರಾಗುತ್ತದೆ. ಮನುಷ್ಯ ವ್ಯಕ್ತಿತ್ವವನ್ನು ನಿರ್ಧರಿಸುವ ಅಹಂ ನಾಶವಾದ ಮೇಲೆ, ಅವನ ಅಸ್ತಿತ್ವಕ್ಕೆ ಬೆಲೆಯಿಲ್ಲವಾಗುತ್ತದೆ.

ಪುನರುತ್ಥಾನ: 21ನೆಯ ಶತಮಾನದಲ್ಲಿ ಎಲ್ಎಸ್‌ಡಿಯ ಗುಣಾವಗುಣಗಳನ್ನು ಅಧ್ಯಯನ ಮಾಡುವ ಹೊಸ ಉತ್ಸಾಹವು ಆರಂಭವಾಗಿದೆ. ಖಿನ್ನತೆ, ರುಗ್ಣಾವಸ್ಥೆಯ ಅಂತಿಮ ಘಟ್ಟದಲ್ಲಿ ಇರುವವರು, ಆಘಾತಗಳ ನಂತರ ಒತ್ತಡ ಅವ್ಯವಸ್ಥೆ (ಪೋಸ್ಟ್ ಟ್ರಮಾಟಿಕ್ ಸ್ಟ್ರೆಸ್ ಡಿಸಾರ್ಡರ್), ಮಾದಕ ವಸ್ತುಗಳ ದುರ್ವ್ಯಸನ ಇತ್ಯಾದಿ ಆಯ್ದ ಪ್ರಕರಣಗಳ ಚಿಕಿತ್ಸೆಯಲ್ಲಿ ನುರಿತ ವೈದ್ಯರಿಂದ ಚಿಕಿತ್ಸೆಯನ್ನು ಕೊಡಿಸಬಹುದು ಎನ್ನುವ ಅಭಿಪ್ರಾಯವು ಬಲವಾಗುತ್ತಿದೆ.

ಗುಲಾಬಿಯ ಬಣ್ಣಗಳು, ಬದುಕಿನ ಭಾವಗಳು..!

● ಹೊಸ್ಮನೆ ಮುತ್ತು, ಬೆಂಗಳೂರು

ಹೂವು– ದೇವರು ಜಗತ್ತಿಗೆ ನೀಡಿದ ಅತ್ಯಂತ ಸುಂದರವಾದ ಉಡುಗೊರೆ, ಪ್ರಕೃತಿಯ ಅದ್ಭುತ ಕಲಾಕೃತಿ. ಅವುಗಳ ಸೌಂದರ್ಯ, ಸುವಾಸನೆ ಮತ್ತು ವೈವಿಧ್ಯ ಮಾನವರನ್ನು ಆಕರ್ಷಿಸುತ್ತವೆ. ಹೂವುಗಳಲ್ಲಿ ಗುಲಾಬಿಗೆ ವಿಶೇಷ ಸ್ಥಾನವಿದೆ. ಇದನ್ನು ಹೂವುಗಳ ರಾಣಿ ಎಂದೇ ಕರೆಯಲಾಗುತ್ತದೆ. ತನ್ನ ಸೌಂದರ್ಯ, ಸುವಾಸನೆ ಮತ್ತು ವಿವಿಧ ಅರ್ಥಗಳಿಂದಾಗಿ, ಇದು ಮಾನವ ಕುಲದ ಹೃದಯವನ್ನು ಆಕರ್ಷಿಸುತ್ತಲೇ ಇದೆ. ಪ್ರೀತಿ ಮತ್ತು ಭಾವನೆಯ ಶ್ರೇಷ್ಠ ಸಂಕೇತ ಗುಲಾಬಿ. ಅದರ ನವಿರಾದ ಬಣ್ಣಗಳು, ವಾತ್ಸಲ್ಯ ಮತ್ತು ಮೆಚ್ಚುಗೆಯ ಭಾವನೆಗಳನ್ನು ವ್ಯಕ್ತಪಡಿಸುತ್ತವೆ. ಗುಲಾಬಿಯ ಮೊಗ್ಗು ಅರಳುವುದು ಸುಂದರವಾದ ಪರಿವರ್ತನೆಯನ್ನು ಸೂಚಿಸುತ್ತದೆ. ಅದು ಹೇಗೆ ಕ್ರಮೇಣವಾಗಿ ತನ್ನ ಎಳೆಯ ದಳಗಳನ್ನು ಅರಳಿಸಿ ಸುಂದರವಾಗುತ್ತದೋ, ಬಣ್ಣ ಬಣ್ಣದ ಸೌಂದರ್ಯವನ್ನು ಪ್ರದರ್ಶಿಸುತ್ತದೋ ಹಾಗೆಯೇ, ಮಾನವನ ಜೀವನದಲ್ಲಿನ ಬದಲಾವಣೆಗಳು ಮತ್ತು ಬೆಳವಣಿಗೆಯೂ ಕೂಡ.

ಗುಲಾಬಿಯು ವಿಶ್ವದ ಅತ್ಯಂತ ಪ್ರಸಿದ್ಧ ಹೂವುಗಳಲ್ಲಿ ಒಂದು. ಈ ಹೂವು ಪ್ರೀತಿ, ಸ್ನೇಹ ಮತ್ತು ಸೌಂದರ್ಯದ ಅನನ್ಯ ರೂಪಕವಾಗಿದೆ. ಇನ್ನೂ ಅರಳದ ಮೊಗ್ಗಿನಿಂದ ಆರಂಭಿಸಿ, ಅರಳಿದ ಹೂಗಳ ಬಣ್ಣ, ಪಕಳೆಗಳ ಜೋಡಣೆ, ಅರಳಿದಾಗಿನ ನೋಟ, ಹೊರಸೂಸುವ ಪರಿಮಳ ಇವೆಲ್ಲವುಗಳಿಂದ ಹೂವಿನ ಚೆಲುವು ಆವರಿಸಿಕೊಳ್ಳುತ್ತದೆ. ಅವುಗಳ ವರ್ಣ ವೈವಿಧ್ಯ, ಜೋಡಿಸಿಡುವ ಕಲೆಗಾರಿಕೆ, ದಳಗಳ ಮೃದುತ್ವ ಮತ್ತು ಸ್ಪರ್ಶ ಎಲ್ಲವೂ ಅಚ್ಚುಮೆಚ್ಚು! ಕೊಂಚ ಸೂಕ್ಷ್ಮ ದೃಷ್ಟಿಯಿಂದ ಗಮನಿಸಿದರೆ ಗುಲಾಬಿ ಗಿಡ ಮನುಷ್ಯನ ಬದುಕಿಗೊಂದು ಅಸಾಮಾನ್ಯ ತಿಳಿವಳಿಕೆಯನ್ನು ನೀಡುತ್ತದೆ. ಮೊದಲು ಮುಳ್ಳು ನಂತರ ಹೂವು; ಬಾಳು ಸಫಲತೆ ಪಡೆಯುವುದೂ ಹೀಗೆಯೇ, ನೋವು–ಸಂಕಟಗಳ ನಡುವೆಯೇ ಅಲ್ಲವೇ!

ಗುಲಾಬಿಯನ್ನು ವಿವಿಧ ಸಂದರ್ಭಗಳಲ್ಲಿ ಉಡುಗೊರೆಯಾಗಿ ನೀಡಲಾಗುತ್ತದೆ. ಪ್ರೀತಿಯನ್ನು ವ್ಯಕ್ತಪಡಿಸಲು, ಸ್ನೇಹವನ್ನು ಬಲಪಡಿಸಲು ಅಥವಾ ಕ್ಷಮೆಯನ್ನು ಕೋರಲು ಗುಲಾಬಿಯನ್ನು ನೀಡಲಾಗುತ್ತದೆ. ಗುಲಾಬಿಯ ಬಣ್ಣಗಳು ವಿವಿಧ ಭಾವನೆಗಳನ್ನು ಮತ್ತು ಸಂದೇಶಗಳನ್ನು ವ್ಯಕ್ತಪಡಿಸುತ್ತವೆ. ಪ್ರತಿಯೊಂದು ಬಣ್ಣಕ್ಕೂ

ವಿಶಿಷ್ಟವಾದ ಭಾವನಾತ್ಮಕ ಅರ್ಥವಿದೆ. ವಿವಿಧ ರೀತಿಯ ಗುಲಾಬಿಗಳ ಮಹತ್ವವನ್ನು ಅರ್ಥ ಮಾಡಿಕೊಳ್ಳುವುದು ನಮ್ಮ ಪ್ರೀತಿಯ ಸಂದೇಶವನ್ನು ಹೆಚ್ಚಿಸುತ್ತದೆ ಮತ್ತು ಅದನ್ನು ಸ್ಮರಣೀಯ ದಿನವನ್ನಾಗಿ ಮಾಡುತ್ತದೆ. ಜನರು ಗುಲಾಬಿಗಳನ್ನು ಉಡುಗೊರೆಯಾಗಿ ನೀಡುವ ಮೂಲಕ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. ಇದು ಔಪಚಾರಿಕ ಸಂದರ್ಭಗಳು ಮತ್ತು ಪ್ರೀತಿಯ ಅಭಿವ್ಯಕ್ತಿಗಳಿಗೆ ಸೂಕ್ತವಾಗಿದೆ.

ಬಿಳಿ ಗುಲಾಬಿಯು ಶಾಂತಿ ಮತ್ತು ಶುದ್ಧತೆಯ ಪ್ರತೀಕ. ಯುವ ಮನಸ್ಸುಗಳ ಮಾಧುರ್ಯ, ನವೀನತೆ ಮತ್ತು ಶಾಶ್ವತ ಪ್ರೀತಿಯನ್ನು ಇದು ಪ್ರತಿನಿಧಿಸುತ್ತದೆ. ಪ್ರಾಮಾಣಿಕ ಭಾವನೆ, ಮೆಚ್ಚುಗೆ, ಕೃತಜ್ಞತೆಯ ಭಾವಗಳನ್ನು ವ್ಯಕ್ತಪಡಿಸಲು ಹಾಗೂ ಔಪಚಾರಿಕ ಸಂದರ್ಭಗಳಿಗೆ ಇದು ಸೂಕ್ತವಾಗಿದೆ. ಕೆಂಪು ಗುಲಾಬಿ ಪವಿತ್ರ ಪ್ರೀತಿಯ ಸಂಕೇತ. ಇದು ಆಳವಾದ ಪ್ರೀತಿ, ಸೌಂದರ್ಯ, ಗೌರವ ಮತ್ತು ಪ್ರಣಯವನ್ನು ಪ್ರತಿನಿಧಿಸುತ್ತದೆ. ಈ ಬಣ್ಣದ ಹೂವು ವಾರ್ಷಿಕೋತ್ಸವಗಳು ಮತ್ತು ಪ್ರೇಮಿಗಳ ದಿನಕ್ಕೆ ಜನಪ್ರಿಯ ಆಯ್ಕೆಯಾಗಿದೆ.

ಹಳದಿ ಗುಲಾಬಿಯು ಸ್ನೇಹ, ಸಂತೋಷ ಮತ್ತು ಹೊಸ ಆರಂಭವನ್ನು ಸಂಕೇತಿಸುತ್ತದೆ. ಹಳದಿಯು ಹರ್ಷಚಿತ್ತದ ಬಣ್ಣ. ಇದು ಪ್ಲಾಟೋನಿಕ್ ಸಂಬಂಧಗಳನ್ನು ಆಚರಿಸಲು, ಸಕಾರಾತ್ಮಕ ಭಾವವನ್ನು ತಿಳಿಯಲು ಪರಿಪೂರ್ಣವಾಗಿದ್ದು, ನಮ್ಮ ಸ್ನೇಹಿತರಿಗೆ, ನಾವು ಪ್ರೀತಿಸುವ ಜನರಿಗೆ ಮತ್ತು ನಾವು ಯಾರೊಂದಿಗೆ ಹೊಸದಾಗಿ ಸ್ನೇಹ ಪ್ರಾರಂಭಿಸಲು ಬಯಸುತ್ತೇವೋ ಅವರಿಗೆ ಈ ಬಣ್ಣದ ಗುಲಾಬಿಯನ್ನು ನೀಡಬಹುದು.

ಚಿಕಣಿ ಗುಲಾಬಿಗಳು ಸಣ್ಣ ಗಾತ್ರದವಾದರೂ ತಮ್ಮ ಸೌಂದರ್ಯ ಮತ್ತು ವರ್ಣರಂಜಕತೆಯಿಂದ ಕಣ್ಮನ ಸೆಳೆಯುತ್ತವೆ. ಇವು ಶಾಶ್ವತ ಪ್ರೀತಿಯ ಸಂಕೇತವಾಗಿವೆ. ನಿಕಟ ಸಂದರ್ಭಗಳಲ್ಲಿ ಪ್ರೀತಿಪಾತ್ರರಿಗೆ ನೀಡಲು ಅಥವಾ ಮನೆ, ಕಚೇರಿಯಂಥ ಸಣ್ಣ ಸ್ಥಳಗಳಲ್ಲಿ ಇರಿಸಲು ಇವು ಸೂಕ್ತವಾಗಿವೆ.

''ಗುಲಾಬಿಯನ್ನು ಯಾವ ಹೆಸರಿನಿಂದ ಕರೆದರೂ ಅದರ ಸೌಂದರ್ಯ ಮತ್ತು ಸುವಾಸನೆ ಬದಲಾಗುವುದಿಲ್ಲ'' ಎಂದಿದ್ದಾರೆ ಸಾಹಿತಿ ವಿಲಿಯಂ ಶೇಕ್ಸ್‌ಪಿಯರ್. ಗುಲಾಬಿಯು ಒಂದು ಹೂವು ಮಾತ್ರವಲ್ಲ, ಅದು ಪ್ರೀತಿ, ಸೌಂದರ್ಯ, ಸವಾಲುಗಳು ಮತ್ತು ಬೆಳವಣಿಗೆಯ ಸಂಕೇತವಾಗಿದೆ. ಇದು ನಮಗೆ ಜೀವನದ ಬಗೆಗಿನ ಹೊಸ ದೃಷ್ಟಿಕೋನವನ್ನು ನೀಡುತ್ತದೆ ಮತ್ತು ಮನಸ್ಸನ್ನು ಪ್ರಫುಲ್ಲಗೊಳಿಸುತ್ತದೆ. ಗುಲಾಬಿಯ ಹೂವು ಮತ್ತು ಮುಳ್ಳು ಎರಡೂ ಅದರ ಅಸ್ತಿತ್ವಕ್ಕೆ ಅಗತ್ಯ. ಇದೇ ರೀತಿಯಾಗಿ, ನಮ್ಮ ಜೀವನದಲ್ಲಿ ಸುಖ ಮತ್ತು ದುಃಖ ಎರಡನ್ನೂ ಸಮತೋಲನದಿಂದ ಕಾಯ್ದುಕೊಳ್ಳುವುದು ಅಗತ್ಯ. ಗುಲಾಬಿಯ ಮುಳ್ಳುಗಳನ್ನು ಲೆಕ್ಕಿಸದೆ ಅದರ ಸೌಂದರ್ಯವನ್ನು ಆನಂದಿಸುವಂತೆ, ಜೀವನದಲ್ಲಿ ಜತೆ ಜತೆಯಾಗಿಯೇ ಎದುರಾಗುವ ಸುಖ–ದುಃಖ, ಸೋಲು–ಗೆಲುವು, ನೋವು–ನಲಿವುಗಳನ್ನು ಸಮಚಿತ್ತದಿಂದ ಅನುಭವಿಸಬೇಕು. ಒಟ್ಟಾರೆಯಾಗಿ, ಗುಲಾಬಿಯು ಮಾನವ ಜೀವನದ ವಿವಿಧ ಅಂಶಗಳನ್ನು ಸಮೃದ್ಧಗೊಳಿಸುವ ಅನೇಕ ಗುಣಗಳನ್ನು ಹೊಂದಿದೆ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಟೆ



ಎಡದಿಂದ ಬಲಕ್ಕೆ

1. ನಾವು ಮಾಡುವ ಕರ್ಮಕ್ಕೆ ತಕ್ಕ ಫಲ ನೀಡುವ ರವಿಸುತ (2)
3. ಗೌರವ ಸೂಚಕವಾಗಿ ಕೊಡುವ ಹೆಸರು (3)
5. ನೂಲು ತಯಾರಿಸಬಹುದಾದ ಅರಳೆ (2)
6. ದಿಕ್ಕು ತಪ್ಪಿಸಿ ಬಂದಿರುವ ಪ್ರತ್ಯುತ್ತರ (4)
7. ಮೇರೆ ಅಥವಾ ಗಡಿ (4)
8. ಅಸ್ತವ್ಯಸ್ತವಾಗಿ ಬಂದಿರುವ ಸ್ಮರಣೆ (3)
10. 24 ಘಂಟೆಗಳ ಅವಧಿ (3)
12. ಕಾಗೆಯ ಇನ್ನೊಂದು ಹೆಸರು (3)
14. ಕೈಯೊಂದಿಗೆ ಬಂದಿರುವ ಮೊಸಳೆ (3)
16. ಪ್ರಕಟಿಸಬೇಕಾಗಿರುವ ಸುದ್ದಿ ಅಥವಾ ಗ್ರಂಥವನ್ನು ಪರಿಷ್ಕರಿಸುವವನು (4)
17. ಸಾಮಾನ್ಯವಾಗಿ ಕಾಗದಪತ್ರಗಳಲ್ಲಿ ಹಾಕುವ ರುಜು (4)
19. ಪರೀಕ್ಷೆಯಲ್ಲಿ ಸರಿಯುತ್ತರ ಬರೆದು ಗಳಿಸಿದ್ದು (2)
20. ದೊಡ್ಡದಾದ ಉರಿಯಿದು (3)
21. ನೀರಿನಲ್ಲಿ ಚಲಿಸುತ್ತಿದೆ ನಾವೆ (2)

ಮೇಲಿಂದ ಕೆಳಕ್ಕೆ

2. ನೀವಿತ್ತ ಕಾರಣ (3)
3. ಮನಸ್ಸು ಬಿಚ್ಚಿ ಮಾತನಾಡದೇ ಇರುವ ಸ್ಥಿತಿ (4)
4. ಕೆಟ್ಟದಾದ ವಾಸನೆ (4)
5. ಆಂಗ್ಲರ ಟೀನೇಜ್ ಕನ್ನಡಕ್ಕೆ ಬಂದಿದೆ (5)
6. ವಸ್ತುವೊಂದನ್ನು ಕೊಂಡಾಗ ಸಿಗುವ ಪಾವತಿ ಪತ್ರ (3)
9. ಕುಬೇರನ ವಿಮಾನದ ಹೆಸರು (3)
11. ಅರಣ್ಯದ ರಕ್ಷಕನಿವನು (5)
13. ಸರಕ್ಕಾಗಿ ನಡೆಯಿತೇ ಯುದ್ಧ (3)
14. ಹೂವಿನಿಂದ ದುಂಬಿಯು ಸಂಗ್ರಹಿಸಿದ ರಸ (4)
15. ಈ ಅಪ್ಪಣೆ ಚೀಟಿಯಲ್ಲಿತಿರುಗಿಬಂದಿರುವ ಶಿವನೂ ಇದ್ದಾನೆ (4)
18. ಮನುಷ್ಯನೊಬ್ಬನ ಯೋಗ್ಯತೆ (3)

ಸರಿಯುತ್ತರಗಳು

ಹನಿಗವನಗಳು

● ಎಚ್. ಪ್ರಹ್ಲಾದ ರಾವ್, ಬೆಂಗಳೂರು

ಜಾಲತಾಣದ ರಸದೌತಣ

ಇಂದಿನ ರಾಜಕೀಯ ನಾಯಕರ ಹಗರಣ
ಮೀಡಿಯಾಗಳಿಗೆ ರಸ ಹೂರಣ
ಇದನ್ನೇ ತಿಂದು ಬಲಿಯುವುದು ಜಾಲತಾಣ
ನೆಟ್ಟಿಗರು ಇದನ್ನೇ ತಿಂದು ತೇಗಿ
ಮಾಡುತ್ತಾರೆ ಕಾಲಹರಣ!!

ಪ್ರಾಸ- ಪ್ರಯಾಸ!

ಮಹಾಕಾವ್ಯ ಮಹಾಭಾರತ ರಚಿಸಿದರು ವೇದವ್ಯಾಸ
ನಾಲ್ಕು ಸಾಲಿನ ಚುಟುಕ ಕುಟುಕುವುದು ನನ್ನ ಹವ್ಯಾಸ
ಪ್ರಾಸ ತರುವಷ್ಟರಲ್ಲಿ ನನಗೆ ಮಹಾಪ್ರಯಾಸ!
ಈ ಚುಟುಕ ಓದುವಷ್ಟರಲ್ಲಿ ಕೆಲವರಿಗೆ ಮಹಾಆಯಾಸ!!

* * * *

ಯೋಗ-ಆಯೋಗ

ಆರೋಗ್ಯಕ್ಕೆ ಎಂದು ಮಾಡುತ್ತೇವೆ ಯೋಗ
ವಿಚಾರಣೆಗೆ ಎಂದು ರಚಿಸುತ್ತದೆ ಸರಕಾರ ಆಯೋಗ

ಕೈಕಾಲು ನಿಯಂತ್ರಿಸುತ್ತ ಮಾಡುತ್ತೇವೆ ಯೋಗ
ಕೈಕಾಲು ಆಡದಂತೆ ಮಾಡುತ್ತಾರೆ
ವಿಚಾರಣೆಯ ಅಡಿಯಲ್ಲಿ ಆಯೋಗ!!

ಕಪಿಲ ಮುನಿ ಮತ್ತು ದೇವಹೂತಿಯ ಸಂವಾದ, ಭಾಗವತದ ಕಥೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಶ್ರೀಮದ್ಭಾಗವತದ ಮೂರನೇ ಸ್ಕಂಧದಲ್ಲಿ ಬರುವ ಕಪಿಲ ಮುನಿ ಮತ್ತು ದೇವಹೂತಿಯ ಸಂವಾದವು ಅತ್ಯಂತ ಸುಂದರ ಹಾಗೂ ತತ್ವಜ್ಞಾನದಿಂದ ಕೂಡಿದ ಪ್ರಸಂಗ. ಇದನ್ನು 'ಕಪಿಲ ಗೀತೆ' ಎಂದೂ ಕರೆಯುತ್ತಾರೆ.

ಬ್ರಹ್ಮನ ಮಾನಸ ಪುತ್ರನಾದ ಕರ್ದಮ ಮುನಿ ಮತ್ತು ಸ್ವಾಯಂಭುವ ಮನುವಿನ ಪುತ್ರಿ, ದೇವಹೂತಿಯ ದಾಂಪತ್ಯದ ಫಲವಾಗಿ ಮಹಾವಿಷ್ಣುವಿನ ಅಂಶವಾಗಿ ಕಪಿಲ ಮುನಿ ಜನಿಸುತ್ತಾರೆ. ನಂತರ ಕರ್ದಮ ಮುನಿಗಳು ಸನ್ಯಾಸ ಸ್ವೀಕರಿಸಿ ತಪಸ್ಸಿಗೆ ತೆರಳಿದಾಗ, ದೇವಹೂತಿಯು ತನ್ನ ಮಗನಾದ ಕಪಿಲನಲ್ಲಿಗೆ ಬಂದು ಸಂಸಾರದ ದುಃಖದಿಂದ ಮುಕ್ತಿ ಪಡೆಯುವ ಮಾರ್ಗವನ್ನು ಬೋಧಿಸುವಂತೆ ವಿನಂತಿಸುತ್ತಾಳೆ. ದೇವಹೂತಿಯು ಕೇಳುತ್ತಾಳೆ: ''ಮಗನೇ, ಇಂದ್ರಿಯಗಳ ಸುಖದ ಬೆನ್ನತ್ತಿ ದಣಿದಿದ್ದೇನೆ. ಅಜ್ಞಾನ ವೆಂಬ ಕತ್ತಲೆಯನ್ನು ಹೋಗಲಾಡಿಸಿ, ಶಾಶ್ವತ ಶಾಂತಿ ನೀಡುವ ಜ್ಞಾನವನ್ನು ನನಗೆ ಉಪದೇಶಿಸು''. ಆಗ ಕಪಿಲ ಮುನಿಗಳು ಅತ್ಯಂತ ಸರಳವಾಗಿ ಸಾಂಖ್ಯ ಯೋಗವನ್ನು ವಿವರಿಸುತ್ತಾರೆ.

● **ಪ್ರಕೃತಿ ಮತ್ತು ಪುರುಷ:** ಕಪಿಲ ಮುನಿಗಳು ಜಗತ್ತನ್ನು ಎರಡು ತತ್ವಗಳಾಗಿ ವಿಂಗಡಿಸುತ್ತಾರೆ: ಪ್ರಕೃತಿ (ಜಡ ವಸ್ತು) ಮತ್ತು ಪುರುಷ (ಪರಮಾತ್ಮ/ಆತ್ಮ). ಪುರುಷನು ಸ್ವತಂತ್ರ ಮತ್ತು ನಿರ್ಲಿಪ್ತ. ಆದರೆ ಯಾವಾಗ ಆತ್ಮವು ಪ್ರಕೃತಿಯ ಗುಣಗಳೊಂದಿಗೆ (ಸತ್ವ, ರಜಸ್ಸು, ತಮಸ್ಸು) ತನ್ನನ್ನು ಗುರುತಿಸಿಕೊಳ್ಳುತ್ತದೆಯೋ, ಆಗ ಮನುಷ್ಯನು ಸಂಸಾರ ಬಂಧನಕ್ಕೆ ಒಳಗಾಗುತ್ತಾನೆ.

● **ಭಕ್ತಿಯೋಗದ ಮಹತ್ವ:** ಕಪಿಲ ಮುನಿಗಳ ಪ್ರಕಾರ, ಕೇವಲ ಒಣ ಜ್ಞಾನಕ್ಕಿಂತ ಭಕ್ತಿಮಿಶ್ರಿತ ಜ್ಞಾನವು ಶ್ರೇಷ್ಠವಾದುದು. ಭಗವಂತನ ನಾಮಸ್ಮರಣೆ ಮತ್ತು ಗುರುವಿನ ಸೇವೆ ಮಾಡುವುದರಿಂದ ಮನಸ್ಸು ನಿರ್ಮಲವಾಗುತ್ತದೆ. ನಿರ್ಮಲವಾದ ಮನಸ್ಸಿನಲ್ಲಿ ಮಾತ್ರ ಪರಮಾತ್ಮನ ದರ್ಶನ ಸಾಧ್ಯ.

● **ಅಷ್ಟಾಂಗ ಯೋಗ:** ಧ್ಯಾನ ಮಾಡುವ ಕ್ರಮವನ್ನು ವಿವರಿಸುತ್ತಾ, ಭಗವಂತನ ರೂಪವನ್ನು ಪಾದದಿಂದ ಹಸ್ತದವರೆಗೆ ಹೇಗೆ ಮನಸ್ಸಿನಲ್ಲಿ ಸ್ಥಿರಗೊಳಿಸಬೇಕು ಎಂಬುದನ್ನು ಕಪಿಲರು ತಿಳಿಸುತ್ತಾರೆ. ಯಮ, ನಿಯಮ, ಆಸನ ಮತ್ತು ಪ್ರಾಣಾಯಾಮಗಳ ಮೂಲಕ ಇಂದ್ರಿಯಗಳನ್ನು ಹತೋಟಿಗೆ ತರಬೇಕು ಎಂದು ಬೋಧಿಸುತ್ತಾರೆ.

● **ಜನ್ಮ ಮತ್ತು ಮೃತ್ಯುವಿನ ಸತ್ಯ:** ಜೀವಿಯು ಗರ್ಭಾವಸ್ಥೆಯಲ್ಲಿ ಪಡುವ ಕಷ್ಟಗಳು ಮತ್ತು ಜನಿಸಿದ ನಂತರ ಮಾಯೆಯಲ್ಲಿ ಸಿಲುಕುವ ಬಗೆಯನ್ನು ಕಪಿಲರು ವಿವರಿಸುತ್ತಾರೆ. ಯಾರು ಈ ಜಗತ್ತಿನ ನಶ್ವರತೆಯನ್ನು ಅರಿತು ಭಗವಂತನಲ್ಲಿ ಶರಣಾಗುತ್ತಾರೋ, ಅವರಿಗೆ ಪುನರ್ಜನ್ಮವಿಲ್ಲ ಎನ್ನುತ್ತಾರೆ.

ಇದರ ಜತೆಗೆ ಕಪಿಲ ಮುನಿಗಳು ಪ್ರಕೃತಿ ಮತ್ತು ಪುರುಷ ಒಳಗೊಂಡಂತೆ 24 ತತ್ವಗಳ ಬಗ್ಗೆ ಕೂಡ ವಿವರಣೆ ನೀಡುತ್ತಾರೆ. ಈ ತತ್ವಗಳಿಂದ ಏನು ಪ್ರಯೋಜನ ಎಂದು ದೇವಹೂತಿ ಕೇಳಿದಾಗ ಕಪಿಲ ಮುನಿಗಳು ಒಂದು ಸುಂದರ ಉದಾಹರಣೆ ನೀಡುತ್ತಾರೆ:

ನೀರಿನಲ್ಲಿ ಸೂರ್ಯನ ಪ್ರತಿಬಿಂಬ ಕಾಣಿಸುತ್ತದೆ. ನೀರು ಅಲುಗಾಡಿದರೆ ಸೂರ್ಯನೂ ಅಲುಗಾಡುತ್ತಿರುವಂತೆ ಭಾಸವಾಗುತ್ತದೆ. ಆದರೆ ಆಕಾಶದಲ್ಲಿರುವ ನಿಜವಾದ ಸೂರ್ಯ ಸ್ಥಿರವಾಗಿದ್ದಾನೆ . ಅದೇ ರೀತಿ, ನೀರು: ಪ್ರಕೃತಿ (ದೇಹ/ಮನಸ್ಸು), ಪ್ರತಿಬಿಂಬ: ಅಹಂಕಾರ (ನಾನು ದೇಹ ಎಂದುಕೊಳ್ಳುವುದು), ನಿಜವಾದ ಸೂರ್ಯ: ಪುರುಷ (ಆತ್ಮ). ನಾವು ಅಹಂಕಾರವನ್ನು ಬದಿಗೊತ್ತಿ, ಬುದ್ಧಿಯನ್ನು (ಮಹತ್ತತ್ವ) ಶುದ್ಧಗೊಳಿಸಿಕೊಂಡರೆ, ನಮ್ಮೊಳಗಿರುವ ಪರಮಾತ್ಮನ ದರ್ಶನ ಪಡೆಯಬಹುದು. ಆಗ ಸುಖ–ದುಃಖಗಳು ನಮ್ಮನ್ನು ಬಾಧಿಸುವುದಿಲ್ಲ. ಹೀಗೆ ಪ್ರತಿಯೊಂದು ತತ್ವಕ್ಕೂ ವಿವರಣೆ ನೀಡುತ್ತಾ ಹೋಗುತ್ತಾರೆ. ಕಪಿಲ ಮುನಿಗಳ ಈ ಬೋಧನೆಯಿಂದ ದೇವಹೂತಿಯ ಅಜ್ಞಾನವೆಲ್ಲವೂ ತೊಲಗಿಹೋಗುತ್ತದೆ. ಅವಳು ಭಕ್ತಿ ಮತ್ತು ಜ್ಞಾನದ ಪರಾಕಾಷ್ಠೆಯನ್ನು ತಲುಪಿ, ತನ್ನ ಮಗನಾದ ಕಪಿಲನನ್ನು ಪರಮಾತ್ಮನೆಂದು ಸ್ತುತಿಸುತ್ತಾಳೆ. ಕೊನೆಗೆ ದೇವಹೂತಿಯು ತಪಸ್ಸಿನ ಮೂಲಕ ದೇಹತ್ಯಾಗ ಮಾಡಿ ಪರಂಧಾಮವನ್ನು ಪಡೆಯುತ್ತಾಳೆ.

ಭಾಗವತದ ಕಥೆಗಳು ನಮಗೆ ಅಚಲವಾದ ಭಕ್ತಿ, ವಿನಯ ಮತ್ತು ಶರಣಾಗತಿಯ ಮಹತ್ವವನ್ನು ಬೋಧಿಸುತ್ತವೆ. ಅಹಂಕಾರ ಮತ್ತು ಅತಿಯಾದ ಆಸೆಗಳು ಮನುಷ್ಯನ ಪತನಕ್ಕೆ ಕಾರಣವಾಗುತ್ತವೆ ಎಂದು ಇವು ಎಚ್ಚರಿಸುತ್ತವೆ. ಪ್ರತಿಯೊಂದು ಸನ್ನಿವೇಶದಲ್ಲೂ ಧರ್ಮದ ಹಾದಿಯಲ್ಲಿ ನಡೆದು, ಸುಖ–ದುಃಖಗಳನ್ನು ಸಮಾನವಾಗಿ ಸ್ವೀಕರಿಸುವುದೇ ಜೀವನದ ಸಾರ್ಥಕತೆ ಎಂಬುದು ಇದರ ಸಾರವಾಗಿದೆ. ಇಂಥ ಜೀವನ ಮೌಲ್ಯಗಳುಳ್ಳ ಅದ್ಭುತವಾದ ಧರ್ಮಗ್ರಂಥಗಳನ್ನ ತಿಳಿದುಕೊಳ್ಳುವ, ಅವುಗಳ ಸಾರವನ್ನು ಗ್ರಹಿಸುವ, ಇದಕ್ಕೆ ಸಂಬಂಧಪಟ್ಟ ಕಥೆಗಳನ್ನ ಆಸಕ್ತಿಯಿಂದ ಓದುವ ಸಂಸ್ಕಾರವನ್ನ ನಾವು ಬೆಳೆಸಿಕೊಳ್ಳಬೇಕು. ಬದುಕಿಗೆ ಗುರುವಾಗಿ ಇವು ನಮಗೆ ದಾರಿದೀಪವಾಗುತ್ತವೆ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು–560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಅಮೆರಿಕ ಕ್ರಿಕೆಟಿಗನಿಗೆ ವೀಸಾ ನಿರಾಕರಣೆ

ದೆಹಲಿ: ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತವು ತನ್ನ ಮೊದಲ ಪಂದ್ಯದಲ್ಲಿ ಅಮೆರಿಕವನ್ನು ಎದುರಿಸಲಿದ್ದು, ಯುಎಸ್ ತಂಡದ ವೇಗಿ ಅಲಿ ಖಾನ್ ತಮಗೆ ಭಾರತಕ್ಕೆ ವೀಸಾ ನಿರಾಕರಿಸಲಾಗಿದೆ ಎಂದು ಹೇಳಿಕೊಂಡಿದ್ದಾರೆ. 35ರ ವಯಸ್ಸಿನ ವೇಗಿ ಅಲಿ ಖಾನ್ ಪಾಕಿಸ್ತಾನದ ಅಟಾಕ್ ನಲ್ಲಿ ಜನಿಸಿದರು. 19ನೇ ವಯಸ್ಸಿನಲ್ಲಿ ಅವರು ತಮ್ಮ ಕುಟುಂಬದೊಂದಿಗೆ ಅಮೆರಿಕಕ್ಕೆ ಸ್ಥಳಾಂತರಗೊಂಡರು. ತಮ್ಮ ಇನ್‌ಸ್ಟಾಗ್ರಾಮ್ ಸ್ಟೋರಿಯಲ್ಲಿ ಫೋಟೋ ಪೋಸ್ಟ್ ಮಾಡಿ, 'ಭಾರತದ ವೀಸಾ ಸಿಗಲಿಲ್ಲ, ಆದರೆ ಕೆಎಫ್‌ಸಿ ನನ್ನ ಹೃದಯ ಗೆದ್ದಿತು' ಎಂದು ಬರೆದುಕೊಂಡಿದ್ದಾರೆ. ಅಲಿ ಖಾನ್ 2019ರಲ್ಲಿ ಅಮೆರಿಕ ಕ್ರಿಕೆಟ್ ತಂಡ ಪರ ಪದಾರ್ಪಣೆ ಮಾಡಿದ್ದರು. ಇಲ್ಲಿಯವರೆಗೆ ಅವರು 15 ಏಕದಿನ ಪಂದ್ಯಗಳು ಮತ್ತು 18 ಟಿ20 ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ. ಏಕದಿನ ಪಂದ್ಯಗಳಲ್ಲಿ 33 ಮತ್ತು ಟಿ20 ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ 16 ವಿಕೆಟ್‌ಗಳನ್ನು ಗಳಿಸಿದ್ದಾರೆ. ವಿಶ್ವಕಪ್ ಟೂರ್ನಿಯಲ್ಲಿ ಅಮೆರಿಕ ತಂಡವು ಗ್ರೂಪ್-ಎನಲ್ಲಿದ್ದು, ಭಾರತ, ಪಾಕಿಸ್ತಾನ, ನೆದರ್‌ಲೆಂಡ್ಸ್ ಮತ್ತು ನಮೀಬಿಯಾ ತಂಡಗಳ ವಿರುದ್ಧ ಕಾದಾಟ ನಡೆಸಲಿದೆ. ತಂಡದ ಮೊದಲ ಪಂದ್ಯ ಫೆಬ್ರವರಿ 7ರಂದು ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಭಾರತದ ವಿರುದ್ಧ ನಡೆಯಲಿದೆ. 2024ರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನವನ್ನು ಸೋಲಿಸುವ ಮೂಲಕ ಯುಎಸ್‌ಎ ತಂಡವು ಎಲ್ಲರನ್ನು ಅಚ್ಚರಿಗೊಳಿಸಿತ್ತು.

ಬಳ್ಳಾರಿಯಲ್ಲಿ ರಾಜ್ಯ ಟೆನಿಸ್ ಟೂರ್ನಮೆಂಟ್ ಮುಕ್ತಾಯ

ಬಳ್ಳಾರಿ: ನಗರದ ಪೊಲೀಸ್ ಜಮಾಖಾನ ವತಿಯಿಂದ ಜೆಎಸ್‌ಡಬ್ಲ್ಯು ಸಹಯೋಗದಲ್ಲಿ 'ಉತ್ತರ ಕರ್ನಾಟಕ ಟೆನಿಸ್ ಟೂರ್ನಮೆಂಟ್' ಹಮ್ಮಿಕೊಳ್ಳಲಾಗಿತ್ತು. ರಾಜ್ಯಾದ್ಯಂತ ದಿಂದ ಆಗಮಿಸಿದ ಸುಮಾರು 300 ಟೆನಿಸ್ ಆಟಗಾರರು ಟೂರ್ನಿಯಲ್ಲಿ ಪಾಲ್ಗೊಂಡಿದ್ದರು. ಬಹುಮಾನ ವಿತರಣೆ ಮತ್ತು ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಬಳ್ಳಾರಿ ವಿಭಾಗದ ಐಜಿಪಿ ಡಾ. ಪಿ. ಎಸ್. ಹರ್ಷ ಮತ್ತು ಬಳ್ಳಾರಿಯ ಪೊಲೀಸ್ ವರಿಷ್ಠಾಧಿಕಾರಿ ಡಾ. ಸುಮನ್ ಡಿ. ಪೆನ್ನೇಕರ್ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಜೆಎಸ್‌ಡಬ್ಲ್ಯು ಸ್ಟೀಲ್ ವಿಜಯನಗರ ವರ್ಕ್ಸ್ ಅನ್ನು ಪ್ರತಿನಿಧಿಸಿದ ಮಾಜಿ ಪೊಲೀಸ್ ಡಿಐಜಿ ಎಸ್. ಆನಂದ್, ಐಪಿಎಸ್ (ನಿವೃತ್ತ), ಕಾರ್ಯನಿರ್ವಾಹಕ ಅಧ್ಯಕ್ಷ ರವಿ ರಾಜಶೇಖರ ರೆಡ್ಡಿ, ಕಾರ್ಯದರ್ಶಿ ಶಿವ ನಾಯಕ್ ಮತ್ತು ಬಳ್ಳಾರಿ ಪೊಲೀಸ್ ಜಿಮಾಖಾನದ ಖಜಾಂಚಿ ಸತೀಶ್ ಉಪಸ್ಥಿತರಿದ್ದರು.

ಕಿವೀಸ್‌ಗೆ ಗಿಲ್ ಪಡೆಯ ಸವಾಲು | ಮತ್ತೊಮ್ಮೆ ಕ್ರಿಕೆಟ್‌ಪ್ರೇಮಿಗಳ ಚಿತ್ತ ರೋಕೊ ಆಟದತ್ತ

ಭಾರತಕ್ಕೆ ಸರಣಿ ಗೆಲ್ಲುವ ತವಕ

ರಾಜ್‌ಕೋಟ್: ಈಗಾಗಲೇ ಏಕದಿನ ಸರಣಿಯಲ್ಲಿ 1-0 ಅಂತರದಿಂದ ಮುಂದಿರುವ ಭಾರತ ಕ್ರಿಕೆಟ್ ತಂಡವು ಇಂದು ಇಲ್ಲಿ ನಡೆಯಲಿರುವ ದ್ವಿತೀಯ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ. ಕೇವಲ ಮೂರು ಪಂದ್ಯಗಳನ್ನು ಒಳಗೊಂಡ ಸರಣಿ ಇದಾಗಿರುವುದರಿಂದ ಈ ಪಂದ್ಯವನ್ನು ಗೆದ್ದು ಸರಣಿ ತನ್ನದನ್ನಾಗಿಸುವ ತವಕ ಶುಭ್‌ಮನ್ ಗಿಲ್ ತಂಡದ್ದಾಗಿದೆ.

ವಡೋದರರ ಬಿಸಿಎ ಕ್ರೀಡಾಂಗಣದಲ್ಲಿ ನಡೆದಿದ್ದ ಮೊದಲನೇ ಏಕದಿನ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ್ದ ಕಿವೀಸ್ ತಂಡ, ತನ್ನ ಪಾಲಿನ 50 ಓವರ್‌ಗಳಿಗೆ 300 ರನ್‌ಗಳನ್ನು ಕಲೆ ಹಾಕಿತ್ತು. ಬಳಿಕ 301 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಭಾರತ ತಂಡ, ಶುಭ್‌ಮನ್ ಗಿಲ್ ಹಾಗೂ ವಿರಾಟ್ ಕೊಹ್ಲಿ ಅವರ ಅರ್ಧಶತಕಗಳ ಬಲದಿಂದ 49 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 306 ರನ್ ಗಳಿಸಿ ಗೆಲುವಿನ ದಡ ಸೇರಿತ್ತು.

ಈಗಾಗಲೇ ಈ ಸರಣಿಯಲ್ಲಿ ಉತ್ತಮ ಆರಂಭವನ್ನು ಕಂಡಿರುವ ವಿರಾಟ್ ಕೊಹ್ಲಿ ನಿರಂಜನ್ ಶಾ ಮೈದಾನದಲ್ಲಿ ಮತ್ತೊಮ್ಮೆ ಭರ್ಜರಿ ಬ್ಯಾಟಿಂಗ್ ಪ್ರದರ್ಶನ ನೀಡಬಹುದೆಂಬ ನಿರೀಕ್ಷೆ ಕ್ರಿಕೆಟ್‌ಪ್ರೇಮಿಗಳದ್ದಾಗಿದೆ. ಇಲ್ಲಿ ಅತೀ ಹೆಚ್ಚು ಏಕದಿನ ರನ್ ಗಳಿಸಿದ ಆಟಗಾರ ಎಂಬ ದಾಖಲೆಯನ್ನು ಕೊಹ್ಲಿ ಹೊಂದಿದ್ದಾರೆ. ನಾಲ್ಕು ಏಕದಿನ ಪಂದ್ಯಗಳನ್ನು ಈ ಮೈದಾನದಲ್ಲಿ ಆಡಿರುವ ಕೊಹ್ಲಿ, 56.50 ಸರಾಸರಿಯಲ್ಲಿ 226 ರನ್ ಗಳಿಸಿದ್ದು, ಅವರ ಗರಿಷ್ಠ ಸ್ಕೋರ್ 78 ಆಗಿದೆ. ಮೂರು ಅರ್ಧಶತಕಗಳನ್ನು ಅವರು ಈ ಮೈದಾನದಲ್ಲಿ ದಾಖಲಿಸಿದ್ದಾರೆ.

ಮೊದಲ ಏಕದಿನ ಪಂದ್ಯದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ರೋಹಿತ್ ಶರ್ಮಾ ಬ್ಯಾಟಿನಿಂದ ರನ್‌ಹೊಳೆ ಹರಿದು ಬರದಿದ್ದರೂ, ಬುಧವಾರದ ಪಂದ್ಯದಲ್ಲಿ ಅವರು ಮಿಂಚುವ ನಿರೀಕ್ಷೆಯಲ್ಲಿದ್ದಾರೆ. ಅದೇ ರೀತಿ ತಂಡದ ನಾಯಕ ಶುಭ್‌ಮನ್ ಗಿಲ್ ಕೂಡಾ ತಮ್ಮ ಉತ್ತಮ ಬ್ಯಾಟಿಂಗ್ ಫಾರ್ಮ್ ಮುಂದುವರಿಸುವ ಉತ್ಸಾಹದಲ್ಲಿದ್ದಾರೆ.

ವಡೋದರದಲ್ಲಿ ಸ್ಪಿನ್ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರು ಗಾಯಕ್ಕೆ ತುತ್ತಾಗಿದ್ದರು. ಹಾಗಾಗಿ ರಾಜ್‌ಕೋಟ್‌ನಲ್ಲಿ ನಡೆಯಲಿರುವ ಎರಡನೇ ಪಂದ್ಯದಲ್ಲಿ ಅವರ ಸ್ಥಾನಕ್ಕೆ ಆಯ್ಕೆ ಆಗಿರುವ ಆಯುಷ್ ಬದೋನಿಗೆ ಈ ಎರಡನೇ ಪಂದ್ಯದಲ್ಲಿ ಸ್ಥಾನ ಸಿಗುವ ಸಾಧ್ಯತೆಗಳು ಬಹುತೇಕ ಕಡಿಮೆ ಎನ್ನಲಾಗುತ್ತಿದೆ. ಆ ಸ್ಥಾನದಲ್ಲಿ ಧ್ರುವ್ ಜುರೆಲ್‌ಗೆ ಅವಕಾಶ ದೊರೆತರೆ ಕೆಎಲ್ ರಾಹುಲ್ ಅವರನ್ನು ಬ್ಯಾಟ್ಸ್‌ಮನ್ ಆಗಿ ಮಾತ್ರ ಪರಿಗಣಿಸಬಹುದು. ಬುಧವಾರದ ಪಂದ್ಯದಲ್ಲಿ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿಗೂ ಅವಕಾಶ ಸಿಗುವ ಸಾಧ್ಯತೆ ಇದೆ.

ಭಾರತ ತಂಡದ ಬೌಲರ್‌ಗಳ ಪೈಕಿ ಮೊಹಮ್ಮದ್ ಸಿರಾಜ್, ಹರ್ಷಿತ್ ರಾಣಾ ಹಾಗೂ ಪ್ರಸಿದ್ಧ್ ಕೃಷ್ಣ ಅವರ ಸ್ಥಾನದಲ್ಲಿ ಒಂದು ಬದಲಾವಣೆಯನ್ನು ಮಾಡಲು ಟೀಮ್ ಮ್ಯಾನೇಜ್‌ಮೆಂಟ್ ಬಯಸಬಹುದು. ಹಾಗಾಗಿ ಒಂದು ಸ್ಥಾನದಲ್ಲಿ ಅರ್ಷದೀಪ್ ಸಿಂಗ್ ಅವರಿಗೆ ತಂಡದಲ್ಲಿ ಸ್ಥಾನ ಸಿಗಬಹುದು. ಕರೆತರಬಹುದು.

ಪಿಚ್ ರಿಪೋರ್ಟ್: ರಾಜ್‌ಕೋಟ್‌ನ ನಿರಂಜನ್ ಶಾ ಕ್ರೀಡಾಂಗಣದ ಪಿಚ್ ಬ್ಯಾಟಿಂಗ್‌ಗೆ ಹೆಚ್ಚು ಸಹಕಾರಿಯಾಗಿದೆ. ಹೀಗಾಗಿ ಪಂದ್ಯ ಹೈ ಸ್ಕೋರಿಂಗ್ ಆಗುವ ನಿರೀಕ್ಷೆ ಇದೆ. ಹಿಂದಿನ ಏಕದಿನ ಪಂದ್ಯಗಳಲ್ಲಿ 352, 340 ಮತ್ತು 325ನಂತಹ ಹೆಚ್ಚಿನ ಮೊದಲ ಇನ್ನಿಂಗ್ಸ್ ಸ್ಕೋರ್‌ಗಳನ್ನು ದಾಖಲಿಸಿದೆ. ಇಲ್ಲಿ ಇದುವರೆಗೆ ನಾಲ್ಕು ಏಕದಿನ ಪಂದ್ಯಗಳು ಮಾತ್ರ ನಡೆದಿವೆ. ಭಾರತವು ಈ ನಾಲ್ಕು ಪಂದ್ಯಗಳಲ್ಲಿ ಒಂದನ್ನು ಮಾತ್ರ 2020 ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಗೆದ್ದಿತ್ತು.

ಮೊದಲ ಏಕದಿನ ಪಂದ್ಯದಲ್ಲಿ ಕಿವೀಸ್ ತಂಡವು ನೀಡಿದ ಹೋರಾಟವನ್ನು ಗಮನಿಸಿದರೆ, ಬುಧವಾರದ ಮುಖಾಮುಖಿಯು ತೀವ್ರ ಪೈಪೋಟಿಯಿಂದ ಕೂಡಿರಬಹುದು ಎಂದೇ ಹೇಳಲಾಗುತ್ತಿದೆ. ಕಿವೀಸ್ ಪರವಾಗಿ ಡೆವೋನ್ ಕಾನ್ವೇ, ಹೆನ್ರಿ ನಿಕೋಲ್ಸ್ ಬ್ಯಾಟ್‌ನಿಂದ ಉತ್ತಮ ಇನ್ನಿಂಗ್ಸ್ ಮೂಡಿಬರಬಹುದೆನ್ನುವ ಆಶಾಭಾವನೆಯ ನ್ನೊಂದಿದ್ದಾರೆ. ಹಾಗೆಯೇ ಡ್ಯಾರಿಲ್ ಮಿಚೆಲ್, ಕ್ರಿಸ್ಟಿಯನ್ ಕ್ಲರ್ಕ್ ಕೂಡ ಆಲ್‌ರೌಂಡ್ ಆಟ ಪ್ರದರ್ಶಿಸಬಹುದೆನ್ನುವ ನಿರೀಕ್ಷೆಯನ್ನೊಂದಿದ್ದಾರೆ.

ಭಾರತ ಸಂಭಾವ್ಯ ತಂಡ

ರೋಹಿತ್ ಶರ್ಮಾ, ಶುಭ್‌ಮನ್ ಗಿಲ್ (ನಾಯಕ), ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆಎಲ್ ರಾಹುಲ್ , ರವೀಂದ್ರ ಜಡೇಜಾ, ನಿತೀಶ್ ಕುಮಾರ್ ರೆಡ್ಡಿ, ಹರ್ಷಿತ್ ರಾಣಾ, ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್, ಪ್ರಸಿದ್ಧ್ ಕೃಷ್ಣ.

ನ್ಯೂಜಿಲೆಂಡ್ ಸಂಭಾವ್ಯ ತಂಡ

ಡೆವೊನ್ ಕಾನ್ವೆ, ಹೆನ್ರಿ ನಿಕೋಲ್ಸ್, ವಿಲ್ ಯಂಗ್, ಡ್ಯಾರಿಲ್ ಮಿಚೆಲ್, ಗ್ಲೆನ್ ಫಿಲಿಪ್ಸ್, ಮಿಚೆಲ್ ಹೇ (ಕೀಪರ್), ಮೈಕೆಲ್ ಬ್ರೇಸ್‌ವೆಲ್(ನಾಯಕ), ಜಕಾರಿ ಫೌಲ್ಕ್ಸ್, ಕ್ರಿಸ್ಟಿಯನ್ ಕ್ಲಾರ್ಕ್, ಕೈಲ್ ಜೇಮಿಸನ್, ಆದಿತ್ಯ ಅಶೋಕ್.

ಟಿ20 ವಿಶ್ವಕಪ್ ಪಂದ್ಯಗಳ ಐಸಿಸಿ ಸೂಚನೆಯ ಬಗ್ಗೆ ಪ್ರತಿಕ್ರಿಯೆ

ಭಾರತದಲ್ಲಿ ಆಡುವುದು ಅಸಾಧ್ಯ: ಬಾಂಗ್ಲಾದೇಶ

ಢಾಕಾ: ಮುಂದಿನ ತಿಂಗಳು ನಡೆಯಲಿರುವ ವಿಶ್ವಕಪ್ ಪಂದ್ಯಗಳನ್ನಾಡಲು ಬಾಂಗ್ಲಾ ತಂಡವು ಭಾರತಕ್ಕೆ ಪ್ರಯಾಣಿಸುವುದಿಲ್ಲ ಎಂದು ಬಾಂಗ್ಲಾದೇಶದ ಕ್ರೀಡಾ ಸಲಹೆಗಾರ ಆಸಿಫ್ ನಜ್ರುಲ್ ಮತ್ತೊಮ್ಮೆ ಪುನರುಚ್ಚರಿಸಿದ್ದಾರೆ. ಭಾರತದಲ್ಲಿ ಬಲವಾದ ಬಾಂಗ್ಲಾದೇಶ ವಿರೋಧಿ ಭಾವನೆ ಇದೆ, ಹಾಗಾಗಿ ವಿಶ್ವಕಪ್ ಟೂರ್ನಮೆಂಟ್‌ನಲ್ಲಿ ಪಂದ್ಯಗಳನ್ನು ಆಡಲು ತಮ್ಮ ದೇಶದ ತಂಡವನ್ನು ಕಳುಹಿಸುವುದು ಅಸಾಧ್ಯವೆಂದು ಅವರು ಹೇಳಿದ್ದಾರೆ.

ಈಗಾಗಲೇ ನಿಶ್ಚಯವಾಗಿರುವ ಭಾರತದ ಕೋಲ್ಕತ್ತಾ ಮತ್ತು ಮುಂಬೈ ಬದಲು ಬಾಂಗ್ಲಾದೇಶವು ತಿರುವನಂತಪುರ ಮತ್ತು ಚೆನ್ನೈಯಲ್ಲಿ ತನ್ನ ಪಂದ್ಯಗಳನ್ನು ಆಡಬಹುದು ಎಂಬ ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ನೀಡಿರುವ ಸೂಚನೆಯ ಹಿನ್ನೆಲೆಯಲ್ಲಿ ನಜ್ರುಲ್ ಈ ರೀತಿ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿಯನ್ನು ತೀವ್ರವಾಗಿ ಟೀಕಿಸಿರುವ ಅವರು, 'ಐಸಿಸಿ ನಿಜವಾಗಿಯೂ ಒಂದು ಸ್ವಾಯತ್ತ ಸಂಸ್ಥೆ ಆಗಿದ್ದರೆ, ಅದು ಬಾಂಗ್ಲಾದೇಶಕ್ಕೆ ಭಾರತದ ಹೊರಗೆ ಎಲ್ಲಾ ಪಂದ್ಯಗಳನ್ನು ಆಡಲು ಅವಕಾಶ ನೀಡಬೇಕು' ಎಂದು ಹೇಳಿದರು. ಬಾಂಗ್ಲಾದೇಶ ತಂಡವು ಶ್ರೀಲಂಕಾ, ಪಾಕಿಸ್ತಾನ ಅಥವಾ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಆಡುವುದನ್ನು ತಾವು ಸಂತೋಷಪಡುವುದಾಗಿ ಕ್ರೀಡಾ ಸಲಹೆಗಾರರು ಹೇಳಿದ್ದು, ಬಾಂಗ್ಲಾದೇಶ ಈ ವಿಷಯದಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ ಎಂದು ಹೇಳಿದರು.

'ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು ಉಗ್ರಗಾಮಿ ಕೋಮುವಾದಿ ಶಕ್ತಿಗಳಿಗೆ ತಲೆಬಾಗಿ, ನಮ್ಮ ತಂಡದ ಆಟಗಾರನನ್ನು ಅಲ್ಲಿ ಆಡಲು ಬಿಡಬಾರದು ಎಂದು ಹೇಳಿದಾಗ, ನಮಗೆ ಇದಕ್ಕಿಂತ ದೊಡ್ಡ ಪುರಾವೆ ಇನ್ನೇನು ಬೇಕು? ಭದ್ರತಾ ತಂಡದಿಂದ ಬಂದ ಪತ್ರದ ಪ್ರತಿ ನಮ್ಮಲ್ಲಿದ್ದು, ಅಲ್ಲಿ ಆಡಲು ನಮಗೆ ಸೂಕ್ತ ವಾತಾವರಣವಿಲ್ಲ' ಎಂದು ಅದು ಸಾಬೀತುಪಡಿಸುತ್ತದೆ ಎಂದು ಆಸಿಫ್ ನಜ್ರುಲ್ ಹೇಳಿದ್ದಾರೆ.

ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ದಿಢೀರ್ ನಿವೃತ್ತಿ ಘೋಷಿಸಿದ ಆಸ್ಟ್ರೇಲಿಯಾ ನಾಯಕಿ

ಆಸ್ಟ್ರೇಲಿಯಾದ ಅಲಿಸ್ಸಾ ಹೀಲಿ ನಿವೃತ್ತಿ

ಸಿಡ್ನಿ: ಆಸ್ಟ್ರೇಲಿಯಾ ತಂಡದ ನಾಯಕಿ ಅಲಿಸಾ ಹೀಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ದಿಢೀರ್ ನಿವೃತ್ತಿ ಘೋಷಿಸಿದ್ದು, ಮುಂಬರುವ ಭಾರತ ವಿರುದ್ಧದ ಬಹು ಸ್ವರೂಪದ ತವರು ಸರಣಿಯ ಮೂಲಕ 16 ವರ್ಷಗಳ ವೃತ್ತಿಜೀವನಕ್ಕೆ ತೆರೆ ಬೀಳಲಿದೆ ಎಂದು ಬಹಿರಂಗಪಡಿಸಿದ್ದಾರೆ. ಮಾರ್ಚ್ 6ರಿಂದ 9ರ ವರೆಗೆ ಪರ್ತ್‌ನಲ್ಲಿ ಭಾರತ ವಿರುದ್ಧದ ಏಕೈಕ ಟೆಸ್ಟ್ ಪಂದ್ಯವು ಆಸ್ಟ್ರೇಲಿಯಾ ಪರ ಹೀಲಿ ಅವರ ಕೊನೆಯ ಪಂದ್ಯವಾಗಲಿದೆ.

35 ವರ್ಷದ ಹೀಲಿ ಮಂಗಳವಾರ ವಿಲ್ಲೋ ಟಾಕ್ ಪಾಡ್‌ಕ್ಯಾಸ್ಟ್‌ನಲ್ಲಿ ಕಾಣಿಸಿಕೊಂಡ ಸಂದರ್ಭದಲ್ಲಿ ಈ ಘೋಷಣೆ ಮಾಡಿದ್ದಾರೆ. 'ಉನ್ನತ ಮಟ್ಟದಲ್ಲಿ ಸ್ಪರ್ಧಾತ್ಮಕತೆ ನಿಧಾನವಾಗಿ ಮಸುಕಾಗುತ್ತಿದೆ ಎಂದು ಭಾವಿಸಿದ ನಂತರ, ಹಲವಾರು ತಿಂಗಳುಗಳಿಂದ ನಿವೃತ್ತಿಯ ಬಗ್ಗೆ ಯೋಚಿಸುತ್ತಿದ್ದೆ' ಎಂದು ಹೀಲಿ ಒಪ್ಪಿಕೊಂಡರು.

ಹೀಲಿ ಸುಮಾರು 300 ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದು, ಎಲ್ಲಾ ಮಾದರಿಗಳಲ್ಲಿ 7,000ಕ್ಕೂ ಹೆಚ್ಚು ರನ್ ಗಳಿಸಿರುವ ಮೂಲಕ ತಮ್ಮ ವೃತ್ತಿಜೀವನವನ್ನು ಕೊನೆಗೊಳಿಸಲಿದ್ದಾರೆ. 2010ರಲ್ಲಿ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. 2023ರಲ್ಲಿ ನಾಯಕಿಯಾಗಿ ಆಸ್ಟ್ರೇಲಿಯಾ ತಂಡಕ್ಕೆ ಇಂಗ್ಲೆಂಡ್ ವಿರುದ್ಧ ಐತಿಹಾಸಿಕ ಸರಣಿ ಗೆಲುವನ್ನು ತಂದುಕೊಟ್ಟಿದ್ದರು.

ಎಂಟು ಐಸಿಸಿ ವಿಶ್ವಕಪ್‌ನಲ್ಲಿ ಭಾಗವಹಿಸಿದ್ದ ಅವರು, 2019 ರಲ್ಲಿ ಬೆಲಿಂಡಾ ಕ್ಲಾರ್ಕ್ ಪ್ರಶಸ್ತಿಯನ್ನು ಪಡೆದಿದ್ದಾರೆ. ಎರಡು ಬಾರಿ ಐಸಿಸಿ ಮಹಿಳಾ ಟಿ 20 ವರ್ಷದ ಕ್ರಿಕೆಟರ್ ಮತ್ತು 2022 ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಆಸ್ಟ್ರೇಲಿಯಾ ಚಿನ್ನದ ಪದಕ ಗೆಲ್ಲುವಲ್ಲಿ ಅಲಿಸ್ಸಾ ಹೀಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ತಂಡಕ್ಕೆ ಮರಳಿದ ಹಲವಾರು ಹಿರಿಯ ಕ್ರಿಕೆಟಿಗರು | ಫೆಬ್ರವರಿ-7ರಂದು ಪಾಕ್ ವಿರುದ್ಧ ಮೊದಲ ಪಂದ್ಯ

ವಿಶ್ವಕಪ್‌ಗೆ ನೆದರ್ಲ್ಯಾಂಡ್ಸ್ ತಂಡ ಪ್ರಕಟ

ದೆಹಲಿ: ಮುಂದಿನ ತಿಂಗಳು ಭಾರತ ಮತ್ತು ಶ್ರೀಲಂಕಾದಲ್ಲಿ ನಡೆಯಲಿರುವ ಟಿ 20 ವಿಶ್ವಕಪ್‌ಗಾಗಿ ನೆದರ್ಲ್ಯಾಂಡ್ಸ್ 15 ಸದಸ್ಯರ ತಂಡವನ್ನು ಪ್ರಕಟಿಸಿದೆ. ಸ್ಕಾಟ್ ಎಡ್ವರ್ಡ್ಸ್ ತಂಡವನ್ನು ಮುನ್ನಡೆಸಲಿದ್ದಾರೆ.

ವರ್ಷದ ಆರಂಭದಲ್ಲಿ ನಡೆದ ಟಿ20 ವಿಶ್ವಕಪ್ ಯುರೋಪ್ ಪ್ರದೇಶದ ಫೈನಲ್‌ನಲ್ಲಿ ಆಡಿದ ನಂತರ ಬಾಂಗ್ಲಾದೇಶ ಸರಣಿಯನ್ನು ತಪ್ಪಿಸಿಕೊಂಡ ಆಟಗಾರರನ್ನು ಮರಳಿ ಕರೆಸಿಕೊಳ್ಳಲಾಗಿದೆ. ರೋಲೋಫ್ ವ್ಯಾನ್ ಡೆರ್ ಮೆರ್ವೆ, ಬಾಸ್ ಡಿ ಲೀಡೆ, ಮೈಕೆಲ್ ಲೆವಿಟ್ ಮತ್ತು ಜ್ಯಾಕ್ ಲಯನ್ ಕ್ಯಾಚೆಟ್ ಮತ್ತೆ ತಂಡಕ್ಕೆ ಮರಳಿದ್ದಾರೆ.

2024ರ ನವೆಂಬರ್‌ನಲ್ಲಿ ಕೊನೆಯ ಬಾರಿಗೆ ಕಾಣಿಸಿಕೊಂಡ ನಂತರ ಕಾಲಿನ್ ಅಕೆರ್ಮನ್ ಟಿ20 ಕ್ರಿಕೆಟ್‌ಗೆ ಮರಳಿದ್ದಾರೆ. ಇಂಗ್ಲೆಂಡ್‌ನ 2025ರ ವಿಟಾಲಿಟಿ ಬ್ಲಾಸ್ಟ್ ಪಂದ್ಯಾವಳಿಯಲ್ಲಿ ಅವರು ಡರ್ಹ್ಯಾಮ್ ಪರ 14 ಪಂದ್ಯಗಳಲ್ಲಿ 304 ರನ್ ಗಳಿಸಿದ್ದರು. 34 ವರ್ಷದ ಟಿಮ್ ವ್ಯಾನ್ ಡೆರ್ ಗುಗ್ಟನ್ ಕೂಡ ಟಿ20 ಪಂದ್ಯಗಳಿಂದ ಒಂದು ವರ್ಷ ದೂರವಿದ್ದು, ಹತ್ತು ಬ್ಲಾಸ್ಟ್ ಪಂದ್ಯಗಳಲ್ಲಿ ಆರು ವಿಕೆಟ್‌ಗಳನ್ನು ಗಳಿಸಿದ್ದಾರೆ. ಎಡ್ವರ್ಡ್ಸ್ ತಂಡದ ಪ್ರಾಥಮಿಕ ವಿಕೆಟ್ ಕೀಪರ್ ಆಗಿ ಮುಂದುವರಿಯಲಿದ್ದು, ಕೈಲ್ ಕ್ಲೈನ್ ಅವರನ್ನು ಮೀಸಲು ಆಯ್ಕೆಯಾಗಿ ಸೇರಿಸಿಕೊಳ್ಳಲಾಗಿದೆ.

ನೆದರ್ಲ್ಯಾಂಡ್ಸ್ ಗ್ರೂಪ್-ಎನಲ್ಲಿ ಸ್ಥಾನ ಪಡೆದಿದ್ದು, ಫೆಬ್ರವರಿ 7ರಂದು ಕೊಲಂಬೊದಲ್ಲಿ ಪಾಕಿಸ್ತಾನ ವಿರುದ್ಧ ತನ್ನ ಅಭಿಯಾನವನ್ನು ಆರಂಭಿಸಲಿದೆ. ಗುಂಪು ಹಂತದಲ್ಲಿ ಫೆಬ್ರವರಿ 10ರಂದು ದೆಹಲಿಯಲ್ಲಿ ನಮೀಬಿಯಾ ವಿರುದ್ಧ, ಫೆಬ್ರವರಿ 13 ರಂದು ಚೆನ್ನೈನಲ್ಲಿ ಯುಎಇ ವಿರುದ್ಧ ಮತ್ತು ಫೆಬ್ರವರಿ 18ರಂದು ಅಹಮದಾಬಾದ್‌ನಲ್ಲಿ ಭಾರತದ ವಿರುದ್ಧ ಆಡಲಿದೆ.

ಬೆಳ್ಳಿತೆರೆಗೆ ಅಮೃತಾಂಜನ್

ಅಮೃತಾಂಜನ್ ಕಿರುಚಿತ್ರವನ್ನು ಎಲ್ಲರೂ ನೋಡಿ ನಕ್ಕಿದ್ದಾರೆ. ಆನಂದಿಸಿದ್ದಾರೆ. ಇದೀಗ ಅಮೃತಾಂಜನ್ ಶೀರ್ಷಿಕೆಯಲ್ಲಿಯೇ ಸಿನಿಮಾ ಮೂಡಿಬರುತ್ತಿದೆ. ಜೆಆರ್‌ಎಂ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ಅಮೃತಾಂಜನ್ ಕಿರುಚಿತ್ರಕ್ಕೂ ಅಮೃತಾಂಜನ್ ಸಿನಿಮಾಗೂ ಬಹಳ ವ್ಯತ್ಯಾಸವಿದೆ. ನಾನು ಇದಕ್ಕೂ ಮೊದಲು ಸೋಡಾಬುಡ್ಡಿ ಎಂಬ ಸಿನಿಮಾ ಮಾಡಿದ್ದೆ ಅದು ಅಷ್ಟಾಗಿ ಸದ್ದು ಮಾಡಲಿಲ್ಲ. ಆಮೇಲೆ ಒಂದು ಕಿರುಚಿತ್ರ ನಿರ್ದೇಶನ ಮಾಡಿದೆ. ಅದೇ ಅಮೃತಾಂಜನ್. ಈಗ ಅದೇ ಅಮೃತಾಂಜನ್ ಸಿನಿಮಾವನ್ನು ಬೆಳ್ಳಿತೆರೆಗೆ ತರುತ್ತಿದ್ದೇವೆ. ಕಿರುಚಿತ್ರಕ್ಕಿಂತ ವಿಭಿನ್ನವಾದ ಕಥೆ ಈ ಸಿನಿಮಾದಲ್ಲಿದೆ ಎಂದು ನಿರ್ದೇಶಕರು ಹೇಳಿದರು.

ಕಿರುಚಿತ್ರದ ತಂಡವೇ ಇಲ್ಲಿಯೂ ಇದೆ. ಈ ಚಿತ್ರಕ್ಕಾಗಿ ಮೂರು ತಿಂಗಳು ರಿಹರ್ಸಲ್ ಮಾಡಿದ್ದೀವಿ, ಆರಂಭದಿಂದ ಕೊನೆಯವರೆಗೂ ಹಾಸ್ಯದ ರಸದೌತಣವಿದೆ. ಒಂದಷ್ಟು ಹೊಸ ವಿಷಯಗಳನ್ನು ಜನರಿಗೆ ಕೊಟ್ಟಿದ್ದೀವಿ. ನಾನು ಕುಡಿಯೋದು ಬಿಟ್ಟರೆ ನೀನು ಮೇಕಪ್ ಹಾಕೋದು ಬಿಡ್ತೀಯಾ ಈ ಡೈಲಾಗ್ ಇಲ್ಲಿಯೂ ಇದೆ ಎಂದು ನಿರ್ಮಾಪಕರು ತಿಳಿಸಿದರು. ಪಾಯಲ್, ಗೌರವ್, ಸುಧಾಕರ್, ಶ್ರೀಭವ್ಯಾ, ಕಾರ್ತಿಕ್, ಸಂತು ಮುಂತಾದವರು ತಾರಾಗಣದಲ್ಲಿದ್ದಾರೆ.

ಈ ಸಿನಿಮಾದಲ್ಲಿ ಮಾಂಟೇಜಸ್ ಸಾಂಗ್ಸ್ ಎಲ್ಲವೂ ಇದೆ. ಕಾಮಿಡಿಯಲ್ಲಿಯೇ ಸಾಗುವ ಈ ಸಿನಿಮಾದಲ್ಲಿ ಎಮೋಷನ್ಸ್ ಕೂಡ ಬೆರೆತಿದೆ, ಅಪ್ಪ ಮಗನ ಬಾಂಧವ್ಯ ಮನಸೂರೆಗೊಳ್ಳುತ್ತದೆ ಬೆಂಗಳೂರು, ಮಂಗಳೂರು, ಉಡುಪಿ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಎಲ್‌ವಿಎಂಟರ್‌ಟೇನರ್ಸ್ ಹಾಗೂ ಜೆಆರ್‌ಎಂ ಸ್ಟುಡಿಯೊದಲ್ಲಿ ಚಿತ್ರ ನಿರ್ಮಾಣವಾಗಿದೆ.

ಕನ್ನಡ ಪ್ರೇಮ ಸಾರುವ ಭಾರತಿ ಟೀಚರ್

ಶಿಕ್ಷಣದ ಮಹತ್ವದ ಜತೆಗೆ ಸಾಮಾಜಿಕ ಕಳಕಳಿಯನ್ನು ಸಾರುವ ಭಾರತಿ ಟೀಚರ್ ಇದೇ ವಾರ ತೆರೆಗೆ ಬರಲಿದೆ. ಭಾರತಿ ಎನ್ನುವ ಏಳನೆ ತರಗತಿ ವಿದ್ಯಾರ್ಥಿಯೊಬ್ಬಳು ಶಿಕ್ಷಕಿಯಾಗುವ ಕನಸು ಕಂಡು ಅದನ್ನು ಹೇಗೆ ನನಸು ಮಾಡುತ್ತಾಳೆ. ಎಂಬುದೇ ಸಿನಿಮಾದ ಕಥೆ. ಅದನ್ನು ಎಲ್ಲರಿಗೂ ಮೆಚ್ಚುವಂತೆ ಸಿನಿಮಾದಲ್ಲಿ ಕಟ್ಟಿಕೊಡಲಾಗಿದೆ. ಯಶಿಕಾ, ಭಾರತಿ ಟೀಚರ್ ಆಗಿ ಕಾಣಿಸಿಕೊಂಡಿದ್ದು, ಕನ್ನಡ ಪರ ಹೋರಾಟಗಾರನಾಗಿ ರೋಹಿತ್ ರಾಘವೇಂದ್ರ ನಟಿಸಿದ್ದಾರೆ. ಶಿಕ್ಷಕರಾಗಿ ಸಿಹಿಕಹಿಚಂದ್ರು, ಕಾಮಿಡಿ ಕಿಲಾಡಿಗಳು ಖ್ಯಾತಿಯ ಗೋವಿಂದೇಗೌಡ ಮೊದಲ ಬಾರಿಗೆ ಖಳನಾಗಿ ಬಣ್ಣಹಚ್ಚಿದ್ದಾರೆ. ಇನ್‌ಸ್ಪೆಕ್ಟರ್ ಆಗಿ ಅಶ್ವಿನ್ ಹಾಸನ್. ಉಳಿದಂತೆ ದಿವ್ಯಾ ಅಂಚನ್, ಬೆನಕಾ ನಂಜಪ್ಪ, ಸೌಜನ್ಯಾ ಸುನಿಲ್, ಎಂ. ಜೆ.ರಂಗಸ್ವಾಮಿ ಮುಂತಾದವರು ತಾರಾಗಣದಲ್ಲಿದ್ದಾರೆ.

ಎಲ್.ಪ್ರಸನ್ನ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಜತೆಗೆ ಸಂಭಾಷಣೆ, ಸಾಹಿತ್ಯ ಬರೆದಿದ್ದು ಹಾಡುಗಳಿಗೂ ಸಂಗೀತ ಸಂಯೋಜಿಸಿದ್ದಾರೆ. ಸಂಕ್ರಾಂತಿ ಹಬ್ಬಕ್ಕೆ ಉಡುಗೊರೆಯಾಗಿ ಈ ಚಿತ್ರವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಏಕಪರದೆಯ ಚಿತ್ರಮಂದಿರಗಳಲ್ಲಿ ಐವತ್ತು ರು. ಗಳಿಗೆ ಸಿನಿಮಾ ವೀಕ್ಷಿಸಬಹುದಾಗಿದೆ ಎಂದು ನಿರ್ಮಾಪಕ ರಾಘವೇಂದ್ರ ರೆಡ್ಡಿ ಹೇಳಿದರು.

ಇಡೀ ಕರ್ನಾಟಕ ಕನ್ನಡಿಗರಿಂದ ತುಂಬಿರಬೇಕು. ನಾನು ಮನಸ್ಸು ಮಾಡಿ ಒಂದು ಹಳ್ಳಿ ಬದಲಾಯಿಸಿದೆ. ಹಾಗೆಯೇ ಇಲ್ಲಿ ಲಕ್ಷಾಂತರ ಮಕ್ಕಳು ಇದ್ದಾರೆ. ಪ್ರತಿ ವಿದ್ಯಾರ್ಥಿ ಕನಿಷ್ಠ ಹತ್ತು ಮಕ್ಕಳಿಗೆ ವಿದ್ಯಾದಾನ ಮಾಡಿದರೆ, ಇಡೀ ರಾಜ್ಯ ಸುಶಿಕ್ಷಿತರಿಂದ ತುಂಬಿರುತ್ತದೆ. ದೊಡ್ಡವರು ಸಿನಿಮಾ ನೋಡಿ ಮಕ್ಕಳ ಮನಸ್ಥಿತಿ ಅರ್ಥಮಾಡಿಕೊಂಡು ಅವರಿಗೆ ಸ್ಫೂರ್ತಿ ಜತೆಗೆ ಪ್ರೋತ್ಸಾಹ ನೀಡಬೇಕು ಎಂದು ನಿರ್ದೇಶಕ ಪ್ರಸನ್ನ ಹೇಳಿದರು. ಪೂಜ್ಯಾಯ ಫಿಲಂಸ್‌ನಲ್ಲಿ ರಾಘವೇಂದ್ರ ರೆಡ್ಡಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಛಾಯಾಗ್ರಹಣ ಎಂ.ಬಿ.ಹಳ್ಳಿಕಟ್ಟಿ, ಸಂಕಲನ ಸುಜಿತ್‌ನಾಯಕ್, ವಾದ್ಯ ಸಂಯೋಜನೆ ಕೆ.ಎಂ.ಇಂದ್ರ, ನೃತ್ಯ ಕಂಬಿರಾಜ್ ಅವರದಾಗಿದೆ.

ಮಹಾನ್ ಫಸ್ಟ್ ಲುಕ್ ರಿಲೀಸ್

ವಿಜಯ್ ರಾಘವೇಂದ್ರ ಅಭಿನಯದ ಮಹಾನ್ ಚಿತ್ರ ಆರಂಭದಿಂದಲೂ ಸದ್ದು ಮಾಡುತ್ತಿದೆ. ಈ ಚಿತ್ರದಲ್ಲಿ ವಿಜಯ್ ರೈತನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಸಂಕ್ರಾಂತಿಗೂ ರೈತರಿಗೂ ಅವಿನಾಭಾವ ಸಂಬಂಧ, ಈ ಹಬ್ಬವನ್ನು ಕೃಷಿಕರು ಸುಗ್ಗಿ ಹಬ್ಬ ಎಂದೇ ಆಚರಿಸುತ್ತಾರೆ. ಚಿತ್ರದಲ್ಲಿಯೂ ರೈತರ ಕುರಿತಾದ ಕಥಾಹಂದರವಿದ್ದು, ಹಾಗಾಗಿಯೇ ಸಂಕ್ರಾಂತಿ ಹಬ್ಬದ ಪ್ರಯುಕ್ತ ಚಿತ್ರದ ಫಸ್ಟ್‌ಲುಕ್ ಪೋಸ್ಟರ್ ರಿಲೀಸ್ ಮಾಡಲಾಗಿದೆ. ಈ ಪೋಸ್ಟರ್‌ನಲ್ಲಿ ವಿಜಯ್ ರಾಘವೇಂದ್ರ, ಅಪ್ಪಟ ಮಣ್ಣಿನ ಮಗನಾಗಿ ಕಾಣಿಸಿಕೊಂಡಿದ್ದಾರೆ. ಕನ್ನಡದಲ್ಲಿ ಸಾಕಷ್ಟು ಸದಭಿರುಚಿಯ ಚಿತ್ರಗಳನ್ನು ನಿರ್ದೇಶಿಸಿರುವ ಪಿ.ಸಿ.ಶೇಖರ್ ಈ ಚಿತ್ರದ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಮಹಾನ್ ಫಸ್ಟ್ ಲುಕ್‌ಗೆ ಸಿನಿಪ್ರಿಯರಿಂದ ಮೆಚ್ಚುಗೆ ವ್ಯಕ್ತವಾಗಿದೆ. ರಾಧಿಕಾ ನಾರಾಯಣ್, ಮಿತ್ರ, ನಮ್ರತಾ ಗೌಡ, ವರ್ಷಾ ಮುಂತಾದವರು ಈ ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ.

ನನ್ನ ವೃತ್ತಿ ಜೀವನದಲ್ಲೇ ಮಹಾನ್ ಒಂದು ಮಹಾನ್ ಚಿತ್ರವಾಗಲಿದೆ. ನಮ್ಮ ಚಿತ್ರದಲ್ಲಿ ಮಹಾನ್ ಎಂದರೆ ರೈತ. ಇದೊಂದು ರೈತರ ಬದುಕಿನ ಬವಣೆಗಳನ್ನು ತಿಳಿಸುವ ಕಥಾಹಂದರ ಹೊಂದಿರುವ ಚಿತ್ರ. ನಮಗೆ ದೇಶ ಕಾಯುವ ಸೈನಿಕರು ಎಷ್ಟು ಮುಖ್ಯವೊ, ಅದೇ ರೀತಿ ಅನ್ನ ಕೊಡುವ ರೈತರು ಬಹಳ ಬಹುಮುಖ್ಯ. ಇಂತಹ ರೈತರ ಕಷ್ಟಗಳಿಗೆ ಸ್ಪಂದಿಸುವ ಹಾಗೂ ಅವರ ಪರ ದನಿ ಎತ್ತುವ ಪಾತ್ರದಲ್ಲಿ ವಿಜಯ ರಾಘವೇಂದ್ರ ಅಭಿನಯಿಸುತ್ತಿದ್ದಾರೆ. ಅವರು ಕೂಡ ರೈತನಾಗಿ ಕಾಣಿಸಿಕೊಳ್ಳಲಿದ್ದಾರೆ. ಸಂಕ್ರಾಂತಿ ರೈತರಿಗೆ ಪ್ರಿಯವಾದ ಹಬ್ಬ. ಹಾಗಾಗಿ ಈ ಹಬ್ಬದ ಸಂದರ್ಭದಲ್ಲಿಯೇ ವಿಜಯ್ ರಾಘವೇಂದ್ರ ಅವರ ಫಸ್ಟ್ ಲುಕ್ ಅನಾವರಣ ಮಾಡಿದ್ದೇವೆ. ನಾನು ಈ ಕಥೆ ಬರೆಯುವಾಗಲೇ ವಿಜಯ್ ರಾಘವೇಂದ್ರ ಅವರೆ ಈ ಪಾತ್ರ ಮಾಡಿದರೆ ಚೆನ್ನಾಗಿರುತ್ತದೆ ಅಂದುಕೊಂಡಿದ್ದೆ. ವಿಜಯ್ ಅವರ ಹತ್ತಿರ ಕಥೆ ಹೇಳಿದಾಗ ಅವರು ಸಂತೋಷದಿಂದ ನಟಿಸಲು ಒಪ್ಪಿಕೊಂಡರು. ವಿಜಯ ರಾಘವೇಂದ್ರ ಅವರು ಈ ಪಾತ್ರಕ್ಕೆ ಜೀವ ತುಂಬಿ ಅಭಿನಯಿಸಿದ್ದಾರೆ. ಚಿತ್ರ ನೋಡಿ ಹೊರಬಂದ ಮೇಲೂ ಈ ಪಾತ್ರ ಎಲ್ಲರ ಮನದಲ್ಲೂ ಉಳಿಯುತ್ತದೆ ಎಂದು ನಿರ್ದೇಶಕ ಪಿ.ಸಿ.ಶೇಖರ್ ಹೇಳಿದರು. ಮಹಾನ್ ಅದ್ದೂರಿ ವೆಚ್ಚದ ಸಿನಿಮಾವಾಗಿದ್ದು, ಆಕಾಶ್ ಪಿಕ್ಚರ್ಸ್ ಬ್ಯಾನರ್‌ನಲ್ಲಿ ಮಹಾನ್ ನಿರ್ಮಾಣವಾಗುತ್ತಿದೆ. ಇಲ್ಲಿ ರೈತರ ಹೋರಾಟದ ಕಥೆಯೂ ಇದ್ದು, ಅದನ್ನು ಎಲ್ಲರ ಮನಕ್ಕೆ ಮುಟ್ಟುವಂತೆ ಕಟ್ಟಿಕೊಡಲಾಗಿದೆ.

ಫೆಬ್ರವರಿಯಲ್ಲಿ ಬಯಕೆಗಳು ಬೇರೂರಿದಾಗ

ಮದುವೆ ಸ್ವರ್ಗದಲ್ಲಿ ನಿಶ್ಚಯವಾಗಿರುತ್ತದೆ ಎಂಬ ಮಾತು ಜನಜನಿತವಾಗಿದೆ, ಆದರೆ ವಿಚ್ಛೇದನದ ಪ್ರಮಾಣ ನೋಡಿದಾಗ ಈ ಮಾತು ನಿಜವೆ ಅನ್ನಿಸುತ್ತದೆ. ಸ್ವರ್ಗ ಬಂಧನಕ್ಕೆ ಮುದ್ರೆ ಹಾಕಬಹುದು, ಆದರೆ ಆ ಬಂಧನವನ್ನು ಪೋಷಿಸುವುದು ನಮ್ಮ ಕೈಯಲ್ಲಿದೆ. ವಿಶಾಲ ಸಂಸ್ಕಾರ, ಸಾಮಾಜಿಕ ಒತ್ತಡಗಳ ನಡುವೆ ಸಂವಾದ, ತಾಳ್ಮೆ, ಹೊಂದಾಣಿಕೆಯ ಮೌಲ್ಯಗಳು ಹಿಂದೆ ಸರಿಯುತ್ತಿವೆ. ಹೀಗಿರುವಾಗಲೇ ಆಕರ್ಷ್ ಆದಿತ್ಯ ಅವರ ಬಯಕೆಗಳು ಬೇರೂರಿದಾಗ ಕಾದಂಬರಿ ಸಿನಿಮಾ ರೂಪದಲ್ಲಿ ತೆರೆಗೆ ಬರುತ್ತಿದೆ. ಎನ್.ಜ್ಯೋತಿಲಕ್ಷ್ಮಿ ನಿರ್ದೇಶನದಲ್ಲಿ ಸಿನಿಮಾ ಸಿದ್ಧವಾಗಿದ್ದು ಇನ್ನೇನು ತೆರೆಗೂ ಬರಲಿದೆ.

ಕುಟುಂಬ ಮೌಲ್ಯಗಳು ಮತ್ತು ಸಂಬಂಧಗಳ ಸೂಕ್ಷ್ಮ ತಂತುಗಳನ್ನು ಚಿತ್ರಿಸುವ ಕಥೆ ಇದಾಗಿದ್ದು, ಜೀವನದಲ್ಲಿ ಎದಿರಾಗುವ ಸಮಸ್ಯೆಗಳಿಗೆ ದಾರಿ ಹುಡುಕುವಾಗ ಪ್ರಯತ್ನವೂ ಇಲ್ಲಿದೆ. ಇತ್ತೀಚಿನ ದಿನಗಳಲ್ಲಿ ವಿವಾಹೇತರ ಸಂಬಂಧಗಳು ಹೆಚ್ಚುತ್ತಿರುವುದು ಚಿಂತನೀಯ ವಿಷಯವಾಗಿದೆ. ಇದರ ಹಿಂದೆ ಅನೇಕ ಸಾಮಾಜಿಕ-ಆರ್ಥಿಕ ಕಾರಣಗಳಿರಬಹುದು. ಕೆಲಸದ ಒತ್ತಡ, ಪತಿ-ಪತ್ನಿಯರು ಒಬ್ಬರಿಗೊಬ್ಬರು ಸಮರ್ಪಿಸುವ ಸಮಯದ ಕೊರತೆ, ಸಂವಾದದ ಇಲ್ಲವಾಗುವಿಕೆ ಮತ್ತು ದೀರ್ಘಕಾಲೀನ ವಿವಾಹದಲ್ಲಿ ಭಾವನಾತ್ಮಕ ಅಂತರ ಬೆಳೆಯುವುದು ಇವುಗಳಲ್ಲಿ ಮುಖ್ಯವಾಗಿದೆ. ಕೆಲಸದ ಸ್ಥಳದಲ್ಲಿ ಸಹೋದ್ಯೋಗಿಗಳೊಂದಿಗೆ ಕಳೆಯುವ ಸಮಯ ಕುಟುಂಬದೊಂದಿಗೆ ಕಳೆಯುವ ಸಮಯಕ್ಕಿಂತ ಹೆಚ್ಚಾಗುತ್ತಿರುವುದು ಒಂದು ಪ್ರಮುಖ ಅಂಶವಾಗಿದೆ. ಒಂದು ಆರೋಗ್ಯಕರ ಸಂಬಂಧಕ್ಕೆ ಪ್ರೇಮ, ನಂಬಿಕೆ, ಜವಾಬ್ದಾರಿ, ಸಂವಾದ ಮತ್ತು ಶಿಸ್ತು ಅಗತ್ಯ. ಇಂದಿನ ಜೀವನಶೈಲಿಯಲ್ಲಿ ಈ ಮೌಲ್ಯಗಳು ಕ್ಷೀಣಿಸುತ್ತಿರುವುದು ಎರಡು ಹೃದಯಗಳ ನಡುವೆ ದೂರವನ್ನು ಸೃಷ್ಟಿಸುತ್ತಿದೆ. ಇಂತಹ ಸಂದರ್ಭದಲ್ಲಿ ಬಯಕೆಗಳು ಬೇರೂರಿದಾಗ ಚಿತ್ರ ಸಂಬಂಧಗಳ ಗಾಂಭೀರ್ಯ ಮತ್ತು ಕುಟುಂಬದ ಮೌಲ್ಯಗಳನ್ನು ಸೂಕ್ಷ್ಮವಾಗಿ ಚಿತ್ರಿಸುತ್ತಿದೆ ಎನ್ನುತ್ತಾರೆ ನಿರ್ದೇಶಕಿ ಜ್ಯೋತಿ ಲಕ್ಷ್ಮಿ. ಬಹುತೇಕ ಹೊಸಬರಿಗೆ ಚಿತ್ರದಲ್ಲಿ ಅವಕಾಶ ಕಲ್ಪಿಸಲಾಗಿದೆ. ಫೆಬ್ರವರಿಯಲ್ಲಿ ಸಿನಿಮಾ ತೆರೆಗೆ ಬರಲಿದೆ.